
ಮೂಡಾಲ ಮರೆಯಲ್ಲಿ


ಎಂ. ವೆಂಕಟಸ್ವಾಮಿ



ಮೂಡಲ ಮರೆಯಲ್ಲಿ

(ಸಾಮಾಜಿಕ ಕಾದಂಬರಿ)

ಎಂ. ವೆಂಕಟಸ್ವಾಮಿ



ಪಾಂಚಜನ್ಯ ಪಬ್ಲಿಕೇಷನ್ಸ್

ನಂ.420/28, 6-7ನೇ ಕ್ರಾಸ್ ನಡುವೆ

ಅಮರಜ್ಯೋತಿನಗರ, ಬೆಂಗಳೂರು - 560040.

ಮೂಡಲ ಮರೆಯಲ್ಲಿ

(ಸಾಮಾಜಿಕ ಕಾದಂಬರಿ)

ಪ್ರಥಮ ಮುದ್ರಣ : 2002

ಹಕ್ಕುಗಳು : ಎಂ. ವೆಂಕಟಸ್ವಾಮಿ

ಮುಖ ಚಿತ್ರ : ಮೋನಪ್ಪ

ಪ್ರಕಾಶಕರು : ನಿಡಸಾಲೆ ಪಿ. ವಿಜಯ್,
ಪಾಂಚಜನ್ಯ ಪಬ್ಲಿಕೇಷನ್ಸ್, ನಂ.420/28,
6-7ನೇ ಕ್ರಾಸ್ ನಡುವೆ, ಅಮರಜ್ಯೋತಿನಗರ,
ಬೆಂಗಳೂರು - 560040.

ಅಕ್ಷರ ಜೋಡಣೆ : ಎಕ್ಸ್‌ಲೆಂಟ್ ಗ್ರಾಫಿಕ್ಸ್, ಗೋವಿಂದರಾಜನಗರ,
ಬೆಂಗಳೂರು - 40. ಫೋನ್ : 3408197

ಮುದ್ರಕರು : ವಿಶ್ವಾಸ್ ಪ್ರಿಂಟ್ಸ್
VISHWAS PRINTS
Bangalore-18 ✆ 6606088

ಬೆಲೆ : ರೂ. 80.00

"MOODALA MAREYALLI" : A Social Novel written by Sri. M. Venkataswamy, No. 57A, Sailotus Layout, Opp : Channasandra Village, Subramanyapura Post, Bangalore-560 061. Res. Phone : 080-8603108. Published by Sri Nidasale P. Vijay for M/s. Panchajanya Publications, No. 420/28, Between 6th & 7th Cross, Amarajyothinagar, Bangalore - 560 040.

First Edition : 2002 Pages : 168 Rs : 80-00

ಓದುವ ಮುನ್ನ.............

ಮೂಡಲ ಮರೆಯಲ್ಲಿ ನನ್ನ ಒಂಬತ್ತನೆಯ ಕೃತಿ, ನಾಲ್ಕನೆಯ ಕಾದಂಬರಿ ಮತ್ತು ಕನ್ನಡ ಪ್ರಭ ಪತ್ರಿಕೆಯಲ್ಲಿ ದೈನಿಕ ಧಾರಾವಾಹಿಯಾಗಿ ಪ್ರಕಟಣೆಯಾದ ಎರಡನೆಯ ಕಾದಂಬರಿ. ಚಿಕ್ಕವರು, ದೊಡ್ಡವರ ಪಾದವನ್ನು ಮುಟ್ಟಿ ನಮಸ್ಕರಿಸಿದಾಗ ದೊಡ್ಡವರು ಎದೆ ಮುಟ್ಟಿಕೊಂಡು ಭಕ್ತಿಯಿಂದ "ಚಿರಂಜೀವಿಭವ" ಎನ್ನುತ್ತಾರೆ. ದೀರ್ಘವಾಗಿ, ಸುಖವಾಗಿ ಬಾಳು ಎನ್ನುವ ಆಶೀರ್ವಾದದೊಂದಿಗೆ ನಿಮ್ಮಿಂದ ನಿಮ್ಮ ಸಂಬಂಧಿಗಳಿಗೆ, ನೆರೆಹೊರೆಯವರಿಗೆ, ಸುತ್ತಮುತ್ತಲಿನ ಸಮಾಜಕ್ಕೆ ಒಳಿತಾಗಲಿ ಎನ್ನುವುದೇ ಇವರ ಮೂಲ ಉದ್ದೇಶ. ನಿಜ ಜೀವನದಲ್ಲಿ ಮಾನವ ಸಮಾಜದ ಏಳಿಗೆಗಾಗಿ ಹೋರಾಟ ನಡೆಸಿದ ಎಷ್ಟೋ ಮಹಾತ್ಮರು ತಮ್ಮ ಅಮೂಲ್ಯವಾದ ಜೀವನವನ್ನೇ ಕಳೆದುಕೊಂಡರು. ಪ್ರಪಂಚಕ್ಕೆ ಪ್ರೀತಿ, ಪ್ರೇಮ, ದಯೆ, ದಾಕ್ಷಿಣ್ಯಗಳನ್ನು ಬೋಧಿಸಿದ ಬುದ್ಧ, ಬಸವ, ಏಸು, ಗಾಂಧಿ ಇನ್ನೂ ಅನೇಕ ಮಹಾತ್ಮರ ವಿರುದ್ಧ ಈ ಸಮಾಜ ನಿರ್ದಾಕ್ಷಿಣ್ಯವಾಗಿ ಸೇಡು ತೀರಿಸಿಕೊಂಡಿತು. ಮಾನವನ ಹುಟ್ಟಿನಿಂದಲೂ ನ್ಯಾಯ ಮತ್ತು ಅನ್ಯಾಯದ ನಡುವೆ ತೀವ್ರ ಸಂಘರ್ಷಣೆ ನಡೆಯುತ್ತಲೆ ಬಂದಿದೆ.

ಈ ಕಾದಂಬರಿಯಲ್ಲಿ ಬರುವ ಚಿರಂಜೀವಿ ಕೇವಲ ಕಥೆ ಕಾದಂಬರಿಗಳಲ್ಲಿ ಬರುವ ಪಾತ್ರವಲ್ಲ. ನಿಜ ಜೀವನದಲ್ಲೂ ಪ್ರತಿ ಘಳಿಗೆಯಲ್ಲೂ ನಮ್ಮ ಸುತ್ತ ಮುತ್ತಲಿರುವ ಪ್ರಸ್ತುತ ಪಾತ್ರ. ಹಾಗಾದರೆ ಈ ಚಿರಂಜೀವಿ ಎಂತಹವನು...? ಸಮಾಜಕ್ಕೆ ಏನೆಲ್ಲ ಮಾಡಿದ...? ಸಮಾಜ ಅವನಿಗೆ ಪ್ರತಿಯಾಗಿ ಏನು ಬಳುವಳಿ ನೀಡಿತು...? ಇದನ್ನೆಲ್ಲ ತಿಳಿಯಬೇಕಾದರೆ ನೀವು ಈ ಕಾದಂಬರಿಯನ್ನು ಓದಲೇಬೇಕಿದೆ.

ಈ ಕಾದಂಬರಿಯನ್ನು ದೈನಿಕ ಧಾರಾವಾಹಿಯಾಗಿ ಪ್ರಕಟಿಸಿದ ಕನ್ನಡಪ್ರಭ ಬಳಗದವರಿಗೆ, ಪುಸ್ತಕವಾಗಿ ಪ್ರಕಟಿಸುತ್ತಿರುವ ಮೆ|| ಪಾಂಚಜನ್ಯ ಪಬ್ಲಿಕೇಷನ್ಸ್‌ನ ಶ್ರೀ ವಿಜಯ್ ಅವರಿಗೆ ಮತ್ತು ನನ್ನ ಹಿರಿಯ ಮಿತ್ರರಾದ ಶ್ರೀ ನಿಡಸಾಲೆ ಪುಟ್ಟಸ್ವಾಮಯ್ಯನವರಿಗೆ, ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಎಕ್ಸಲೆಂಟ್ ಗ್ರಾಫಿಕ್ಸ್ ಅವರಿಗೆ, ಅಂದವಾಗಿ ಮುದ್ರಿಸಿದ ಮುದ್ರಣ ಬಳಗದವರಿಗೆ, ವಿಶೇಷ ಮುಖಪುಟವನ್ನು ಬಿಡಿಸಿರುವ ಶ್ರೀ ಪೋನಪ್ಪ ಅವರಿಗೆ ಹಾಗೂ ಪ್ರೀತಿಯ ಪತ್ನಿ ಶ್ರೀಮತಿ ಸುಶೀಲ ಮತ್ತು ಮಗ ಚಿ|| ಎಂ.ವಿ. ಕ್ರಾಂತಿಗೆ ವಿಶೇಷ ಕೃತಜ್ಞತೆಗಳು.

- ಎಂ. ವೆಂಕಟಸ್ವಾಮಿ

57A, 'ಕ್ರಾಂತಿ ನಿವಾಸ',
ಸಾಯಿ ಲೋಟಸ್ ಬಡಾವಣೆ,
ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061.
ಮನೆ. ಫೋನ್ : 080-8603108

ಮೂಡಲ ಮರೆ

ನ್ಯಾಯ ಎಲ್ಲಿದೆ ಸ್ವಾಮಿ? ಅದೇನಿದ್ದರೂ ಮನುಷ್ಯನ ಪರಿಶುದ್ಧ ಮನಸ್ಸಿನಲ್ಲಿ ಮಾತ್ರ ಇದೆ. ಚಿರಂಜೀವಿಯಂತಹ ಉತ್ಸಾಹಿ ಯುವಕರು ನ್ಯಾಯವಾದ ದಾರಿಯಲ್ಲಿ ನಡೆದರೆ ಅದೆ ಸತ್ಯ. ಚಿರಂಜೀವಿಯ ಪಾತ್ರಕ್ಕೆ ಅಂತ್ಯ ಇಲ್ಲ. ಯಾಕೆಂದರೆ ಅವನು ಯಾವತ್ತೂ ಚಿರಂಜೀವಿಯಾಗೇ ಉಳಿಯಬೇಕು. ನಮ್ಮ ಮಧ್ಯೆ ಅರಳುವ ಪ್ರತಿ ಒಂದು ಕುಡಿಯನ್ನು ಚೆನ್ನಾಗಿ ಓದಿಸಿ ನ್ಯಾಯದ ದಾರಿ ತೋರಿಸಿ ನಡೆದರೆ ಸಾಕು. ಅದೇ ಚಿರಂಜೀವಿಗೆ ನಾವು ಕೊಡುವ ಗೌರವ. "ಮೂಡಲ ಮರೆಯಲ್ಲಿ" ಕಾದಂಬರಿಯನ್ನು ಬರೆದ ಎಂ. ವೆಂಕಟಸ್ವಾಮಿಯವರಿಗೆ ಹಾಗೂ ಕಾದಂಬರಿಯನ್ನು ಓದಲು ಅನುವು ಮಾಡಿಕೊಟ್ಟ ನನ್ನ ಪ್ರೀತಿಯ "ಕನ್ನಡಪ್ರಭ"ಕ್ಕೆ ಹೃದಯಪೂರ್ವಕ ವಂದನೆಗಳು.

ಎಸ್. ದಾಕ್ಷಾಯಿಣಿ, ಶಿರಾ.

* * *

ಮನಮುಟ್ಟುವ ಕತೆ

ಎಂ. ವೆಂಕಟಸ್ವಾಮಿಯವರ 'ಮೂಡಲ ಮರೆಯಲ್ಲಿ' ಇದರ ಮೊದಲ ಕೆಲವು ಕಂತುಗಳನ್ನು ಓದಿದಾಗ ಇದು ಕಥೆಯೇ ಎಂಬ ಪ್ರಶ್ನೆ ಮೂಡಿತು. ಏಕೆಂದರೆ ಇದು ಚಿರಂಜೀವಿಯಂತಹ ಹುಡುಗರಿಗಷ್ಟೇ ಅಲ್ಲ, ಜೀವನದಲ್ಲಿ ಗುರಿ ಸಾಧಿಸಬೇಕೆಂದುಕೊಂಡ ಪ್ರತಿ ವಿದ್ಯಾರ್ಥಿಗೂ ನೀಡಿದ ಮಾಹಿತಿಯಾಗಿತ್ತು. ಲೇಖಕರು ಮನಕಲಕುವಂತಹ ಘಟನೆಗಳನ್ನು ನಿರ್ವಿಕಾರವಾಗಿ, ಸಂಯಮದಿಂದ ಬರೆದಿದ್ದಾರೆ. ಕಥಾನಾಯಕ ವಿಳಂಬವಾದರೂ ನ್ಯಾಯಕ್ಕಾಗಿ ಹೋರಾಡಿ ಗೆಲ್ಲುತ್ತಾನೆ ಚಿರಂಜೀವಿಯ ಮಟ್ಟಿಗೆ ಇದು ಸಾಧ್ಯವೆನಿಸುತ್ತದೆ.

ಎಸ್.ಕೆ. ಜಯಂತಿ, ಕೊಪ್ಪ

* * *

ಮೂಡಲ ಮರೆಯಲ್ಲಿ

ಭೂಮಿ ಸಾವಿರಾರು ಕಿಲೋಮೀಟರುಗಳ ವೇಗದಲ್ಲಿ ಗುರಿಯಿಲ್ಲದ ಕಡೆಗೆ ಲಕ್ಷಾಂತರ ತಾರಾಮಂಡಲಗಳ ಜೊತೆಗೆ ಧಾವಿಸುತ್ತಿದೆ. ಹಾಗೆ ಸಾಗುವಾಗ ತನ್ನ ಸುತ್ತ ತಾನೇ ಪೂರ್ವದಿಂದ ಪಶ್ಚಿಮಕ್ಕೆ ನೂರಾರು ಕಿಲೋಮೀಟರುಗಳ ವೇಗದಲ್ಲಿ ಗಿರಕಿ ಹೊಡೆಯುತ್ತಿದೆ. ಭೂಮಿಯ ಮೇಲೆ ಭಾರತ 33 ಲಕ್ಷ ಚದರ ಕಿಲೋಮೀಟರುಗಳ ವಿಸ್ತೀರ್ಣವಿರುವ ಒಂದು ದೇಶ. ಪೂರ್ವದಲ್ಲಿ ಉದ್ದಕ್ಕೂ ಬಂಗಾಲಕೊಲ್ಲಿಯ ಕಡಲ ದಂಡೆಯಿದ್ದು ಆ ದಂಡೆಯ ಉದ್ದಕ್ಕೂ ಹಳ್ಳಿ, ಪಟ್ಟಣ, ನಗರಗಳು ಗುಂಪುಗುಂಪಾಗಿ ಹರಡಿಕೊಂಡಿವೆ.

ಕಡಲ ಅಂಚಿನಿಂದ ಕೇವಲ ಹತ್ತು ಮೀಟರುಗಳ ಎತ್ತರದಲ್ಲಿ ಐದುನೂರು ಮೀಟರುಗಳ ದೂರದಲ್ಲಿ ರಾಮಾಪುರವೆಂಬ ಸೋಗೆ ಗುಡಿಸಿಲುಗಳ ಹಳ್ಳಿ ಇದೆ. ಆ ಗುಡಿಸಿಲುಗಳಿಗಿಂತ ಸ್ವಲ್ಪ ದೂರದಲ್ಲಿ ಎತ್ತರದ ದಿಬ್ಬದ ಮೇಲೆ ಎರಡಂತಸ್ತಿನ ಒಂದು ದೊಡ್ಡ ಬಂಗಲೆಯಂತಹ ಮನೆ. ಆ ಬಂಗಲೆ, ಆ ಹಳ್ಳಿಯ ಮತ್ತು ಸುತ್ತಮುತ್ತಲ ಹಳ್ಳಿಗಳನ್ನು ದಂಡಿಸುವ ಅಥವಾ ಅವರ ಶ್ರಮವನ್ನು ಹೀರಿ ಬೆಳೆದು ನಿಂತ ಬಂಗಲೆ ಎನ್ನಬಹುದು. ಇಂತಹ ಮನೆಗಳು ಆ ಕಡಲ ಅಂಚಿನ ಉದ್ದಕ್ಕೂ ಸೋಗೆ ಗುಡಿಸಿಲುಗಳ ಮಧ್ಯ ಮಧ್ಯ ಎದ್ದು ನಿಂತಿವೆ.

ರಾಮಾಪುರದ ಒಂದು ಗುಡಿಸಿಲಿನಲ್ಲಿ ರಾಮಣ್ಣನೆಂಬ ಒಬ್ಬ ನರಪೇತಲ ಮನುಷ್ಯ ತನ್ನ ಹೆಂಡತಿ ಸೀತಮ್ಮನ ಜೊತೆ ವಾಸಿಸುತ್ತಿದ್ದಾನೆ. ಆ ಸೋಗೆ

ಗುಡಿಸಲು, ಗುಡಿಸಿಲಿರುವ ಸ್ಥಳವನ್ನು ಬಿಟ್ಟರೆ, ಆ ಹಳ್ಳಿಯ ಸುತ್ತಮುತ್ತಲ ಅವನದು ಎನ್ನುವ ಅಂಗೈ ಅಗಲದ ನೆಲವಾಗಲಿ, ಎತ್ತು, ಎಮ್ಮೆ, ಆಡು, ಕುರಿ ಎನ್ನುವ ಯಾವುದೇ ಪ್ರಾಣಿಯಾಗಲಿ ಅವರಿಗಿಲ್ಲ. ಅವನ ಮತ್ತು ಅವನ ಹೆಂಡತಿಯ ಎರಡೆರಡು ತೋಳುಗಳೆ ಅವರ ಬದುಕಿನ ಆಸ್ತಿ. ಅವುಗಳಿಂದಲೆ ಅವರ ಜೀವನ ನಡೆಯಬೇಕು.

ಆ ಹಳ್ಳಿಯ ಗುಡಿಸಲುಗಳಲ್ಲಿ ವಾಸಿಸುವ ಎಷ್ಟೋ ದಂಪತಿಗಳಿಗೆ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಬೆರಳುಗಳಲ್ಲಿ ಎಣಿಸಲಾರದಷ್ಟು ಮಕ್ಕಳಿದ್ದಾರೆ. ಆದರೆ ರಾಮಣ್ಣ ದಂಪತಿಗಳಿಗೆ ಒಬ್ಬನೆ ಗಂಡು ಮಗ. ಅವನಿಗೆ ಯಾವುದೊ ಒಂದು ಮುಹೂರ್ತದಲ್ಲಿ ಚಿರಂಜೀವಿ ಎಂಬ ಹೆಸರಿಟ್ಟಿದ್ದಾರೆ. ಚಿರಂಜೀವಿ ಕೇವಲ ಏಳು ವರ್ಷದ ಬಹು ಚೂಟಿಯಾದ ಹುಡುಗ.

ಒಂದು ಸಣ್ಣ ಕಪ್ಪು ಹಲಗೆ ಮತ್ತು ಬಳಪವನ್ನು ತೆಗೆದುಕೊಂಡು ಇನ್ನಿತರ ಮಕ್ಕಳ ಜೊತೆಗೆ ಆ ಹಳ್ಳಿ ಕೊಂಪೆಯಲ್ಲೆ ಇರುವ ಶಾಲೆಗೆ ಹೋಗಿ ಬರುತ್ತಾನೆ. ಆ ಶಾಲೆಗೆ ಸರಿಯಾದ ಗೋಡೆಗಳಾಗಲಿ, ತಲೆ ಮೇಲೆ ಬಿಸಿಲು ಮಳೆಯನ್ನು ಕಾಯಲು ಚೂರು ಚಪ್ಪರವಾಗಲಿ ಇಲ್ಲ. ದಿನವಿಡೀ ಶಾಲೆ ಅರಳಿ ಮರದ ಕೆಳಗೆ, ನೆಲದ ಮೇಲೆ ನಡೆಯುತ್ತದೆ. ಕಾಗೆ, ಗುಬ್ಬಚ್ಚಿಗಳು ಮಕ್ಕಳ ಮೇಲೆ ಆಗಾಗ ಪ್ರಸಾದವನ್ನು ಎಸೆಯುತ್ತವೆ. ಮಳೆ-ಗಾಳಿ ಕಾಣಿಸಿಕೊಂಡಾಗಲೂ ಮಕ್ಕಳು ಆ ಮರದ ಕೆಳಗೆಯೇ ಆಶ್ರಯ ಪಡೆಯಬೇಕಾಗುತ್ತದೆ. ಇಲ್ಲ, ಗುಡಿಸಲುಗಳಿಗೆ ಓಡಿ ಬರಬೇಕಾಗುತ್ತದೆ.

ರಾಜಕಾರಣಿಗಳು ಚುನಾವಣೆಯ ಸಮಯದಲ್ಲಿ ಮಾತ್ರ ಹಿಂಡು ಹಿಂಡಾಗಿ, ದಂಡು ದಂಡಾಗಿ ಈ ಕಡೆಗೆ ಬರುತ್ತಾರೆ. ಅನಂತರ ಅವರು ದರ್ಶನ ನೀಡುವುದು ಮತ್ತೆ ಚುನಾವಣೆಗಳು ಬಂದಾಗ ಮಾತ್ರ. ಅಧಿಕಾರಿಗಳು ಅಷ್ಟೇ ಚಂಡಮಾರುತ ಬಂದಾಗ ಇಲ್ಲ, ಏನಾದರೂ ವಿಸ್ಮಯ ರೋಗಗಳು ಕಾಣಿಸಿಕೊಂಡು ಮನುಷ್ಯರು, ಜಾನುವಾರುಗಳು ವಿಪರೀತವಾಗಿ ಸತ್ತಾಗ ಮಾತ್ರ ದರ್ಶನ ನೀಡುವುದುಂಟು.

ಈ ಪ್ರಾಂತ್ಯದಲ್ಲಿ ವರ್ಷಕ್ಕೆ ಒಂದೋ ಎರಡೋ ಚಂಡಮಾರುತಗಳು ಬೀಸಿ ಬರುತ್ತವೆ. ಗುಡಿಸಿಲುಗಳು, ಬೆಳೆದು ನಿಂತ ಪೈರು, ಕುರಿ, ಮೇಕೆ, ಕೋಳಿ ಜಾನುವಾರುಗಳು ಸಮುದ್ರ ಪಾಲಾಗುವುದು ಸರ್ವೇ ಸಾಮಾನ್ಯ. ಕೆಲವೊಮ್ಮೆ

ಐದೋ ಹತ್ತೋ ವರ್ಷಗಳಿಗೊಮ್ಮೆ ಮಹಾ ಬಿರುಗಾಳಿ, ಚಂಡಮಾರುತಗಳು ಬೀಸಿ ಸಮುದ್ರದ ಅಲೆಗಳು ಉಕ್ಕಿ ಹಳ್ಳಿ ಹಳ್ಳಿಗಳೇ ಸಮುದ್ರ ಸೇರುವುದೂ ಉಂಟು. ಇಷ್ಟೆಲ್ಲಾ ಅನಾಹುತಗಳಾದರೂ, ಒಡಹುಟ್ಟಿದ ಎಷ್ಟೋ ಜನ ಸತ್ತು, ಸಮುದ್ರ ಸೇರಿದರೂ ಆ ಜನ ಆ ಪ್ರದೇಶಗಳನ್ನು ಬಿಟ್ಟು ಹೋಗುವುದಿಲ್ಲ.

ಈ ವರ್ಷ ಅಂತಹುದೇ ಒಂದು ಚಂಡಮಾರುತ ಬಂಗಾಳಕೊಲ್ಲಿಯ ಮಧ್ಯ ಭಾಗದಲ್ಲಿ ವಾಯುಭಾರ ಕುಸಿತದಿಂದ ಕೇಂದ್ರಗೊಳ್ಳುತ್ತಿತ್ತು. ಅದು ತನ್ನ ಸುತ್ತಲೂ ಇನ್ನಷ್ಟು ವಾಯುಭಾರ ಕುಸಿತಕ್ಕೊಳಗಾಗಿ ಸುಂಟರಗಾಳಿಯಾಗಿ ಸಮುದ್ರ ಅಲೆಗಳನ್ನು ತಬ್ಬಿಕೊಂಡು ಸಮುದ್ರವನ್ನು ಅಲ್ಲೋಲ ಕಲ್ಲೋಲವಾಗಿಸಿ ಉತ್ತರ - ಪಶ್ಚಿಮವಾಗಿ ಬುಸುಗುಡುವ ನಾಗರಹಾವಿನಂತೆ ಸಾಗಿ ಬರುತ್ತಿತ್ತು. ಇದನ್ನು ಉಪಗ್ರಹಗಳು ತೆಗೆಯುವ ಚಿತ್ರಗಳ ಮೂಲಕ ಕಂಡುಕೊಂಡ ವಿಜ್ಞಾನಿಗಳು ಭಾರತದ ಪೂರ್ವ ತಟದ ಕಡೆಗೆ ಬೀಸಿ ಬರುವ ಮುನ್ಸೂಚನೆಗಳನ್ನು ಗಮನಿಸತೊಡಗಿದರು. ಅದು ಸಾಗಿ ಬರುತ್ತಿದ್ದ ವೇಗ ಮತ್ತು ದಿಕ್ಕನ್ನು ಅನುಸರಿಸಿ, ಮುಂದಿನ 48 ಗಂಟೆಗಳಲ್ಲಿ ಗಂಟೆಗೆ 180 ಮೈಲಿಗಳ ವೇಗದಲ್ಲಿ ಇಂತಹ ಪ್ರದೇಶಗಳಿಗೆ ಬಂದು ಬಡಿಯುತ್ತದೆಂದು ರೇಡಿಯೋ ಮತ್ತು ಟಿ.ವಿ. ಮೂಲಕ ಪ್ರಸಾರ ಮಾಡಲಾಯಿತು.

ತಟ ಪ್ರದೇಶಗಳಲ್ಲಿ ಮೀನುಗಾರರು, ಮೀನುಗಳನ್ನು ಹಿಡಿಯಲು ಸಮುದ್ರಕ್ಕೆ ಹೋಗಬಾರದೆಂದು ವಿನಂತಿಸಿಕೊಳ್ಳಲಾಯಿತು. ಆ ಕಡೆಗೆ ಬರುತ್ತಿರುವ ಹಡಗುಗಳನ್ನು ಬೇರೆ ದಿಕ್ಕಿಗೆ ಹೋಗುವಂತೆ ಸೂಚಿಸಲಾಯಿತು. ಕಡಲ ಅಂಚಿನಲ್ಲಿರುವ, ಚಂಡಮಾರುತ ಬಡಿಯಲಿರುವ ಪಟ್ಟಣಗಳಲ್ಲಿ ರೆಡ್ ಸಿಗ್ನಲ್ ಘೋಷಿಸಲಾಯಿತು. ಚಂಡಮಾರುತ ಕಡಲ ಅಂಚಿಗೆ ತಲುಪುವ ಮುಂಚೆಯೇ ಬಿರುಗಾಳಿ ಹೊತ್ತ ಕಪ್ಪು ಮೋಡಗಳು ಮಳೆಯನ್ನು ಧಾರಕಾರವಾಗಿ ಸುರಿಸತೊಡಗಿದವು.

ಕಪ್ಪು ಮೋಡಗಳು ಹಗಲನ್ನು ರಾತ್ರಿಯಾಗುವಂತೆ ಮುಚ್ಚಿಕೊಂಡರೆ, ಬಿರುಗಾಳಿ ಗಂಟೆಗೆ 200 ಮೈಲಿಗಳ ವೇಗದಲ್ಲಿ ಬೀಸಿ ಆ ಗುಡಿಸಿಲುಗಳ ಮೇಲೆ ಮುಚ್ಚಿದ ಸೋಗೆಯನ್ನೆಲ್ಲ ಹಾರಿಸಿಬಿಟ್ಟಿತು. ಆಕಾಶದಲ್ಲಿ ಸಾವಿರಾರು ತೂತುಗಳು ಬಿದ್ದಂತೆ ಒಂದೇ ಸಮನೆ ಮಳೆ ಸುರಿದು ಆ ಪ್ರದೇಶವೆಲ್ಲ ಜಲಾವೃತವಾಯಿತು. ಜಾನುವಾರುಗಳೆಲ್ಲ ಆಗಲೆ ತೇಲಿ ಹೋಗಿ, ಬೆಳೆದು ನಿಂತಿದ್ದ ಪೈರೆಲ್ಲ

ಕ್ಷಣಗಳಲ್ಲಿ ನಾಶವಾಯಿತು. ಮರಗಳು ಲಟಲಟನೆ ಮುರಿದು ಬುಡಮೇಲಾದರೆ, ವಿದ್ಯುತ್ ಕಂಬಗಳೆಲ್ಲ ಬಾಗಿ ತುಂಡು ತುಂಡಾಗಿದ್ದವು. ಎಷ್ಟೋ ಜನರು ನೀರಿನ ಜೊತೆಗೆ ಸಮುದ್ರ ಸೇರಿಹೋಗಿದ್ದರು. ಚಂಡಮಾರುತ ನಿಂತ ಮೇಲೆ ಕಳೆದೋದ ಜನರನ್ನು ಹುಡುಕಲು ಬಂಧುಗಳ ಜೊತೆಗೆ ಸರಕಾರದವರು ಧಾವಿಸಿ ಬಂದಿದ್ದರು. ಭಾರತದ ಪೂರ್ವ ಕಡಲಂಚಿನಲ್ಲಿ ಇದು ಆಗಾಗ ಘಟಿಸುತ್ತಲೇ ಇರುವ ನೈಸರ್ಗಿಕ ವಿಕೋಪ. ಬಿರುಗಾಳಿ - ಚಂಡಮಾರುತ.

* * *

ರಾಮಾಪುರದ ರಾಮಣ್ಣ, ಪತ್ನಿ ಸೀತಮ್ಮ, ಮಗ ಚಿರಂಜೀವಿ ಅದೇಗೋ ಚಂಡಮಾರುತದಿಂದ ತಪ್ಪಿಸಿಕೊಂಡು ಪ್ರಾಣ ಉಳಿಸಿಕೊಂಡಿದ್ದರು. ಅವರ ಗುಡಿಸಲು ಮಣ್ಣು ಗೋಡೆಯ ಜೊತೆಗೆ ಮಾಯವಾಗಿ, ಚಿರಂಜೀವಿ ಪಾಠ ಕಲಿಯುತ್ತಿದ್ದ ಶಾಲೆ ಮತ್ತು ಅರಳಿ ಮರವೂ ಸಹ ಆ ಸ್ಥಳದಲ್ಲಿ ಇರಲಿಲ್ಲ. ಎಲ್ಲಾ ಕಳೆದುಕೊಂಡಿದ್ದ ಆ ಸುತ್ತಮುತ್ತಲಿನ ಹಳ್ಳಿಗಳು ಜನರೆಲ್ಲ ಅಲ್ಲಲ್ಲಿ ನಿರ್ಮಿಸಿದ್ದ ನಿರಾಶ್ರಿತರ ಆಶ್ರಯಗಳಲ್ಲಿ ಉಳಿದುಕೊಂಡಿದ್ದರು. ಸರಕಾರ ನಿರ್ಮಿಸಿದ್ದ ತಾತ್ಕಾಲಿಕ ಆಶ್ರಯಗಳಲ್ಲಿ ಯಾವ ರೀತಿಯ ಮೂಲ ಸೌಲಭ್ಯಗಳು ಇರಲಿಲ್ಲ.

ಎರಡು ಮೂರು ದಿನಗಳಾದ ಮೇಲೆ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಬ್ಯಾನರುಗಳನ್ನು ಕಟ್ಟಿಕೊಂಡಿದ್ದ ಜೀಪು ಮತ್ತು ಲಾರಿಗಳು ಬಂದಿದ್ದವು. ನಿರಾಶ್ರಿತರ ಆಶ್ರಯಗಳಲ್ಲಿ ಸೀಮೆಎಣ್ಣೆ, ಸೌದೆ, ಚಹ ಪುಡಿ, ಹಾಲು, ನುಚ್ಚು ಮತ್ತು ಉಪ್ಪಿನಂತಹ ವಸ್ತುಗಳು ಸಹ ಸಾಕಾಗುವಷ್ಟು ಇರಲಿಲ್ಲ. ನಿರಾಶ್ರಿತರಿಗೆ ಸಹಾಯ ಮಾಡಲು ಬಂದ ಸರಕಾರದವರ ಸ್ಥಿತಿಯನ್ನು ಕಂಡ ನಿರಾಶ್ರಿತರೆ ನಮ್ಮ ತೊಂದರೆಗಳು ನಮಗೆ ಇದ್ದೇ ಇವೆ ಎಂದು ತಮ್ಮ ಪ್ರದೇಶಗಳಿಗೆ ಹೊರಡಲು ತಯಾರಾದರು.

ಆ ಪ್ರದೇಶದ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾದ ನಾಗಭೂಷಣಂ ನಿರಾಶ್ರಿತರನ್ನು ತಡೆದು ಎರಡು ಮೂರು ದಿನಗಳಲ್ಲಿ ಮತ್ತಷ್ಟು ಸಾಮಾಗ್ರಿಗಳು ಬರುವುದಾಗಿ ತಿಳಿಸಿ ಇರುವ ಸಾಮಾನುಗಳನ್ನೇ ಎಲ್ಲರಿಗೂ ಹಂಚಿದರು. ಎರಡು ಮೂರು ದಿನಗಳಾದ ಮೇಲೆ ಇನ್ನಷ್ಟು ಆಹಾರ ಧಾನ್ಯ, ಬಟ್ಟೆಬರೆಗಳು ನಿರಾಶ್ರಿತರ ಆಶ್ರಯಗಳಿಗೆ ತಲುಪಿದವು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಆದಷ್ಟು

ವಿನಯದಿಂದ ಮಾತಾಡಿ ಎಲ್ಲರಿಗೂ ಹಂಚಿದರು. ಏಳು ವರ್ಷದ ಜೋಟಿ ಹುಡುಗ ಚಿರಂಜೀವಿ ಇದೆಲ್ಲವನ್ನು ನೋಡುತ್ತಿದ್ದು ಅವನ ತಂದೆಯನ್ನು "ಅಪ್ಪ ಇವರ್‍ಯಾರಪ್ಪ?" ಪ್ರಶ್ನಿಸಿದ.

"ಅವರು ಸರಕಾರದವರು....... ಹೆಚ್ಚು ಓದಿರುವ ಅಧಿಕಾರಿಗಳು" ಎಂದ.

"ಮತ್ತೆ ಸರಕಾರದವರಿಗೆ ಇದೆಲ್ಲ ಎಲ್ಲಿಂದ ಬರುತ್ತೆ" ಚಿರಂಜೀವಿ ಪ್ರಶ್ನಿಸಿದ.

ಆ ಹುಡುಗನನ್ನು ಗಮನಿಸಿದ ಕ್ಷೇತ್ರಾಭಿವೃದ್ಧಿ ಅಧಿಕಾರಿ,

"ಏನೋ ಮರಿ ನಿನ್ನೆಸರು?" ಪ್ರಶ್ನಿಸಿದರು.

"ನನ್ನೆಸರು ಚಿರಂಜೀವಿ..... ನಮ್ಮ ತಂದೆ ಹೆಸರು ರಾಮಣ್ಣ..... ತಾಯಿ ಸೀತಮ್ಮ......." ಹೀಗೆ ಹೇಳುತ್ತಾ ಹೋದ. ಆ ಅಧಿಕಾರಿಗೆ ಅವನ ಕಣ್ಣುಗಳಲ್ಲಿ ಏನೋ ಒಂದು ರೀತಿಯ ಹೊಳಪು ಹೊಳೆಯುತ್ತಿರುವಂತೆ ತೋರಿತು. ಇಂತಹ ಎಷ್ಟೋ ಬುದ್ಧಿವಂತ ಮಕ್ಕಳು ಹಳ್ಳಿಗಳೆಂಬ ಈ ಕೊಂಪೆಗಳಲ್ಲಿ ಹೇಳ ಹೆಸರಿಲ್ಲದೆ ಮುರುಟಿ ಹೋಗುತ್ತಿರುವ ಅರಿವು ಕ್ಷಣಮಾತ್ರದಲ್ಲಿ ಮೂಡಿ ಮಾಯವಾಯಿತು. ಆ ಮಗುವಿನ ಜೊತೆ ಇನ್ನಷ್ಟು ಮಾತಾಡಬೇಕೆನಿಸಿತು ಅಧಿಕಾರಿಗೆ.

"ಆ ಮಗುವನ್ನು ಆ ಮೇಲೆ ನನ್ನ ಹತ್ತಿರ ಕರೆದುಕೊಂಡು ಬಾ" ಎಂದೇಳಿ ತನ್ನ ಕೆಲಸದಲ್ಲಿ ಮಗ್ನರಾದರು.

ರಾಮಣ್ಣ ಮತ್ತು ಸೀತಮ್ಮನಿಗೆ ಅಧಿಕಾರಿಯ ಮಾತು ಕೇಳಿ ಸ್ವಲ್ಪ ಆಶ್ಚರ್ಯವಾಯಿತು. ಅಧಿಕಾರಿ ಯಾಕಾದರೂ ಚಿರಂಜೀವಿಯನ್ನು ತಮ್ಮಲ್ಲಿಗೆ ಕರೆದುಕೊಂಡು ಬನ್ನಿ ಎಂದರು ಎನ್ನುವುದನ್ನು ಯೋಚಿಸಿ ಒಬ್ಬರನ್ನೊಬ್ಬರು ಪ್ರಶ್ನಿಸಿಕೊಂಡರು. ಅವರಿಗೆ ಏನೂ ಹೊಳೆಯಲಿಲ್ಲ.

ಅಧಿಕಾರಿ ಒಂದು ಕಡೆ ಕುರ್ಚಿಯ ಮೇಲೆ ಕುಳಿತುಕೊಂಡು ಮೇಜಿನ ಮೇಲೆ ಏನೋ ಬರೆಯುತ್ತಿದ್ದರು. ರಾಮಣ್ಣ ಮತ್ತು ಸೀತಮ್ಮ ಚಿರಂಜೀವಿಯ ಜೊತೆಗೆ ಅಧಿಕಾರಿಯಿರುವ ಟೇಬಲಿಗೆ ಸ್ವಲ್ಪ ದೂರದಲ್ಲಿ ಬಂದು ನಿಂತುಕೊಂಡರು. ಅಧಿಕಾರಿಯ ಏಕಾಗ್ರತೆಯನ್ನು ಗಮನಿಸಿದ ರಾಮಣ್ಣ ದಂಪತಿಗಳ ಹೃದಯದಲ್ಲಿ ಏನೋ ಒಂದು ರೀತಿಯ ಬಿಗಿಲು, ಗೊಂದಲ ತುಂಬಿಕೊಂಡಿತು.

ಅಧಿಕಾರಿ ತಲೆ ಎತ್ತಿ ಕಣ್ಣುಗಳನ್ನು ಸಣ್ಣದಾಗಿಸಿಕೊಂಡು ಅವರ ಕಡೆಗೆ ನೋಡಿದ. ರಾಮಣ್ಣ ಮೈ ಬಗ್ಗಿಸಿ ಕೈ ಮುಗಿದ. ನಸು ನಕ್ಕ ಅಧಿಕಾರಿ ಹತ್ತಿರಕ್ಕೆ

ಬರುವಂತೆ ಸನ್ನೆ ಮಾಡಿದ. ಮೂವರು ಹತ್ತಿರಕ್ಕೆ ಬಂದರು. ಹುಡುಗ ಅಧಿಕಾರಿಯನ್ನು ನೋಡಿ ನಗುತ್ತಿದ್ದ. ಅವನ ಕಣ್ಣುಗಳಲ್ಲಿ ಅದೇ ಹೊಳಪು ಹೊಳೆಯುತ್ತಿರುವುದನ್ನು ಅಧಿಕಾರಿ ಮತ್ತೊಮ್ಮೆ ಗಮನಿಸಿದರು.

"ಒಬ್ಬನೇ ಮಗನೆ?" ಅಧಿಕಾರಿ ಪ್ರಶ್ನಿಸಿದರು.

ರಾಮಣ್ಣ "ಹೌದೆಂದು" ತಲೆಯಾಡಿಸಿದ.

"ನಿನ್ನ ಮಗ ಒಳ್ಳೆ ಬುದ್ಧಿವಂತನಾಗ್ತಾನೆ....... ನನ್ನೊತೆ ಕಳಿಸ್ತಿಯೇನು?" ಅಧಿಕಾರಿ ನೇರವಾಗಿ ಕೇಳಿದರು. ರಾಮಣ್ಣ ಮತ್ತು ಸೀತಮ್ಮನ ಮೇಲೆ ಒಮ್ಮೆಲೆ ಕಲ್ಲುಗುಂಡು ಬಿದ್ದಂತಾಯಿತು. ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಂಡರು.

ಸೀತಮ್ಮ ಚಿರಂಜೀವಿಯನ್ನು ತನ್ನ ಮಾಸಲು ಸೀರೆಯ ಮೇಲೆ ತಬ್ಬಿಕೊಂಡಳು.

"ಯೋಚಿಸಿ ನೋಡಿ, ಇನ್ನು ಎರಡು ದಿನಗಳು ಇಲ್ಲೇ ಇರ್‍ತೀನಿ...... ನಿಮಗೆ ಇಷ್ಟವಾದರೆ ನನ್ನ ಜೊತೆ ಕಳಿಸಿಕೊಡಿ.......ಪಟ್ನದಲ್ಲಿರುವ ಹಾಸ್ಟೆಲ್‌ನಲ್ಲಿ ಸೇರಿಸ್ತೀನಿ...... ಊಟ ಬಟ್ಟೆ ವಸತಿ ಎಲ್ಲಾ ಉಚಿತ....... ಹುಡುಗನ ಮುಖದಲ್ಲಿ ಏನೋ ಒಂದು ಕಳೆ, ಆಕರ್ಷಣೆಯಿದೆ ಅವನಿಂದ ನಾಲ್ಕು ಜನರಿಗೆ ಸಹಾಯ ಆಗ್ತದೆ....... ನಿಮ್ಮಕಷ್ಟ ನಿಮ್ಗೆ ಇದ್ದೇ ಇದೆ..." ಅಧಿಕಾರಿ ಹೇಳಿದರು.

ರಾಮಣ್ಣ ಮತ್ತು ಸೀತಮ್ಮನಿಗೆ ಏನು ಹೇಳಬೇಕೊ ಅರ್ಥವಾಗಲಿಲ್ಲ. ಸೀತಮ್ಮ ಏನೋ ಹೇಳಲು ಹೋಗಿ ಸುಮ್ಮನಾದಳು. ರಾಮಣ್ಣ ಮಾತು ಬರದೆ ಅಧಿಕಾರಿಯನ್ನೇ ನೋಡುತ್ತಿದ್ದ. ಅಧಿಕಾರಿ ಚಿರಂಜೀವಿಯ ಕಡೆಗೆ ನೋಡುತ್ತಿದ್ದ. ಅಷ್ಟರಲ್ಲಿ ಚಿರಂಜೀವಿ "ಅಪ್ಪ ನಾನು ಓದ್ತೀನಿ..... ಪಟ್ನಕ್ಕೆ ಕಳಿಸಪ್ಪ" ಎಂದು ಅಂಗಲಾಚಿದ.

"ನೋಡಿ ಯೋಚನೆ ಮಾಡಿ ಇನ್ನು ಎರಡು ದಿನ ಇರ್‍ತೀನಿ.... ಕಳಿಸುವುದು ಬಿಡುವುದು ನಿಮಗೆ ಬಿಟ್ಟಿದ್ದು" ಅಧಿಕಾರಿ ಹೇಳಿದ. ಕೈಮುಗಿದ ರಾಮಣ್ಣ ಮತ್ತು ಸೀತಮ್ಮ ಚಿರಂಜೀವಿಯನ್ನು ಕರೆದುಕೊಂಡು ತಾವಿದ್ದಲ್ಲಿಗೆ ಬಂದು ಕುಳಿತರು.

ಅಧಿಕಾರಿಗೆ ತನ್ನಲ್ಲೆ ತುಸು ಆಶ್ಚರ್ಯ ಮೂಡಿ ಯಾಕಾದರೂ ಆ ಹುಡುಗನನ್ನು ನೋಡಿದ ಮೇಲೆ ನನಗೆ ಹಾಗನ್ನಿಸಿತು ಎನ್ನುವ ಪ್ರಶ್ನೆ ಎದ್ದರೂ ಅಧಿಕಾರಿಗೂ ಏನೂ ಅರ್ಥವಾಗಲಿಲ್ಲ.

ಜನರು, ಎಲ್ಲೆಲ್ಲೂ ಚಿರಂಜೀವಿಯ ಬಗ್ಗೆಯೆ ಮಾತನಾಡಿಕೊಳ್ಳುತ್ತಿದ್ದರು. ರಾಮಣ್ಣ ಚಿರಂಜೀವಿಯನ್ನು ಪಟ್ಟಣಕ್ಕೆ ಕಳುಹಿಸಬೇಕೊ ಅಥವಾ ತಮ್ಮ ಜೊತೆಯಲ್ಲೇ ಉಳಿಸಿಕೊಳ್ಳಬೇಕೋ ಎನ್ನುವ ಯೋಚನೆಯಲ್ಲಿ ಮುಳುಗಿ ಹೋಗಿದ್ದ. ಸೀತಮ್ಮನು ಮಾತ್ರ ತನ್ನ ಒಬ್ಬನೇ ಮಗನನ್ನು ಎಲ್ಲಿಗೂ ಕಳುಹಿಸುವುದಿಲ್ಲವೆಂದು ಪದೇ ಪದೇ ಹೇಳುತ್ತಿದ್ದಳು. ರಾಮಣ್ಣ ಏನೂ ಹೇಳದೆ ಪತ್ನಿಯ ಮುಖವನ್ನು ಆಗಾಗ ನೋಡುತ್ತಾ ಯಾವುದೋ ಒಂದು ಕಟು ನಿರ್ಧಾರಕ್ಕೆ ಬರುತ್ತಿರುವಂತೆ ಕಾಣಿಸುತ್ತಿದ್ದ.

ಇಬ್ಬರು ಮಕ್ಕಳಿದ್ದಿದ್ದರೆ ಅಧಿಕಾರಿ ಕೇಳಿದಾಕ್ಷಣ ಒಂದು ಮಗುವನ್ನು ಕಳುಹಿಸಬಿಡಬಹುದಾಗಿತ್ತಲ್ಲ....? ಎಂದುಕೊಂಡ. ಅದೇಕೋ ಏನೋ ಚಿರಂಜೀವಿಯ ನಂತರ ಅವರಿಗೆ ಮಕ್ಕಳಾಗಲೇ ಇಲ್ಲ. ಅವರೂ ಅಷ್ಟೆ, ಮಕ್ಕಳು ಯಾಕಾಗಲಿಲ್ಲ ಎನ್ನುವುದನ್ನು ತಿಳಿದುಕೊಳ್ಳುವ ಗೋಜಿಗೆ ಹೋಗಲಿಲ್ಲ. ದುಡಿದು ತಿನ್ನುವವರಿಗೆ ಹೆಚ್ಚು ಮಕ್ಕಳಾದರು ಕಷ್ಟವೆ, ಚಿರಂಜೀವಿ ಒಬ್ಬನೆ ಸಾಕೆಂದುಕೊಂಡು ಸುಮ್ಮನಾಗಿದ್ದರು. ಹಳ್ಳಿಯ ಕೆಲವರು "ಚಿರಂಜೀವಿಯನ್ನು ಪಟ್ಣಕ್ಕೆ ಕಳುಹಿಸಿಕೊಡಿ ಓದಿ ದೊಡ್ಡವನಾಗಲಿ" ಎಂದರೆ ಇನ್ನು ಕೆಲವರು "ಉಸಿರಿದ್ದರೆ ಉಪ್ಪು ಮಾರಿಕೊಂಡಿರಬಹುದು. ನಮ್ಮ ಮಕ್ಕಳು ನಮ್ಮ ಕಣ್ಣು ಮುಂದೆ ಇರುವುದೇ ಒಳ್ಳೆಯದೆಂದು" ಉಪದೇಶ ನೀಡಿದರು.

ರಾಮಣ್ಣ ಎರಡನೇ ದಿನ ಒಂದು ನಿರ್ಧಾರಕ್ಕೆ ಬಂದಂತೆ ಸೀತಮ್ಮನಿಗೆ "ತಮ್ಮ ಮಗನನ್ನು ಪಟ್ಟಣಕ್ಕೆ ಕಳುಹಿಸುವುದೇ ವಾಸಿಯೆಂದು, ನಮ್ಮ ಕಣ್ಣುಗಳಿಗೆ ದೂರವಿದ್ದರೆ ಇರಲಿ ಸುಖವಾಗಿರ್‍ತಾನೆ.... ಓದಿ ನಾಳೆ ದೊಡ್ಡವನಾದರೆ ಆ ಗೌರವ ನಮಗೆ ತಾನೇ ದೊರಕುತ್ತದೆ" ಎಂದು ಪತ್ನಿಯನ್ನು ಸಮಾಧಾನಪಡಿಸಿದ. ಸೀತಮ್ಮ ಎರಡು ದಿನಗಳಿಂದ ನಿದ್ದೆ ಮಾಡದೆ ಕಣ್ಣುಗಳು ಕೆಂಪಗಾಗಿದ್ದವು. ರಾಮಣ್ಣ ಮತ್ತು ಸೀತಮ್ಮನಿಗೆ ಆಶ್ಚರ್ಯವಾಗಿರುವ ವಿಷಯವೆಂದರೆ ಚಿರಂಜೀವಿ ತನ್ನ ತಂದೆ, ತಾಯಿಯನ್ನು ಬಿಟ್ಟು ಪಟ್ಟಣಕ್ಕೆ ಹೋಗುತ್ತೇನೆ ಎಂದು ಪಟ್ಟು ಹಿಡಿದಿರುವುದು. ಊರಿನವರಿಗೂ ಈ ವಿಷಯ ಆಶ್ಚರ್ಯವನ್ನು ತಂದಿತ್ತು.

ಕೊನೆ ದಿನ ಚಿರಂಜೀವಿಯನ್ನು ಅವನ ತಂದೆ, ತಾಯಿ ಅಧಿಕಾರಿಯ ವಶಕ್ಕೆ ಒಪ್ಪಿಸಿಬಿಟ್ಟರು. ಅಧಿಕಾರಿ ವರ್ಷಕ್ಕೊಂದು ಸಲ ಹುಡುಗನನ್ನು ರಾಮಾಪುರಕ್ಕೆ ಬಂದು ಹೋಗಲು ಏರ್ಪಾಟು ಮಾಡುವುದಾಗಿ ತಿಳಿಸಿ ಚಿರಂಜೀವಿಯನ್ನು

ಜೀಪಿನಲ್ಲಿ ಕೂರಿಸಿಕೊಂಡು ಹೊರಟುಬಿಟ್ಟರು. ರಾಮಣ್ಣ ಮತ್ತು ಸೀತಮ್ಮ ಕಣ್ಣುತುಂಬಾ ನೀರಾಕಿಕೊಂಡು ಎದೆಯನ್ನು ಇನ್ನಷ್ಟು ಭಾರವಾಗಿಸಿಕೊಂಡರು. ಚಿರಂಜೀವಿ ಮಾತ್ರ ತನ್ನ ಮುಖದಲ್ಲಿ ಯಾವ ಮಾರ್ಪಾಟನ್ನು ತೋರದೆ ತನ್ನ ತಂದೆ ತಾಯಿಗೆ ಕೈ ಬೀಸುತ್ತಲೆ ದೂರವಾಗುತ್ತಿದ್ದ.

* * *

ಚಿರಂಜೀವಿಯನ್ನು ಕರೆದುಕೊಂಡು ಹೋಗುತ್ತಿರುವ ಅಧಿಕಾರಿಯ ಹೆಸರು ನಾಗಭೂಷಣಂ. ಪಕ್ಕದಲ್ಲಿ ಕುಳಿತಿರುವ ಹುಡುಗನ ಮುಗ್ಧ ಮುಖವನ್ನು ನೋಡಿದ ಅಧಿಕಾರಿಗೆ ತನ್ನ ಬಾಲ್ಯದ ದಿನಗಳು ನೆನಪಿಗೆ ಬಂದವು. ಜೀಪಿನ ವೇಗದ ಜೊತೆಗೆ ತನ್ನ ಸ್ಮೃತಿಪಟಲದ ಮೇಲೆ ಬಾಲ್ಯದ ನೆನಪುಗಳು ಹಾದು ಹೋಗುತ್ತಿವೆ. ಎಲ್ಲೆಯಿಲ್ಲದ ಬಡತನ, ತನ್ನ ತಂದೆ ತಾಯಿಗೆ ತಾನೇ ದೊಡ್ಡ ಮಗ, ಗುಡಿಸಿಲು ತುಂಬಾ ತಮ್ಮಂದಿರು, ತಂಗಿಯರು. ದಿನನಿತ್ಯ ತಂದೆ ತಾಯಿ ಕೂಲಿ ಮಾಡಿ ತರಬೇಕು. ಕೂಲಿ ಸಿಕ್ಕದೇ ಹೋದಾಗ ಸೊಪ್ಪು ಸೆದೆಯನ್ನೇ ಉಪ್ಪಾಕಿ ಬೇಯಿಸಿ ತಿಂದ ದಿನಗಳೂ ಉಂಟು. ಎಷ್ಟೋ ದಿನಗಳು ಊರಿನ ಇನ್ನಿತರ ಮನೆಗಲ ಮುಂದೆ ತಂಗಳಿಗಾಗಿ ಕಾದಿದ್ದುಂಟು. ಬಾಲ್ಯದಲ್ಲೇ ತಂದೆ ತಾಯಿಂದ ಬೇರೆಯಾಗಿ ದೂರದ ಪಟ್ಟಣದ ಹಾಸ್ಟೆಲಿನಲ್ಲಿ ಓದಿದ್ದ. ಅನಂತರ ಮುಂದಿನ ಓದಿಗೆ ಶರಣಾಗಿ ಮೊದಲಿಗೆ ಗುಮಾಸ್ತ ಆಗಿ ಕೆಲಸ ಗಿಟ್ಟಿಸಿಕೊಂಡಿದ್ದ. ಅಲ್ಲಿಂದ ಬೆಳೆದುಬಂದಿರುವ ನಾಗಭೂಷಣಂ ಈಗ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿದ್ದ. ತನ್ನ ಒಡಹುಟ್ಟಿದವರನ್ನು ಸಾಲ ಪಾಲ ಮಾಡಿ ಆದಷ್ಟು ಓದಿಸಿ ಅವರ ಬೆಳವಣಿಗೆಗೆ ದಾರಿದೀಪವಾಗಿದ್ದ.

ಜೀಪು, ಸುಮಾರು ಐದು ಗಂಟೆಗಳ ಕಾಲ ಓಡಿದ ಮೇಲೆ ಚಿತ್ತೂರಿನ ಒಂದು ಕಛೇರಿಯ ಮುಂದೆ ನಿಂತುಕೊಂಡಿತು. ನಿದ್ದೆ ಮಾಡುತ್ತಿದ್ದ ಹುಡುಗನನ್ನು ಎಬ್ಬಿಸಿದ ನಾಗಭೂಷಣಂ ಕಛೇರಿಯ ಒಳಕ್ಕೆ ಕರೆದುಕೊಂಡೋಗಿ ಒಂದು ಕುರ್ಚಿಯಲ್ಲಿ ಕೂರಿಸಿ, ಕಛೇರಿಯ ಕೆಲಸದಲ್ಲಿ ತೊಡಗಿದರು. ತಾನು ತಂದಿದ್ದ ಫೈಲುಗಳನ್ನೆಲ್ಲ ಭದ್ರಗೊಳಿಸಿ ತಲುಪಬೇಕಾಗಿದ್ದ ಟೇಬಲುಗಳಿಗೆ ತಲುಪಿಸಿದ ನಂತರ ಹುಡುಗನನ್ನು ಕರೆದುಕೊಂಡು ತನ್ನ ಮನೆ ತಲುಪಿದರು.

ನಾಗಭೂಷಣಂ ಅವರ ಪತ್ನಿ ಹುಡುಗನನ್ನು ನೋಡಿ ಮಾತನಾಡಿಸಿದಳು. ನಾಗಭೂಷಣಂ ಮೊದಲು ಅವನಿಗೆ ತಿನ್ನಲು ಏನಾದರೂ ಕೊಡುವಂತೆ ತಿಳಿಸಿದರು.

"ಎಲ್ಲರೂ ಒಂದೇ ಸಲ ಊಟ ಮಾಡುವಿರಂತೆ ಮುಖ ತೊಳೆದುಕೊಳ್ಳಿ" ಎಂದ ನಾಗಭೂಷಣಂ ಅವರ ಪತ್ನಿ ಎಲ್ಲರಿಗೂ ತಟ್ಟೆಹಾಕಿದಳು. ನಾಗಭೂಷಣಂ ಅವರ ಐದಾರು ಮಕ್ಕಳು ತಟ್ಟೆಗಳ ಮುಂದೆ ಕುಳಿತುಕೊಂಡು ಚಿರಂಜೀವಿಯನ್ನು ಏನೇನೊ ಪ್ರಶ್ನಿಸುತ್ತಿದ್ದರು. ಒಂದು ಪಟ್ಟಾಪಟ್ಟಿ, ನಿಕ್ಕರ್ ಮತ್ತು ಅರ್ಧತೋಳಿನ ಅಂಗಿ ಧರಿಸಿದ್ದ ಹುಡುಗ ಎಲ್ಲರ ಮುಖಗಳನ್ನು ನೋಡತೊಡಗಿದ. ತಮ್ಮ ತಂದೆ ತಾಯಿ ಮಾಡಿದ ತಪ್ಪನ್ನೇ ಓದು ಬರಹ ಕಲಿತಿದ್ದ ನಾಗಭೂಷಣಂ ಕೂಡ ಮಾಡಿದ್ದರು. ತನ್ನ ಮಕ್ಕಳ ಜೊತೆಗೆ ತಂದೆ ತಾಯಿ ಮತ್ತು ತಮ್ಮಂದಿರನ್ನು ಸುಧಾರಿಸಬೇಕಾಗಿತ್ತು.

ರಾತ್ರಿ ಮಲಗುವುದಕ್ಕೆ ಮುಂಚೆ ನಾಗಭೂಷಣಂ ಅವರ ಪತ್ನಿ,

"ಅಲ್ಲಾರಿ ಇಷ್ಟು ಸಣ್ಣ ಹುಡುಗ್ನ ಅವರ ತಂದೆ ತಾಯಿಂದ ಬೇರ್ಪಡಿಸಿದ್ದೀರಲ್ಲ.... ನಾಳೆ ಆ ಮಗೂಗೆ ಏನಾದರೂ ಹೆಚ್ಚು ಕಡಿಮೆಯಾದರೆ ಏನು ಮಾಡ್ತೀರ...." ಎಂದಳು.

ನಾಗಭೂಷಣ ಒಂದೆರಡು ಕ್ಷಣ "ಹೌದಲ್ಲ" ಎಂದುಕೊಂಡರು.

ಅನಿಸಿದ್ದನ್ನು ಮಾಡೇ ತೀರುವ ಮನುಷ್ಯ ನಾಗಭೂಷಣಂ.

ನಾಗಭೂಷಣಂ, ಚಿರಂಜೀವಿಯನ್ನು ಎರಡು ಮೂರು ದಿನಗಳಿಂದ ಚಿತ್ತೂರಿನ ಹಾಸ್ಟೆಲುಗಳಲ್ಲಿ ಸೇರಿಸಲು ಎಷ್ಟೋ ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಎಲ್ಲಾ ಹಾಸ್ಟೆಲುಗಳು ತುಂಬಿಹೋಗಿದ್ದವು. ಮರುದಿನ ಬೆಂಗಳೂರಿನಿಂದ ತನ್ನ ಮಿತ್ರನಾದ ಶಂಕರಂ ಬಂದಿದ್ದ. ಶಂಕರಂಗೆ ಹುಡುಗನ ವಿಷಯ ತಿಳಿಸಿದ್ದೆ.

"ಅರೆ, ಬೆಂಗ್ಳೂರಿಗೆ ಕಳಿಸ್ತಿಯೇನು.....? ಆಂಧ್ರದವರದು ಒಂದು ಹಾಸ್ಟೆಲಿದೆ ನನಗೆ ಗೊತ್ತಿರುವವರೆ ಇದ್ದಾರೆ..... ಆದರೆ ಹುಡುಗ ತುಂಬಾ ಚಿಕ್ಕವನಾಗಿ ಕಾಣಿಸ್ತಾನಲ್ಲ?" ಎಂದ ಶಂಕರಂ.

"ಅದೇನೋ ಶಂಕರಂ ಆ ಹುಡುಗನ ಮುಖ ನೋಡಿದ್ರೇ ಈ ಹುಡುಗನಲ್ಲಿ ಏನೋ ಒಂದು ರೀತಿಯ ಕಳೆ, ಶಕ್ತಿ ಇದೆ. ಜೀವನದಲ್ಲಿ ಏನೋ ಸಾಧಿಸ್ತಾನೆ ಎನಿಸಿತು. ಕರೆದುಕೊಂಡು ಬಂದುಬಿಟ್ಟೆ" ಎಂದರು ನಾಗಭೂಷಣಂ. ಶಂಕರಂ ಕೂಡ ಹುಡುಗನ ಮುಖವನ್ನು ಸ್ವಲ್ಪ ಹೊತ್ತು ಆಶ್ಚರ್ಯದಿಂದ ನೋಡಿದರು.

ನಾಗಭೂಷಣಂಗೆ ಬೆಂಗಳೂರಿನಲ್ಲಿ ಕೆಲಸ ಇರುವುದರಿಂದ ಶಂಕರಂ ಜೊತೆಗೆ ಚಿರಂಜೀವಿಯನ್ನು ಕರೆದುಕೊಂಡು ಬೆಂಗಳೂರಿಗೆ ಬಂದರು. ಬಂದ ಮರುದಿನವೆ

ಶಂಕರಂ ಸಹಾಯದಿಂದ ಹುಡುಗನಿಗೆ ಹಾಸ್ಟೆಲಿನಲ್ಲಿ ಸೀಟು ಸಿಕ್ಕಿತು. ಹುಡುಗನನ್ನು ಹಾಸ್ಟೆಲಿನಲ್ಲಿ ಸೇರಿಸಿದ ಮೇಲೆ ನಾಗಭೂಷಣಂ ಅವರಿಗೆ ಏನೋ ಒಂದು ರೀತಿಯ ತೃಪ್ತಿ ಉಂಟಾಗಿ ಹುಡುಗನಿಗೆ ಒಂದು ಜೊತೆ ರೆಡಿಮೇಡ್ ಬಟ್ಟೆ ಕೊಡಿಸಿದರು. ಹಾಸ್ಟೆಲಿನಲ್ಲಿ ತನ್ನ ಮತ್ತು ಹುಡುಗನ ವಿಳಾಸಗಳನ್ನು ಬರೆಸಿದರು. ಬರುವಾಗ ವರ್ಷಕ್ಕೊಮ್ಮೆ ರಜಾದಿನಗಳಲ್ಲಿ ನನ್ನ ವಿಳಾಸಕ್ಕೆ ಪತ್ರ ಬರೆದರೆ ಬೆಂಗಳೂರಿಗೆ ಬಂದು ಹುಡುಗನನ್ನು ಕರೆದುಕೊಂಡು ಹೋಗುವುದಾಗಿ ಹಾಸ್ಟೆಲ್‌ನವರಿಗೆ ತಿಳಿಸಿದರು. ನಾಗಭೂಷಣಂ ಹಾಸ್ಟೆಲಿನಿಂದ ಹೊರಕ್ಕೆ ಬರುವಾಗ ಚಿರಂಜೀವಿ, ನಾಗಭೂಷಣಂ ಅವರನ್ನು ಕಣ್ಣುಗಳ ತುಂಬಾ ತುಂಬಿಕೊಂಡಿದ್ದ. ನಾಗಭೂಷಣಂ ಹಿಂದಕ್ಕೆ ತಿರುಗಿ ತಿರುಗಿ ನೋಡುತ್ತಾ ಗೇಟನ್ನು ದಾಟುವವರೆಗೂ ಚಿರಂಜೀವಿ ಅವರಿಗೆ ಕೈ ಬೀಸುತ್ತಲೇ ಇದ್ದ.

ಒಂದು ವಾರವಾದ ಮೇಲೆ ಹಾಸ್ಟೆಲ್ ಗುಮಾಸ್ತ ಚಿರಂಜೀವಿಯನ್ನು ಕರೆದುಕೊಂಡೋಗಿ ಹತ್ತಿರದಲ್ಲಿದ್ದ ಸರಕಾರಿ ಕನ್ನಡ ಪ್ರೈಮರಿ ಶಾಲೆಗೆ ಸೇರಿಸಿದ. ಈ ನಡುವೆ ನಾಗಭೂಷಣಂ ರಾಮಾಪುರದಿಂದ ಟಿ.ಸಿ. ತರಿಸಿಕೊಂಡು ಬೆಂಗಳೂರಿನ ಹಾಸ್ಟೆಲ್ ವಿಳಾಸಕ್ಕೆ ರವಾನಿಸಿದ್ದರು.

ಹಾಸ್ಟೆಲನ್ನು ಖಾಸಗಿಯವರು ನಡೆಸುತ್ತಿದ್ದರಿಂದ ಹೊಟ್ಟೆತುಂಬಾ ಊಟ ನೀಡುತ್ತಿದ್ದು, ಎರಡು ಜೊತೆ ಬಟ್ಟೆಗಳನ್ನು ಮತ್ತು ಆಯಾ ತರಗತಿಗೆ ಬೇಕಾದ ಪುಸ್ತಕಗಳನ್ನು ಕೊಡಿಸಿದ್ದರು. ಚಿರಂಜೀವಿ ಏಕಾಗ್ರತೆಯಿಂದ ಶಾಲೆಯಲ್ಲಿ ಕಲಿಸುವ ಪಾಠಗಳನ್ನು ಕಲಿಯುತ್ತ, ಹಾಸ್ಟೆಲಿನಲ್ಲಿ ಓದಿಕೊಳ್ಳುತ್ತಿದ್ದ. ಹಾಸ್ಟೆಲಿನಲ್ಲಿ ಅವನ ವಯಸ್ಸಿನ ಹಲವು ಸ್ನೇಹಿತರಿದ್ದು ಅವರ ಜೊತೆಗೆ ಆಡಿಕೊಳ್ಳುತ್ತಿದ್ದ. ಅವರ ನಡುವೆ ದೊಡ್ಡ ಹುಡುಗರೂ ಇದ್ದು ಸಣ್ಣವರನ್ನು ಆಗಾಗ ಚೇಷ್ಟೆ ಮಾಡುತ್ತಿದ್ದರು.

ಒಂದು ವರ್ಷ ಮುಗಿದುಹೋಗಿ ನಾಗಭೂಷಣಂ ಅವರ ವಿಳಾಸಕ್ಕೆ ಶಾಲೆಯ ರಜೆಯ ವಿಚಾರವಾಗಿ ಹಾಸ್ಟೆಲಿನಿಂದ ಪತ್ರ ಬಂದಿತು. ರಜಾದಿನಗಳಲ್ಲಿ ಶಾಲೆ ಮುಚ್ಚಿದರೂ ಹಾಸ್ಟೆಲಿನ ಮೆಸ್ ಮಾತ್ರ ನಡೆಯುತ್ತಲೇ ಇರುತ್ತಿತ್ತು. ನಾಗಭೂಷಣಂ ಬೆಂಗಳೂರಿಗೆ ಹೋಗಿ, ಹುಡುಗನನ್ನು ಚಿತ್ತೂರಿಗೆ ಕರೆದೊಯ್ದರು. ಹುಡುಗ ಒಂದೆರಡು ದಿನಗಳು ಚಿತ್ತೂರಿನಲ್ಲಿ ಕಳೆಯುವುದರಲ್ಲಿ ಹುಡುಗನ ತಂದೆ ಚಿತ್ತೂರಿಗೆ ಬಂದು ಚಿರಂಜೀವಿಯನ್ನು ತಮ್ಮೂರಿಗೆ ಕರೆದೊಯ್ದರು.

ಚಿರಂಜೀವಿ, ತನ್ನ ತಂದೆ ತಾಯಿಯ ಜೊತೆ ಕಾಲ ಕಳೆಯುತ್ತಿದ್ದಂತೆ ಬೆಂಗಳೂರಿನಿಂದ ಬಂದಾಗ ತುಸು ಬಣ್ಣ ಬಂದಿದ್ದು ದುಂಡಗಿದ್ದವನು ಈಗ ಸಣ್ಣಗಾಗುತ್ತಾ ಕಪ್ಪಗಾಗತೊಡಗಿದ. ರಾಮಣ್ಣ ಮತ್ತು ಸೀತಮ್ಮ ಹುಡುಗ ಇಲ್ಲಿ ಇರುವುದಕ್ಕಿಂತ ಹಾಸ್ಟೆಲಿನಲ್ಲಿ ಇರುವುದೇ ವಾಸಿಯೆಂದು ರಜಾ ದಿನಗಳು ಮುಗಿಯುವುದನ್ನೇ ಕಾಯತೊಡಗಿದರು. ಹುಡುಗ ಮತ್ತೆ ಚಿತ್ತೂರಿನ ಮುಖಾಂತರ ಬೆಂಗಳೂರು ಸೇರಿಕೊಂಡ.

ದಿನಗಳು ಉರುಳಿದಂತೆ ಹುಡುಗ ರಾಮಾಪುರದಿಂದ ಚಿತ್ತೂರಿನ ಮೂಲಕ ಬೆಂಗಳೂರಿಗೆ ಹಲವು ಬಾರಿ ಒಬ್ಬನೇ ಪ್ರಯಾಣ ಮಾಡಿದ್ದ. ಅವನು ಓದಿನಲ್ಲಿ ಪ್ರತಿ ವರ್ಷವೂ ತರಗತಿಯಲ್ಲಿ ಎಲ್ಲರಿಗಿಂತ ಮುಂದಿದ್ದು, ಕೆಲವೊಮ್ಮೆ ಆ ತರಗತಿಯ ಪುಸ್ತಕಗಳಲ್ಲಿದ್ದ ಜ್ಞಾನ ಅವನ ಮಟ್ಟಕ್ಕೆ ಕಡಿಮೆಯಾಯಿತೊ ಏನೋ ಎನಿಸುವಂತಿತ್ತು. ಹಾಸ್ಟೆಲಿನಲ್ಲಿ ಗ್ರಂಥಾಲಯದ ಪುಸ್ತಕಗಳಲ್ಲಿದ್ದ ವಿಚಾರಗಳನ್ನೆಲ್ಲ ತಿಳಿದುಕೊಂಡಿದ್ದ ಚಿರಂಜೀವಿ ಮುಂದಿನ ತರಗತಿಗಳ ವಿದ್ಯಾರ್ಥಿಗಳಿಗೂ ಪಾಠ ಹೇಳಿಕೊಡುತ್ತಿದ್ದ. ಹಾಸ್ಟೆಲಿಗೆ ಬರುತ್ತಿದ್ದ ಕನ್ನಡ ದಿನ ಪತ್ರಿಕೆಗಳನ್ನು ಬೆಳಗ್ಗೆಯೇ ಒಂದು ಸಲ ಓದಿ ಮುಗಿಸಿಬಿಡುತ್ತಿದ್ದ.

ಐದನೇ ತರಗತಿಯಿಂದ ಇಂಗ್ಲೀಷ್ ಅಭ್ಯಾಸ ಪ್ರಾರಂಭವಾಗಿದ್ದು, ಇಂಗ್ಲೀಷ್ ಪತ್ರಿಕೆಗಳು ಓದುವುದನ್ನು ಚೆನ್ನಾಗಿ ಕಲಿತುಕೊಂಡಿದ್ದ. ಜೊತೆಗೆ ತೆಲುಗು ಭಾಷೆಯ ಅಕ್ಷರಗಳನ್ನು ಕನ್ನಡದ ಜೊತೆಗೆ ಹೋಲಿಸಿ ನೋಡುತ್ತಾ ಸ್ವಂತವಾಗಿಯೇ ಯಾರ ಸಹಾಯವೂ ಇಲ್ಲದೆ ಕಲಿತುಕೊಳ್ಳುತ್ತಿದ್ದ. ಹಾಸ್ಟೆಲಿನಲ್ಲಿ ಬೇರೆ ಏನೂ ಕೆಲಸವಿಲ್ಲದೆ ಚಿರಂಜೀವಿ ಆ ವಯಸ್ಸಿಗೆ ಒಂದು ಸಣ್ಣ ಪುಸ್ತಕ ಕೀಟವಾಗಿ ಮಾರ್ಪಟ್ಟಿದ್ದ.

೨

ಏಳು ವರ್ಷಗಳ ನಂತರ ಮತ್ತೊಮ್ಮೆ ಇದ್ದಕ್ಕಿದ್ದ ಹಾಗೆ ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತಗೊಂಡು ಭೀಕರವಾದ ಚಂಡಮಾರುತ ಉತ್ತರ-ಪಶ್ಚಿಮವಾಗಿ ಚಲಿಸುತ್ತಿರುವುದು ಕಾಣಿಸಿಕೊಂಡಿತು. ಇದನ್ನು ಗಮನಿಸಿದ ವಾಯುಮಾನ ವಿಭಾಗದವರು ಬಂಗಾಳ ಕೊಲ್ಲಿಯ ಮಧ್ಯದಲ್ಲಿ ಕಾಣಿಸಿಕೊಂಡಿರುವ ಚಂಡಮಾರುತ ಮುಂದಿನ ಅರವತ್ತು ಗಂಟೆಗಳಲ್ಲಿ ಸಮುದ್ರ

ತಟ ತಲುಪುವುದಾಗಿ ಎಚ್ಚರಿಸಿದರು. ಉತ್ತರ-ಪಶ್ಚಿಮ ದಿಕ್ಕಿನಲ್ಲಿ ಗಂಟೆಗೆ ನೂರಾಐವತ್ತು ಮೈಲಿಗಳ ವೇಗದಲ್ಲಿ ಚಲಿಸುತ್ತಾ ಬರುವುದಾಗಿ ತಿಳಿಸಲಾಯಿತು. ಈ ವಿಷಯ ರಾಮಾಪುರಕ್ಕೂ ಮುಟ್ಟಿತು.

ಸರಕಾರದವರು ರೇಡಿಯೋ ಮತ್ತು ದೂರದರ್ಶನದ ಮೂಲಕ ಇನ್ನಷ್ಟು ಎಚ್ಚರಿಕೆಗಳನ್ನು ನೀಡತೊಡಗಿದರು. ಅನಂತರ ಅವಸರವಸರವಾಗಿ ಜನರನ್ನು ಹೆಚ್ಚು ಹಾನಿಗೆ ಒಳಗಾಗುವ ಪ್ರದೇಶಗಳಿಂದ ಸುರಕ್ಷಿತ ಮತ್ತು ಎತ್ತರದ ಪ್ರದೇಶಗಳಿಗೆ ತಲುಪಿಸಿದರು. ಎಷ್ಟೋ ಜನ ತಮ್ಮ ಮನೆಗಲನ್ನು ಮತ್ತು ಜಾನುವಾರುಗಳನ್ನು ಬಿಟ್ಟು ಬರಲಾರದೆ ಗಟ್ಟಿ ಮನಸ್ಸು ಮಾಡಿ ತಾವಿದ್ದ ಸ್ಥಳಗಳಲ್ಲಿಯೇ ಉಳಿದುಕೊಂಡರು. ಯಾವ ಆಸ್ತಿಯೂ ಇಲ್ಲದ ರಾಮಣ್ಣ ಮತ್ತು ಸೀತಮ್ಮ ತಮ್ಮ ಗುಡಿಸಿಲನ್ನು ಬಿಟ್ಟು, ಸುರಕ್ಷಿತ ಪ್ರದೇಶಕ್ಕೆ ತೆರಳಿದರು. ತೆರಳುವ ಮುನ್ನ ತಾವೇನಾದರೂ ಆಗಲಿ ತಮ್ಮ ಮಗ ಆರಾಮಾಗಿದ್ದಾನೆ ಎನ್ನುವುದಾಗಿ ಮಾತನಾಡಿಕೊಂಡರು.

ಅಂತೂ ಕೆಲವು ಗಂಟೆಗಳಿಗಿಂತ ಮುಂಚೆಯೆ ಆ ಪ್ರದೇಶಗಳಲ್ಲಿ ಚಂಡಮಾರುತ ಭೀಕರವಾಗಿ ಅಪ್ಪಳಿಸಿತು. ಸಮುದ್ರದ ಅಲೆಗಳು ಮಾಮೂಲಿಗಿಂತ ಐದಾರು ಅಡಿಗಳು ಎತ್ತರವಾಗಿ ಎದ್ದು ಬಂದು ದಡಕ್ಕೆ ಅಪ್ಪಳಿಸಿ ಸಮುದ್ರ ಅಂಚಿನಲ್ಲಿದ್ದ ಕಲ್ಲು ಮಣ್ಣನ್ನೆಲ್ಲ ತನ್ನ ಒಡಲಿಗೆ ಸೇರಿಸಿಕೊಳ್ಳುತ್ತಿದ್ದವು. ಭೀಕರ ಮಳೆ, ಬಿರುಗಾಳಿನ್ನು ತಡೆದುಕೊಳ್ಳಲಾಗದೆ ಸೋಗೆ ಗುಡಿಸಲುಗಳು ಗುಂಪು ಗುಂಪಾಗಿ ಹಾರಿಹೋದವು. ಮರಗಳು ಲಟಲಟನೆ ಮುರಿದು ತಲೆಕೆಳಗಾದವು. ವಿದ್ಯುತ್ ಮತ್ತು ಟೆಲಿಫೋನ್ ಕಂಬಗಳು ಹಗ್ಗ ಕಟ್ಟಿ ಎಳೆದಂತೆ ಸಾಲಾಗಿ ನೆಲಕ್ಕೆ ಉರುಳಿಕೊಂಡವು. ಕೆಲವು ಕಡಿದುಕೊಂಡು ದೂರದೂರಕ್ಕೆ ಹಾರಿಹೋದವು.

ಸಾವಿರಾರು ಜನ, ಲಕ್ಷಾಂತರ ಜಾನುವಾರುಗಳು, ಬೆಳೆದು ನಿಂತಿದ್ದ ಹಸಿರು ಪೈರು, ಸಮೃದ್ಧ ನೆಲ ಪೂರ್ಣವಾಗಿ ಕೊಚ್ಚಿಕೊಂಡು ಹೋಗಿತ್ತು. ಹತ್ತು ವರ್ಷಗಳ ಕಾಲ ಆ ಪ್ರದೇಶದಲ್ಲಿ ಬೆಳೆಯೇ ಬೆಳೆಯದಷ್ಟು ತೀವ್ರವಾಗಿ ನೆಲ ಹಾನಿಗೊಳಗಾಗಿತ್ತು.

* * *

ಇಲ್ಲಿ ಬೆಂಗಳೂರಿನ ಹಾಸ್ಟೆಲಿನಲ್ಲಿದ್ದ ಚಿರಂಜೀವಿ ಪತ್ರಿಕೆ ಮತ್ತು ರೇಡಿಯೋ ಸಮಾಚಾರ ಕೇಳಿ ಗಾಬರಿಗೊಂಡ. ತಮ್ಮ ಊರಿನ ವಿಷಯ ಪ್ರತ್ಯೇಕವಾಗಿ ಎಲ್ಲಿಯೂ ಪ್ರಸ್ತಾಪವಾಗದಿದ್ದರೂ ಆ ಪ್ರದೇಶ ಹೇರಳ ಪ್ರಾಣ ಮತ್ತು ಆಸ್ತಿಯ ಹಾನಿಗೆ ಒಳಗಾಗಿರುವ ವಿಷಯ ತಿಳಿದು ತನ್ನ ತಂದೆ ತಾಯಿಯನ್ನು ನೋಡಿ ಬರಲು ಕಾತುರಗೊಂಡ.

ಈಗ ಅವನಿಗೆ ಹದಿನಾಲ್ಕು ವರ್ಷ ವಯಸ್ಸಾಗಿದ್ದು, ಹಿಂದಿನ ವರ್ಷ ತಾನೊಬ್ಬನೆ ಬೆಂಗಳೂರಿನಿಂದ ಚಿತ್ತೂರು ಮುಖಾಂತರ ತನ್ನ ಹಳ್ಳಿಗೆ ಹೋಗಿ ತಂದೆ ತಾಯಿಯನ್ನು ನೋಡಿ ಬಂದಿದ್ದ. ಚಿರಂಜೀವಿ, ಅವರಿವರಿಂದ ಸಾಲ ಪಡೆದು ಹಾಸ್ಟೆಲು ಮತ್ತು ಶಾಲೆಯಲ್ಲಿ ತಿಳಿಸಿ ಬೆಂಗಳೂರಿನಿಂದ ಚಿತ್ತೂರು ತಲುಪಿ ಅಲ್ಲಿಂದ ತನ್ನ ಹಳ್ಳಿಯ ಕಡೆಗೆ ಧಾವಿಸಿದ. ದಾರಿಯ ಉದ್ದಕ್ಕೂ ಉರುಳಿಬಿದ್ದಿರುವ ಮರಗಳು... ತಲೆಚೂರೇ ಇಲ್ಲದ ಗುಡಿಸಿಲುಗಳು, ಎಲ್ಲಿ ನೋಡಿದರೂ ನೀರಿನ ಪ್ರವಾಹ... ಹಳ್ಳ ಕೊಳ್ಳಗಳಲ್ಲಿ ಹೊಟ್ಟೆ ಉಬ್ಬಿಕೊಂಡು ಬಿದ್ದಿರುವ ಜಾನುವಾರುಗಳು..... ಮಣ್ಣೆಲ್ಲ ಸವೆದುಹೋಗಿ ಕಲ್ಲುಗಳು ಮಾತ್ರ ಕಾಣಿಸುತ್ತಿರುವ ಗೋರ್ಕಲ್ಲುಗಳ ನೆಲ... ಒಟ್ಟಿನಲ್ಲಿ ಸಮುದ್ರವೆ ಎದ್ದು ಬಂದು ನಾಟ್ಯವಾಡಿತೇನೋ ಎನ್ನುವಷ್ಟು ಭೀಕರ ದೃಶ್ಯಗಳು.

ಚಿರಂಜೀವಿ ಎದ್ದು ಬಿದ್ದು ನಾಲ್ಕಾರು ಕಿಲೋಮೀಟರುಗಳ ದಾರಿ ಸವೆದ ಮೇಲೆ ತನ್ನ ಹಳ್ಳಿ ರಾಮಾಪುರವಿದ್ದ ಸ್ಥಳ ತಲುಪಿದ. ಆದರೆ ಅಲ್ಲಿ ಅವನ ಪ್ರೀತಿಯ ತಂದೆ ತಾಯಿಯಿದ್ದ ರಾಮಾಪುರದ ಯಾವ ಚಿಹ್ನೆಗಳೂ ಕಾಣಲಿಲ್ಲ. ರಾಮಾಪುರದ ಸುತ್ತ ಮುತ್ತಲಿದ್ದ ಹಳ್ಳಿಗಳು ಕಾಣಿಸಲಿಲ್ಲ. ಸುತ್ತಲೂ ದಿಟ್ಟಿಸಿ ನೋಡಿದ. ನಾಲ್ಕು ದಿಕ್ಕುಗಳು ಶೂನ್ಯವಾಗಿ ಚಾಚಿಕೊಂಡು ಎಲ್ಲಾ ದಿಕ್ಕುಗಳಲ್ಲೂ ಆಕಾಶ ಮಾತ್ರ ಕಾಣಿಸುತ್ತಿದೆ. ಕುಕ್ಕುರು ಕುಳಿತ ಚಿರಂಜೀವಿ ತನ್ನ ಕಣ್ಣುಗಳಲ್ಲಿದ್ದ ನೀರೆಲ್ಲ ಹಿಂಗಿಹೋಗುವವರೆಗೆ ಅತ್ತು ಗೋಳಾಡಿದ. ಅವನ ಅಳಲನ್ನು ನೋಡುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ಕರಕಲು ಭೂಮಿ ಮತ್ತು ಆಕಾಶವನ್ನು ಬಿಟ್ಟು.

ಅಲ್ಲಿಂದ ಅಕ್ಕಪಕ್ಕದಲ್ಲಿ ಯಾವುದದಾರೂ ಹಳ್ಳಿ ಅಥವಾ ನಿರಾಶ್ರಿತರ ಆಶ್ರಯಗಳು ದೊರಕುತ್ತವೆನೋ ಎಂದು ಹುಡುಕಲು ಪ್ರಾರಂಭಿಸಿದ. ಅವನು ಬೆಂಗಳೂರು ಬಿಟ್ಟು ಆಗಲೆ ಎರಡು ಹಗಲು, ಎರಡು ರಾತ್ರಿಗಳಾಗಿದ್ದು ಹೊಟ್ಟೆಗೆ

ಯಾವಾಗ ತಿಂದಿದ್ದನೋ? ಏನು ತಿಂದಿದ್ದನೋ? ಮರೆತುಹೋಗಿದ್ದಾನೆ. ಸಾಲ ತಂದಿದ್ದ ಹಣ ಬಸ್ಸು ಲಾರಿಗಳ ಓಡಾಟಕ್ಕೆ ಖರ್ಚಾಗಿಹೋಗಿದೆ.

ಕತ್ತಲು ಅಮರಿಕೊಳ್ಳುತ್ತಿದ್ದಂತೆ ಭೀತಿಗೊಂಡ ಚಿರಂಜೀವಿ ದಿಕ್ಕು ತೋಚದೆ ನಡೆಯತೊಡಗಿದ. ನಡೆಯುತ್ತಾ ಹೋದಂತೆ ಸುಸ್ತಾಗಿ, ತಲೆ ಗಿರ್ರನೆ ತಿರುಗಿದಂತಾಯಿತು. ಕತ್ತಲಲ್ಲಿ ನೆಲಕ್ಕೆ ರಪ್ಪನೆ ಬಿದ್ದ ಸದ್ದು. ಆ ಮೇಲೆ ಏನಾಯಿತೊ ಚಿರಂಜೀವಿಗೆ ಒಂದೂ ಗೊತ್ತಾಗಲಿಲ್ಲ.

ಎಷ್ಟೋ ಹೊತ್ತಿನ ನಂತರ ಅದೇ ದಾರಿಯಲ್ಲಿ ಬಂದ ಪೋಲೀಸ್ ಜೀಪಿನ ಬೆಳಕಿನಲ್ಲಿ ಮನುಷ್ಯ ದೇಹ ಅಡ್ಡಬಿದ್ದಿರುವುದು ಕಾಣಿಸಿಕೊಂಡಿತು. ಜೀಪಿನಲ್ಲಿದ್ದ ಪೋಲೀಸರು ಇಳಿದು ಬಂದು ಹುಡುಗನ ಮುಖದ ಮೇಲೆ ಕೈಯಿಟ್ಟು ನೋಡಿದರು. ಹುಡುಗ ಉಸಿರಾಡುತ್ತಿದ್ದ. ಹುಡುಗನನ್ನು ತಕ್ಷಣವೇ ಜೀಪಿನಲ್ಲಿ ಹಾಕಿಕೊಂಡು ಹತ್ತಿರದ ಆಸ್ಪತ್ರೆಗೆ ಸಾಗಿಸಿದರು.

"ಹುಡುಗನ ಪ್ರಾಣಕ್ಕೆ ಏನೂ ತೊಂದರೆಯಿಲ್ಲ. ಬಹಳ ಬಳಲಿದಂತೆ ಕಾಣಿಸ್ತಿದೆ" ಎಂದೇಲಿದ ಡಾಕ್ಟರು ಎರಡು ಗ್ಲೂಕೋಸ್ ಬಾಟಲಿಗಳ ನೀರನ್ನು ಅವನ ದೇಹಕ್ಕೆ ಸೇರಿಸಿದರು. ಹುಡುಗ ಬೆಳಗಿನ ಜಾವದಲ್ಲಿ ಕಣ್ಣುಬಿಟ್ಟು ಸುತ್ತಲೂ ನೋಡಿದ. ಆಸ್ಪತ್ರೆ.

ಬೆಳಗ್ಗೆ ಡಾಕ್ಟರು ಎಲ್ಲವನ್ನೂ ಹುಡುಗನಿಂದ ಕೇಳಿಸಿಕೊಂಡು ಪೋಲೀಸರು ಬರುವವರೆಗೆ ಅಲ್ಲೇ ಉಳಿಸಿಕೊಂಡರು. ಪೋಲೀಸರು ಬಂದಿದ್ದೇ ಹುಡುಗ ಎಲ್ಲವನ್ನೂ ಮತ್ತೊಮ್ಮೆ ವಿಸ್ತಾರವಾಗಿ ಹೇಳಿ ಮುಗಿಸಿದ. ಪೇಚಾಟಕ್ಕೆ ಸಿಕ್ಕಿಕೊಂಡ ಪೋಲೀಸರು ಹುಡುಗನನ್ನೇ ಎಲ್ಲಿಗೆ ಹೋಗುತ್ತಿಯೆಂದು ಕೇಳಿದರು. ಹುಡುಗ ತನ್ನ ತಂದೆ ತಾಯಿಯನ್ನು ನೋಡಬೇಕೆಂದು ಕಣ್ಣೀರಾಕಿಕೊಂಡ.

ಪೋಲೀಸರು "ನೋಡು ಮರಿ ಈ ಸಲ ಆಗಿರುವುದು ಶತಮಾನಕ್ಕೊಂದು ಸಲ ಸಂಭವಿಸುಂತಹ ಭೀಕರ ಚಂಡಮಾರುತ.... ಸಾವಿರಾರು ಜನ ಸತ್ತೋಗಿದ್ದಾರೆ... ನೂರಾರು ನಿರಾಶ್ರಿತ ಆಶ್ರಯಗಳನ್ನು ಸ್ಥಾಪಿಸಲಾಗಿದೆ. ನಿಮ್ಮ ತಂದೆಯನ್ನು ಎಲ್ಲೋಗಿ ಹುಡುಕುವುದು ಹೇಳು? ಇನ್ನು ನಿಮ್ಮ ಹಳ್ಳಿಯೇ ಅಲ್ಲಿಲ್ಲ ಅಂತಿದ್ದೀಯ? ನೀನು ಬೆಂಗಳೂರಿಗೆ ಹೊರಟೋಗು" ಎಂದರು. ಹುಡುಗ ತನ್ನ ತಂದೆ ತಾಯಿಯನ್ನು ನೆನೆದುಕೊಂಡು ಇನ್ನಷ್ಟು ರೋದಿಸಿದ.

ಪೋಲೀಸರು, ಹುಡುಗನನ್ನು ಕೊನೆಗೂ ಚಿತ್ತೂರಿನಲ್ಲಿರುವ ನಾಗಭೂಷಣಂ ಮನೆಗೆ ಹೋಗುವಂತೆ ಒಪ್ಪಿಸಿದರು. ಪೂರ್ಣವಾಗಿ ದಣಿದಿದ್ದ ಹುಡುಗ

ಮೊದಲಿಗೆ ನಾಗಭೂಷಣಂ ಅವರನ್ನು ಭೇಟಿಯಾಗಿ ಅನಂತರ ತನ್ನ ತಂದೆ ತಾಯಿಯನ್ನು ಸಂಪರ್ಕಿಸಲು ತೀರ್ಮಾನಿಸಿದ. ಪೋಲೀಸರು ಹುಡುಗನ ಕೈಗೆ ಸ್ವಲ್ಪ ಹಣ ನೀಡಿ ಚಿತ್ತೂರಿಗೋಗುವ ಒಂದು ಲಾರಿಯಲ್ಲಿ ಕೂರಿಸಿದರು. ಹುಡುಗ ಚಿತ್ತೂರು ತಲುಪಿದ್ದೇ ನೇರವಾಗಿ ನಾಗಭೂಷಣಂ ಅವರ ಮನೆಯಿದ್ದ ಬೀದಿಯ ಕಡೆ ನಡೆದ. ಮನೆ ಮುಂದೆ ನಿಂತುಕೊಂಡು ಕರಗಂಟೆ ಒತ್ತಿದ. ಒಂದು ಹೆಂಗಸು ಹೊರಗೆ ಬಂದು,

"ಏನು ಬೇಕಾಗಿದೆ......?" ಎಂದಳು. ಗಾಬರಿಗೊಂಡ ಹುಡುಗ.

"ನಾಗಭೂಷಣಂ ಅಧಿಕಾರಿಗಳು" ಎನ್ನುವುದರಲ್ಲಿ,

"ಅವರು ಇಲ್ಲಿಲ್ಲ. ಬೇರೆ ಊರಿಗೆ ವರ್ಗವಾಗಿ ಬಹಳ ದಿನಗಳಾಗಿದೆ" ಎಂಧಳು.

"ವಿಳಾಸ...", "ವಿಳಾಸ ಗೊತ್ತಿಲ್ಲ" ಎಂದೇಳಿ ಬಾಗಿಲಾಕಿಕೊಂಡಳು.

ಪೆಚ್ಚುಮೋರೆ ಹಾಕಿಕೊಂಡ ಹುಡುಗ ರಸ್ತೆಯ ಬದಿಗೆ ಬಂದು ನಿಂತುಕೊಂಡ. ಅವನಿಗೆ ಭೂಮಿಯೇ ಬಿರಿದುಹೋಗುವಂತೆ ಭಾಸವಾಗಿ ಎಲ್ಲವೂ ಶೂನ್ಯವಾಗಿ ಕಂಡಿತು. ಸ್ವಲ್ಪ ಹೊತ್ತು ಏನೂ ಮಾತನಾಡದೆ ಕಣ್ಣುಗಳನ್ನು ಮುಚ್ಚಿಕೊಂಡು ಒಂದು ಅಂಗಡಿಯ ಮೂಲೆಯಲ್ಲಿ ಕುಳಿತುಕೊಂಡ. ಸುಮಾರು ಹೊತ್ತು ಹಾಗೆ ಕುಳಿತುಕೊಂಡು, ಅನಂತರ ಮುಂದೇನು ಮಾಡಬೇಕೆಂದು ಯೋಚಿಸಿದ.

ಜೇಬಿನಲ್ಲಿರುವ ಹಣವನ್ನು ನೋಡಿಕೊಂಡಾಗ ಬೆಂಗಳೂರು ತಲುಪಲು ಬೇಕಾಗುವಷ್ಟು ಹಣ ಅವನಲ್ಲಿ ಉಳಿದಿರಲಿಲ್ಲ. ಕೋಲಾರ ಕಡೆಗೆ ಹೋಗುವ ದಾರಿಗೆ ಬಂದು ಲಾರಿಗಳು ನಿಲ್ಲುವ ಸ್ಥಳದಲ್ಲಿ ನಿಂತುಕೊಂಡ. ಲಾರಿಗಳು ರಾಷ್ಟ್ರೀಯ ನಾಲ್ಕನೆ ಹೆದ್ದಾರಿಯಲ್ಲಿ ಬರ್‍ರ್ರ್..... ಎಂದು ಹೋಗುತ್ತಿವೆ. ಕೆಲವು ಲಾರಿಗಳನ್ನು ಡಾಬಾ ಹೋಟೆಲುಗಳ ಮುಂದೆ ನಿಲ್ಲಿಸಿರುವ ಚಾಲಕರು ಮತ್ತು ಕ್ಲೀನರುಗಳು ಡಾಬಾ ಹೋಟೆಲುಗಲಲ್ಲಿ ವಿಶ್ರಾಂತಿಗಾಗಿ ಕುಳಿತು ಮಲಗಿ ಏನೇನೋ ತಿನ್ನುತ್ತಿದ್ದಾರೆ. ಇನ್ನು ಕೆಲವರು ಲಾರಿಗಳ ನಡುವೆ ರಿಪೇರಿಯಲ್ಲಿ ತೊಡಗಿದ್ದಾರೆ.

ಚಿರಂಜೀವಿ ಸುತ್ತಲೂ ನೋಡಿ, ನಿಧಾನವಾಗಿ ಲಾರಿ ರಿಪೇರಿ ಮಾಡುತ್ತಿರುವವರ ಹತ್ತಿರಕ್ಕೆ ಹೋಗಿ ನಿಂತುಕೊಂಡ. ನೋಡಲು ಸ್ವಲ್ಪ

ಮೆದುವಾಗಿ ಕಾಣಿಸುತ್ತಿರುವವರನ್ನು ಅವನು ಆಯ್ಕೆ ಮಾಡಿಕೊಂಡಿದ್ದ. ಸ್ವಲ್ಪ ಸಮಯದ ನಂತರ ಹುಡುಗ ಒಬ್ಬನೇ ಹತ್ತಿರ ನಿಂತಿರುವುದನ್ನು ಗಮನಿಸಿದ ಲಾರಿಯವನು.

"ಏನೋ ಮರಿ..... ಏನು ನೋಡ್ತಿಯಾ.....?" ಪ್ರಶ್ನಿಸಿದ.

"ಏನೂ ಇಲ್ಲಣ್ಣಾ..... ಈ ಲಾರಿ ಎಲ್ಲಿಗೋಗುತ್ತೆ?" ಪ್ರಶ್ನಿಸಿಯೇಬಿಟ್ಟ.

"ಯಾಕೋ ದೊಡ್ಡ ಮನುಷ್ಯ... ಇದು ಬಾಂಬೆಗೋಗುತ್ತೆ ಬರ್ತೀಯೇನು...?"

ಲಾರಿಯವನು ನಕ್ಕ. ಚಿರಂಜೀವಿ ಸ್ವಲ್ಪವೂ ವಿಚಲಿತನಾಗದೆ.

"ಬೆಂಗ್ಳೂರೂವರೆಗೆ ಬರ್ತೀನಣ್ಣ ಕರಕೊಂಡೋಗ್ತೀಯ...?" ಕೇಳಿದ, ಯಲಾ ಇವನ...? ಏನು ಮನೆಯಿಂದ ಓಡಿಹೋಗ್ತಾಯಿದ್ದೀಯೇನು...?" ಕೆಲಸ ಮಾಡುತ್ತಲೇ ಪ್ರಶ್ನಿಸಿದ.

ಚಿರಂಜೀವಿ ಇದೇ ಸಮಯವೆಂದು ಎಲ್ಲವನ್ನೂ ಎರಡೇ ನಿಮಿಷಗಳಲ್ಲಿ ಹೇಳಿ ಮುಗಿಸಿದ. ಚಿರಂಜೀವಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡು, ದುಃಖ ಉಮ್ಮಳಿಸಿ ಬರುತ್ತಿತ್ತು. ಇನ್ನೂ ಎಷ್ಟು ಕಣ್ಣೀರು ಅವನ ಕಣ್ಣುಗಳಲ್ಲಿ ಅಡಗಿದೆಯೇ ಏನೋ.....? ಈ ವಯಸ್ಸಿಗೆ ಇವನಿಗೆ ಹೀಗಾಗಬಾರದಿತ್ತು ಎಂದುಕೊಂಡ ಲಾರಿಯವನು.

"ಮರಿ ಅಳಬ್ಯಾಡ... ಬೆಂಗ್ಳೂರು ತಾನೇ ತಲುಪಿಸಿಬಿಡ್ತೀನಿ ಬಿಡು" ಎಂದ.

ಕಣ್ಣೀರು ಒರೆಸಿಕೊಂಡ ಚಿರಂಜೀವಿಗೆ ತನ್ನ ತಂದೆ ತಾಯಿಯರದೇ ಜ್ಞಾಪಕ ಬರುತ್ತಿತ್ತು. ಬದುಕಿದ್ದಾರೋ..? ಸತ್ತೋಗಿದ್ದಾರೋ......? ಅವನಿಗೆ ಏನೂ ಗೊತ್ತಾಗಲಿಲ್ಲ. ದೇವರೇ ನನ್ನ ತಂದೆ ತಾಯಿ ಬದುಕಿರಲಿ, ಯಾವಾಗಲಾದರೂ ಒಮ್ಮೆ ನಮ್ಮನ್ನು ಸಂಧಿಸುವಂತೆ ಮಾಡಪ್ಪ ಎಂದು ಒಳಗೊಳಗೆ ಪ್ರಾರ್ಥಿಸಿಕೊಂಡ.

ಬೆಂಗಳೂರು ತಲುಪಿದ್ದೇ ಲಾರಿಯವರು ಅವನನ್ನು ಒಂದು ಸರ್ಕಲ್‌ನಲ್ಲಿ ಇಳಿಸಿ ಮುಂದಕ್ಕೆ ಹೋಗುತ್ತಿದ್ದಂತೆ ಹುಡುಗ ಹೃದಯ ತುಂಬಿಕೊಂಡು ಲಾರಿ ಕಡೆಗೆ ಕೈಬೀಸಿದ. ಅವನ ನೆರವಿಗೆ ಬರುವವರೆಲ್ಲ ಯಾವುದೋ ಲೋಕದ ದೇವರುಗಳಂತೆ ಕಾಣಿಸುತ್ತಿದ್ದರು.

ಚಿರಂಜೀವಿ ಅಲ್ಲಿಂದ ಬಸ್ಸಿಡಿದು ತಾನಿರುವ ಹಾಸ್ಟೆಲ್ ಸೇರಿಕೊಂಡ. ಲಾರಿಯವರು ಚಿರಂಜೀವಿಗೆ ಹಣ ಬೇಕಾದರೆ ಕೇಳೊ ಎಂದಿದ್ದರು. ಹಾಸ್ಟೆಲ್‌ಗೆ

ತಲುಪುವಷ್ಟು ಹಣವಿರುವುದರಿಂದ ಬೇಡವೆಂದು ನಿರಾಕರಿಸಿದ. ಹಾಸ್ಟೆಲ್ ತಲುಪಿದ್ದೇ ತನ್ನ ಹಾಸಿಗೆ ಮೇಲೆ ಮುದುಡಿಕೊಂಡ. ಅವನ ದುಃಖ ಈಗಲೂ ನಿಂತಿರಲಿಲ್ಲ. ಹಾಸ್ಟೆಲಿನ ಹಲವು ಹುಡುಗರು,

"ಚಿರಂಜೀವಿ ಬಂದ.... ಚಿರಂಜೀವಿ ಬಂದ" ಎಂದು ಎಲ್ಲರೂ ಅವನಿದ್ದಲ್ಲಿಗೆ ಧಾವಿಸಿಬಂದಿದ್ದರು. ಎಲ್ಲರೂ ಒಂದೇ ಸಮನೆ ಕೇಳಿದ ಪ್ರಶ್ನೆಗಳಿಗೆ ಒಂದೇ ಉತ್ತರ ಎನ್ನುವಂತೆ ಚಿರಂಜೀವಿ ಅತ್ತುಕೊಂಡ. ಆ ಮೇಲೆ ನಿಧಾನವಾಗಿ ಸುಧಾರಿಸಿಕೊಂಡ ಚಿರಂಜೀವಿ ತನ್ನ ಕಥೆಯನ್ನು ಬಿಚ್ಚಿದ. ಎಲ್ಲರೂ ಬೆಪ್ಪಾಗಿ ಅವನ ಕಣ್ಣೀರ ಕಥೆಯನ್ನೇ ಕೇಳುತ್ತಾ ಕೇಳುತ್ತಾ ಅಳತೊಡಗಿದರು. ಚಿರಂಜೀವಿ ಮತ್ತೆ ಮಾಮೂಲಿಯಾಗಿ ಮಾತನಾಡಲು ತಿಂಗಳುಗಳೇ ಹಿಡಿದವು.

* * *

ದಿನಗಳು ಮತ್ತೆ ಉರುಳಿದವು. ಚಿರಂಜೀವಿ ಪುಸ್ತಕಗಳನ್ನು ಇನ್ನಷ್ಟು ಮತ್ತಷ್ಟು ಪ್ರೀತಿಯಿಂದ ಓದತೊಡಗಿದ. ಅವನಿಗೆ ಜ್ಞಾನದ ದಾಹ ಮಿತಿಮೀರಿ ಹೋದಂತಿತ್ತು. ತನ್ನ ಪಠ್ಯ ಪುಸ್ತಕಗಳಲ್ಲಿನ ಅಧ್ಯಾಯಗಳು ಅವನ ಓದಿಗೆ ಏನೇನೂ ಸಾಕಾಗದೆ ಹೋಗಿ ಅಕ್ಕಪಕ್ಕದಲ್ಲಿದ್ದ, ದೂರದಲ್ಲಿದ್ದ ಬೆಂಗಳೂರಿನ ಗ್ರಂಥಾಲಯಗಳಲ್ಲಿನ ಪುಸ್ತಕಗಳನ್ನು ಓದತೊಡಗಿದ.

ಇದರ ನಡುವೆ ಇನ್ನೊಂದು ಸಲ ಚಿರಂಜೀವಿ ತನ್ನ ತಂದೆ ತಾಯಿಯನ್ನು ಹುಡುಕಲು ಬೆಂಗಳೂರಿನಿಂದ ರಾಮಾಪುರಕ್ಕೆ ಹೊರಟ. ರಾಮಾಪುರದ ಸುತ್ತಮುತ್ತಲು ಎಷ್ಟೇ ಹುಡುಕಿದರೂ ಅವನ ತಾಯಿ, ತಂದೆ ದೊರಕದೆ ನಿರಾಶೆಗೊಂಡು ಮತ್ತೆ ಬೆಂಗಳೂರಿನಗೆ ಹಿಂತಿರುಗಿದ. ಈಗ ಚಿರಂಜೀವಿಯ ಮುಂದಿದ್ದ ಒಂದೇ ಒಂದು ಗುರಿಯೆಂದರೆ ಓದುವುದು ಮಾತ್ರ.

ಹತ್ತನೇ ತರಗತಿ ಪಾಸಾದ ಚಿರಂಜೀವಿ ಕೇವಲ ಎರಡು ಅಂಕಗಳಿಂದ ಹತ್ತನೆ ರ್‍ಯಾಂಕ್ ಕಳೆದುಕೊಂಡಿದ್ದ. ಹತ್ತನೆ ತರಗತಿಯವರೆಗೆ ಮಾತ್ರ ಸೇರಿಸಿಕೊಳ್ಳುತ್ತಿದ್ದ ಆಂಧ್ರದ ಹಾಸ್ಟೆಲನ್ನು ಚಿರಂಜೀವಿ ಬಿಡಬೇಕಾಗಿ ಬಂದಿತು. ಹಾಸ್ಟೆಲಿನವರು ಚಿರಂಜೀವಿಗೆ ರಿಯಾಯಿತಿಯನ್ನು ತೋರಿಸುವುದಾಗಿ ತಿಳಿಸಿದರು, ಚಿರಂಜೀವಿ ಬೇರೆ ಹಾಸ್ಟೆಲಿನಲ್ಲಿ ಸೀಟು ಸಿಕ್ಕಿದರೆ ತಾನೇ ಹಾಸ್ಟೆಲು ಬಿಟ್ಟು ಹೋಗುವುದಾಗಿ ಮೊದಲೆ ತಿಳಿಸಿದ್ದ.

ಚಿರಂಜೀವಿ ತನ್ನ ಅಂಕದ ಪಟ್ಟಿಯನ್ನು ಸಮಾಜ ಕಲ್ಯಾಣದ ವಿಶೇಷ ಅಧಿಕಾರಿಗಳಿಗೆ ತೋರಿಸಿದ. ಅಂಕಪಟ್ಟಿಯನ್ನು ನೋಡಿದ ಅಧಿಕಾರಿಗಳು

ಚಿರಂಜೀವಿಗೆ ಸರಕಾರಿ ಹಾಸ್ಟೆಲಿನಲ್ಲಿ ಸೀಟು ಕೊಟ್ಟಿದ್ದರು. ಚಿರಂಜೀವಿ ಯಾವುದೇ ಕಾಲೇಜಿಗೆ ಅರ್ಜಿ ಹಾಕಿದರೂ ಸೀಟು ದೊರಕುತ್ತಿತ್ತು. ಅವನು ಒಂದು ಸರಕಾರಿ ಕಾಲೇಜಿಗೆ ಅರ್ಜಿ ಹಾಕಿ ಸೇರಿಕೊಂಡ. ಖಾಸಗಿ ಕಾಲೇಜುಗಳೆಂದರೆ ಹಣ ಎನ್ನುವುದನ್ನು ಅವನು ಆಗಲೆ ತಿಳಿದುಕೊಂಡಿದ್ದ. ಯಾವುದೇ ಖಾಸಗಿ ಕಾಲೇಜಾದರೂ ಏನೇನೋ ಹೇಳಿ ಸಾವಿರಾರು ರೂಪಾಯಿಗಳನ್ನೇ ಕೇಳುತ್ತಿದ್ದರು.

ಚಿರಂಜೀವಿ ಮುಂದಾಲೋಚನೆ ಮಾಡಿ ವಿಜ್ಞಾನದ ವಿಷಯಗಳನ್ನೇ ಆಯ್ಕೆ ಮಾಡಿಕೊಂಡಿದ್ದರೂ ಎಂಜಿನಿಯರಿಂಗ್, ಅಥವಾ ವೈದ್ಯಕೀಯ ವಿಷಯಗಳನ್ನು ತೆಗೆದುಕೊಂಡು ಓದುವ ಯೋಚನೆ ಅವನಿಗೆ ಇರಲಿಲ್ಲ. ಭೌತಶಾಸ್ತ್ರ, ಜೀವಶಾಸ್ತ್ರ, ರಾಸಾಯಾನಿಕಶಾಸ್ತ್ರ ಮತ್ತು ಗಣಿತದ ವಿಷಯಗಳ ಜೊತೆಗೆ ಕನ್ನಡ ಮತ್ತು ಇಂಗ್ಲೀಷು ಭಾಷೆಗಳನ್ನು ಆಯ್ಕೆ ಮಾಡಿಕೊಂಡಿದ್ದ. ಕಾಲೇಜಿಗೆ ಸೇರಿದೊಡನೆಯೇ ಅವನಿಗೆ ಹಲವಾರು ಗೆಳೆಯರು ದೊರಕಿದರು.

ಇಷ್ಟಕ್ಕೂ ಅದು ವಿದ್ಯಾರ್ಥಿನಿಯರಿರದ ಸರಕಾರಿ ವಿಜ್ಞಾನ ಕಾಲೇಜಾಗಿತ್ತು. ಕಾಲೇಜಿನಲ್ಲಿದ್ದ ವಿದ್ಯಾರ್ಥಿಗಳಿಗೆ ಜೊತೆಯಲ್ಲಿ ವಿದ್ಯಾರ್ಥಿನಿಯರಿಲ್ಲದ ವಿದ್ಯಾಭ್ಯಾಸ ಅಷ್ಟೊಂದು ರುಚಿಸದೆ ವಿದ್ಯಾರ್ಥಿನಿಯರಿರುವ ಕಾಲೇಜುಗಳ ಸುತ್ತ ಗಸ್ತು ಹೊಡೆಯುತ್ತಿದ್ದರು. ಚಿರಂಜೀವಿ ಮಾತ್ರ ಎಲ್ಲೂ ಹೋಗದೆ ತನ್ನ ಕಾಲೇಜಾಯಿತು, ಹಾಸ್ಟೆಲಾಯಿತು ಎನ್ನುವಂತೆ ಪುಸ್ತಕಗಳ ಜೊತೆಗೆ ಹೆಚ್ಚೆಚ್ಚು ಕಾಲ ಕಳೆಯತೊಡಗಿದ.

ಚಿರಂಜೀವಿಯನ್ನು ಹತ್ತು ವರ್ಷಗಳಷ್ಟು ದೀರ್ಘಕಾಲ ಬೆಳೆಸಿದ ಆಂಧ್ರದ ಹಾಸ್ಟೆಲಿಗೋಗಿ ಅಲ್ಲಿನ ಕೆಳಗಿನ ತರಗತಿಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಿದ್ದ. ಹಣ ಬೇಕಾದರೆ, ಹಾಸ್ಟೆಲಿನ ಅಧಿಕಾರಿಗಳಿಂದ ಹಣವನ್ನು ಪಡೆದುಕೊಂಡು ಲೆಕ್ಕವನ್ನು ತನ್ನ ಡೈರಿಯಲ್ಲಿ ಬರೆದಿಟ್ಟುಕೊಳ್ಳುತ್ತಿದ್ದ. ಅವನು ರಾಮಾಪುರ ಬಿಟ್ಟಾಗಿನಿಂದ ಇಂದಿನವರೆಗೂ ತನ್ನ ಅನುಭವಗಳನ್ನು ಅದೇ ಡೈರಿಯಲ್ಲಿ ತುಂಬಿಸಿಟ್ಟಿದ್ದಾನೆ.

* * *

ಎರಡನೇ ವರ್ಷದ ಪಿ.ಯು.ಸಿ. ಪರೀಕ್ಷೆಗಳು ಹತ್ತಿರವಾದಂತೆ ಚಿರಂಜೀವಿ ಓದಲು ಪ್ರಾರಂಭಿಸಿದ. ಅವನ ತರಗತಿಯಲ್ಲಿ ಓದುತ್ತಿದ್ದವರಲ್ಲಿ ಕೇವಲ

ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಟ್ಯೂಷನ್‌ಗೆ ಹೋಗುತ್ತಿದ್ದರು. ಸಾಮಾನ್ಯವಾಗಿ ಆ ಸರಕಾರಿ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳೆಲ್ಲ ಹೆಚ್ಚಾಗಿ ಮಧ್ಯಮ ಮತ್ತು ಕೆಳ ಮಧ್ಯಮ ತರಗತಿಯ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳಾಗಿದ್ದರು. ಹಳ್ಳಿ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳೇ ಹೆಚ್ಚು.

ಪರೀಕ್ಷೆಗಳು ಹತ್ತಿರ ಬಂದಂತೆ ಎಲ್ಲಾ ವಿದ್ಯಾರ್ಥಿಗಳು ಸುತ್ತಾಡುವುದನ್ನು ಬಿಟ್ಟು ಹಾಸ್ಟೆಲಿನಲ್ಲಿ ಶ್ರದ್ಧೆಯಿಂದ ಕುಳಿತುಕೊಂಡು ಓದಿಕೊಳ್ಳುತ್ತಿದ್ದರು. ಚಿರಂಜೀವಿಯ ಕೊಠಡಿಯಲ್ಲಿ ವಿದ್ಯಾರ್ಥಿಗಳ ಒಂದು ಗುಂಪೇ ಇರುತ್ತಿತ್ತು.

ಪರೀಕ್ಷೆಗಳು ಮುಗಿದವು, ಫಲಿತಾಂಶವು ಪ್ರಕಟವಾಯಿತು. ಅದೇನು ಆಶ್ಚರ್ಯವೋ ಚಿರಂಜೀವಿ ಹತ್ತನೆಯ ತರಗತಿಯಂತೆ ಈ ಸಲವೂ ಕೇವಲ ಮೂರು ಅಂಕಗಳ ಅಂತರದಲ್ಲಿ ಕೊನೆ ರ್‍ಯಾಂಕ್ ಕಳೆದುಕೊಂಡಿದ್ದ. ಅವನಿಗೆ ಬಹಳ ನಿರಾಸೆಯಾಯಿತು. ಪದೇ ಪದೇ ಏಕೆ ಹೀಗಾಗುತ್ತಿದೆ ಎನ್ನುವುದರ ಬಗ್ಗೆ ತೀವ್ರವಾಗಿಯೇ ತಲೆ ಕೆಡಿಸಿಕೊಂಡ. ದುರಾದೃಷ್ಟವೆಂದರೆ ಇದೇ ಇರಬೇಕು ಎಂದುಕೊಂಡ.

ಸ್ವಲ್ಪ ದಿನಗಳಾದ ಮೇಲೆ ಚಿರಂಜೀವಿ ಮತ್ತೆ ಮಾಮೂಲಿಯಾದ. ಅದೇ ಕಾಲೇಜಿನಲ್ಲಿ ಬಿ.ಎಸ್ಸಿ.ಗೆ ಸೇರಿಕೊಂಡ. ಅವನು ಅರ್ಜಿ ಹಾಕಿದ್ದರೆ ಇಂಜಿನಿಯರಿಂಗೋ ಅಥವಾ ವೈದ್ಯಕೀಯದಲ್ಲೋ ಸೀಟು ದೊರಕುತ್ತಿತ್ತು. ಜೊತೆಗೆ ಎಷ್ಟೋ ಅಧ್ಯಾಪಕರುಗಳು, ಗೆಳೆಯರು ಅವನನ್ನು ಇಂಜಿನಿಯರಿಂಗ್ ಅಥವಾ ವೈದ್ಯಕೀಯಕ್ಕೆ ಸೇರಿಕೊಳ್ಳುವಂತೆ ಬಲವಂತ ಮಾಡಿದರು. ಚಿರಂಜೀವಿ ಮಾತ್ರ ಖಡಾಖಂಡಿತವಾಗಿ ತಿರಸ್ಕರಿಸಿದ. ಸರಕಾರಿ ಕಾಲೇಜುಗಳಲ್ಲಿ ಸೀಟು ದೊರಕಿದರೂ, ಸಾಕಷ್ಟು ಹಣ ಬೇಕಾಗಿದ್ದು ಅದನ್ನು ತುಂಬಿಸಲಾಗದ ಪರಿಸ್ಥಿತಿಯಿಂದ ಅವನು ನಿರಾಕರಿಸಿದ್ದ. ಆದರೆ ಎಲ್ಲರಿಗೂ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಓದಲು ನನಗೆ ಇಚ್ಛೆಯಿಲ್ಲ ಎಂದು ಹೇಳಿ ತಪ್ಪಿಸಿಕೊಂಡಿದ್ದ.

ದಿನಗಳು ಉರುಳಿದಂತೆ, ಚಿರಂಜೀವಿ ಸಮಯವನ್ನೆಲ್ಲ ಓದುವುದರಲ್ಲಿ ತೊಡಗಿಸಿದ. ಮೊದಲನೇ ಬಿ.ಎಸ್ಸಿ, ಎರಡನೇ ಬಿ.ಎಸ್ಸಿ. ಮತ್ತು ಅಂತಿಮ ಬಿ.ಎಸ್ಸಿ.ಯೂ ಮುಗಿದುಹೋಯಿತು. ಈ ನಡುವೆ ಅವನು ಓದುವುದರ ಜೊತೆಗೆ ಬೆಂಗಳೂರಿನಲ್ಲೇ ಸಾಯಂಕಾಲ ಆರು ಗಂಟೆಯಿಂದ ರಾತ್ರಿ ಒಂಭತ್ತು ಗಂಟೆಯವರೆಗೆ ಒಂದು ಖಾಸಗಿ ಕಂಪನಿಯಲ್ಲಿ ದುಡಿಯತೊಡಗಿದ. ದಿನಕ್ಕೆ

ಮೂರು ಗಂಟೆ ಸಮಯ ಹಾಳಾದರೂ ಓದುವುದನ್ನು ಮಾತ್ರ ಕಡಿಮೆ ಮಾಡಲಿಲ್ಲ. ಭೂಗೋಳ, ರಾಜಕೀಯ, ಕಥೆ, ಕಾದಂಬರಿ, ಕಾವ್ಯ ಹೀಗೆ ಯಾವುದೇ ವಿಷಯದ ಪುಸ್ತಕಗಳಾಗಲಿ ಎಲ್ಲವನ್ನು ಓದತೊಡಗಿದ.

ಅಂತಿಮ ಬಿ.ಎಸ್ಸಿ., ಮುಗಿಸಿದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಿಗೆ ಅರ್ಜಿ ಹಾಕಿದ. ಇದರ ನಡುವೆ ಎರಡನೇ ಬಿ.ಎಸ್ಸಿ ಯಲ್ಲಿ ಒಂಬತ್ತನೇ ರ್‍ಯಾಂಕ್ ಸಹ ಗಳಿಸಿದ್ದ. ಸ್ನಾತಕೋತ್ತರ ವಿಷಯಗಳಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವ ಗೊಂದಲದಲ್ಲಿ ಸ್ವಲ್ಪ ದಿನ ಸಿಕ್ಕಿಕೊಂಡು ತೊಳಲಾಡಿದ. ಅಂತಿಮವಾಗಿ ಯೋಚಿಸಿ ಯೋಚಿಸಿ ಭೌತಶಾಸ್ತ್ರವನ್ನು ಆಯ್ಕೆ ಮಾಡಿಕೊಂಡ.

ಸ್ನಾತಕೋತ್ತರ ವಿಭಾಗಕ್ಕೆ ಸೇರಿಕೊಳ್ಳುವುದರ ಜೊತೆಗೆ ಪದವಿ ವಿದ್ಯಾರ್ಥಿಗಳ ಹಾಸ್ಟೆಲು ಬಿಟ್ಟು, ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಸ್ಟೆಲು ಸೇರಿಕೊಳ್ಳಬೇಕಾಯಿತು. ಜ್ಞಾನ ಭಾರತೀಯ ಕ್ಯಾಂಪಸಿನಲ್ಲಿದ್ದ ಹಾಸ್ಟೆಲು ಸೇರಿಕೊಂಡ ಚಿರಂಜೀವಿಗೆ ಓದಿನಲ್ಲಿ ಇನ್ನಷ್ಟು ತಲ್ಲೀನತೆ ಮೂಡಿತು. ಕ್ಯಾಂಪಸ್‌ನ ಗ್ರಂಥಾಲಯವನ್ನು ನೋಡಿದ ಮೊದಲ ದಿನವೇ ಚಿರಂಜೀವಿಗೆ ಮೈ ಮರೆತಂತಾಗಿತ್ತು. ಮೊದಲಿಗೆ ಗ್ರಂಥಾಲಯದಲ್ಲಿದ್ದ ಕೆಟಲಾಗಿನ ಪೂರ್ಣ ಮಾಹಿತಿಯನ್ನು ತಿಳಿದುಕೊಂಡ.

ಜ್ಞಾನಭಾರತಿ ವಿಶ್ವವಿದ್ಯಾಲಯ ಐದು ಸಾವಿರ ಎಕರೆಗಳ ವಿಸ್ತಾರವಾದ ಕ್ಯಾಂಪಸ್. ಸ್ನಾತಕೋತ್ತರ ವಿಷಯಗಳ ಒಂದೊಂದು ವಿಭಾಗಕ್ಕೂ ಒಂದೊಂದು ಪ್ರತ್ಯೇಕ ಕಟ್ಟಡವಿದೆ. ಆಡಳಿತ ಕಛೇರಿ, ಕ್ಯಾಂಟೀನು, ಲೈಬ್ರರಿ, ತೋಟಗಾರಿಕೆಯ ಎರಡು ನರ್ಸರಿಗಳು, ಗಾಂಧಿ ಭವನ, ಆಟದ ಮೈದಾನಗಳು, ಆಸ್ಪತ್ರೆ ಅಧ್ಯಾಪಕರ ಕ್ವಾರ್ಟರ್ಸ್‌ಗಳು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪ್ರತ್ಯೇಕ ಹಾಸ್ಟೆಲುಗಳು..... ಹೀಗೆ ಅದೊಂದು ದೊಡ್ಡ ಸುಸಜ್ಜಿತವಾದ ಎಲ್ಲಾ ಸೌಕರ್ಯಗಳು ಇರುವ ಸಮುಚ್ಚಯವೇ ಜ್ಞಾನಭಾರತಿ ವಿಶ್ವವಿದ್ಯಾಲಯ ಕ್ಯಾಂಪಸ್ಸು.

ವಿಶಾಲವಾದ ಹುಲ್ಲು ಮೈದಾನಗಳು, ಮಧ್ಯ ಮಧ್ಯ ಹೂತೋಟಗಳಿದ್ದು, ರಸ್ತೆಗಳ ಇಕ್ಕೆಲಬುಗಳಲ್ಲಿ ಬಣ್ಣ ಬಣ್ಣದ ಹೂಗಳು ಬಿಡುವ ಗಿಡಮರಗಳನ್ನು ಬೆಳಸಲಾಗಿದೆ. ಬೆಳಗ್ಗೆಯಿಂದ ಸಾಯಂಕಾಲದವರೆಗೆ ಬೆಂಗಳೂರಿನ ಎಲ್ಲಾ ಕಡೆಗಳಿಗೂ ಕ್ಯಾಂಪಸ್ ಬಸ್ಸುಗಳು ಓಡಾಡುತ್ತವೆ.

ಭೌತಶಾಸ್ತ್ರ ವಿಭಾಗದಲ್ಲಿ ಮೂವತ್ತು ವಿದ್ಯಾರ್ಥಿಗಳಿದ್ದು ಅವರಲ್ಲಿ ಎಂಟು ವಿದ್ಯಾರ್ಥಿನಿಯರು ಇದ್ದರು, ಅರೆತೋಳು, ಮಿಡಿ, ಚೂಡಿದಾರ್, ಜೀನ್ಸ್ ಪ್ಯಾಂಟ್‌ಗಳನ್ನು ಧರಿಸುತ್ತಿದ್ದ ಹೆಣ್ಣುಗಳು, ಗಂಡು ವಿದ್ಯಾರ್ಥಿಗಳಿಗಿಂತ ಎಷ್ಟೋ ಪಟ್ಟು ಮುಂದುವರಿದವರಂತೆ ಹಾರಾಡುತ್ತಿದ್ದರು. ಕೆಲವರಂತೂ ಕೈನೆಟಿಕ್ ಹೊಂಡಾ, ಮಾರುತಿ ಕಾರುಗಳಿಂದ ನೆಲಕ್ಕೆ ಇಳಿಯುತ್ತಲೇ ಇರಲಿಲ್ಲ. ಕ್ಯಾಂಪಸ್‌ನ ಕ್ಯಾಂಟೀನಲ್ಲಿ, ಲೈಬ್ರರಿಯಲ್ಲಿ, ತರಗತಿಗಳಲ್ಲಿ ಎಲ್ಲಿ ನೋಡಿದರೂ ವಿದ್ಯಾರ್ಥಿಗಳು ಗುಂಪು ಗುಂಪಾಗಿ ಓಡಾಡುತ್ತಿದ್ದರು.

ಕೆಲವು ವಿದ್ಯಾರ್ಥಿನಿಯರಂತೂ ಬೆಳಗ್ಗೆ ಬಂದ ತಕ್ಷಣವೆ ತಮಗೆ ಇಷ್ಟವಾದ ವಿದ್ಯಾರ್ಥಿಗಳ ಕೈಗಳನ್ನು ಕುಲುಕುತ್ತಾ ರಾತ್ರಿ ನಡೆದ ಘಟನೆಗಳನ್ನೆಲ್ಲ ಸುರಳಿಯಂತೆ ಬಿಚ್ಚಿಕೊಳ್ಳುತ್ತಿದ್ದರು. ಮಧ್ಯ ಮಧ್ಯ ನಗೆಹನಿಗಳನ್ನು ಕಟ್ ಮಾಡುವ ನೆಪದಲ್ಲಿ ಒಬ್ಬರನ್ನೊಬ್ಬರು ಹೊಡೆಯುತ್ತಾ ಚಿವುಟುತ್ತಾ ಸಮಯ ಬಂದರೆ ಓಡಿಸಿಕೊಂಡೋಗಿ ಹೊಡೆಯುತ್ತಿದ್ದರು. ಕೆಲವು ವಿದ್ಯಾರ್ಥಿಗಳಂತೂ ಶಾಶ್ವತವಾಗಿ ಎಲ್ಲಿ ನೋಡಿದರೂ ಜೋಡಿಗಳಾಗಿಯೇ ಕಾಣಿಸಿಕೊಳ್ಳುತ್ತಿದ್ದರು.

ಚಿರಂಜೀವಿಗೆ ಈ ವಿದ್ಯಾರ್ಥಿಗಳ ಚೇಷ್ಟೆಗಳು ಅದೇಕೋ ಕೃತಕವಾಗಿ ತೋರುತ್ತಿದ್ದವು. ಪ್ರಸಕ್ತ ವಿದ್ಯಮಾನಗಳಿಗಿಂತ ಒಂದೈದು ವರ್ಷಗಳ ಹಿಂದಿನ ವಿದ್ಯಾರ್ಥಿಯಂತೆ ಚಿರಂಜೀವಿ ಯೋಚಿಸುತ್ತಿದ್ದ. ಇದಕ್ಕೆ ಅವನು ಬೆಳೆದು ಬಂದ ವಾತಾವರಣ ಮತ್ತು ಬೆಂಗಳೂರಿನ ಹೆಣ್ಣುಗಳು ಬೆಳೆದು ಬಂದಿರುವ ವಾತಾವರಣದ ಅಂತರವೇ ಕಾರಣವಾಗಿತ್ತು. ಒಟ್ಟಿನಲ್ಲಿ ಬೆಂಗಳೂರಿನ ಮಧ್ಯಮ ಮತ್ತು ಮೇಲ್ವರ್ಗದ ಕುಟುಂಬಗಳ ಆಡಂಬರ ಮತ್ತು ಲವಲವಿಕೆ ಅವನಿಗೆ ಹೊಸದಾಗಿ ತೋರಿತು.

ಚಿರಂಜೀವಿ ಯಾವುದೋ ಒಂದು ಹಳ್ಳಿಯಿಂದ ಬಂದಿರುವ ಪುಸ್ತಕ ಕೀಟವಿರಬೇಕು ಎಂದುಕೊಂಡ ಭೌತಶಾಸ್ತ್ರದ ವಿದ್ಯಾರ್ಥಿಗಳು ಮೊದಲಿಗೆ ಅವನ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳಲಿಲ್ಲ. ಚಿರಂಜೀವಿಯೂ ಅಷ್ಟೇ ತಾನಾಯಿತು, ತನ್ನ ಕೆಲಸವಾಯಿತು ಎಂದುಕೊಂಡು ನಿಧಾನವಾಗಿ ಸುತ್ತಲಿನ ವಾತಾವರಣಕ್ಕೆ ಸ್ವಲ್ಪ ಸ್ವಲ್ಪವಾಗಿ ಒಗ್ಗಿಕೊಳ್ಳಲು ಹೆಣಗಾಡುತ್ತಿದ್ದ.

ಚಿರಂಜೀವಿ ಗ್ರಂಥಾಲಯದಲ್ಲಿ ದೊರಕುತ್ತಿದ್ದ ಸಿವಿಲ್ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶೇಖರಿಸುತ್ತಾ ನಿಧಾನವಾಗಿ ತನ್ನ ಮೆದುಳಿಗೆ

ತುಂಬುತ್ತಾ ಹೋದ. ಹಾಸ್ಟೆಲಿನಲ್ಲಿದ್ದ ಇನ್ನೂ ಕೆಲವು ಸೀನಿಯರ್ ಪುಸ್ತಕ ಕೀಟಗಳ ಸಾಂಗತ್ಯ ಗಳಿಸಿದ ಚಿರಂಜೀವಿ ಪರೀಕ್ಷೆಗಳ ವಿವರಗಳನ್ನು ಆಳವಾಗಿ ತಿಳಿದುಕೊಂಡ. ಹಲವು ವರ್ಷಗಳ ಗೈಡುಗಳನ್ನು ತಿರುವಿ ಮುಖ್ಯ ಪರೀಕ್ಷೆಗೆ ಯಾವ ವಿಷಯಗಳನ್ನು ತೆಗೆದುಕೊಂಡರೆ ಲಾಭವಾಗಬಹುದೆಂದು ಸುಮಾರು ದಿನಗಳು ಯೋಚಿಸಿದ.

ಅಂತಿಮವಾಗಿ ಭೌತಶಾಸ್ತ್ರ, ರಾಸಾಯಾನಿಕ ಶಾಸ್ತ್ರ ಮತ್ತು ಭೂಶಾಸ್ತ್ರವನ್ನು ಮುಖ್ಯ ವಿಷಯಗಳಾಗಿ ತೆಗೆದುಕೊಳ್ಳಲು ನಿರ್ಧರಿಸಿದ. ಭೂವಿಜ್ಞಾನ ಬಹಳ ಸರಳವಾಗಿರುತ್ತದೆ ಮತ್ತು ಹೆಚ್ಚು ಅಂಕಗಳನ್ನು ಪಡೆಯಬಹುದೆಂದು ಗೆಳೆಯರು ಸಲಹೆ ನೀಡಿದ್ದರು. ಭಾರತೀಯ ಭಾಷೆಗಳಲ್ಲಿನ ಕನ್ನಡದ ಜೊತೆಗೆ ಸಾಮಾನ್ಯಜ್ಞಾನ ಮತ್ತು ಸಾಮಾನ್ಯ ಇಂಗ್ಲೀಷ್ ಕೂಡ ಓದಬೇಕಾಗಿತ್ತು. ಈಗ ಮೊದಲಿಗೆ ಎಂಟ್ರನ್ಸ್ ಪರೀಕ್ಷೆಗೆ ಸಾಮಾನ್ಯ ವಿಷಯಗಳನ್ನು ಓದತೊಡಗಿದ. ಗ್ರಂಥಾಲಯದಲ್ಲಿ ಎಲ್ಲಾ ಭಾಷೆಯ, ಎಲ್ಲಾ ರೀತಿಯ ದಿನಪತ್ರಿಕೆಗಳು, ಮಾಸ ಪತ್ರಿಕೆಗಳು, ಸ್ಪರ್ಧಾತ್ಮಕ ಪತ್ರಿಕೆಗಳು ಬರುತ್ತಿದ್ದು ಒಂದೂ ಬಿಡದೆ ಎಲ್ಲವನ್ನೂ ಓದತೊಡಗಿದ.

ಸ್ನಾತಕೋತ್ತರ ಪದವಿಯ ಮೊದಲನೇ ವರ್ಷದಲ್ಲಿ ಸಿವಿಲ್ ಪರೀಕ್ಷೆಗೆ ಸಂಬಂಧ ಪಟ್ಟ ವಿಷಯಗಳನ್ನು ಹೆಚ್ಚಾಗಿ ಓದಿದ.

ಮೊದಲನೇ ವರ್ಷದ ಪರೀಕ್ಷೆಗಳು ಇನ್ನೇನು ಬಂದೇ ಬಿಟ್ಟವು ಎನ್ನುವ ಸಮಯಕ್ಕೆ ಸಿವಿಲ್ ಪರೀಕ್ಷೆಯ ವಿಷಯಗಳನ್ನು ಮುಚ್ಚಿಟ್ಟು ಸ್ನಾತಕೋತ್ತರ ಪರೀಕ್ಷೆಗಳಿಗೆ ತಯಾರಾಗಲು ಪ್ರಾರಂಭಿಸಿದ. ಸ್ನಾತಕೋತ್ತರ ತರಗತಿಗಳಲ್ಲಿ ಯಾವ ಅಧ್ಯಾಪಕರು ನೋಟ್ಸ್ ಕೊಡುತ್ತಿರಲಿಲ್ಲ. ಆದುದರಿಂದ ವಿದ್ಯಾರ್ಥಿಗಳು ತಾವೇ ನೋಟ್ಸ್ ತಯಾರು ಮಾಡಿಕೊಳ್ಳಬೇಕಾಗಿತ್ತು. ಚಿರಂಜೀವಿ ಮಾತ್ರ ಯಾವ ವಿಷಯಕ್ಕೂ ನೋಟ್ಸ್ ತಯಾರಿ ಮಾಡಿಕೊಳ್ಳುತ್ತಿರಲಿಲ್ಲ.

ಪರೀಕ್ಷೆಗಳಿಗೆ ಮುಂಚೆ ತಾನೇ ಒಂದು ಸ್ವಂತ ವೇಳಾಪಟ್ಟಿಯನ್ನು ತಯಾರಿಸಿದ. ಸ್ವಂತ ಖರ್ಚಿಗಾಗಿ ಸಾಯಂಕಾಲ ಆರು ಗಂಟೆಯಿಂದ ಒಂಬತ್ತು ಗಂಟೆಯುವರೆಗೆ ಕೆಲಸಕ್ಕೆ ಹೋಗುತ್ತಿರುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಪರೀಕ್ಷೆಗಳು ಮುಗಿದ ಮೇಲೆ ಮತ್ತೆ ಬರುವುದಾಗಿ ಅವರಿಂದ ಅಪ್ಪಣೆ ಪಡೆದುಕೊಂಡ.

ಒಂದೊಂದು ವಿಷಯಕ್ಕೆ ಎಷ್ಟೆಷ್ಟು ದಿನಗಳು ಬೇಕು? ಯಾವ ಯಾವ ಪತ್ರಿಕೆಗಳನ್ನು ಓದಬೇಕು. ಎಷ್ಟು ಸಮಯ ಬೇಕು? ಇತ್ಯಾದಿ ವಿವರಗಳನ್ನು ಬರೆದು ಗೋಡೆಗೆ ಮೆತ್ತಿಸಿದ. ಅದರಲ್ಲಿ ನಿದ್ದೆಯೂ ಸೇರಿತ್ತು. ಸಿಟಿ ಕಡೆಗೆ ಓಡಾಡುವುದನ್ನು ಎರಡು ತಿಂಗಳು ಕಾಲ ಪೂರ್ಣವಾಗಿ ರದ್ದುಗೊಳಿಸಿದ.

ಚಿರಂಜೀವಿ ಇತ್ತೀಚೆಗೆ ಇನ್ನೊಂದು ಸ್ವಯಂ ಶಕ್ತಿಯನ್ನು ಗಳಿಸಿಕೊಂಡಿದ್ದ. ಯಾವುದೇ ಕಠಿಣ ತರ್ಕಗಳಿರುವ ಪುಸ್ತಕವಾಗಲಿ, ಘಟ್ಟಿ ಭಾಷೆಯುಳ್ಳ ಪುಸ್ತಕವಾಗಲಿ, ಎಷ್ಟಾದರೂ ಉದ್ದವಿರಲಿ ಒಂದು ಕಾದಂಬರಿಯನ್ನು ಓದುವಂತೆ ಇಡೀ ರಾತ್ರಿ ಕುಳಿತು ಓದಿ ಬಿಡುತ್ತಿದ್ದ. ಅನಂತರ ಬೆಳಿಗ್ಗೆ ಒಂಬತ್ತು ಗಂಟೆಯವರೆಗೂ ವಿಶ್ರಾಮವಾಗಿ ನಿದ್ದೆ ಮಾಡಿ ಬಿಡುತ್ತಿದ್ದ. ಬೆಳಗ್ಗೆ ಎದ್ದು ಯಾವುದೇ ಪ್ರಶ್ನೆಗೆ ಸಂಬಂಧಪಟ್ಟ ಉತ್ತರವನ್ನು ಬಿಳಿ ಕಾಗದದ ಮೇಲೆ ಸರಸರನೆ ಶೀಘ್ರಲಿಪಿಗಾರರಂತೆ ಒಂದು ಪದವನ್ನು ಒಂದೆರಡು ಗೆರೆಗಳಿಂದ ಗೀಚುತ್ತಾ ಹೋಗುತ್ತಿದ್ದ. ಅವನ ಬಗ್ಗೆ ಅವನಿಗೇನೇ ಆಶ್ಚರ್ಯವಾಗುತ್ತಿತ್ತು. ಬೇರೆ ವಿದ್ಯಾರ್ಥಿಗಳೆಲ್ಲ ಹಲವು ಪುಸ್ತಕಗಳಿಂದ ಉತ್ತರಗಳನ್ನು ಹೆಕ್ಕಿ ಅವುಗಳನ್ನು ಇನ್ನಷ್ಟು ಮೊಟಕುಗೊಲಿಸಿ, ಅನಂತರ ಉತ್ತರಗಳನ್ನು ಹಲವರಿಗೆ ತೋರಿಸಿ, ಖಚಿತಪಡಿಸಿಕೊಳ್ಳುತ್ತಿದ್ದರು. ಇನ್ನೂ ಕೆಲವು ವಿದ್ಯಾರ್ಥಿಗಳು, ಸೀನಿಯರ್ ವಿದ್ಯಾರ್ಥಿಗಳು ಬಿಟ್ಟೋಗಿರುವ ಉತ್ತರಗಳನ್ನೇ ಕಾಪಿ ಮಾಡಿಕೊಂಡು ಅದನ್ನೇ ಉರು ಹೊಡೆದು ಬಿಡುತ್ತಿದ್ದರು.

ಚಿರಂಜೀವಿಗೆ ಎಲ್ಲಾ ಸೌಕರ್ಯಗಳು ಸರಿಯಾಗಿದ್ದು ಓದು ಕೂಡ ಅವನು ತಿಳಿದುಕೊಂಡಂತೆ ಸರಿಯಾಗಿಯೇ ಸಾಗಿತ್ತು. ಈಗ ಅವನಿಗೆ ವಯಸ್ಸು ಇಪ್ಪತ್ತೆರಡು ವರ್ಷಗಳು ದಾಟಿ ಇಪ್ಪತ್ತು ಮೂರನೇ ವರ್ಷದಲ್ಲಿ ಬಿದ್ದಿತ್ತು. ಚಿರಂಜೀವಿ ಧೃಡಕಾಯುವಲ್ಲದಿದ್ದರೂ ನೀಳವಾಗಿದ್ದು, ತೀರಾ ಕೆಂಪು ಬಣ್ಣವಲ್ಲದಿದ್ದರೂ ಸಾಮ ವರ್ಣದವನಾಗಿದ್ದ.

ಜಿಗುರು ಮೀಸೆ ಹೊಡೆದು ಆಗಾಗ ಕತ್ತರಿಸಿದರೂ ವೇಗವಾಗಿ ಬೆಳೆಯುತ್ತಾ ಮೇಲಿನ ತುಟಿಗಳನ್ನು ಮುಚ್ಚಿಕೊಳ್ಳುತ್ತಿತ್ತು. ತರಗತಿಯ ಕೆಲವು ವಿದ್ಯಾರ್ಥಿನಿಯರು ಚಿರಂಜೀವಿಯನ್ನು ಆಗಾಗ ಚೇಷ್ಟೆ ಮಾಡುತ್ತಿದ್ದರು. ಚಿರಂಜೀವಿ ಕಣ್ಣುಗಳಲ್ಲೇ ನಕ್ಕು ಸುಮ್ಮನಾಗಿ ಬಿಡುತ್ತಿದ್ದ. ಅಕ್ಕಪಕ್ಕದ ತರಗತಿಗಳ ಹುಡುಗಿಯರು "ಇದ್ಯಾವುದೇ ಪ್ರಾಣಿ..... ಸೊಪ್ಪಾಕಿದರೂ

ತಿನ್ನುವುದಿಲ್ಲವಲ್ಲ......" ಎಂದು ಗೇಲಿ ಮಾಡಿ ನಗುತ್ತಿದ್ದರು. ಚಿರಂಜೀವಿ ಈಗೀಗ ಹುಡುಗಿಯರ ಜೊತೆಗೆ ಮಾತನಾಡುವುದನ್ನು ಸ್ವಲ್ಪ ಸ್ವಲ್ಪವಾಗಿ ಕಲಿತುಕೊಳ್ಳುತ್ತಿದ್ದ.

ಹುಡುಗಿಯರಿಗೆ ಯಾವ ರೀತಿಯ ಹುಡುಗರಾದರೆ ಇಷ್ಟ? ಏನು ಮಾತನಾಡಿದರೆ ಇಷ್ಟ? ಹೀಗೆ ಹುಡುಗಿಯರ ಮನೋಜ್ಞಾನವನ್ನು ತುಸು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದ.

ಕ್ಯಾಂಪಸ್‌ನ ಯಾವುದೇ ಹುಡುಗಿಯ ಗೆಳೆತನವನ್ನು ಅವನು ಬಯಸದೆ ಇದ್ದುದರಿಂದ ಎಲ್ಲರಿಗಿಂತ ಹಾಯಾಗಿದ್ದ. ಏಕೆಂದರೆ ಕ್ಯಾಂಪಸ್‌ನಲ್ಲಿರುವ ಎಲ್ಲಾ ಹುಡುಗರು ಯಾವುದೋ ಒಂದು ಹುಡುಗಿಯ ಸುತ್ತ ಗಿರಕಿ ಹೊಡೆಯುತ್ತಾ, ಸಿನಿಮಾ, ಪಾರ್ಕ್, ಪ್ರೀತಿ ಪ್ರೇಮದ ಹೆಸರಿನಲ್ಲಿ ಸಿಕ್ಕಿಕೊಂಡು ನರಳುತ್ತಿದ್ದರು. ದಿನಾಗಲು ಸ್ನಾನ ಮಾಡಿ ನೀಟಾಗಿ ಬಟ್ಟೆಗಳನ್ನು ಪ್ರೆಸ್ ಮಾಡಿ ಧರಿಸುತ್ತಿದ್ದರು ಮುಖಕ್ಕೆ ಪೌಡರ್ ಮಾತ್ರ ಹಾಕುತ್ತಿರಲಿಲ್ಲ. ಒಟ್ಟಿನಲ್ಲಿ ಚಿರಂಜೀವಿಗೆ ಅದೇಕೊ ಇದುವರೆಗೂ ಹೆಣ್ಣಿನ ಬಗ್ಗೆ ಹುಚ್ಚುಚ್ಚು ಬಯಕೆಗಳು ಬಂದಿರಲಿಲ್ಲ.

* * *

ಚಿರಂಜೀವಿಗೆ ಕೆಲವೊಮ್ಮೆ ಪ್ರಪಂಚದಲ್ಲಿ ತಾನೇ ಒಂಟಿ ಎನಿಸುವ ಕೊರತೆ ಮಾತ್ರ ಹಾಗೇ ಉಳಿದುಹೋಗಿತ್ತು. ಊಟದ ತಟ್ಟೆಯ ಮುಂದೆ ಕುಳಿತುಕೊಂಡಾಗ ಅವನ ತಂದೆ ತಾಯಿಯ ಮುಖಗಳು ಸುಳಿದಾಡುತ್ತಿದ್ದವು. ಎಷ್ಟೋ ದಿನಗಳು ತಟ್ಟೆಯ ಮುಂದೆ ಕುಳಿತುಕೊಂಡ ನಂತರವೂ ಊಟಮಾಡಲಾರದೆ ಎದ್ದುಬಿಟ್ಟಿದ್ದಾನೆ. ಎಷ್ಟೋ ರಾತ್ರಿಗಳು ಖಾಲಿ ಹೊಟ್ಟೆಯಲ್ಲಿಯೇ ಮಲಗಿ ಹಾಗೆ ನಿದ್ದೆ ಮಾಡಿಬಿಟ್ಟಿದ್ದಾನೆ.

ಅವನ ಜೀವನದಲ್ಲಿ ಬಿಡಿಸಲಾಗದ ಪ್ರಶ್ನೆಯೆಂದರೆ ಅವನ ತಂದೆ ತಾಯಿ ನಿಜವಾಗಿಯೂ ಅವರು ಮೃತಪಟ್ಟಿದ್ದಾರೋ ಅಥವಾ ಯಾವುದೋ ಪ್ರದೇಶದಲ್ಲಿ ಚಿಂರಜೀವಿ ಎಂದಾದರೂ ಒಂದು ದಿನ ಬಂದೇ ಬರುತ್ತಾನೆಂದು ಕಾಯುತ್ತಿದ್ದಾರೋ ಏನೋ? ಹಾಸ್ಟೆಲಿನ ಮೂರನೇ ಮಹಡಿಯ ತನ್ನ ಕೊಠಡಿಯಲ್ಲಿ ಒಬ್ಬನೇ ಎಷ್ಟೋ ಹೊತ್ತು ಕಿಟಕಿಯಿಂದ ಹೊರಕ್ಕೆ ನೋಡುತ್ತಾ ಕುಳಿತುಬಿಡುತ್ತಿದ್ದ. ದೂರದಲ್ಲಿ ಆಕಾಶ ಮತ್ತು ಭೂಮಿ ಯಾವಾಗಲೂ ಒಂದೇ ರೀತಿ ಕಾಣಿಸುತ್ತಿತ್ತು. ಮಧ್ಯದಲ್ಲಿದ್ದ ಮರಗಳು ಮಾತ್ರ ಅವುಗಳ ನಡುವಿನ

ಸಂಬಂಧವನ್ನು ಆಗಾಗ ಮರೆಮಾಡುತ್ತಿದ್ದವು. ಮಳೆ ಸುರಿಯುತ್ತಿದ್ದರಂತೂ ಅವನು ಕಿಟಕಿ ಬಿಟ್ಟು ಪಕ್ಕಕ್ಕೆ ಕದಲುತ್ತಲೇ ಇರಲಿಲ್ಲ. ಯಾರಾದರೂ ಗೆಳೆಯರು ಬಂದಾಗ ಮಾತ್ರ ವಾಸ್ತವ ಲೋಕಕ್ಕೆ ಹಿಂದಿರುಗುತ್ತಿದ್ದ.

ಚಿರಂಜೀವಿ ಮೊದಲನೇ ವರ್ಷದ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ಮುಗಿಸಿ, ಸ್ವಲ್ಪ ನಿರಾಳವಾದ. ವಿಶ್ವವಿದ್ಯಾಲಯದ ರಜಾ ದಿನಗಳು ಪ್ರಾರಂಭವಾಗಿದ್ದೇ ಮತ್ತೆ ಕೆಲಸಕ್ಕೆ ಹೋಗಲು ಪ್ರಾರಂಭಿಸಿದ. ಹಾಸ್ಟೆಲಿನಲ್ಲಿನ ವಿದ್ಯಾರ್ಥಿಗಳೆಲ್ಲ ತಮ್ಮ ತಮ್ಮ ಊರುಗಳಿಗೆ ಹೊರಟು ನಿಂತಾಗ ಚಿರಂಜೀವಿ ಮತ್ತು ಇನ್ನೂ ಕೆಲವರು ಹಾಸ್ಟೆಲಿನಲ್ಲೇ ಉಳಿದುಕೊಂಡರು.

ರಜಾ ದಿನಗಳು ಮುಗಿಯುವುದರೊಳಗೆ ಎಲ್ಲಾ ಪದವಿಗಳ ಫಲಿತಾಂಶಗಳು ಪ್ರಕಟಗೊಂಡಿದ್ದವು. ಭೌತಶಾಸ್ತ್ರದ ಮೊದಲನೇ ಪದವಿ ಫಲಿತಾಂಶದಲ್ಲಿ ಚಿರಂಜೀವಿ ಮೊದಲನೆಯವನಾಗಿ ತೇರ್ಗಡೆ ಹೊಂದಿದ್ದ. ಎರಡನೇ ವರ್ಷದ ಫಲಿತಾಂಶದ ಜೊತೆಗೆ ಮಾತ್ರ ರ್‍ಯಾಂಕ್ ಘೋಷಿಸುವ ಪರಿಪಾಠವಿದ್ದ ಚಿರಂಜೀವಿ ಈಗ ಮುಂದಿನ ವರ್ಷದಲ್ಲಿ ರ್‍ಯಾಂಕ್ ಗಳಿಸುವ ದಾರಿಯನ್ನು ಸುಗಮವಾಗಿಸಿಕೊಂಡಿದ್ದ.

ಚಿರಂಜೀವಿ ಸರಾಸರಿ ಶೇಕಡ 75ರಷ್ಟು ಅಂಕಗಳನ್ನು ಗಳಿಸಿದ್ದರೆ ಎರಡನೇ ಸ್ಥಾನದಲ್ಲಿದ್ದ ಕ್ಲಾರಾ ಎಂಬ ಹುಡುಗಿ ಸರಾಸರಿ ಶೇಕಡ 69ರಷ್ಟು ಅಂಕಗಳನ್ನು ಮಾತ್ರ ಗಳಿಸಿದ್ದಳು. ವಿಶ್ವವಿದ್ಯಾಲಯದಲ್ಲೇ ಚಿರಂಜೀವಿ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದ. ವಿಶ್ವವಿದ್ಯಾಲಯದಲ್ಲಿ ಅವನಿಗೊಂದು ಜರ್ಕ್ ಸಿಕ್ಕಿದಂತಾಗಿ ಎಲ್ಲೆಲ್ಲೂ ಅವನ ಬಗ್ಗೆಯೇ ಮಾತು ಪ್ರಾರಂಭವಾಗಿತ್ತು. ಭೌತಶಾಸ್ತ್ರ ವಿಭಾಗದ ವಿದ್ಯಾರ್ಥಿಗಳೆಲ್ಲ ಬೆಕ್ಕಸ ಬೆರಗಾಗಿ "ಅರೆ, ಚಿರಂಜೀವಿ.........?" ಎಂದಿದ್ದರು.

ಹಾಸ್ಟೆಲಿನಲ್ಲಿದ್ದ ವಿದ್ಯಾರ್ಥಿಗಳು ಕೆಲವರು ಷೋಕಿಲಾಲುಗಳಾಗಿ ಬೆಂಗಳೂರೆಲ್ಲ ಅಲೆಯುತ್ತಿದ್ದರು. ಕೆಲವರು ಆಗಲೆ ಒಳ್ಳೆ ವರದಕ್ಷಿಣೆ ನೀಡುವ, ಜೀವಮಾನವಿಡೀ ಕುಳಿತುಕೊಂಡೇ ತಿನ್ನುವಂತಹ ಶ್ರೀಮಂತ ಅತ್ತೆ ಮಾವಂದಿರನ್ನು ಹುಡುಕುವಲ್ಲಿ ನಿರತರಾಗಿದ್ದರು. ಕೆಲವರಂತೂ ವಾರ ವಾರವೂ ಹೆಣ್ಣುಗಳ ಮನೆಗಳಿಗೆ ದಾಳಿ ಮಾಡಿ ಹೊಟ್ಟೆತುಂಬಾ ತಿಂದು ಬಂದು ಆ ಹುಡುಗಿಯ ಬಗ್ಗೆ, ಅವರ ಕುಟುಂಬಗಳ ಬಗ್ಗೆ ಹಾಸ್ಟೆಲಿನಲ್ಲೆಲ್ಲಾ ಹೇಳಿಕೊಂಡು ತಿರುಗಾಡುತ್ತಿದ್ದರು. ಇನ್ನೂ ಕೆಲವರು ಆಗಲೇ ಕ್ಯಾಂಪಸ್ ರಾಜಕೀಯದಲ್ಲಿ ತೂರಿಕೊಂಡು ರಾಜಕೀಯ ಪುಡಾರಿಗಳಾಗಿ ಪರಿವರ್ತನೆಗೊಳ್ಳುತ್ತಿದ್ದರು.

ಚಿರಂಜೀವಿ ಬುದ್ಧಿವಂತ ವಿದ್ಯಾರ್ಥಿಯೆಂದು ತಿಳಿದ ಮೇಲೆ ಎಲ್ಲರ ಕಣ್ಣುಗಳು ಅವನ ಮೇಲೆ ಕೇಂದ್ರೀಕೃತಗೊಂಡವು. ಹುಡುಗಿಯರೂ ಸಹ ಚಿರಂಜೀವೀಯ ಹಿಂದೆ ಬಿದ್ದರು. ಕ್ಯಾಂಪಸ್‌ನಲ್ಲಿ ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದು ತಪ್ಪಾಯಿತೋ ಏನೋ ಎನ್ನುವಂತೆ ಚಿರಂಜೀವಿ ಪಶ್ಚಾತ್ತಾಪ ಪಟ್ಟುಕೊಂಡ. ಕೆಲವು ಹುಡುಗಿಯರಂತೂ ಚಿರಂಜೀವಿಯ ಹಿನ್ನಲೆಯನ್ನು ಪದೇ ಪದೇ ಕೇಳುತ್ತಾ ಪೀಡಿಸುತ್ತಿದ್ದರು.

ಚಿರಂಜೀವಿ ಪಿ.ಜಿ. ಹಾಸ್ಟೆಲಿನಲ್ಲಿ ಇದುವರೆಗೂ ತನ್ನ ಹಿನ್ನಲೆಯನ್ನು ಯಾರಿಗೂ ಬಿಟ್ಟಿರಲಿಲ್ಲ. ಇದರ ನಡುವೆ ಚಿರಂಜೀವಿ ಕೆಲವು ಮಿತ್ರರ ಜೊತೆಗೆ ತನಗೆ ಇಷ್ಟವಿಲ್ಲದಿದ್ದರೂ ಕೆಲವು ಮದುವೆ, ಗೃಹಪ್ರವೇಶ ಇನ್ನಿತರ ಸಣ್ಣ ಪುಟ್ಟ ಔತಣಗಳಲ್ಲಿ ಪಾಲ್ಗೊಂಡಿದ್ದ. ಕೆಲವು ಗೆಳೆಯರು ಅಲ್ಲಿ, ಇಲ್ಲಿ ಒಳ್ಳೆ ಹೆಣ್ಣುಗಳಿರುವುದಾಗಿ ಹೇಳಿ ಜೊತೆಗೆ ವರದಕ್ಷಿಣೆ, ಖಾಲಿ ನಿವೇಶನ, ಮನೆ ಇನ್ನಿತರ ಸಂಪತ್ತಿನ ಆಮಿಷಗಳನ್ನು ತೋರಿಸುತ್ತಿದ್ದರು.

ಚಿರಂಜೀವಿ ಮಾತ್ರ ಯಾರೇ ಆಗಲಿ ಅವನ ಹಿನ್ನಲೆ ಮತ್ತು ಮದುವೆ ವಿಚಾರವನ್ನು ಎತ್ತಿದಾಗ ತೆಪ್ಪಗಾಗಿಬಿಡುತ್ತಿದ್ದ. ಓದಿ, ಒಳ್ಳೆ ಉದ್ಯೋಗದಲ್ಲಿ ಸೇರಿಕೊಳ್ಳುವುದಕ್ಕಿಂತ ಮುಂಚೆ ಅವನಿಗೆ ಯಾವ ವಿಷಯಗಳಲ್ಲೂ ಆಸಕ್ತಿ ಇರಲಿಲ್ಲ. ಜೊತೆಗೆ ಅವನ ಆರ್ಥಿಕ ಪರಿಸ್ಥಿತಿ, ಕುಟುಂಬದ ಹಿನ್ನೆಲೆ ಅವನನ್ನು ಕಟ್ಟಿಹಾಕಿತ್ತು.

* * *

೩

ಚಿರಂಜೀವಿ ಮೊದಲಿಗಿಂತ ಈಗ ಸ್ವಲ್ಪ ಸುಧಾರಿಸಿಕೊಂಡಿದ್ದಾನೆ. ಎಲ್ಲಾ ಹುಡುಗಿಯರ ಜೊತೆಗೂ ನರ್ವಸ್ ಆಗದೆ "ಹಲೋ..... ಹಾಯ್" ಎಂದು ಕೈ ಕುಲುಕುತ್ತಾನೆ, ಕ್ಯಾಂಟೀನಿಗೆ ಹೋಗುತ್ತಾನೆ, ಹುಡುಗಿಯರ ಜೊತೆ ಹೂಗಿಡಗಳ ಕೆಳಗೆ ಕುಳಿತು ಹರಟೆಯೂ ಹೊಡೆಯುತ್ತಾನೆ.

ಇದರ ಲಾಭ ಪಡೆದುಕೊಂಡ, ಅವನ ತರಗತಿಯವಳೇ ಆದ ಚಂದ್ರಕಲಾ ಎಂಬ ಕೆಂಪು ಹುಡುಗಿ ಒಂದು ದಿನ ಚಿರಂಜೀವಿಯನ್ನ ಸಿನಿಮಾಗೆ ಬರುವಂತೆ ಆಹ್ವಾನಿಸಿದಳು. ಚಿರಂಜೀವಿ ನೇರ ನಿರಾಕರಿಸಿದ.

ಚಂದ್ರಕಲಾ ಅದೇಕೋ ಏನೋ ಅವನ ಕೈಹಿಡಿದುಕೊಂಡು ಎಳೆದುಕೊಂಡೇ ಹೊರಟುಬಿಟ್ಟಳು. ಚಿರಂಜೀವಿಗೆ ಮೊದ ಮೊದಲಿಗೆ ಹೆಣ್ಣಿನ ಬೆರಳುಗಳು ಹೇಗಿರುತ್ತವೆ ಎನ್ನುವ ಅನುಭವವಾಯಿತು. ಕೈಬಿಟ್ಟ ಚಂದ್ರಕಲಾ ಚಿರಂಜೀವಿ ಮುಖವನ್ನು ನೋಡಿದಳು. ಚಿರಂಜೀವಿ ತಲೆ ತಿರುಗಿಸಿಕೊಂಡು ದೂರದಲ್ಲಿ ಕಾಣುತ್ತಿದ್ದ ದೃಶ್ಯದಲ್ಲಿ ಕಣ್ಣು ನೆಟ್ಟಿದ್ದ.

ಚಂದ್ರಕಲಾ ತನ್ನ ಮನಸ್ಸಿನಲ್ಲಿ ಏನು ಇಟ್ಟುಕೊಂಡಿದ್ದಾಳೋ ಏನೋ......? ಚಿರಂಜೀವಿ ಮಾತ್ರ ಸ್ವಲ್ಪ ವಿಚಲಿತಗೊಂಡಿದ್ದ. ಚಂದ್ರಕಲಾ ಚಿರಂಜೀವಿಯನ್ನು

"ಏನು ಸಿನಿಮಾಗೆ ಬರ್ತಿಯೊ, ಇಲ್ಲವೊ....?" ಪ್ರಶ್ನಿಸಿದಳು.

ಯಾವುದೋ ಲೋಕದಿಂದ ಹೊರಕ್ಕೆ ಬಂದ ಚಿರಂಜೀವಿ ಅವಳ ಕಣ್ಣುಗಳನ್ನೊಮ್ಮೆ ನೋಡಿದ. ಅವಳು ಮುಖವನ್ನು ಸಣ್ಣಗೆ ಮಾಡಿಕೊಂಡಿದ್ದಾಳೆ.

"ಗಾಡಿಯನ್ನು ನೀವು ಓಡಿಸ್ತಿರೋ..... ನಾನೇ ಓಡಿಸಲೋ.......?" ಕೇಳಿದಳು.

"ನನಗೆ ಸರಿಯಾಗಿ ಓಡಿಸಲು ಬರುವುದಿಲ್ಲ....." ಚಿರಂಜೀವಿ ಹೇಳಿದ.

"ಆಯಿತು. ಹಿಂದೆ ಕುಳಿತುಕೊಳ್ಳಿ...." ಎಂದಿದ್ದೇ ಕೈನಟಿಕ್ ಹೊಂಡಾ ತಲೆಯಲ್ಲಿದ್ದ ಬಟನ್ ಒತ್ತಿದಳು. ಈಗ ಚಿರಂಜೀವಿಗೆ ಅವಳ ಹಿಂದೆ ಕುದುರೆ ಮೇಲೆ ಕುಳಿತುಕೊಂಡಂತೆ ಕುಳಿತುಕೊಳ್ಳಬೇಕೋ ಅಥವಾ ಎರಡೂ ಕಾಲುಗಳನ್ನೂ ಒಂದೇ ಕಡೆಗೆ ಇಟ್ಟು ಕುಳಿತುಕೊಳ್ಳಬೇಕೋ ಪೇಚಾಟದಲ್ಲಿ ಸಿಕ್ಕಿಕೊಂಡ. ಅವನ ಇಂಗಿತವನ್ನು ಅರಿತುಕೊಂಡ ಚಂದ್ರಕಲಾ "ಗಂಡಸರ ತರಹ ಕುಳಿತುಕೊಳ್ಳಿ....." ಎಂದಳು.

ಚಿರಂಜೀವಿ ವಿಧಿಯಿಲ್ಲದೆ ಅವಳ ಹಿಂದೆ ಕುದುರೆ ಮೇಲೆ ಕುಳಿತುಕೊಂಡಂತೆ ಕುಳಿತುಕೊಂಡ. ವಾಹನ ಓಡುತ್ತಿದ್ದಂತೆ ಇಬ್ಬರ ದೇಹಗಳು ಸ್ಪರ್ಶಗೊಳ್ಳುವುದನ್ನು ಇಬ್ಬರೂ ತಪ್ಪಿಸಿಕೊಳ್ಳಲಾಗಲಿಲ್ಲ.

ಬ್ರಿಗೇಡ್ ರಸ್ತೆಯಲ್ಲಿರುವ ಒಂದು ಸಿನಿಮಾ ಹಾಲಿನಲ್ಲಿ ಇಬ್ಬರೂ ಕುಳಿತಿದ್ದಾರೆ. ಎಷ್ಟೋ ಹೊತ್ತು ಇಬ್ಬರೂ ಹಾಗೆ ಮಾತನಾಡದೆ ಸಿನಿಮಾ ನೋಡುತ್ತಿದ್ದಾರೆ. ಇಬ್ಬರ ದಿಕ್ಕುಗಳು ಬೇರೆ ಬೇರೆಯಾಗಿರುವುದೇ ಮೌನಕ್ಕೆ ಕಾರಣವಾಗಿತ್ತು. ಚಂದ್ರಕಲಾ ತನ್ನ ಭುಜವನ್ನು ಚಿರಂಜೀವಿಯ ಭುಜಕ್ಕೆ

ತಾಕಿಸುತ್ತಿಲ್ಲವಾದರೂ ಎರಡೂ ಭುಜಗಳು ಆಗಾಗ ಸ್ಪರ್ಶಗೊಳ್ಳುತ್ತಿವೆ. ಎರಡೂ ಕುರ್ಚಿಗಳ ನಡುವೆ ಕೈ ಊರಿಕೊಳ್ಳಲು ಇಟ್ಟಿದ್ದ ಪಟ್ಟಿಯ ಮೇಲೆ ಒಬ್ಬರು ಹಿಂದಕ್ಕೆ, ಒಬ್ಬರು ಮುಂದಕ್ಕೆ ಕೈಯಿಟ್ಟು ಸ್ಪರ್ಶಿಸದಂತೆ ಎಚ್ಚರ ವಹಿಸಿದ್ದಾರೆ.

ಚಂದ್ರಕಲಾ ಎಷ್ಟಾದರೂ ಹೆಣ್ಣು ಗಂಡಸಿಗಿಂತ ಮುಂಚೆಯೇ ಕೈ ಹಿಡಿದುಕೊಂಡರೆ ಚಿರಂಜೀವಿ ಏನು ತಿಳಿದುಕೊಳ್ಳುತ್ತಾನೊ ಎನ್ನುವ ಯೋಚನೆಯಲ್ಲಿ ಮುಳುಗಿದ್ದಾಳೆ.ಇನ್ನು ಚಿರಂಜೀವಿ ತನ್ನ ಇಪ್ಪತ್ತು ಮೂರು ವರ್ಷಗಳ ತಪಸ್ಸೆಲ್ಲ ಕೇವಲ ಒಂದೇ ದಿನದಲ್ಲಿ ನೀರು ಪಾಲಾಗುತ್ತದೆಯಲ್ಲ ಎನ್ನುವ ನಿರಾಶೆಯಲ್ಲಿ ಮುಳುಗಿ ಹೋಗಿದ್ದಾನೆ.

"ಕಾಮಕ್ಕೆ ಕಣ್ಣಿಲ್ಲ" ಎನ್ನುವುದು ಅಕ್ಷರಶಃ ಸತ್ಯ.

ಅವರ ಎರಡೂ ದೇಹಗಳ ನಡುವೆ ಸ್ಪರ್ಶ ನಡೆದೇಹೋಯಿತು. ಇಬ್ಬರ ಕೈಗಳು ಒಂದನ್ನೊಂದು ಸ್ಪರ್ಶಗೊಂಡಂತೆ ಯಾವುದೋ ಸಮ್ಮೋಹನಕ್ಕೆ ಅವರಿಬ್ಬರೂ ಅಂತಿಮವಾಗಿ ಸಿಲುಕಿಕೊಂಡರು. ಪ್ರೀತಿಗೆ ತನ್ನದೇ ಆದ ಸುಖ, ಸಂತೋಷ ಇರುತ್ತದೆ ಎನ್ನುವುದನ್ನು ಅವರಿಬ್ಬರೂ ಸ್ವಲ್ಪ ಸ್ವಲ್ಪವಾಗಿ ಕಂಡುಕೊಳ್ಳುತ್ತಿದ್ದರು.

ಚಿರಂಜೀವಿ ಹಾಸ್ಟೆಲಿನ ಕೋಣೆಯಲ್ಲಿ, ಚಂದ್ರಕಲಾ ತನ್ನ ಮನೆಯಲ್ಲಿ ಒಬ್ಬರ ಬಗ್ಗೆ, ಇನ್ನೊಬ್ಬರು ಯೋಚಿಸುತ್ತಿದ್ದಾರೆ. ಚಂದ್ರಕಲಾ ನೋಡಲು ಅಂದವಾಗಿಯೇ ಇದ್ದಾಳೆ. ಆದರೆ ಇದ್ದಕ್ಕಿದ್ದಾಗೆ ತನ್ನನ್ನು ಪ್ರೀತಿಸುತ್ತಿರುವುದು ಮಾತ್ರ ಚಿರಂಜೀವಿಗೆ ಒಗಟಾಗಿ ಕಾಣುತ್ತಿದೆ. ಅವಳ ನಡೆ, ನುಡಿ ಇಷ್ಟವಾಗಿದ್ದು, ಅವಳು ಯಾರ ಜೊತೆಗೂ ಹೆಚ್ಚಾಗಿ ಮಾತನಾಡುವುದನ್ನಾಗಲಿ, ಓಡಾಡುವುದನ್ನಾಗಲಿ ಚಿರಂಜೀವಿ ನೋಡಿಯೇ ಇಲ್ಲ. ತರಗತಿಗಳು ಪ್ರಾರಂಭವಾಗುವುದಕ್ಕೆ ಹತ್ತು ನಿಮಿಷಗಳು ಮುಂಚೆ ಬರುತ್ತಿದ್ದ ಅವಳು ತರಗತಿಗಳು ಮುಗಿದ ನಂತರ ಗಾಡಿ ಹತ್ತಿ ನೇರವಾಗಿ ತನ್ನ ಮನೆಗೆ ಹೋಗಿಬಿಡುತ್ತಿದ್ದಳು. ಚಿರಂಜೀವಿ ತನ್ನ ಗುರಿ ಎಲ್ಲಿ ಸಡಿಲಗೊಳ್ಳುವುದೋ ಎನ್ನುವ ಭಯದಿಂದ ಓದುವುದನ್ನು ಕಡಿಮೆ ಮಾಡಿರಲಿಲ್ಲ.

ಚಿರಂಜೀವಿಯೂ ನೋಡಲು ಚೆನ್ನಾಗಿಯೇ ಇದ್ದಾನೆ. ಬುದ್ಧಿವಂತ. ಜೀವನದಲ್ಲಿ ಅಂತೂ ಏನೋ ಸಾಧಿಸುತ್ತಾನೆ. ಇವನು ನನ್ನನ್ನು ಮದುವೆ ಮಾಡಿಕೊಳ್ಳುವನೇ..? ನಮ್ಮ ತಂದೆ ತಾಯಿಗೆ ಚಿರಂಜೀವಿ ಇಷ್ಟವಾಗಬಹುದೆ..?

"ನಿನ್ನನ್ನು ಪ್ರೀತಿಸ್ತಿದ್ದೀನಿ...... ನಿನ್ನನ್ನೇ ಮದುವೆಯಾಗ್ತೀನಿ............" ಎಂದು ಯಾಕಾದರೂ ಹೇಳುತ್ತಿಲ್ಲ. ಇವನು? ಚಂದ್ರಕಲಾ ಎಷ್ಟೋ ವಿಧಗಳಲ್ಲಿ ಅವನ ಮುಂದೆ ನಿನ್ನನ್ನು ಇಷ್ಟಪಟ್ಟಿದ್ದೇನೆ ಎನ್ನುವುದನ್ನು ವ್ಯಕ್ತಪಡಿಸಿದ್ದಾಳೆ. ಅವನನ್ನು ಕೇಳದೆ ತಂದೆ ತಾಯಿಗೆ ಹೇಗೆ ಹೇಳುವುದು.......? ಅವನ್ಯಾರು........? ಅವನ ಹಿನ್ನಲೆ ಏನು......? ಎಂದು ಕೇಳಿದರೆ ಏನು ಹೇಳುವುದು........? ಹೀಗೆ ಹಲವು ಪ್ರಶ್ನೆಗಳಲ್ಲಿ ತನ್ನನ್ನು ತಾನೇ ಸುತ್ತಿಕೊಂಡಿರುವ ಚಂದ್ರಕಲಾ ಮಂಚದ ಮೇಲೆ ಮಲಗಿದ್ದಾಳೆ.

ಚಂದ್ರಕಲಾ ಈಗಾಗಲೇ ಒಂದೆರಡು ಸಲ ಚಿರಂಜೀವಿಯ ತಂದೆ ತಾಯಿಯ ಬಗ್ಗೆ ಮತ್ತು ಅವನ ಹಿನ್ನಲೆಯ ಬಗ್ಗೆ ಕೇಳಿ ಸಪ್ಪೆಯಾದ ಮುಖವನ್ನು ನೋಡಲಾಗದೆ "ನನ್ನನ್ನು ಕ್ಷಮಿಸು" ಎಂದು ಅಂಗಲಾಚಿಕೊಂಡಿದ್ದಾಳೆ. ಮತ್ತೆ ಮತ್ತೆ ಅದೇ ವಿಷಯವನ್ನು ಕೇಳುವುದು ಸರಿಯಿಲ್ಲವೆಂದು ಸುಮ್ಮನಾಗಿದ್ದಾಳೆ. ಚಿರಂಜೀವಿಯಿಂದ ಅವನ ಹಿನ್ನಲೆಯನ್ನು ಹೇಗಾದರೂ ಮಾಡಿ ತಿಳಿದುಕೊಳ್ಳುವುದು ಅವಶ್ಯಕವೆಂದು ಕೆಲವೊಮ್ಮೆ ಅನಿಸಿದರೂ ಅದರ ಬಗ್ಗೆ ಯಾಕೆ ತಲೆಕೆಡಿಸಿಕೊಳ್ಳಬೇಕು....? ಹುಡುಗ ನನಗೆ ಮೆಚ್ಚಿಗೆಯಾಗಿದ್ದಾನೆ ಅಷ್ಟೇ ಸಾಕೆಂದು ಸುಮ್ಮನಾಗಿದ್ದಾಳೆ.

ಎರಡನೇ ವರ್ಷದ ಪರೀಕ್ಷೆಗಳು ಹತ್ತಿರವಾಗುತ್ತಿದ್ದಂತೆ ಕೆಲವು ವಿದ್ಯಾರ್ಥಿಗಳು ಹಾಸ್ಟೆಲಿನಲ್ಲಿ ಇಡೀ ರಾತ್ರಿ ನಿದ್ದೆ ಮಾಡದೆ ಓದುವುದರಲ್ಲಿ ಮಗ್ನರಾಗಿದ್ದರು. ಚಿರಂಜೀವಿ ತಾನು ಓದಬೇಕಾಗಿರುವ ಪುಸ್ತಕಗಳೆಲ್ಲವನ್ನು ಕೊಠಡಿಯಲ್ಲಿ ಪೇರಿಸಿಕೊಂಡು ಕಾದಂಬರಿಗಳನ್ನು ಓದುವಂತೆ ಓದತೊಡಗಿದ. ಇದರ ನಡುವೆ ಸಿವಿಲ್ ಎಂಟ್ರೆನ್ಸ್ ಪರೀಕ್ಷೆಗಳಿಗಾಗಿ ಎಲ್ಲಾ ವಿಷಯಗಳನ್ನು ಒಂದು ಸಲ ಓದಿ ಮುಗಿಸಿದ್ದ. ಎಷ್ಟು ಓದಿದರೂ ಏನೇನೂ ಸಾಲದೇನೋ ಎನ್ನುವಂತೆ ಅವನಿಗೆ ಭಾಸವಾಗುತ್ತಿತ್ತು. ಪ್ರಪಂಚದಲ್ಲಿ ತಿಳಿದುಕೊಳ್ಳುವ ವಿಷಯಗಳು ಇನ್ನೆಷ್ಟಿವೆಯೋ.....? ಎನ್ನುವುದೇ ಅರ್ಥವಾಗಲಿಲ್ಲ. ಮನುಷ್ಯನ ಜ್ಞಾನ, ಜ್ಞಾನವೆಂಬ ಕುಂಬಳಕಾಯಿಯಲ್ಲಿ ಒಂದು ಸಣ್ಣ ಸಾಸುವೆ ಕಾಳಿಗಿಂತ ಚಿಕ್ಕದೇನೋ ಎನಿಸಿತು.

ಚಿರಂಜೀವಿ, ಚಂದ್ರಕಲಾಳ ಬಗ್ಗೆ ಯೋಚಿಸಿದಾಗಲ್ಲ ಗೊಂದಲದಲ್ಲಿ ಬೀಳುತ್ತಿದ್ದ. ಒಂದು ಹೆಣ್ಣು ಮನಸ್ಸು ಮಾಡಿದರೆ ಒಬ್ಬ ಗಂಡಸನ್ನು ಬೆರಳು

ತುದಿಯಲ್ಲಿ ಆಡಿಸಬಲ್ಲಳು. ಆದರೆ ಒಬ್ಬ ಗಂಡಸು ಒಂದು ಹೆಣ್ಣನ್ನು ಪಡೆಯಬೇಕಾದರೆ ಆ ಹೆಣ್ಣು ಮನಸ್ಸು ಮಾಡಬೇಕು. ಬುದ್ಧ, ಬಾಹುಬಲಿಯಂತವರು ಮಾತ್ರ ಹೆಣ್ಣಿನ ಪಾಶವನ್ನು ತೊರೆದು ಸ್ವತಂತ್ರವಾಗಿ ನಿಲ್ಲಬಲ್ಲರು.

ಚಿರಂಜೀವಿ ಮತ್ತು ಚಂದ್ರಕಲಾ ಗಂಟೆಗಟ್ಟಲೆ ಒಬ್ಬರನ್ನೊಬ್ಬರು ನೋಡುತ್ತಾ, ಮಾತನಾಡುತ್ತಾ, ತಮಾಷೆ ಮಾಡುತ್ತಾ ಕಾಲ ಕಳೆದಿದ್ದಾರೆ. ಎಷ್ಟೋ ವಿಷಯಗಳನ್ನು ಚರ್ಚಿಸಿದ್ದಾರೆ. ಆದರೆ ಒಂದು ವಿಷಯ ಮಾತ್ರ ಇನ್ನೂ ತೀರ್ಮಾನವಾಗಿಲ್ಲ. ಅವರು ನಿಜವಾಗಿಯೂ ಮದುವೆ ಮಾಡಿಕೊಳ್ಳುತ್ತಾರೆಯೇ........? ಎನ್ನುವುದು.

ಒಂದು ದಿನ ಮರದ ಕೆಳಗೆ ಕುಳಿತಿರುವ ಚಂದ್ರಕಲಾ ತನ್ನ ಕುಟುಂಬದ ಹಿನ್ನಲೆಯನ್ನೆಲ್ಲ ವಿವರವಾಗಿ ಹೇಳುತ್ತಾ ಹೋಗುತ್ತಿದ್ದಾಳೆ. ತಂದೆ ಬ್ಯಾಂಕಿನ ಕೆಲಸದಲ್ಲಿದ್ದು ಇನ್ನೂ ಐದು ವರ್ಷಗಳ ಸೇವೆ ಇರುವುದು....... ಮನೆಯಲ್ಲಿರುವ ತಾಯಿಯ ಬಗ್ಗೆ...... ಒಬ್ಬಳೇ ತಂಗಿಯ ಬಗ್ಗೆ...... ನಮ್ಮ ತಂದೆ ತಾಯಿ ನಮ್ಮಿಬ್ಬರನ್ನು ಚೆನ್ನಾಗಿ ಬೆಳೆಸಿದ್ದಾರೆ...... ಯಾವುದಕ್ಕೂ ತೊಂದರೆ ಮಾಡಿಲ್ಲ. .... ಎಲ್ಲಾ ರೀತಿಯಲ್ಲೂ ಸ್ವಾತಂತ್ರ್ಯ ನೀಡಿದ್ದಾರೆ.... ಚಂದ್ರಕಲಾ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಚಿರಂಜೀವಿ ಯಾವಾಗಲೋ ನಿದ್ದೆ ಮಾಡಿಬಿಟ್ಟಿದ್ದ. ಚಂದ್ರಕಲಾಗೆ ಕೋಪ ಬಂದು ಚಿರಂಜೀವಿಯನ್ನು ಒಮ್ಮೆ ಜೋರಾಗಿ ಕದಲಿಸಿದಳು. ಚಿರಂಜೀವಿ ಮೈ ಕೊಡವಿಕೊಂಡು ಎದ್ದು ಕುಳಿತು,

"ಹೊ ಕ್ಷಮಿಸು ಚಂದ್ರಕಲಾ..... ರಾತ್ರಿ ಬಹಳ ಹೊತ್ತು ಓದ್ತಾ ಕುಳಿತಿದ್ದೆ" ಎಂದ. ಚಂದ್ರಕಲಾ ಮುಖವನ್ನು ಚಿಕ್ಕದಾಗಿ ಮಾಡಿಕೊಂಡಿದ್ದಳು.

"ಸ್ವಲ್ಪ ಟೀ ಕುಡಿಯೋಣ ನಡಿ" ಎಂದು ಕ್ಯಾಂಟೀನ್ ಕಡೆಗೆ ನಡೆದರು. ಈ ಚಿರಂಜೀವಿ ಯಾಕೋ ತನ್ನ ನಿರ್ಧಾರವನ್ನೇ ಹೇಳುತ್ತಿಲ್ಲವಲ್ಲ ಎಂದು ಮನಸ್ಸಿನಲ್ಲೇ ಹೇಳಿಕೊಂಡಳು. ಇವನನ್ನು ಪ್ರೀತಿಸಿ ತಾನೇನಾದರೂ ತಪ್ಪು ಮಾಡಿದೆನೇ ಎನ್ನುವ ಪ್ರಶ್ನೆಗಳು ಅವಳನ್ನು ಆಗಾಗ ಕಾಡತೊಡಗಿದವು. ಚಿರಂಜೀವಿಯೂ ಅಷ್ಟೇ ನನ್ನ ಹಿನ್ನಲೆ ತಿಳಿದುಕೊಂಡ ಮೇಲೆ ಇವಳು ಇದೇ ರೀತಿಯ ಪ್ರೀತಿ ತೋರಿಸುವಳೇ ಎನ್ನುವುದಾಗಿ ಯೋಚಿಸುತ್ತಿದ್ದ.

ಓದಿನ ನಡುವೆ ಸಿನಿಮಾ, ಪಾರ್ಕ್, ವಿಹಾರಗಳು ಆಗಾಗ ನಡೆಯುತ್ತಲೇ ಇದ್ದವು. ಅವರಿಬ್ಬರು ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸುತ್ತಿದ್ದು, ಒಬ್ಬರು

ಇನ್ನೊಬ್ಬರ ಆದರ್ಶಗಳನ್ನು ಗೌರವಿಸುತ್ತಿದ್ದರು. ಯಾವ ವಿಷಯದಲ್ಲೂ ತಮ್ಮ ಎಲ್ಲೆಯನ್ನೂ ಮೀರುತ್ತಿರಲಿಲ್ಲ.

ಚಿರಂಜೀವಿ ಮತ್ತೊಮ್ಮೆ ಸಿವಿಲ್ ಪರೀಕ್ಷೆಗಳಿಗೆ ಓದಲು ಕುಳಿತುಕೊಂಡ. ಎರಡನೇ ವರ್ಷದ ಪರೀಕ್ಷೆಗಳಿಗಿಂತ ಮುಂಚೆಯೇ ಎಂಟ್ರೆನ್ಸ್ ಪರೀಕ್ಷೆಗಳಿದ್ದು ಸೀರಿಯಸ್ ಆಗಿ ಓದತೊಡಗಿದ. ಚಂದ್ರಕಲಾ ಅವನಿಗೆ ಪರೀಕ್ಷೆಗಳಿರುವುದರಿಂದ ಹೆಚ್ಚಾಗಿ ಅವನ ಸಮಯವನ್ನು ಹಾಳು ಮಾಡುತ್ತಿರಲಿಲ್ಲ. ತಾನಾಯಿತು ತನ್ನ ತರಗತಿಗಳಾಯಿತು. ಸಿವಿಲ್ ಎಂಟ್ರೆನ್ಸ್ ಪರೀಕ್ಷೆ ಮುಗಿದ ನಂತರ ಒಂದು ದಿನ ಚಂದ್ರಕಲಾ, ಚಿರಂಜೀವಿಯನ್ನು ಮುಂದೆ ಕೂರಿಸಿಕೊಂಡು ಕೇಳಿಯೇಬಿಟ್ಟಳು.

"ನೀನು ನನ್ನನ್ನು ಪ್ರೀತಿಸ್ತಿದ್ದಿಯೊ ಇಲ್ಲವೋ......?" ಇದೆಂತಹ ಪ್ರಶ್ನೆ ಸುಮಾರು ಎರಡು ವರ್ಷಗಳ ಕಾಲ ಒಟ್ಟಾಗಿ ಕೈಕೈ ಹಿಡಿದು ಓಡಾಡಿದ ಮೇಲೆ ಹೀಗೆ ಕೇಳುತ್ತಿದ್ದೀಯಲ್ಲ, ಎನ್ನುವಂತೆ ಚಿರಂಜೀವಿ ಅವಳ ಕಡೆಗೆ ನೋಡಿದ.

ಈ ರೀತಿ ಕೇಳಬಾರದಿತ್ತೇನೋ ಎನ್ನುವಂತೆ ಚಂದ್ರಕಲಾ ಅವನನ್ನು ನೋಡಿದಳು.

"ಹಾಗ್ಯಾಕೆ ಕೇಳ್ತಿದ್ದೀಯ........?" ಚಿರಂಜೀವಿ ಪ್ರಶ್ನಿಸಿದ. ಚಂದ್ರಕಲಾ ತಲೆ ಬಗ್ಗಿಸಿಕೊಂಡಳು. ಒಂದೆರಡು ಕ್ಷಣಗಳಾದ ಮೇಲೆ ಚಿರಂಜೀವಿ ಅವಳ ಗಲ್ಲವನ್ನಿಡಿದು ಮೇಲಕ್ಕೆತ್ತಿದ. ಕಣ್ಣುಗಳು ಕೆಂಪಾಗಿ ಮಳೆಯನ್ನು ಸುರಿಯಲು ತಯಾರಿ ನಡೆಸಿದ್ದವು. ಸ್ವಲ್ಪ ಮೆದುವಾದ ಚಿರಂಜೀವಿ -

"ಚಂದ್ರಕಲಾ.... ಈಗೇನಾಯಿತು....? ನಾನು ನಿನ್ನನ್ನ ಪ್ರೀತಿಸ್ತಿಲ್ಲವೇ....? ಇದೆಂತಹ ಸಂದೇಹ......?" ಚಿರಂಜೀವಿ ಕೇಳಿದ.

"ನಾನು ಎಷ್ಟು ಸಲ ಹೇಳಿದ್ದೀನಿ ನಿನ್ನನ್ನು ಪ್ರೀತಿಸ್ತಾ ಇದ್ದೀನಿ...... ನಿನ್ನನ್ನ ಪ್ರೀತಿಸ್ತಾ ಇದ್ದೀನಿ..... ಎಂದು; ಯಾವಾಗಲಾದರೂ ಒಂದು ಸಲ ಬಾಯಿತುಂಬಾ ಚಂದ್ರಕಲಾ ನಿನ್ನನ್ನು ತುಂಬಾ ಪ್ರೀತಿಸ್ತೀನಿ ಎಂದು ಹೇಳಿದ್ದೀಯ..... ನೀನು.....? ಹೋಗಲಿ ಬಿಡು ನಿನ್ನ ಮನಸ್ಸಿನಲ್ಲಿ ಏನಿದೆಯೋ ಏನೋ.......?" ಎಂದೇಳಿ ಕಣ್ಣುಗಳಲ್ಲಿ ನೀರು ತುಂಬಿಕೊಂಡಳು.

ಚಿರಂಜೀವಿ ಅವಳ ಭುಜದ ಮೇಲೆ ಕೈ ಹಾಕಿ ತನ್ನ ಕಡೆಗೆ ಸೆಳೆದುಕೊಂಡ. ಚಂದ್ರಕಲಾ ಅವನ ಎದೆಯ ಮೇಲೆ ಮುಖವಿಟ್ಟು ನಿರಾಳವಾದಳು. ತಣ್ಣಗೆ

ಬೀಸುತ್ತಿದ್ದ ಗಾಳಿ, ಹೂವು ಮತ್ತು ಎಲೆಗಳನ್ನು ಬಿಸಿಲಿನಿಂದ ಪಾರುಮಾಡುತ್ತಿರುವಂತೆ ಚಂದ್ರಕಲಾ ಸಾಂತ್ವನಗೊಂಡಳು.

ಚಿರಂಜೀವಿ, ಚಂದ್ರಕಲಾಳ ಬಗ್ಗೆ ಕನಿಕರ ಮೂಡಿ ಅವಳ ಕೆನ್ನೆಗೊಂದು ಮುತ್ತು ನೀಡಿದ. ಚಂದ್ರಕಲಾಳ ಮೈ ಒಮ್ಮೆಲೆ ಪುಳಕಗೊಂಡು ಗಾಳಿಯ ಜೊತೆಗೆ ಹಾರಾಡಿದಂತಾಯಿತು.

ಚಿರಂಜೀವಿ ಇನ್ನು ಬಚ್ಚಿಟ್ಟು ಪ್ರಯೋಜನವಿಲ್ಲವೆಂದು ತನ್ನ ಹಿನ್ನಲೆಯನ್ನೆಲ್ಲ ಸುಮಾರು ಎರಡು ಗಂಟೆಗಳು ಕಾಲ ಚಂದ್ರಕಲಾಗೆ ಹೇಳಿ ಮುಗಿಸಿದ. ಚಂದ್ರಕಲಾ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಮಗುವಿನಂತೆ ಅಳತೊಡಗಿದಳು. ಚಿರಂಜೀವಿ ಕೂಡ ತನ್ನ ತಂದೆ, ತಾಯಿಯನ್ನು ನೆನೆದುಕೊಂಡು ಸಣ್ಣ ಮಗುವಿನಂತೆ ಅಳುತ್ತಿದ್ದ. ಈಗ ಅವರಿಬ್ಬರನ್ನೂ ಸಾಂತ್ವನಗೊಳಿಸಲು ಗಿಡಮರಗಳಿಂದ ಬೀಸುವ ತಣ್ಣನೆ ಗಾಳಿಯಿಂದಲೂ ಸಾಧ್ಯವಾಗಲಿಲ್ಲ.

* * *

ಸಿವಿಲ್ ಎಂಟ್ರೆನ್ಸ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಚಿರಂಜೀವಿ ಒಳ್ಳೆಯ ಅಂಕಗಳನ್ನು ಪಡೆದಿದ್ದರು ಮುನ್ನೂರರ ರ್‍ಯಾಂಕ್ ಹತ್ತಿರವಿದ್ದು ಸಿವಿಲ್ ಮುಖ್ಯ ಪರೀಕ್ಷೆಗೆ ಓದಲು ಪ್ರಾರಂಭಿಸಿದ. ಚಿರಂಜೀವಿಗಿಂತ, ಚಂದ್ರಕಲಾಗೆ ಹೆಚ್ಚು ಖುಷಿಯಾಗಿತ್ತು.

ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಪರೀಕ್ಷೆಗಳಿಗಿಂತ ಮುಂಚೆಯೇ ನಡೆಯಬೇಕಿದ್ದ ಸಿವಿಲ್ ಪರೀಕ್ಷೆಗಳಿಗೆ ಚಿರಂಜೀವಿ ಹೆಚ್ಚಾಗಿ ಓದತೊಡಗಿದ. ಎಂಟ್ರೆನ್ಸ್ ಫಲಿತಾಂಶ ಬಂದನಂತರ ಮುಖ್ಯ ಪರೀಕ್ಷೆಗಳಿಗೆ ಇನ್ನೂ ಆರು ತಿಂಗಳು ಕಾಲವಿದ್ದು ಚಿರಂಜೀವಿ ಆ ಸಮಯವನ್ನು ಸರಿಯಾಗಿಯೇ ಉಪಯೋಗಿಸಿಕೊಳ್ಳ ತೊಡಗಿದ. ಚಿರಂಜೀವಿ ಮತ್ತು ಚಂದ್ರಕಲಾ ವಾರಕ್ಕೆ ಒಂದು ದಿನ ಮಾತ್ರ ಸಂಧಿಸುವುದಾಗಿ ಒಪ್ಪಂದ ಮಾಡಿಕೊಂಡರು. ಕ್ಯಾಂಪಸ್ಸಿನಲ್ಲಿ ಪ್ರೀತಿಸುವುದಕ್ಕೂ ವೇಳಾಪಟ್ಟಿಯನ್ನು ಹಾಕಿಕೊಂಡಿದ್ದ ಜೋಡಿ ಎಂದರೆ ಇವರದೇ ಇರಬೇಕು?

ಸಿವಿಲ್ ಪರೀಕ್ಷೆಗಳು ಬಂದೇ ಬಿಟ್ಟವು. ಬಂದ ರೀತಿಯಲ್ಲೇ ಮುಗಿದು ಹೋಗಿದ್ದವು. ಈಗ ಚಿರಂಜೀವಿ ಮತ್ತು ಚಂದ್ರಕಲಾ ದಿನಗಳನ್ನು ಇನ್ನಷ್ಟು

ಹುರುಪಿನಿಂದ ಕಳೆಯತೊಡಗಿದರು. ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಪರೀಕ್ಷೆಗಳಿಗೆ ಇನ್ನೂ ಸಮಯವಿದ್ದುದರಿಂದ ಅವರು ಜೋಡಿಯಾಗಿ ಬೆಂಗಳೂರಿನ ರಸ್ತೆ, ಪಾರ್ಕ್, ಸಿನಿಮಾ ಮತ್ತು ಹೋಟೆಲುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಚಿರಂಜೀವಿ ಮುಂದೆ ಕುಳಿತು ಗಾಡಿ ಓಡಿಸುತ್ತಿದ್ದರೆ, ಚಂದ್ರಕಲಾ ಹಿಂದೆ ಕುಳಿತುಕೊಂಡು ಚಿರಂಜೀವಿಯ ಬೆನ್ನಿಗೆ ಬಳ್ಳಿಯಂತೆ ಅಂಟಿಕೊಳ್ಳುತ್ತಿದ್ದಳು. ಕೆಲವು ತಿಂಗಳುಗಳ ಅಂತರದಲ್ಲಿ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಪರೀಕ್ಷೆಗಳು ಮುಗಿದುಹೋದವು.

ಚಿರಂಜೀವಿ ಚಂದ್ರಕಲಾ ಮನೆಗೆ ಒಂದೆರಡು ಸಲ ಹೋಗಿದ್ದರು, ಯಾವುದರ ಬಗ್ಗೆಯೂ ಮಾತನಾಡಿರಲಿಲ್ಲ. ಅವಳ ತಂದೆ, ತಾಯಿಗೆ ಕ್ಲಾಸ್‌ಮೇಟ್ ಎಂದು ಪರಿಚಯಿಸಿದ್ದಳು. ಈಗ ಚಿರಂಜೀವಿ ಮತ್ತು ಚಂದ್ರಕಲಾ ಮದುವೆ ಮಾಡಿಕೊಳ್ಳುವುದಾಗಿ ತಿರ್ಮಾನ ತೆಗೆದುಕೊಂಡಿದ್ದರು. ಚಿರಂಜೀವಿಯ ಕಡೆಯಿಂದ ಯಾವ ಅಡಚಣೆಯೂ ಇಲ್ಲ. ಚಂದ್ರಕಲಾಗೂ ಅಷ್ಟೇ. ಆದರೂ ಉಳಿದಿರುವುದು ಚಂದ್ರಕಲಾಳ ತಂದೆ ಮತ್ತೆ ತಾಯಿಯ ಅಪ್ಪಣೆ ಮಾತ್ರ. ಚಂದ್ರಕಲಾ ಎಷ್ಟೋ ಸಲ ಮನೆಯಲ್ಲಿ ಚಿರಂಜೀವಿಯ ಬಗ್ಗೆ ತನ್ನ ತಂದೆ ತಾಯಿ ಜೊತೆಗೆ ಮಾತನಾಡಿದ್ದರು ಮದುವೆಯ ವಿಷಯವಾಗಿ ಮಾತನಾಡಿರಲಿಲ್ಲ.

ಚಂದ್ರಕಲಾ ಎಷ್ಟಾದರೂ ಓದಿದ ಹುಡುಗಿ, ಆಧುನಿಕ ಹೆಣ್ಣು. ಅವಳ ತಂದೆ ತಾಯಿಗೆ ಇಬ್ಬರು ಹೆಣ್ಣುಮಕ್ಕಳು ಮಾತ್ರ ಇರುವುದರಿಂದ ಗಂಡು ಮಕ್ಕಳನ್ನು ಬೆಳೆಸಿದಂತೆ, ಬೆಳೆಸಿದ್ದಾರೆ. ಹೆಣ್ಣುಮಕ್ಕಳಿಗೆ ತಮ್ಮ ಭವಿಷ್ಯದ ಬಗ್ಗೆ ತಾವೇ ತೀರ್ಮಾನ ತೆಗೆದುಕೊಳ್ಳುವಷ್ಟು ಸ್ವಾತಂತ್ರ್ಯವನ್ನು ನೀಡಿದ್ದಾರೆ. ಆದರೂ ಚಂದ್ರಕಲಾ ಮತ್ತು ಅವಳ ತಂಗಿ , ತಮ್ಮ ತಂದೆ ತಾಯಿಗೆ ತಿಳಿಸದೆ ಯಾವುದೇ ಮಹತ್ವವಾದ ಕೆಲಸಗಳನ್ನು ಕೈಗೊಳ್ಳುತ್ತಿರಲಿಲ್ಲ.

ಒಂದು ದಿನ ಚಿರಂಜೀವಿಯ ವಿಷಯವನ್ನು ತನ್ನ ತಂದೆ ತಾಯಿಗೆ ತಿಳಿಸಿದ ಚಂದ್ರಕಲಾ ತಾವು ಅಪ್ಪಣೆ ನೀಡಿದರೆ ಚಿರಂಜೀವಿಯನ್ನೇ ಮದುವೆ ಮಾಡಿಕೊಳ್ಳುವುದಾಗಿ ತಿಳಿಸಿಯೇಬಿಟ್ಟಳು. ಎಷ್ಟಾದರೂ ಮಗಳ ಒಳ್ಳೆಯ ಭವಿಷ್ಯವನ್ನು ನಿರೀಕ್ಷಿಸಿದ್ದ ತಂದೆ ತಾಯಿ ಕೆಲವು ಕ್ಷಣಗಳು ಮಾತು ಬರದೆ ಹೌಹಾರಿಬಿಟ್ಟರು. ಅನಂತರ ಸಾವರಿಸಿಕೊಂಡು ಚಿರಂಜೀವಿಯ ತಂದೆ ತಾಯಿಯ

ಬಗ್ಗೆ ಮಾತನಾಡುತ್ತ ಅವರು ಏನು ಮಾಡುತ್ತಾರೆ.......? ಯಾವ ಊರಿನವರು.....? ಯಾವ ಜಾತಿಗೆ ಸೇರಿದವರು .... ಎಂದು ವಿಚಾರಿಸಿದರು. ಚಂದ್ರಕಲಾ ಮುಖವನ್ನು ಗಂಟಿಕ್ಕಿಕೊಂಡು ಸುಮ್ಮನಾದಳು. ಇದನ್ನು ಗಮನಿಸಿದ ಅವಳ ತಾಯಿ.

"ಹೋಗಲಿ ಬಿಡಮ್ಮ. ನಿನ್ನನ್ನು ಚೆನ್ನಾಗಿ ನೋಡಿಕೊಂಡರೆ....... ನಮಗೆ ಅಷ್ಟೇ ಸಾಕೆಂದು" ಸುಮ್ಮನಾದಳು.

ಚಿರಂಜೀವಿ ಸಿವಿಲ್‌ನ ಎಂಟ್ರೆನ್ಸ್ ಪರೀಕ್ಷೆ ಪಾಸಾಗಿ ಮುಖ್ಯ ಪರೀಕ್ಷೆಗಳನ್ನು ಬರೆದಿರುವುದು... ಮೊದಲನೇ ಸ್ನಾತಕೋತ್ತರ ಪದವಿಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೇ ಹೆಚ್ಚು ಅಂಕಗಳನ್ನು ಗಳಿಸಿರುವುದು... ಮತ್ತು ಅವನ ಇನ್ನಿತರ ಗುಣಗಳನ್ನು ಚಂದ್ರಕಲಾ ತನ್ನ ತಾಯಿಗೆ ಹೇಳಿದಳು.

"ಹೌದೆ......? ಇದೆಲ್ಲಾ ನಮ್ಗೆ ಗೊತ್ತೇ ಇಲ್ಲವಲ್ಲ.....?" ಎಂದು ಆಶ್ಚರ್ಯ ವ್ಯಕ್ತಪಡಿಸಿದ ತಾಯಿ,

"ಅದೆಲ್ಲಾ ಸರಿನಮ್ಮಾ. ಅವರ ತಂದೆ, ತಾಯಿಯ ಬಗ್ಗೆ ಹೇಳಲೇ ಇಲ್ಲ" ಎಂದಳು.

ಮತ್ತೊಮ್ಮೆ ಮುಖವನ್ನು ಗಂಟಿಕ್ಕಿಕೊಂಡ ಚಂದ್ರಕಲಾಗೆ ಏನು ಹೇಳಲೂ ಗೊತ್ತಾಗದೆ ಅವಳ ತಾಯಿ ತಳಮಳಗೊಂಡಳು.

"ಬದುಕಿದ್ದಾರೋ ಇಲ್ಲವೋ........?" ಚಂದ್ರಕಲಾಳ ತಾಯಿ ಪ್ರಶ್ನಿಸಿದಳು. ಅವಳಿಗೆ ಮಾತ್ರ ಹೇಗೆ ಗೊತ್ತಾಗಬೇಕು.......? ಚಂದ್ರಕಲಾ

"ನನಗೆ ಗೊತ್ತಿಲ್ಲಮ್ಮ" ಎಂದೇಳಿ ಸುಮ್ಮನಾದಳು.

ಸ್ನಾತಕೋತ್ತರ ಪದವಿಗಳ ಫಲಿತಾಂಶ ಬಂದಿದ್ದು ಚಿರಂಜೀವಿ ಭೌತಶಾಸ್ತ್ರದಲ್ಲಿ ಮೊದಲನೇ ರ್‍ಯಾಂಕ್ ಗಳಿಸಿದ್ದ. ಚಂದ್ರಕಲಾ ಕೂಡ ಮೊದಲನೇ ದರ್ಜೆಯಲ್ಲೇ ಉತ್ತೀರ್ಣಳಾಗಿದ್ದಳು. ಚಿರಂಜೀವಿ ಫಲಿತಾಂಶದ ವಿಷಯ ಭಾವಚಿತ್ರಗಳ ಸಮೇತ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಗೊಂಡಿತ್ತು. ಚಂದ್ರಕಲಾಳ ತಂದೆ ತಾಯಿ ತಮ್ಮ ಮಗಳು ಒಳ್ಳೆ ಬುದ್ಧಿವಂತ ಹುಡುಗನನ್ನೇ ಆಯ್ಕೆ ಮಾಡಿಕೊಂಡಿದ್ದಾಳೆಂದು ಸಂತೋಷಪಟ್ಟರು.

ಈಗ ಚಿರಂಜೀವಿ ಎಂ.ಫಿಲ್.ನಲ್ಲಿ ಸೀಟು ಗಿಟ್ಟಿಸಿಕೊಂಡು ಅದೇ ಹಾಸ್ಟೆಲಿನಲ್ಲಿ ಉಳಿದುಕೊಂಡಿದ್ದ. ಎಂ.ಫಿಲ್. ಮುಗಿಯುವುದರೊಳಗೆ

ಐ.ಎ.ಎಸ್ಸೋ, ಐ.ಎಫ್.ಎಸ್ಸೋ ಅಥವಾ ಐ.ಪಿ.ಎಸ್.ನಲ್ಲಿ ಆಯ್ಕೆ ಯಾಗುವುದು ಖಚಿತ ಎಂದುಕೊಂಡಿದ್ದ.

ಒಂದು ದಿನ ಚಂದ್ರಕಲಾ, ಚಿರಂಜೀವಿಯನ್ನು ತನ್ನ ಮನೆಗೆ ಕರೆದುಕೊಂಡು ಹೊರಟಳು. ಅಂದು ಭಾನುವಾರವಾಗಿದ್ದರಿಂದ ಚಂದ್ರಕಲಾಳ ತಂದೆ ಮನೆಯಲ್ಲೇ ಇದ್ದರು. ಚಿರಂಜೀವಿಗೆ ಅಂದು ಚಂದ್ರಕಲಾ ಮನೆಯಲ್ಲಿ ಭಾರಿ ಉಪಚಾರದ ಜೊತೆಗೆ ಒಳ್ಳೆ ಊಟವೂ ಆಯಿತು.

ಚಿರಂಜೀವಿ ಹಾಲಿನಲ್ಲಿ ಕುಳಿತಿರುವಾಗ ಚಂದ್ರಕಲಾಳ ತಂದೆ ಮತ್ತು ತಾಯಿ ಇಬ್ಬರೂ ಬಂದು ಕುಳಿತುಕೊಂಡರು. ಚಿರಂಜೀವಿಗೆ ಏನೋ ಕೇಳಲಿದ್ದಾರೆ ಎನ್ನುವ ಗುಮಾನಿ ಹೇಳುವುದರಲ್ಲಿ ಚಂದ್ರಕಲಾಳ ತಂದೆ ಪೀಠಿಕೆ ಹಾಕಿಯೇಬಿಟ್ಟರು. ಇಷ್ಟೊತ್ತು ಎದುರುಗೆ ಕುಳಿತಿದ್ದ ಚಂದ್ರಕಲಾ ದಿಢೀರನೆ ಎದ್ದು ಕೋಣೆಯ ಒಳಕ್ಕೆ ನಡೆದಳು. ಅವರ ಎದುರಿಗೆ ಅವಳನ್ನು ಕರೆಯಲಾಗದೆ ಚಿರಂಜೀವಿ ಅವಳು ಹೋಗುವುದನ್ನೇ ನೋಡುತ್ತಾ ಇದ್ದುಬಿಟ್ಟ.

"ಏನಪ್ಪ ಚಿರಂಜೀವಿ ಊಟ ಚೆನ್ನಾಗಿತ್ತೋ...... ಇಲ್ಲವೋ......?" ಚಂದ್ರಕಲಾಳ ತಾಯಿ ಪ್ರಶ್ನಿಸಿದರು. ಊಟ ಮಾಡುವಾಗಲೆ ಒಂದೆರಡು ಸಲ ಚೆನ್ನಾಗಿದೆ ಎಂದು ಹೇಳಿದ್ದ ಚಿರಂಜೀವಿ,

"ತುಂಬಾ ಚೆನ್ನಾಗಿತ್ತು ನೈಸ್......" ಎಂದ ಮತ್ತೊಮ್ಮೆ.

"ನಿಮ್ಮ ತಂದೆ, ತಾಯಿ ಏನು ಮಾಡ್ತಾರೆ.....?" ಚಂದ್ರಕಲಾಳ ತಂದೆ ಪ್ರಶ್ನಿಸಿದರು.

ಚಿರಂಜೀವಿ ಕೆಲವು ಕ್ಷಣಗಳು ಏನೂ ಹೇಳಲಾರದೆ ಹೋದ.ಚಂದ್ರಕಲಾ, ಚಿರಂಜೀವಿಗೆ ಏನೋ ಸನ್ನೆ ಮಾಡಿದಳು. ಚಿರಂಜೀವಿ,

"ಚಂದ್ರಕಲಾಗೆ ಎಲ್ಲಾ ಹೇಳಿದ್ದೀನಲ್ಲ"ಎಂದ.

"“ಹೌದೌದು”" ಚಂದ್ರಕಲಾ ಧ್ವನಿಗೂಡಿಸಿದಳು.

"ಹೋಗಲಿ ನಿಮ್ಮ ತಂದೆ, ತಾಯಿ ಯಾವೂರು......?"

"ಚಿತ್ತೂರು ಜಿಲ್ಲೆಯ ಪೂರ್ವದ ಕಡಲಂಚಿನಲ್ಲಿರುವ ಒಂದಳ್ಳಿ."

"ನೀವೇನು ಜನ.......?" ದಿಢೀರನೆ ಅವರ ಬಾಯಿಂದ ಪ್ರಶ್ನೆ ಬಂದುಬಿಟ್ಟಿತ್ತು.

ಅದರ ಹಿಂದೆಯೆ ಈ ಪ್ರಶ್ನೆ ಕೇಳಬಾರದಿತ್ತು ಎನ್ನುವ ಮುಜುಗರ ಅವರ ಮುಖದಲ್ಲಿ ಕಾಣಿಸಿಕೊಂಡಿತು. ಚಂದ್ರಕಲಾ ಮುಖವನ್ನು ಸಣ್ಣದಾಗಿಸಿಕೊಂಡು

ಪಕ್ಕಕ್ಕೆ ತಿರುಗಿಕೊಂಡಳು. ಚಿರಂಜೀವಿ, ಚಂದ್ರಕಲಾ ಕಡೆಗೆ ನೋಡುತ್ತಾ ತನ್ನ ಜಾತಿಯನ್ನು ಹೇಳಿದ. ಚಂದ್ರಕಲಾಳ ತಂದೆ ಚಿರಂಜೀವಿಯನ್ನು

"ದಯವಿಟ್ಟು ನನ್ನನ್ನು ಕ್ಷಮಿಸಬೇಕು" ಕೇಳಿಕೊಂಡರು.

"ಪರವಾಗಿಲ್ಲ ಅದರಲ್ಲಿ ತಪ್ಪೇನಿದೆ.........?" ಚಿರಂಜೀವಿ ಸಮಾಧಾನವಾಗಿಯೇ ಹೇಳಿದ.

"ಅದೆಲ್ಲಾ ಹೋಗಲಿ, ಮದುವೆ ಯಾವಾಗ ಇಟ್ಟುಕೊಳ್ಳೋಣ.....?" ಚಂದ್ರಕಲಾಳ ತಂದೆ ಕೇಳಿದರು. ಚಿರಂಜೀವಿ ಈ ಪ್ರಶ್ನೆಗೆ ಉತ್ತರ ನೀಡಲು ಸ್ವಲ್ಪ ಹೊತ್ತು ಆಲೋಚಿಸಿದ. ಅಷ್ಟರಲ್ಲಿ ಅವರೆ,

"ಹೋಗಲಿ ಬಿಡಿ ಅದು ನಿಮ್ಮಿಬ್ಬರಿಗೂ ಬಿಟ್ಟಿದ್ದು. ನೀವಿಬ್ಬರೂ ಮಾತನಾಡಿ ನಮಗೆ ತಿಳಿಸಿದರೆ ಸಾಕು. ನೋಡಪ್ಪ ಚಿರಂಜೀವಿ, ನೀನು ಬಹಳ ಬುದ್ಧಿವಂತ ಹುಡುಗ. ನಿನಗೆ ಹೆಚ್ಚಿಗೆ ಏನೂ ಹೇಳೂವುದಿಲ್ಲ. ಇಬ್ಬರೂ ಅನ್ಯೋನ್ಯವಾಗಿ ಈಗ ಇರುವಂತೆ ಯಾವಾಗಲೂ ಇರಬೇಕು. ಅಷ್ಟೇ ನಮ್ಮಾಸೆ. ನಿನಗೆ ಏನಾದರೂ ಸಹಾಯ ಬೇಕಾದರೆ ಸಂಕೋಚಪಟ್ಟುಕೊಳ್ಳಬೇಡ. ಮದುವೆ ನಾವೇ ನಿನಗ್ಯಾಗೆ ಬೇಕೋ ಹಾಗೆ ಮಾಡಿಕೊಡ್ತೀನಿ" ಎಂದರು.

ಚಂದ್ರಕಲಾ ತಾಯಿ, ಚಂದ್ರಕಲಾಳ ಬಗ್ಗೆ ಸುಮಾರು ಹೊತ್ತು ಹೇಳಿ,

"ಅವಳು ಚಿಕ್ಕವಳಿಂದಲೂ ಹಾಗೇನೇ..... ಏನಾದರೂ ಮನಸಿಗೆ ಹಿಡಿಸದಿದ್ದರೆ, ನೋವಾದರೆ ಮಾತನಾಡುವುದನ್ನೇ ಬಿಟ್ಟುಬಿಡುತ್ತಾಳೆ.... ಒಳಗೊಳಗೆ ದಿನಗಟ್ಟಲೆ ಕೊರಗ್ತಾಳೆ" ಎಂದರು. ಚಂದ್ರಕಲಾ ಮುಗುಳು ನಗುತ್ತಾ ತಲೆ ಬಗ್ಗಿಸಿಕೊಂಡಳು. ಅವಲ ತಂಗಿ ಆರತಿ ಒಳಗಿನ ಕೋಣೆಯಿಂದ ಏನೋ ಹೇಳಿ ಗೇಲಿ ಮಾಡಿ ನಗುತ್ತಿದ್ದಳು.

ಚಿರಂಜೀವಿ, ಚಂದ್ರಕಲಾಳ ಕಡೆಗೆ ನೋಡಿದ. ಚಂದ್ರಕಲಾ ಕಣ್ಣುಬ್ಬುಗಳನ್ನು ಎಗರಿಸಿದಳು. ಚಿರಂಜೀವಿ ಎದ್ದು ನಿಂತು ಎರಡೂ ಕೈಗಳಿಂದ ಇಬ್ಬರಿಗೂ ಕೈ ಮುಗಿದು,

"ನಾನು ಬರ್ತೀನಿ.......ನಮಸ್ಕಾರ" ಎಂದ.

"ಆಯಿತಪ್ಪ ಹೋಗಿ ಬಾ. ಇದು ನಿನ್ನ ಸ್ವಂತ ಮನೆ ಇದ್ದಂಗೆ, ಆಗಾಗ ಬರ್ತಿರು."

ಚಂದ್ರಕಲಾಳ ತಾಯಿ ಹೇಳಿದಳು.

"ರಸ್ತೆಗಳಲ್ಲಿ ಓಡಾಡುವಾಗ ಉಷಾರು......" ಚಂದ್ರಕಲಾಳ ತಂದೆ ಹಿಂದಿನಿಂದ ಹೆಚ್ಚರಿಸಿದರು. ಚಂದ್ರಕಲಾ ಹಿಂದೆಯೇ ಬಸ್ಸು ನಿಲ್ದಾಣದವರೆಗೂ ಬಂದು ಚಿರಂಜೀವಿಯನ್ನು ಬಸ್ಸಿಗೆ ಹತ್ತಿಸಿ ಬಂದಳು.

* * *

೪

ಹಾಸ್ಟೆಲಿನಲ್ಲಿ ಉಳಿದುಕೊಳ್ಳುವುದಕ್ಕಾಗಿಯೇ ಎಂ.ಫಿಲ್ ಸೇರಿಕೊಂಡಿದ್ದ ಚಿರಂಜೀವಿ ಪಿ.ಎಚ್.ಡಿ ಮಾಡುವ ಉದ್ದೇಶವನ್ನು ಇಟ್ಟುಕೊಂಡಿರಲಿಲ್ಲ. ಒಂದು ವೇಳೆ ಮೊದಲನೇ ಅಥವಾ ಎರಡನೇ ಸಲವೂ ಸಿವಿಲ್ ಪರೀಕ್ಷೆಯಲ್ಲಿ ಆಯ್ಕೆಯಾಗದ ಪಕ್ಷದಲ್ಲಿ ಹೆಸರಿಗೆ ಮಾತ್ರ ಪಿ.ಎಚ್.ಡಿ. ಗೆ ಸೇರಿಕೊಳ್ಳುವ ಉದ್ದೇಶವನ್ನು ಹೊಂದಿದ್ದ. ಮೊದಲನೇ ಸಲವೆ ಆಯ್ಕೆಯಾಗುವ ನಂಬಿಕೆ ಚಿರಂಜೀವಿಗೆ ಇತ್ತಾದರೂ ಫಲಿತಾಂಶ ಬರುವ ದಿನಗಳು ಹತ್ತಿರವಾಗುತ್ತಿದ್ದಂತೆ ಸ್ವಲ್ಪ ನರ್ವಸ್ ಆಗತೊಡಗಿದ. ಒಂದು ದಿನ ರೇಡಿಯೋದಲ್ಲಿ ಸಿವಿಲ್ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಲಾಯಿತು. ಮರುದಿನ ಬೆಳಿಗ್ಗೆ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಯಿತು.

ಐ.ಎ.ಎಸ್, ಐ.ಪಿ.ಎಸ್.ನಲ್ಲಿ ಆಯ್ಕೆ ಆಗುತ್ತೇನೊ ಇಲ್ಲವೊ ಎನ್ನುವ ಭಯ ಆಗಲೆ ಶುರುವಾಗಿತ್ತು.

ಚಿರಂಜೀವಿ ಫಲಿತಾಂಶವನ್ನು ನೋಡುವುದಕ್ಕೆ ಮುಂಚೆಯೆ ಚಂದ್ರಕಲಾ ಕೂಡ ಅವನ ಫಲಿತಾಂಶವನ್ನು ನೋಡಿದ್ದಳು. ಚಿರಂಜೀವಿ ಪೊಲೀಸ್ ಅಧಿಕಾರಿಯಾಗುವುದು ಅವಳಿಗೆ ಯಾಕೋ ಇಷ್ಟವಾಗಲಿಲ್ಲ. ಹೇಗಾದರು ಆಗಲಿ ಚಿರಂಜೀವಿ ಮುಖ ಸಂದರ್ಶನದಲ್ಲಿ ಐ.ಎ.ಎಸ್.ನಲ್ಲೇ ಆಯ್ಕೆಯಾಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡಳು.

ನವದೆಹಲಿಯ ಯು.ಪಿ.ಎಸ್.ಸಿ. ಕಛೇರಿಯಿಂದ ಮುಖ ಸಂದರ್ಶನಕ್ಕೆ ಕರೆಬಂದಿದ್ದು ಸಂದರ್ಶನ ದಾಲ್ ಹೌಸ್‌ನಲ್ಲಿ ನಡೆಯುವುದಾಗಿ ತಿಳಿಸಲಾಗಿತ್ತು. ಬೆಂಗಳೂರಿನ ಕೆಲವು ಐ.ಎ.ಎಸ್. ಮತ್ತು ಐ.ಪಿ.ಎಸ್. ನ ಯುವ ಅಧಿಕಾರಿಗಳನ್ನು ಸಂಧಿಸಿದ ಚಿರಂಜೀವಿ ಅವರಿಂದ ಆದಷ್ಟು ಮಾಹಿತಿಗಳನ್ನು

ಪಡೆದುಕೊಂಡ. ಅನಂತರ ಬೆಂಗಳೂರಿನಿಂದ ದೆಹಲಿಗೆ ಹೊರಡುವ "ಕರ್ನಾಟಕ ಎಕ್ಸ್‌ಪ್ರೆಸ್"ನಲ್ಲಿ ದೆಹಲಿಗೆ ಒಂದು ಬರ್ತ್ ರಿಜರ್ವ್ ಮಾಡಿ ಹೊರಡಲು ತಯಾರಿ ಮಾಡಿಕೊಂಡ.

ದೆಹಲಿಗೆ ಹೊರಡುವ ದಿನ ಚಂದ್ರಕಲಾ ರೈಲ್ವೇ ನಿಲ್ದಾಣಕ್ಕೆ ಬಂದು ಅವನಿಗೆ ಹೃದಯ ತುಂಬಾ ಶುಭಾಶಯಗಳನ್ನು ಕೋರಿದಳು. ಚಿರಂಜೀವಿ ರೈಲು ಹೊರಡುವ ಮುನ್ನ ಅವಳ ಕೈ ಹಿಡಿದುಕೊಂಡು ಆಗಲೇ ಮದುವೆಯಾದ ಹೆಂಡತಿಯನ್ನು ಬಿಟ್ಟೋಗುವ ಮಿಲ್ಟ್ರಿ ಯೋಧನಂತೆ ಮುಖವನ್ನು ಗಂಟಿಕ್ಕಿಕೊಂಡಿದ್ದ. ಚಂದ್ರಕಲಾ, ರೈಲು ಹೊರಡುವ ಸಿಗ್ನಲ್ ಬಿದ್ದಿದ್ದೆ ಚಿರಂಜೀವಿಯನ್ನೇ ಬೋಗಿಯ ಒಳಕ್ಕೆ ಹೋಗುವಂತೇಳಿ,

"ಭದ್ರ ಉಷಾರಾಗಿ ಹೋಗಿ ಬನ್ನಿ" ಎಂದು ಎಚ್ಚರಿಸಿದಳು.

ಅವನ ಪೆಚ್ಚು ಮೋರೆಯನ್ನು ನೋಡಿ "ಅಯ್ಯೋ ಪಾಪ" ಎಂದುಕೊಂಡಳು. ಕಾಣುವವರೆಗೆ ಇಬ್ಬರೂ ಒಬ್ಬರಿಗೊಬ್ಬರು ಗಾಳಿಯಲ್ಲಿ ಕೈಬೀಸಿಕೊಂಡರು. ರೈಲು ವೇಗವನ್ನು ಹೆಚ್ಚಿಸಿಕೊಂಡಂತೆ ಚಿರಂಜೀವಿ, ಚಂದ್ರಕಲಾಳ ಕಣ್ಣುಗಳಿಂದ ದೂರವಾದ.

ಚಿರಂಜೀವಿ ಮೊದಲ ಬಾರಿಗೆ ಉತ್ತರ ಭಾರತದ ಕಡೆಗೆ ಪ್ರಯಾಣ ಬೆಳೆಸಿದ್ದ. ಹಿಂದಿ ಸಿನಿಮಾಗಳು ಮತ್ತು ಹಿಂದಿ ಹಾಡುಗಳ ಮೂಲಕ ಅಲ್ಪಸ್ವಲ್ಪ ಹಿಂದಿ ಕಲಿತುಕೊಂಡಿದ್ದು ಸಂದರ್ಶನಕ್ಕಾಗಿ ಸದ್ಯಕ್ಕೆ ಏನೂ ಓದಬಾರದೆಂದು ಒಂದು ಇಂಗ್ಲೀಷ್ ಪುಸ್ತಕವನ್ನು ತೆಗೆದುಕೊಂಡು ಓದತೊಡಗಿದ. ದೆಹಲಿ ತಲುಪುವುದರ ಒಳಗೆ ಅಕ್ಕಪಕ್ಕದ ಬರ್ತ್‌ಗಳಲ್ಲಿದ್ದ ಜನರು ಎಷ್ಟೋ ವಿಷಯಗಳನ್ನು ಅವನ ಜೊತೆಗೆ ಹಂಚಿಕೊಂಡಿದ್ದರು.

ರೈಲು ಹೊಸದೆಹಲಿ ತಲುಪಿದ್ದೆ ಲಗೇಜ್ ಹಿಡಿದುಕೊಂಡು ಮೊದಲೇ ತಿಳಿದುಕೊಂಡಿದ್ದ ರೈಲ್ವೆ ವಿಭಾಗದ "ಯಾತ್ರಿಕರ ಭವನ"ದ ಕಡೆಗೆ ಹಿಂದಿನ ಗೇಟಿನಿಂದ ಹೊರಕ್ಕೆ ನಡೆದ. ಅಲ್ಲಿ ಅವನಿಗೆ ಯಾವ ತೊಂದರೆಯೂ ಇಲ್ಲದೆ ಉಳಿದುಕೊಳ್ಳಲು ಕೋಣೆ ದೊರಕಿತು.

ಅದು ನವೆಂಬರ್ ತಿಂಗಳ ಚಳಿಯ ದಿನಗಳಾಗಿದ್ದು ಎಲ್ಲೆಲ್ಲೂ ಬೆಚ್ಚನೆಯ ಉಡುಪು ಧರಿಸಿದ್ದ ಜನರು ಓಡಾಡುತ್ತಿದ್ದರು. ಅಲ್ಲೇ ಕ್ಯಾಂಟೀನ್‌ನಲ್ಲಿ ಊಟ ಮಾಡಿ ಸಂದರ್ಶನ ನಡೆಯಲಿರುವ ದಾಲ್‌ಹೌಸ್ ಇರುವ ಸ್ಥಳವನ್ನು, ಅಲ್ಲಿಗೆ

ಹೋಗಬೇಕಾದ ವಿವರಗಳನ್ನು ತಿಳಿದುಕೊಂಡ. ಆ ಸಾಯಂಕಾಲ ದೆಹಲಿಯನ್ನು ಸುತ್ತಾಡಿದ ಚಿರಂಜೀವಿ ಆ ರಾತ್ರಿ ಊಟ ಮಾಡಿ ಮರುದಿನ ಸಂದರ್ಶನವಿರುವುದರಿಂದ ತನ್ನ ಕೋಣೆಗೆ ಬಂದು ಆರಾಮಾಗಿ ಮಲಗಿಬಿಟ್ಟ.

ಬೆಳಗ್ಗೆ ಹತ್ತು ಗಂಟೆಗೆಲ್ಲ ಚಿರಂಜೀವಿ ದಾಲ್‌ಹೌಸ್ ತಲುಪಿದ. ಆಗಲೆ ಹಲವು ಅಭ್ಯರ್ಥಿಗಳು ಅಲ್ಲಿ ಸೇರಿದ್ದರು. ಕೆಲವರಂತೂ ಶಿಸ್ತಾಗಿ ಕುಳಿತು ತಮ್ಮ ಸರದಿಗಾಗಿ ಕಾಯುತ್ತಿದ್ದರೆ, ಇನ್ನೂ ಕೆಲವರು ಬಹಳ ಗಂಭೀರವಾಗಿ ಚರ್ಚೆಯಲ್ಲಿ ತೊಡಗಿದ್ದಾರೆ. ಚಿರಂಜೀವಿ ತಾನು ಬಂದಿದ್ದ ವಿಷಯವನ್ನು ಸ್ವಾಗತಕಾರರಲ್ಲಿ ದಾಖಲಿಸಿ ಸಮಯವನ್ನು ತಿಳಿದುಕೊಂಡ. ಸಂದರ್ಶನಕ್ಕಾಗಿ ಒಳ ಹೋದವರು ಸುಮಾರು ಅರ್ಧ ಗಂಟೆಗಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿದ್ದರು. ಹೊರಗಿದ್ದ ಸೇವಕ ಚಿರಂಜೀವಿಯ ಹೆಸರು ಕರೆದ. ಚಿರಂಜೀವಿ ಬಾಗಿಲು ತೆಗೆದು ಒಳಕ್ಕೆ ಇಣಕಿದ. ಮೂವರು ಕುಳಿತಿದ್ದಾರೆ.

"ನಾನು ಒಳಗೆ ಪ್ರವೇಶಿಸಬಹುದೆ....?" ಸರ್ ಕೇಳಿದ.

"ದಯವಿಟ್ಟು ಬನ್ನಿ" ಮೂವರಲ್ಲಿ ಒಬ್ಬರು ಹೇಳಿದರು.

"ಗುಡ್ ಮಾರ್ನಿಂಗ್ ಸರ್", ಚಿರಂಜೀವಿ ಹೇಳಿದ.

"ಬನ್ನಿ ಕುಳಿತುಕೊಳ್ಳಿ ಮಿಸ್ಟರ್ ಚಿರಂಜೀವಿ" ಎಂದರು.

ಚಿರಂಜೀವಿ ಕುಳಿತುಕೊಂಡ. ಎದುರಿಗೆ ಮೂವರು ಕುಳಿತುಕೊಂಡಿದ್ದಾರೆ. ಮಧ್ಯ ಕುಳಿತಿದ್ದ ವ್ಯಕ್ತಿ ಮಿಸ್ಟರ್ ಚಿರಂಜೀವಿ...... ನಿಮ್ಮ ಸ್ಪೆಷಲ್ ಸಬ್ಜೆಕ್ಟು ಏನೂ ಅಂತ ನಾನು ಕೇಳೂವುದಿಲ್ಲ. ನಮಗೆ ತೋಚಿದ ವಿಷಯಗಳನ್ನು ನಾವು ಮಾತಾಡೋಣ..... ಏನಂತೀರ.....? ಕೇಳಿದ.

ಚಿರಂಜೀವಿ "ಹಾಗೆ ಆಗಲಿ ಸರ್" ಎಂದ.

ಓಕೆ ಮಿಸ್ಟರ್ ಚಿರಂಜೀವಿ, ನೀವು ಫಿಜಿಕ್ಸ್, ಕೆಮಿಸ್ಟ್ರಿ, ಜಿಯಾಲಜಿ ತೆಗೆದುಕೊಂಡಿದ್ದೀರಿ. ಈ ಮೂರು ಸಬ್ಜೆಕ್ಟ್‌ನಲ್ಲಿ ನಿಮಗೆ ಇಷ್ಟವಾದ ಸಬ್ಜೆಕ್ಟ್ ಯಾವುದು?" ಚಿರಂಜೀವಿ ನಿಧಾನವಾಗಿ ಪ್ರಾರಂಭಿಸಿದ.

ಎಲ್ಲಾ ಸಬ್ಜೆಕ್ಟ್ಸ ಇಷ್ಟಾನೆ. ಜಿಯಾಲಜೀನ ನಾನು ಬಿಎಸ್ಸಿಯಲ್ಲಿ ಓದಿರಲಿಲ್ಲ. ಬಹುಶಃ ಜಿಯಾಲಜಿ ಸಬ್ಜೆಕ್ಟಷ್ಟು ಇಂಟ್ರಸ್ಟಿಂಗ್ ಸಬ್ಜೆಕ್ಟ್ ಬೇರೊಂದಿಲ್ಲ ಅನಿಸುತ್ತೆ. ಭೂಮಿ 460 ಕೋಟಿ ವರ್ಷಗಳ ಹಿಂದೆ ಬಿಗ್ ಬ್ಯಾಂಗ್‌ನಿಂದ ಸಿಡಿದು ಬಂದು ಸೂರ್ಯನ ಸುತ್ತ ಗಿರಿಕಿ ಹೊಡೆಯತೊಡಗಿತು.

ಸೂರ್ಯ ವಯಸ್ಸಿನಲ್ಲಿ ಭೂಮಿಗಿಂತ ಸ್ವಲ್ಪ ಹಿರಿಯ. ಗ್ಯಾಸ್ ಸುತ್ತುತ್ತಾ ಸುತ್ತುತ್ತಾ ಗುಡ್ಡೆಯಾಗಿ ನಿಧಾನವಾಗಿ ತಣ್ಣಗಾಗುತ್ತಾ ಹೋಯಿತು. ಲಕ್ಷಾಂತರ ಧೂಮಕೇತುಗಳು, ಉಲ್ಕಾಶಿಲೆಗಳು, ಭೂಮಿಗೆ ಬಡಿಯತೊಡಗಿದಂತೆ ನೀರು ಹನಿ ಹನಿಯಾಗಿ ಕ್ರೋಢೀಕರಣಗೊಂಡು ತಗ್ಗಿನ ಕಡೆಗೆ ಹರಿಯತೊಡಗಿತು. ಸೂರ್ಯನ ಹಸಿ ಹಸಿ ಕಿರಣಗಳು ಸಮುದ್ರವನ್ನು ಮುತ್ತಿಕ್ಕಿದ್ದೆ ಜೀವ ವಿಕಾಸದ ಸಸಿ ಹೊಡೆಯಿತು. ಏಕಕಣ..... ಬಹುಕಣ.... ಮೀನು..... ಕಪ್ಪೆ...... ಹಾವು...... ಹೆಬ್ಬಾವು.... ಹಕ್ಕಿಗಳು ಆಕಾಶಕ್ಕೆ ಹಾರಿಹೋದವು. ಪೆಡಂಭೂತಗಳು, ಭೂಮಿಯ ಮೇಲೆ ಉರುಳಾಡಿದವು. ಆನೆ, ಕುದುರೆಗಳು ಓಡತೊಡಗಿದವು. ಒರಾಂಗುಟ್ಟು, ಚಿಂಪಾಂಜಿ, ಕಪಿ ಮಾನವ ಎರಡು ಕಾಲಿನಲ್ಲಿ ನಿಂತು ನಡೆಯತೊಡಗಿದ.

ಈ ಪ್ರಾಣಿಗಳ ಉಳಿವಿಗಾಗಿ ಗಿಡ ಮರಗಳು, ಮೈ ತುಂಬಾ ಫಲ ತುಂಬಿಕೊಡು ಭೂಮಿಯ ಮೇಲೆ ಅರಳಿ ನಿಂತವು. ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯ ಭೂಮಿಯ ಖನಿಜದಲ್ಲಿ ತುಂಬಿಕೊಂಡಿತು....! ಹೀಗೆ ಹೇಳುತ್ತಾ ಹೋಗುತ್ತಿದ್ದ ಚಿರಂಜೀವಿಯನ್ನು ನೋಡುತ್ತಿದ್ದ ಮೂವರು ಒಬ್ಬರನ್ನೊಬ್ಬರು ನೋಡಿಕೊಂಡರು.

"ಓಕೆ ಚಿರಂಜೀವಿ ನಿಮಗೆ ಇಷ್ಟವಾದ ಇಂಡಿಯನ್ ರೈಟರ್ ಯಾರು?"

"ನನಗೆ ಇಷ್ಟಾದ ರೈಟರ್ಸ್ ಸುಮಾರು ಜನ ಇದ್ದಾರೆ"

"ಸಂತ ಅಂದುಕೊಳ್ಳಿ"

"ನನಗೆ ಇಷ್ಟವಾದ ಸಂತ ಅಂದರೆ ಕಬೀರ್"

"ಯಾಕೆ?"

"ಬಹುಶಃ ಈ ದೇಶದ ಮೂಲ ಜನರಲ್ಲಿ ಮೊದಲ ಬಾರಿಗೆ ಜ್ಞಾನದ ಅರಿವನ್ನು ನೀಡಿದವನು ಕಬೀರನಾದರೆ, ಅದೆ ಜನರಿಗೆ ಮೊದಲ ಬಾರಿಗೆ ವಿದ್ಯೆ ಕೊಡಲು ಮುಂದಾಗಿದ್ದು ಮಹಾತ್ಮ ಜ್ಯೋತಿರಾವ್ ಪುಲೆ, ಹೆಣ್ಣುಮಕ್ಕಳಿಗೆ ಸಾವಿತ್ರಿ ಪುಲೆ. ಮಹಾತ್ಮಗಾಂಧಿ, ಅಂಬೇಡ್ಕರ್ ಅಂತಹವರು ಈ ದೇಶದಲ್ಲಿ ಹುಟ್ಟಿದ್ದು ನಮ್ಮ ಪುಣ್ಯ. ಮಹಾತ್ಮಗಾಂಧಿ ಮಾತು ಯಾರೂ ಕೇಳಲಿಲ್ಲ. ಹಳ್ಳಿಯಿಂದ ದಿಲ್ಲಿ, ಹಳ್ಳಿ ಗಟ್ಟಿಯಾಗಬೇಕು ಅಂದ್ರು. ಆದರೆ ನೆಹರೂ ಅವರ ಮಾತು ಕೇಳಲಿಲ್ಲ...?"

ಹೀಗೆ ಆ ಮೂವರು ಯಾವುದೇ ವಿಷಯವನ್ನು ಬದಲಿಸಿ ಬದಲಿಸಿ ಕೇಳಿದರು ಚಿರಂಜೀವಿ ಸ್ಪಷ್ಟವಾಗಿ ದೀರ್ಘವಾಗಿ ಮಾತನಾಡುತ್ತ ಎಲ್ಲಿಂದ ಎಲ್ಲಿಗೋ ಕರೆದೊಯ್ಯುತ್ತಿದ್ದ. ಕೇಳುತ್ತಿದ್ದ ಅವರು ಚಿರಂಜೀವಿಯನ್ನು ಹಿಂದಕ್ಕೆ ಕರೆದುಕೊಂಡು ಬರಬೇಕಾಗಿತ್ತು. ನಡುನಡುವೆ ಜನರಲ್ ಕೊಶ್ಚನ್ಸ್ ಕೇಳುವ ಮುಂಚೆಯೇ ಚಿರಂಜೀವಿ ಉತ್ತರಿಸಿ ಬಿಡುತ್ತಿದ್ದ.

"ಓಕೆ ಚಿರಂಜೀವಿ ಈಗ ನಿಮ್ಮ ಬಗ್ಗೆ ನಿಮ್ಮ ಕುಟುಂಬದ ಬಗ್ಗೆ ಸ್ವಲ್ಪ ಹೇಳಿ" ಎಂದರು. ಚಿರಂಜೀವಿ ಈಗ ದೀರ್ಘವಾಗಿ ಶ್ವಾಸ ತೆಗೆದುಕೊಂಡು ತನ್ನ ಊರಿನಲ್ಲಿ ಘಟಿಸಿದ ಮೊದಲ ಚಂಡಮಾರುತದಿಂದ ಪ್ರಾರಂಭಿಸಿದ. ಅವನ ಹಳ್ಳಿ... ತಂದೆ ತಾಯಿ..... ನಾಗಭೂಷಣಂ ..... ಬೆಂಗಳೂರು.... ವಿದ್ಯಾಭ್ಯಾಸ ಅವನ ತಂದೆ ತಾಯಿ ಮತ್ತೊಂದು ಚಂಡಮಾರುತದಲ್ಲಿ ಕಳೆದುಹೋಗಿದ್ದು ಎಲ್ಲವನ್ನು ಹೇಳುತ್ತಾ ಹೋದಂತೆ ಅವನ ಕಣ್ಣುಗಳು ಕಣ್ಣೀರಿನಲ್ಲಿ ಮುಳುಗಿಹೋದವು.

ಅವನ ಕಥೆ ಕೇಳುತ್ತಿದ್ದ ಮೂವರ ಹೃದಯಗಳು ಅನುಕಂಪದಿಂದ ತುಂಬಿಹೋದವು. ಅವರ ನಡುವೆ ಯಾವುದೊ ಒಂದು ಅನುಬಂಧ ಸೃಷ್ಟಿಯಾಗಿ ಆ ಕೋಣೆ ಎಲ್ಲವನ್ನು ಆಲಿಸುತ್ತಿತ್ತು. ಚಿರಂಜೀವಿಯ ಜೊತೆಗೆ ಸುಮಾರು ಸಮಯ ಕಳೆದ ಅವರು ಸ್ವಲ್ಪ ಎಚ್ಚರಗೊಂಡಂತೆ ಒಬ್ಬರನ್ನೊಬ್ಬರು ನೋಡಿಕೊಂಡರು. ಯುಪಿಎಸ್ಸಿ ಸಂದರ್ಶನ ಇಷ್ಟೊಂದು ಮಧುರವಾಗಿ ಇರುತ್ತೆಂದು ಚಿರಂಜೀವಿ ಅಂದುಕೊಂಡಿರಲಿಲ್ಲ. ಅವನ ಹೃದಯ ಹಗುರವಾಗಿ ತೇಲಾಡುತ್ತಿತ್ತು. ಅಷ್ಟರಲ್ಲಿ "ಓ.ಕೆ. ಚಿರಂಜೀವಿ - ನಿಮಗೆ ಒಳ್ಳೆಯದಾಗಲಿ.... ನೀವೀಗ ಹೋಗಬಹುದು ಚಿರಂಜೀವಿ" ಎಂದರು.

ಚಿರಂಜೀವಿ "ತುಂಬಾ ವಂದನೆಗಳು ಸರ್" ಎಂದು ಎದ್ದು ನಿಂತ. ಮೂವರು ಕೈಕುಲುಕಿ ಬೀಳ್ಕೊಟ್ಟರು.

ಸಂದರ್ಶನ ಮುಗಿದ ಎರಡು ದಿನಗಳ ನಂತರ ವೈದ್ಯಕೀಯ ತಪಾಸಣೆಯನ್ನು ಸಪ್ದರ್ ಜಂಗ್ ಆಸ್ಪತ್ರೆಯಲ್ಲಿ ನಡೆಸಲಾಯಿತು. ಚಿರಂಜೀವಿಗೆ ವೈದ್ಯ ಅಧಿಕಾರಿಗಳು ಯಾವ ಊನವನ್ನು ಹೇಳದೆ ವೈದ್ಯಕೀಯ ತಪಾಸಣೆ ಮುಗಿಸಿ ಕಳುಹಿಸಿದ್ದರು.

ಚಿರಂಜೀವಿ ದೆಹಲಿಯಿಂದ ಮತ್ತೆ ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿಗೆ ಬಂದು ಇಳಿದಾಗ ಸುಮಾರು ನಾಲ್ಕು ಗಂಟೆ. ಅಂದರೆ ರೈಲು ಎರಡೂವರೆ

ಗಂಟೆ ತಡವಾಗಿ ಬಂದಿತ್ತು. ಚಿರಂಜೀವಿ ರೈಲು ಬೋಗಿಯಿಂದ ಕೆಳಕ್ಕೆ ಇಳಿದಾಗ ಚಂದ್ರಕಲಾ ಎದುರಿಗೆ ಜನಗಳ ಮಧ್ಯೆ ಒಂಟಿಯಾಗಿ ನಿಂತು ಕಾಯುತ್ತಿದ್ದಾಳೆ. ಚಿರಂಜೀವಿ ಸ್ವಲ್ಪ ಆಶ್ಚರ್ಯಚಕಿತವಾಗಿ ಹತ್ತಿರಕ್ಕೆ ಬಂದು,

"ನೀನು ನಿಲ್ದಾಣಕ್ಕೆ ಬರ್ತೀನೆಂದು ಹೇಳ್‌ಲಿಲ್ಲವಲ್ಲ" ಎಂದ.

"ನಾನು ಹೇಳೇ ಬರಬೇಕಾಗಿತ್ತೇನು?" ಮುನಿಸಿಕೊಂಡಂತೆ ಪ್ರಶ್ನಿಸಿದಳು.

"ಹಾಗಲ್ಲ, ನೀನು ಇಲ್ಲಿ ಕಾಯ್ತಿರುವ ವಿಷಯ ಗೊತ್ತಿದ್ದರೆ ಇನ್ನೂ ಮೊದಲೇ ಬರ್ತಿದ್ದೆ" ಎಂದ.

ಚಂದ್ರಕಲಾ ಮುಸಿ ಮುಸಿ ನಕ್ಕಳು.

ಇಬ್ಬರು ನಿಲ್ದಾಣದಿಂದ ಹೊರಕ್ಕೆ ನಡೆದು ಬರುತ್ತಿದ್ದಂತೆ,

"ಸಂದರ್ಶನ ಹೇಗೆ ನಡೆಯಿತು?" ಚಂದ್ರಕಲಾ ಕೇಳಿದಳು.

"ಪರವಾಗಿಲ್ಲ ಚೆನ್ನಾಗಿಯೇ ಮಾಡಿದ್ದೀನಿ....... " ಚಿರಂಜೀವಿ

ಹೇಳಿದ. "ಐ.ಪಿ.ಎಸ್., ನನಗ್ಯಾಕೋ ಇಷ್ಟವಿಲ್ಲ..... ಆಯ್ಕೆಯಾದರೆ

ಐ.ಎ.ಎಸ್. ನಲ್ಲೇ ಆಯ್ಕೆ ಆಗಬೇಕು" ಚಂದ್ರಕಲಾ ಹೇಳಿದಳು.

"ನೋಡೋಣ" ಎಂದಷ್ಟೇ ಹೇಳಿದ ಚಿರಂಜೀವಿ ಸುಮ್ಮನೆ ಹೆಜ್ಜೆಯಾಕಿದ.

* * *

ಆರು ತಿಂಗಳು ಕಳೆದ ಮೇಲೆ ಫಲಿತಾಂಶ ಬಂದಿದ್ದು ಚಿರಂಜೀವಿ ನಿರೀಕ್ಷಿಸಿದಂತೆಯೇ ಐ.ಎ.ಎಸ್.ಗೆ ಆಯ್ಕೆಯಾಗಿರಲಿಲ್ಲ. ವಿಷಯ ತಿಳಿದ ಚಂದ್ರಕಲಾ ಹೆಚ್ಚಾಗಿಯೆ ನಿರಾಶೆಗೊಂಡಳು. ಚಿರಂಜೀವಿ ಇನ್ನೊಮ್ಮೆ ಸಿವಿಲ್ ಪರೀಕ್ಷೆಗೆ ಕುಳಿತುಕೊಳ್ಳಬೇಕೋ..... ಬೇಡವೋ ಎಂಬುದಾಗಿ ಯೋಚಿಸಿದ.

ಫಲಿತಾಂಶ ಬಂದ ಆರು ತಿಂಗಳಲ್ಲೇ ಚಿರಂಜೀವಿಗೆ ಕರ್ನಾಟಕದ ಐ.ಪಿ.ಎಸ್. ಕೇಡರಿನಲ್ಲಿ ಬೆಂಗಳೂರಿಗೆ ಪೋಸ್ಟಿಂಗ್ ಆಗಿತ್ತು. ಇದರಿಂದ ಚಿರಂಜೀವಿ, ಚಂದ್ರಕಲಾ ಮತ್ತು ಅವಳ ಕುಟುಂಬದವರು ಬಹಳ ಖುಷಿಯಾದರು.

ಚಿರಂಜೀವಿ ಕರ್ನಾಟಕ ಪೊಲೀಸ್ ಕಮೀಷನರ್ ಕಛೇರಿ, ಬೆಂಗಳೂರಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡ. ಡ್ಯೂಟಿ ರಿಪೋರ್ಟ್ ಮಾಡಿಕೊಂಡಾಗ ಅವನಿಗೊಂದು ಪ್ರಮಾಣ ಪತ್ರ ಕೊಟ್ಟು, ಪೊಲೀಸ್ ಕಮೀಷನರ್ ಅವರು ಅದರಲ್ಲಿ ಇರುವುದನ್ನು ಹಾಗೆ ಓದುವಂತೆ ಹೇಳಿದರು. ಚಿರಂಜೀವಿ ಎದುರಿಗೆ ನಿಂತುಕೊಂಡು ಪ್ರಮಾಣ ಪತ್ರ ಓದತೊಡಗಿದ.

I, Chiranjeevi do swear/ solemnly affirm that I will be faithfull and bear true allegence to Indian and to the Constitution of Indian as by law established and that I will carry out the duties of my office loyally, honestly and with imparitiality.

So help me God.

-ಚಿರಂಜೀವಿ.

-ಎಂದು ಓದಿ ಮುಗಿಸಿದ.

"ಮಿಸ್ಟರ್ ಚಿರಂಜೀವಿ ಈಗ ಏನು ಓದಿದೆಯೋ ಅದನ್ನು ನಿನ್ನ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು!" ಎದುರಿಗಿದ್ದ ಪೊಲೀಸ್ ಕಮೀಷನರ್ ಹೇಳಿದರು. ಚಿರಂಜೀವಿ ವಂದನೆಗಳನ್ನು ಸಲ್ಲಿಸಿ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಪಾಲಿಸುವುದಾಗಿ ವಾಗ್ದಾನ ಮಾಡಿದ. "ತುಂಬಾ ಒಳ್ಳೆಯದು ಮಿಸ್ಟರ್ ಚಿರಂಜೀವಿ" ಎಂದು ಕೈ ಕುಲುಕಿದ ಕಮೀಷನರ್ ಅವರು ಚಿರಂಜೀವಿಗೆ ಶುಭಾಶಯಗಳನ್ನು ಕೋರಿದರು. ಚಿರಂಜೀವಿ ಅದೇ ದಿನ ಸಾಯಂಕಾಲ ಚಂದ್ರಕಲಾ ಮನೆಗೆ ಸಿಹಿ ಪಾಕೇಟ್ ಸಮೇತ ಬಂದು ಚಂದ್ರಕಲಾಳ ತಂದೆ ತಾಯಿಯ ಕಾಲಿಗೆ ಎರಗಿ ಕಣ್ಣುಗಳಲ್ಲಿ ನೀರಾಕಿಕೊಂಡು ಗಳಗಳನೆ ಅತ್ತುಬಿಟ್ಟ. ಅವರಿಗೆ ದಿಕ್ಕು ತೋಚದಂತಾಗಿ ಒಬ್ಬರನ್ನೊಬ್ಬರು ಮುಖ ನೋಡಿಕೊಂಡರು. ಅನಂತರ ಒಳಗೊಳಗೆ ಹೃದಯ ತುಂಬಿ ಆಶೀರ್ವಾದ ಮಾಡಿದರು.

ಚಂದ್ರಕಲಾಗೆ ಅರ್ಥವಾಗಿತ್ತು. ಬಹುಶಃ ಅವನ ತಂದೆ, ತಾಯಿಗಳು ಜ್ಞಾಪಕಕ್ಕೆ ಬಂದು, ಹಾಗೆ ಮಾಡಿರಬೇಕು ಎಂದುಕೊಂಡಳು. ಅವಳ ಊಹೆ ಸರಿಯಾಗೇ ಇತ್ತು. ಚಿರಂಜೀವಿ ಊಟ ಮಾಡಿ ಅಲ್ಲಿಂದ ಬೀಳ್ಕೊಂಡ. ಸ್ವಲ್ಪ ದೂರ ಜೊತೆಯಲ್ಲೇ ನಡೆದು ಬಂದ ಚಂದ್ರಕಲಾ, ಈ ದಿನ ಏನು ಮಾತನಾಡುವುದು ಬೇಡವೆಂದು ಅವನನ್ನು ಬಸ್ಸಿಗೆ ಹತ್ತಿಸಿ ಹಿಂದಕ್ಕೆ ಬಂದಳು. ಜಿರಂಜೀವಿಗೆ ಇಂದೇಕೋ ಇಡೀ ದಿನ ಅವನ ತಂದೆ ತಾಯಿಯ ನೆನಪು ಪದೇ ಪದೇ ಕಾಡುತ್ತಿತ್ತು.

ಅವರು ನಿಜವಾಗಿಯೂ ಬದುಕಿರಲೇ ಬೇಕು. ಖಂಡಿತಾ ಸತ್ತಿಲ್ಲ. ಬದುಕಿದ್ದರೆ ಅದೇ ಚಿಂದಿ ಬಟ್ಟೆ ತೊಟ್ಟು, ಅದೇ ಗಂಜಿ ಊಟ

ಮಾಡುತ್ತಿರುತ್ತಾರೆ. ಯಾರೋ ಹೊಲಗದ್ದೆಗಳಲ್ಲಿ ದಿನವಿಡೀ ದುಡಿಯುತ್ತಿರುತ್ತಾರೆ. ಚಿರಂಜೀವಿ ರಾತ್ರಿ ನಿದ್ದೆ ಮಾಡಲಾಗಲಿಲ್ಲ. ಕಣ್ಣು ಮುಚ್ಚಿದರೆ ಕನಸಿನಲ್ಲೂ ಅವರ ಮುಖಗಳೇ ಕಾಣಿಸುತ್ತಿದ್ದವು.

ಎಷ್ಟೋ ದಿನಗಳು ಅವರ ಜ್ಞಾಪಕ ಬಂದಾಗ ಊಟದ ತಟ್ಟೆ ಮುಂದೆ ಕುಳಿತು ಕೊಂಡವನು ಊಟ ಬಿಟ್ಟು ಎದ್ದು ಬಿಟ್ಟಿದ್ದಾನೆ. ಅವರು ಎಲ್ಲೇ ಇರಲಿ ಕಂಡಿಡಿಯಬೇಕು. ಕೊನೆಯ ದಿನಗಳಲ್ಲಾದರೂ ಅವರನ್ನು ಒಳ್ಳೆ ಬಟ್ಟೆಗಳಲ್ಲಿ ನೋಡಬೇಕು. ಮನೆಯಲ್ಲಿ ಕೂರಿಸಿಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಸತ್ಕರಿಸಬೇಕು. ಬಹುಶಃ ಬಡವರು ತಮ್ಮ ಮಕ್ಕಳನ್ನು ಪ್ರೀತಿಸುವಷ್ಟು ಬೇರೆಯವರು ಪ್ರೀತಿಸಲಾರರೇನೋ ಎನ್ನುವುದಾಗಿ ಚಿರಂಜೀವಿ ಆಗಾಗ ಯೋಚಿಸುತ್ತಿದ್ದ.

ಚಂದ್ರಕಲಾಳ ತಂದೆ, ತಾಯಿ ಈಗ ಚಿರಂಜೀವಿಯನ್ನು ಪೂರ್ಣವಾಗಿ ಮೆಚ್ಚಿಕೊಂಡಿದ್ದರು. ಚಂದ್ರಕಲಾಳನ್ನು ಬೇಗನೆ ಮದುವೆಯಾಗುವಂತೆ ಚಂದ್ರಕಲಾಳ ಮೂಲಕ ಚಿರಂಜೀವಿಯ ಮೇಲೆ ಒತ್ತಾಯ ಹೇರತೊಡಗಿದರು. ಈ ವಿಷಯವನ್ನೇ ಚಂದ್ರಕಲಾ ಎರಡು, ಮೂರು ಸಲ ಚಿರಂಜೀವಿಯ ಹತ್ತಿರ ಹೇಳಿದಳು. ಒಂದು ದಿನ ಚಿರಂಜೀವಿ,

"ನೋಡು ಚಂದ್ರಕಲಾ ಉದ್ಯೋಗವಂತೂ ದೊರಕಿದೆ...... ನೀನು ನನ್ನನ್ನು ನಾನು ನಿನ್ನನ್ನು ಪ್ರೀತಿಸ್ತಿದ್ದೀವಿ..... ನಿಮ್ಮ ತಂದೆ, ತಾಯಿಯೂ ಒಪ್ಪಿದ್ದಾರೆ. ಇನ್ನು ಮಧ್ಯ ಉಳಿದಿರುವುದೇನು ಮದುವೆ...... ನನಗೇನು ಅಭ್ಯಂತರವಿಲ್ಲ. ಮದುವೆಯಾದ ಮೇಲೂ ಹೀಗೆಯೇ ಪ್ರೀತಿಸ್ತಾ ಕಾಲ ಕಳೆಯೋಣ....... ಮದುವೆ ಆಗಿಯೆ ಬಿಡೋಣ.... ಏನು ಹೇಳ್ತೀಯ?" ಎಂದ ಚಿರಂಜೀವಿ, ಚಂದ್ರಕಲಾಳ ಕೆನ್ನೆಯನ್ನು ಬೆರಳಿನಲ್ಲಿ ಒತ್ತಿದ.

"ನನಗೂ ಹಾಗೆ ಪ್ರೀತಿಸ್ತಾ ಇದ್ದು ಬಿಡೋಣ ಅನಿಸುತ್ತೆ" ಅಂದಳು ಚಂದ್ರಕಲಾ. "ನಿಜವಾಗಿಯೂ ಚಿರಂಜೀವಿ...?" ಕಣ್ಣುಗಳನ್ನು ಎಗರಿಸಿದ. ಚಂದ್ರಕಲಾ ಮುಸಿ ಮುಸಿ ನಕ್ಕಳು.

"ಹೆಣ್ಣುಗಳಿಗೆ ಮದುವೆಯಲ್ಲಿರುವಷ್ಟು ಆತುರ ಬೇರೆ ಯಾವುದರಲ್ಲೂ ಇರುವುದಿಲ್ಲ. ಗಂಡಸರಾದರೆ ಮದುವೆ ಆದಷ್ಟು ನಿಧಾನ ಅಂತಾರೆ..... ನಾನೇಳುವುದು ನೂರಕ್ಕೆ ನೂರು ಪಟ್ಟು ಸತ್ಯ... ಹೌದಲ್ಲವೆ.....? ಚಿರಂಜೀವಿ

ಪ್ರಶ್ನಿಸಿದ. ಚಂದ್ರಕಲಾ ಸ್ವಲ್ಪ ಮಟ್ಟಿಗೆ ನಿಜ ಎಂದು ಒಪ್ಪಿಕೊಂಡಳು. ಹೆಣ್ಣುಗಳ ತೊಂದರೆ ಒಂದು ರೀತಿಯಾದರೆ ಗಂಡುಗಳ ತೊಂದರೆ ಇನ್ನೊಂದು ರೀತಿಯದು.

"ಚಂದ್ರಕಲಾ, ಇನ್ನೊಂದು ವಿಷಯ ಜನವರಿ ತಿಂಗಳಲ್ಲಿ ತರಬೇತಿಗೋಗಬೇಕು. ಅದೂ ಕೂಡ ಸುಮಾರು ಒಂದು ವರ್ಷ ಬೇರೆ ಬೇರೆ ಪ್ರಾಂತ್ಯಗಳಲ್ಲಿ" ಎಂದ.

ಚಂದ್ರಕಲಾಳ ಮುಖ ಸ್ವಲ್ಪ ಬಾಡಿದಂತಾಯಿತು. ತಕ್ಷಣವೇ,

"ನನಗೆ ಗೊತ್ತಿಲ್ಲಪ್ಪ, ನಾನೂ ನಿನ್ನಿಂದೇನೇ ಬಂದುಬಿಡ್ತೀನಿ" ಎಂದಳು.

"ಸ್ವಂತ ಪತ್ನಿಯರಿಗೇನೆ ಅಪ್ಪಣೆ ಇಲ್ಲ, ಇನ್ನು ನೀನು ಪ್ರೇಯಸಿ....... ಪೊಲೀಸಿನವರು ಬಿಡ್ತಾರೆಯೇ.......?" ಚಿರಂಜೀವಿ ಸಣ್ಣದಾಗಿ ನಕ್ಕ. ಚಂದ್ರಕಲಾಗೆ ಕೋಪ ಬಂದು ಅವನ ಕೈ ಹಿಂಡಿದಳು.

"ನೋಡು ಚಂದ್ರಕಲಾ ಈಗ ನಮ್ಮ ನಡುವೆ ಎರಡು ಹಾದಿಗಳಿವೆ. ಒಂದು ತರಬೇತಿಗೆ ಹೋಗುವುದಕ್ಕಿಂತ ಮುಂಚೆ ಮದುವೆಯಾಗುವುದು. ಎರಡು ತರಬೇತಿ ಮುಗಿದ ನಂತರ ಮದುವೆಯಾಗುವುದು. ನನಗೇನೋ ಎರಡನೇದೆ ಸರಿ ಅನಿಸುತ್ತೆ"" ಎಂದ.

"ಅದೇಗೆ.......?" ಪ್ರಶ್ನಿಸಿದಳು ಚಂದ್ರಕಲಾ.

"ತರಬೇತಿ ಮುಗಿಸಿದ ನಂತರ ನನ್ನ ಕೈಯಲ್ಲಿ ಸ್ವಲ್ಪ ಹಣ ಇರುತ್ತೆ. ಮದುವೆ ಖರ್ಚುಗಳಿಗೆ ನಮ್ಮ ಸ್ವಂತ ಖರ್ಚುಗಳಿಗೆ ಹಣ ಬೇಡ್ವೆ........? ಎಲ್ಲದಕ್ಕೂ ನಿಮ್ಮ ತಂದೇನೇ ಕೇಳುವುದು ಸರಿಯೇ.......?" ಎಂದ.

ಈ ವಿಷಯ ಚಂದ್ರಕಲಾ ತಲೆಗ ಏಕೆ ಹೊಳೆಯಲಿಲ್ಲ........? ಎನ್ನುವಂತೆ ತನ್ನ ಕೆನ್ನೆಯ ಮೇಲೆ ಕೈ ಇಟ್ಟುಕೊಂಡಳು. ಚಿರಂಜೀವಿ ಎಷ್ಟಾದರೂ ಸ್ವಲ್ಪ ಸ್ವಾಭಿಮಾನಿಯೇ..... ಎಂದುಕೊಂಡ ಚಂದ್ರಕಲಾ,

"ಈ ವಿಷಯಾನ ನಮ್ಮ ತಂದೆ ತಾಯಿಗೆ ತಿಳಿಸ್ತೀನಿ..." ಎಂದಳು. ಮನಸ್ಸಿನಲ್ಲಿ ಮಾತ್ರ ಆದಷ್ಟು ಬೇಗ ಮದುವೆಯಾಗಲಿ ಎಂದುಕೊಂಡಳು.

"ನೋಡು, ನನ್ನ ಹೆಸರಿನಲ್ಲಿ ನಮ್ಮ ತಂದೆ ಒಂದು ಲಕ್ಷ ರೂಪಾಯಿ ಇಟ್ಟಿದ್ದಾರೆ. ನಿನಗೆ ಬೇಕಾದರೆ ನಾನು ಕೊಡಿಸ್ತೀನಿ..... ಅದರಲ್ಲಿ ಸ್ವಲ್ಪ ಹಣ ತಗೊಂಡು ನಾವು ಉಪಯೋಗಿಸಿಕೊಳ್ಳೋಣ" ಎಂದಳು.... ಚಿರಂಜೀವಿ ಅವಳನ್ನೊಮ್ಮೆ ನೋಡಿದ.

"ಬೇಕಾದರೆ ಆಮೇಲೆ ಅದೇ ಹಣಾನ ನನಗೆ ವಾಪಸ್ ಕೊಟ್ಟುಬಿಟ್ಟರೆ ಆಯಿತು"ಎಂದಳು. ಚಿರಂಜೀವಿ ನಗುತ್ತಾ.

"ಅಂತೂ ಬೇಗ ಮದ್ವೆ ಆಗಿಬಿಡಬೇಕು ಅಲ್ಲವೆ...?" ಎಂದ. ಇಬ್ಬರೂ ನಕ್ಕರು.

೫

ಚಂದ್ರಕಲಾಳ ತಂದೆ, ತಾಯಿ ತಮ್ಮ ಸಂಬಂಧಿಕರಿಗೆ ಚಿರಂಜೀವಿ ಮತ್ತು ಚಂದ್ರಕಲಾಳ ಮದುವೆ ಓಲೆಯನ್ನು ಕೊಡಲು ಹೋದಾಗ ಅವರ ಸಂಬಂಧಿಕರು ಹುಡುಗ ಯಾರು....? ಅವನ ತಂದೆ, ತಾಯಿ ಯಾರು......? ಎಲ್ಲಿದ್ದಾರೆ.....? ಏನು ಕೆಲಸ ಮಾಡ್ತಿದ್ದಾರೆ.....? ಯಾವ ಜಾತಿ.....? ಚೆನ್ನಾಗಿ ಇರುವವರೆ.....? ಬಡವರೆ........? ಇವೇ ಮುಂತಾದ ಪ್ರಶ್ನೆಗಳನ್ನು ಕೇಳಿದ್ದರು. ಅದೇ ರೀತಿಯ ಪ್ರಶ್ನೆಗಳು ಮದುವೆಯ ದಿನವೂ ಮುಂದುವರಿದಿತ್ತು. ಅದಕ್ಕೆ ತಕ್ಕಂತೆ ಮದುವೆಯಲ್ಲಿ ಚಿರಂಜೀವಿಯ ಕೆಲವು ಗೆಳೆಯರನ್ನು ಬಿಟ್ಟರೆ ಅವನ ಕಡೆಯವರೆಂದು ಹೇಳಿಕೊಳ್ಳಲು ಯಾರೂ ಇರಲಿಲ್ಲ. ಅಂತೂ ಚಿರಂಜೀವಿ ತರಬೇತಿಗೆ ಹೋಗುವುದಕ್ಕಿಂತ ಮುಂಚೆ ಅವರಿಬ್ಬರ ಮದುವೆ ನಡೆದುಹೋಯಿತು.

"ಹುಡುಗ ನೋಡಲು ಚೆನ್ನಾಗಿದ್ದಾನೆ....... ಡಿ.ವೈ.ಎಸ್ಪಿ. ಬೇರೆ ಎನ್ನುವ ಮಾತುಗಳು ಎಲ್ಲರ ಬಾಯಲ್ಲೂ ಕೇಳಿಬರುತ್ತಿದ್ದವು. ಚಿರಂಜೀವಿ ಮದುವೆಯಲ್ಲೂ ತನ್ನ ತಂದೆ, ತಾಯಿಯನ್ನು ನೆನೆದುಕೊಂಡು ಅಳುವುದನ್ನು ಮಾತ್ರ ಮರೆಯಲಿಲ್ಲ.

ಆ ರಾತ್ರಿ ಚಂದ್ರಕಲಾಳ ಮನೆಯಲ್ಲಿಯೇ ಮೊದಲ ರಾತ್ರಿಯೂ ನಡೆದುಹೋಯಿತು.

ಚಂದ್ರಕಲಾಳ ಕೆಲವು ಆಪ್ತ ಗೆಳತಿಯರು ಮತ್ತು ಹತ್ತಿರದ ಸಂಬಂಧಿಗಳು ಮೊದಲ ರಾತ್ರಿಯ ಏರ್ಪಾಡುಗಳನ್ನು ನೋಡಿಕೊಂಡಿದ್ದರು. ಎರಡು ವರ್ಷಗಳಿಂದ ಇಬ್ಬರೂ ಒಬ್ಬರನ್ನೊಬ್ಬರು ಬಲ್ಲವರಾಗಿದ್ದರಿಂದ ಮೊದಲ ರಾತ್ರಿಯ ಕ್ಷಣಗಳು ಮಧುರವಾಗಿಯೇ ಮುಗಿದಿದ್ದವು.

ಎರಡು ವರ್ಷಗಳಿಂದಲೂ ಅವರು ಬೆಂಗಳೂರಿನಲ್ಲಿ ಓಡಾಡದ ರಸ್ತೆಯಾಗಲಿ, ನೋಡದಿರುವ ಸಿನಿಮಾ ಹಾಲಾಗಲಿ, ಹೋಟಲಾಗಲಿ ಇಲ್ಲವೆಂದೇ ಹೇಳಬೇಕು. ಆದರೂ ಚಿರಂಜೀವಿ ಮತ್ತು ಚಂದ್ರಕಲಾ ಹೆಣ್ಣು-ಗಂಡಿನ ಬೆಸುಗೆಯಿಂದ ದೂರವೇ ಉಳಿದುಕೊಂಡಿದ್ದರು.

ಹೆಣ್ಣು, ಗಂಡಿಗೆ ತನ್ನ ಸರ್ವಸ್ವವನ್ನೂ ಮದುವೆಗೆ ಮುಂಚೆ ಒಪ್ಪಿಸಿಬಿಟ್ಟರೆ ಗಂಡಿಗೆ ಹೆಣ್ಣಿನ ಮೇಲೆ ಉದಾಸೀನ ಮೂಡಿಬಿಡಬಹುದು. ಪ್ರೀತಿಯನ್ನು ಗೌರವಿಸುವವರು ಕಾಮದ ಜ್ವಾಲೆಗೆ ಎಂದೂ ಸಿಲುಕುವುದಿಲ್ಲ. ಹಾಗಿದ್ದರೆ ಮಾತ್ರ ಪ್ರೀತಿಗೆ ಪವಿತ್ರತೆ ಬರುತ್ತದೆ. ಅದೇ ನಿಜವಾದ ಪ್ರೀತಿ. ಆ ರೀತಿಯ ಪ್ರೀತಿಯನ್ನು ಚಿರಂಜೀವಿ ಮತ್ತು ಚಂದ್ರಕಲಾ ಕಾಯ್ದುಕೊಂಡಿದ್ದರು.

ಚಿರಂಜೀವಿ ಎಂ.ಫಿಲ್. ಜೊತೆಗೆ ಹಾಸ್ಟೆಲು ಬಿಟ್ಟು ಒಂದು ತಿಂಗಳಿಂದ ಮಾವನ ಮನೆಯಲ್ಲೇ ಜಂಡಾ ಹೂಡಿದ್ದಾನೆ. ಇದರ ನಡುವೆ ನವ ವಧೂವರರು ಊಟಿ, ಮೈಸೂರು, ಕೊಡೈಕೆನಾಲ್, ಮಲೆಮಾದೇಶ್ವರ ಬೆಟ್ಟ, ನಂದಿ ಬೆಟ್ಟಗಳಲ್ಲಿ ತಮ್ಮ ಪ್ರೀತಿಯ ಎಲ್ಲೆಗಳನ್ನು ಕಂಡುಕೊಂಡಿದ್ದಾರೆ. ಮದುವೆಯನ್ನು ಸರಿಯಾದ ವಯಸ್ಸಿನಲ್ಲಿ ಮಾಡಿಕೊಳ್ಳಬೇಕು. ಹಾಗೆ ಅನುಭವಿಸಲೂ ಬೇಕು ಎನ್ನುವುದು ಅವರಿಬ್ಬರ ಅನುಭವಕ್ಕೆ ಬಂದಿದೆ. ಮದುವೆಯಾದ ಮೇಲೆ ಇಬ್ಬರ ರೂಪಗಳು ಸ್ವಲ್ಪ ಬದಲಾಗಿ ತೂಕ ಹೆಚ್ಚಿಸಿಕೊಳ್ಳುವುದರ ಜೊತೆಗೆ ಸೌಂದರ್ಯ ಇಮ್ಮಡಿಗೊಂಡಿದೆ.

ಈಗ ಚಿರಂಜೀವಿ ಒಂದು ವರ್ಷದ ತರಬೇತಿಗಾಗಿ ತನ್ನ ಪ್ರಿಯತಮಳನ್ನು ಬೆಂಗಳೂರಿನಲ್ಲೇ ಬಿಟ್ಟು ಒಬ್ಬನೇ ಒಂಟಿಯಾಗಿ ಹೋಗುವ ಸಂದರ್ಭ ಬಂದಿದೆ. ದಾಂಪತ್ಯದ ಸವಿಯನ್ನು ಅನುಭವಿಸಿರುವ ಚಂದ್ರಕಲಾ ಕಣ್ಣುಗಳ ತುಂಬಾ ಗಂಡನನ್ನೇ ತುಂಬಿಕೊಂಡು ಅವನ ಹಿಂದೆಯೇ ಓಡಾಡುತ್ತಿದ್ದಾಳೆ. ಮನುಷ್ಯನು ಯಾವ ಕೆಲಸವನ್ನಾದರೂ ತಡೆಹಿಡಿಯಬಹುದು. ಆದರೆ ಕಾಲವನ್ನು ತಡೆಹಿಡಿಯಲು ಅಸಮರ್ಥನಾಗಿದ್ದಾನೆ. ಚಿರಂಜೀವಿ ಒಂದು ದಿನ ಬೆಳಗ್ಗೆ ಚಂದ್ರಕಲಾಳಿಂದ ಬೇರ್ಪಟ್ಟು ಐ.ಪಿ.ಎಸ್. ತರಬೇತಿಗಾಗಿ ಬೆಂಗಳೂರಿನಿಂದ ಪ್ರಯಾಣ ಬೆಳೆಸಿದ.

* * *

ಚಿರಂಜೀವಿ ಬೆಂಗಳೂರಿನಿಂದ ಹೈದರಬಾದ್ ತಲುಪಿ ಅಲ್ಲಿನ ದೇಶದ ಉನ್ನತ ಪೊಲೀಸ್ ತರಬೇತಿ ಕೇಂದ್ರ ಸೇರಿಕೊಂಡ. ಆರು ತಿಂಗಳು ಕಾಲ

ಹೈದರಬಾದ್‌ನಲ್ಲಿ ಕುದುರೆ ಸವಾರಿ, ಅಪರಾಧಿಗಳ ಚಲನವಲನ, ಅವರ ಮುಖಚರ್ಯೆ ಓದುವುದು, ಅಪರಾಧ ಎಸಗಿದ ಸ್ಥಳಗಳಲ್ಲಿ ಮಾಹಿತಿ ಸಂಗ್ರಹಿಸುವುದು, ವರದಿಗಾರರಿಗೆ ನೀಡಬೇಕಾದ ಮಾಹಿತಿ, ಇಲಾಖೆಯಲ್ಲಿ ಗುಪ್ತವಾಗಿ ಇಡಬೇಕಾದ ವಿಷಯಗಳು, ನಡೆದಿರುವ ಕೆಲವು ನೈಜ ಅಪರಾಧಗಳ ವಿಶ್ಲೇಷಣೆ..... ತನಿಖೆಯ ವಿವರಗಳು ಹೀಗೆ ಹಲವು ವಿಷಯಗಳನ್ನು ತರಬೇತಿಯಲ್ಲಿ ತಿಳಿಸಲಾಯಿತು.

ದೇಶದ ಮೂಲೆಮೂಲೆಯಲ್ಲಿ ಕೆಲಸ ಮಾಡಿರುವ ಅತ್ಯುನ್ನತ ಹಲವು ಪೊಲೀಸ್ ಅಧಿಕಾರಿಗಳು ಪ್ರತಿದಿನವೂ ತಮ್ಮ ಅನುಭವಗಳ ತರಗತಿಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಪ್ರತ್ಯೇಕ ತರಬೇತಿದಾರರು ತರಗತಿಗಳನ್ನು ನಡೆಸುತ್ತಿದ್ದರು. ಹೈದರಾಬಾದಿನಲ್ಲಿ ತರಬೇತಿ ಮುಗಿಸಿದ ಮೇಲೆ ಎಲ್ಲಾ ಪೊಲೀಸ್ ಅಧಿಕಾರಿಗಳು ಸಿಮ್ಲಾದಲ್ಲಿನ ತರಬೇತಿ ಕೇಂದ್ರಕ್ಕೆ ಐ.ಎ.ಎಸ್. ಅಧಿಕಾರಿಗಳ ಜೊತೆಗೆ ಆಡಳಿತದ ತರಬೇತಿ ಪಡೆಯಲು ತೆರಳಿದರು. ಆಡಳಿತದಲ್ಲಿ ವಿಶೇಷ ಪರಿಣಿತಿ ಪಡೆದಿರುವ ದೇಶದ ಉನ್ನತ ಅಧಿಕಾರಿಗಳು ಸಿಮ್ಲಾದಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಹೈದರಾಬಾದ್ ಮತ್ತು ಸಿಮ್ಲಾದಲ್ಲಿ ತರಬೇತಿ ಮುಗಿಸಿದ ಎಲ್ಲಾ ಅಧಿಕಾರಿಗಳು ದೈಹಿಕವಾಗಿ, ಮಾನಸಿಕವಾಗಿ ಎಲ್ಲಾ ರೀತಿಯಲ್ಲೂ ತರಬೇತಿ ಪಡೆದು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ತಯಾರಾಗಿದ್ದರು.

ಇದರ ನಡುವೆ ಎರಡು ಸಲ ರಜಾದಲ್ಲಿ ಬೆಂಗಳೂರಿಗೆ ಬಂದಿದ್ದ ಚಿರಂಜೀವಿ ಚಂದ್ರಕಲಾ ಜೊತೆಗೆ ಸಮಯ ಕಳೆದುಹೋಗಿದ್ದ. ತರಬೇತಿಯ ನಡುವೆ ಸಿಮ್ಲಾದಲ್ಲಿದ್ದಾಗಲೂ ಚಂದ್ರಕಲಾಳನ್ನು ಒಮ್ಮೆ ಕರೆದೊಯ್ದಿದ್ದ. ಹೊಸ ದಂಪತಿಗಳು ಸಿಮ್ಲಾದಲ್ಲಿ ಮತ್ತೊಮ್ಮೆ ಮಧುಚಂದ್ರವನ್ನು ಅನುಭವಿಸಿದ್ದರು. ಚಿರಂಜೀವಿ ಅಂತಿಮವಾಗಿ ತರಬೇತಿ ಮುಗಿಸಿ ಬೆಂಗಳೂರಿಗೆ ಬಂದಿದ್ದ.

ತರಬೇತಿ ಮುಗಿಸಿ ಬಂದ ಚಿರಂಜೀವಿ ಮತ್ತೆ ಬೆಂಗಳೂರಿನ ಪೊಲೀಸ್ ಕಮೀಷನರ್ ಕಛೇರಿಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡ. ಎರಡು ತಿಂಗಳು ಕಾಲ ಸರ್ಕಲ್ ಇನ್ಸ್‌ಪೆಕ್ಟರುಗಳಿರುವ ಠಾಣೆಗಳಿಗೆ ಹೋಗಿ ಅಲ್ಲಿ ನಡೆಯುವ ವ್ಯವಹಾರಗಳನ್ನು ಖುದ್ದಾಗಿ ಪರಿಶೀಲಿಸುವಂತೆ ಮತ್ತೆ ಪೊಲೀಸ್ ಠಾಣೆಗಳಲ್ಲಿ ನಡೆಯುವ ದೈನಂದಿನ ಚಟುವಟಿಕೆಗಳನ್ನು ಗಮನಿಸುವಂತೆ

ಚಿರಂಜೀವಿಗೆ ತಿಳಿಸಲಾಯಿತು. ಚಿರಂಜೀವಿ ಯಾವುದೇ ಠಾಣೆಗೆ ಹೋದರೂ ಪೊಲೀಸ್ ಸಬ್ ಇನ್ಸ್‌ಪೆಕ್ಟರುಗಳಿಂದ ಸರ್ಕಲ ಇನ್ಸ್‌ಪೆಕ್ಟರುಗಳವರಗೆ ಯಾರೂ ಎದುರಿಗೆ ಕುಳಿತುಕೊಳ್ಳುವ ಸಾಹಸವನ್ನು ಮಾಡಲಿಲ್ಲ.

ತರಬೇತಿಯಲ್ಲಿ ಎಲ್ಲಾ ವಿಷಯಗಳನ್ನು ಹೆಚ್ಚು ಕಡಿಮೆ ಹೇಳಿಕೊಡಲಾಗಿತ್ತು. ಪೊಲೀಸರ ಕೆಲವು ಮಾದರಿಯ ಸಾಹಸಗಳನ್ನು, ಕಳ್ಳರ ಮುಖಚರ್ಯೆ ಓದುವುದನ್ನು, ಕೇಸ್ ದಾಖಲಿಸುವುದನ್ನು ಮತ್ತು ಯಾವ ಯಾವ ರೀತಿಯ ಅಪರಾಧಗಳಿಗೆ ಯಾವ ಯಾವ ಕಾನೂನುಗಳು ಅನ್ವಯವಾಗುತ್ತವೆ ಎನ್ನುವುದನ್ನು ತಿಳಿಸಲಾಗಿತ್ತು. ಪೊಲೀಸರು ಕೂಡ ಹೇರಳ ವಿಷಯಗಳನ್ನು ತಿಳಿದುಕೊಳ್ಳಬೇಕಾದ್ದರಿಂದ ಚಿರಂಜೀವಿ ಇಲ್ಲಿಯೂ ಸಮಯ ಸಿಕ್ಕಾಗೆಲ್ಲ ಪುಸ್ತಕಗಳನ್ನು ಓದತೊಡಗಿದ.

ಚಿರಂಜೀವಿ ಒಂದೇ ವರ್ಷದಲ್ಲಿ ಎಲ್ಲಾ ಕಾನೂನುಗಳನ್ನು ತುಟಿಗಳು ಮತ್ತು ಬೆರಳುಗಳ ನಡುವೆ ಸಿಕ್ಕಿಸಿಕೊಂಡಿದ್ದ. ಎಷ್ಟೋ ರೀತಿಯ ಪೊಲೀಸ್ ಅಪರಾಧಗಳನ್ನು ಮತ್ತು ತನಿಖೆ ನಡೆಸಿರುವ ಫೈಲುಗಳನ್ನು ಓದಿ ತಿಳಿದುಕೊಂಡಿದ್ದ. ಕೆಲವಂತೂ ಮೈ ನವಿರೇಳಿಸುವಂತಹ ಸಾಹಸಗಳಿಂದ ಕೂಡಿದ್ದು, ಅಪರಾಧಗಳು ಎಷ್ಟು ಚಾಣಾಕ್ಷತೆಯಿಂದ ಕೂಡಿರುತ್ತವೆ ಎನ್ನುವುದು ಹೇಳತೀರದು. ಒಬ್ಬೊಬ್ಬ ಅಪರಾಧಿಯ ಶೈಲಿಯೂ ಪ್ರತ್ಯೇಕ. ಚಿರಂಜೀವಿ, ಪೊಲೀಸರು, ಅಪರಾಧಿಗಳು ಮತ್ತು ರಾಜಕಾರಣಿಗಳ ನಡುವಿನ ಸಂಬಂಧಗಳಿರುವ ಕೆಲವು ಟಿಪಿಕಲ್ ಕೇಸುಗಳ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದ. ಚಿರಂಜೀವಿಯನ್ನು ತರಬೇತಿಯಲ್ಲಿ ಬ್ರಿಲಿಯೆಂಟ್ ಅಧಿಕಾರಿಯೆಂದು ಗುರುತಿಸಲಾಗಿದ್ದು ಯಾವುದಾದರೂ ಒಳ್ಳೇ ಕೇಸುಗಳು ಬಂದರೆ ಚಿರಂಜೀವಿಯನ್ನು ನೇಮಿಸಲು ಕಮೀಷನರ್ ಕೂಡ ಕಾಯುತ್ತಿದ್ದರು.

ಚಿರಂಜೀವಿ ಈಗ ಒಂದು ಪ್ರತ್ಯೇಕ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಚಂದ್ರಕಲಾ ಜೊತೆಗೆ ವಾಸ್ತವ್ಯ ಹೂಡಿದ್ದ. ಯಾವಾಗಲೂ ಇಬ್ಬರು ಪೊಲೀಸ್ ಪೇದೆಗಳು ಚಿರಂಜೀವಿಯ ಮನೆ ಮುಂದೆ ಕಾವಲು ಕಾಯುತ್ತಿದ್ದರು. ಒಬ್ಬ ಪೊಲೀಸ್ ಪೇದೆ ತೋಟ ಮತ್ತು ಮನೆ ಕೆಲಸಗಳಲ್ಲಿ ತೊಡಗಿರುತ್ತಿದ್ದ. ಚಂದ್ರಕಲಾ ಒಬ್ಬಳೇ ಮನೆಯಲ್ಲಿ ಕಾಲ ಕಳೆಯುವುದು ದೊಡ್ಡ ಸಮಸ್ಯೆಯಾಗಿ ಆಗಾಗ ತನ್ನ ತಾಯಿಯ ಮನೆಗೆ ಹೋಗಿಬರುತ್ತಿದ್ದಳು. ಅವಳ ತಂದೆ ತಾಯಿ, ತಂಗಿ ಕೆಲವು ಗೆಳತಿಯರು ಅವರ ಮನೆಗೆ ಆಗಾಗ ಬರುತ್ತಿದ್ದರು.

ಚಂದ್ರಕಲಾ, ಮನೆಗೆ ಬೇಕಾದ ಒಂದೊಂದೇ ಸಾಮಾನುಗಳನ್ನು ಕೊಂಡುಕೊಂಡು ಮನೆ ತುಂಬಿಸತೊಡಗಿದಳು. ಆದರೆ ಮಕ್ಕಳ ವಿಚಾರದಲ್ಲಿ ಇಬ್ಬರದೂ ಒಂದೇ ತೀರ್ಮಾನ. ಇನ್ನೂ ಒಂದೆರಡು ವರ್ಷಗಳು ಕಳೆಯಲಿ ಎನ್ನುವುದು. ಒಟ್ಟಿನಲ್ಲಿ ಚಿರಂಜೀವಿ ಮತ್ತು ಚಂದ್ರಕಲಾ ಆದರ್ಶ ದಂಪತಿಗಳಾಗಿ ರೂಪುಗೊಳ್ಳುತ್ತಿದ್ದರು.

* * *

ಚಿರಂಜೀವಿ ತರಬೇತಿಯಲ್ಲಿದ್ದಾಗ ಚಂದ್ರಕಲಾಳ ಜೊತೆಗೆ ಸರಿಯಾಗಿ ಸಮಯವನ್ನು ಕಳೆಯಲು ಆಗಿರಲಿಲ್ಲ. ತರಬೇತಿಯ ನಡುವೆ ಸಮಯ ಸಿಕ್ಕಾಗ ಬೆಂಗಳೂರಿಗೆ ಬರುತ್ತಿದ್ದ ಚಿರಂಜೀವಿ ಶಾಲೆಯಲ್ಲಿ "ಟೈಂ" ಟೇಬಲ್ ಹಾಕಿಕೊಂಡ ವಿದ್ಯಾರ್ಥಿಯಂತೆ ಹೊರಟು ಹೋಗುತ್ತಿದ್ದ.

"ನೀವು ಇಬ್ಬರನ್ನು ಒಟ್ಟಿಗೆ ಮದುವೆ ಮಾಡಿಕೊಂಡು ಬಿಟ್ಟಿದ್ದೀರಿ. ಅದು ನನಗಿನ್ನ ಡ್ಯೂಟಿ ಎಂಬ ಹೆಂಡತಿಯನ್ನೆ ನೀವು ಹೆಚ್ಚಾಗಿ ಪ್ರೀತಿಸುತ್ತಿದ್ದೀರಿ" ಎಂದು ಚಂದ್ರಕಲಾ ಇರುಸು ಮುರುಸಾಗುತ್ತಿದ್ದಳು. ಚಂದ್ರಕಲಾಳ ಈ ಕೋಪದ ಕಿಡಿಗಳಿಂದ ತಪ್ಪಿಸಿಕೊಳ್ಳಲು ಚಿರಂಜೀವಿ ಬೇರೆ ದಾರಿಯಿಲ್ಲದೆ ನಕ್ಕು ಬಿಡುತ್ತಿದ್ದ.

"ಆಗಲಿ, ಈ ತರಬೇತಿ ಮುಗಿದೋಗಲಿ. ಬೆಂಗಳೂರಿಗೆ ಬಂದು ರಿಪೋರ್ಟ್ ಮಾಡಿಕೊಂಡ ಮೇಲೆ ರಜೆ ಹಾಕಿ ಒಂದೆರಡು ತಿಂಗಳು ಎಲ್ಲಿಗಾದರೂ ಹೋಗಿಬಿಡೋಣ" ಎನ್ನುತ್ತಿದ್ದ ಚಿರಂಜೀವಿ ಸಮಯ ಸಿಕ್ಕಾಗಲೆಲ್ಲ ತರಬೇತಿಯ ನಡುವೆ ಚಿರಂಜೀವಿ, ಚಂದ್ರಕಲಾಳನ್ನು ಕೆಲವು ದಿನಗಳ ಮಟ್ಟಿಗೆ ಆಗಾಗ ಕರೆದುಕೊಂಡು ಹೋಗಿದ್ದರು, ಇಬ್ಬರು ಪ್ರತ್ಯೇಕವಾಗಿ ತಮಗೆ ಇಷ್ಟ ಬಂದಂತೆ ಸಮಯ ಕಳೆಯಲು ಆಗಿರಲಿಲ್ಲ.

ತರಬೇತಿಯಲ್ಲಿ ಚಿರಂಜೀವಿ ಒಂದು ನಿಮಿಷವನ್ನು ಸಹ ಪೋಲು ಮಾಡುತ್ತಿರಲಿಲ್ಲ. ತರಬೇತಿ ಮುಗಿಸಿ ಮತ್ತೆ ಬೆಂಗಳೂರಿಗೆ ಬಂದಿರುವ ಚಿರಂಜೀವಿಯನ್ನು ಚಂದ್ರಕಲಾಳ ತಂದೆ ಮತ್ತು ತಾಯಿ ಚಂದ್ರಕಲಾಳನ್ನು ಎಲ್ಲಿಗಾದರೂ ಪ್ರವಾಸಕ್ಕೆ ಕರೆದುಕೊಂಡು ಹೋಗಲು ಒತ್ತಾಯ ಮಾಡತೊಡಗಿದರು. ಚಂದ್ರಕಲಾ ಕೂಡ ತರಬೇತಿಯಲ್ಲಿದ್ದಾಗ ಹೇಳಿದಂತೆ ಎಲ್ಲಿಗಾದರೂ ಹೋಗಿ ಬರೋಣ ನಡೆಯಿರಿ ಎಂದು ಚಿರಂಜೀವಿ ಬೆನ್ನು ಬಿದ್ದಿದ್ದಳು.

ಯೌವ್ವನ ಎನ್ನುವುದು ಭೂಮಿಯ ಮೇಲೆ ಲಾವಾ ಹೊರಚಿಮ್ಮಿ ಹೊಸದಾಗಿ ಸೃಷ್ಟಿಯಾಗುವ ಪರ್ವತಗಳಂತೆ. ಈ ಪರ್ವತಗಳ ಒಡಲಲ್ಲಿ ಹುಟ್ಟಿಕೊಳ್ಳುವ ನದಿ ತೊರೆಗಳು ಅಷ್ಟೇ ಚೆಲ್ಲುಚೆಲ್ಲಾಗಿ ಚಂಚಲ ಮನಸ್ಸಿನ ಹೆಣ್ಣುಗಳಂತೆ ತಮಗೆ ಇಷ್ಟಬಂದಂತೆ, ದಿಕ್ಕುದಿಕ್ಕುಗಳಿಗೆ ಅಪ್ಪಳಿಸಿ ಕೊರಕಲುಗಳನ್ನು ಸೃಷ್ಟಿಸಿ ಪ್ರಪಾತಗಳಿಂದ ಧುಮುಕಿ ಬೋರ್ಗರೆದು ಹರಿಯುತ್ತವೆ. ಎಳೆವಯಸ್ಸಿನ ಹೆಣ್ಣು ಗಂಡು ಮದುವೆಯಾದಾಗಲು ಅದೇ ರೀತಿಯಾಗಿ ನಡೆದುಕೊಳ್ಳುತ್ತಾರೆ... ನಡೆದುಕೊಳ್ಳಲೇಬೇಕು.

ಯೌವ್ವನ ಮುಗಿದುಹೋದ ಮೇಲೆ ಅಂತಹ ಚೆಲ್ಲಾಟಗಳಿಗೆ ಮನಸ್ಸೆ ಕಡಿವಾಣ ಹಾಕಿ ಕುಳಿತುಕೊಂಡು ಬಿಡುತ್ತದೆ. ಚಂದ್ರಕಲಾಳ ತಂದೆ, ತಾಯಿ ಮತ್ತು ತಂಗಿಯ ಒತ್ತಾಯದಿಂದ ಚಿರಂಜೀವಿ ಅಂತೂ ಒಂದು ತಿಂಗಳು ಕಾಲ ರಜೆ ಪಡೆದುಕೊಂಡಿದ್ದ.

ರಜೆ ಪಡೆದುಕೊಂಡ ಮೇಲೆ ರಜೆಯನ್ನು ಮನೆಯಲ್ಲೆ ಇದ್ದುಕೊಂಡು ಪೋಲು ಮಾಡಬಾರದೆಂದು, ರಜೆ ಪ್ರಾರಂಭವಾಗುವ ದಿನವೆ ಪ್ರವಾಸಕ್ಕೆ ಹೋಗಬೇಕೆಂದು ತಯಾರಿ ಮಾಡಿಕೊಂಡರು. ಎಲ್ಲಿಗೆ ಪ್ರವಾಸ ಹೋಗುವುದು? ಯಾತಕ್ಕಾಗಿ ಹೋಗುವುದು? ಮದುವೆಯಾದ ಮೇಲೆ ಎಲ್ಲರೂ ಹೋಗುತ್ತಾರೆ ಅದೆ ರೀತಿ ನಾವು ಹೋಗುತ್ತೇವೆ ಎನ್ನುವುದೆ ಮುಖ್ಯವಾದರೆ ವಿಶೇಷ ಏನಿರುತ್ತದೆ?

ಮದುವೆಯಾಗಿ ಒಂದು ವರ್ಷವೆ ಆಗಿಹೋಗಿದೆ. ಅದಕ್ಕಿಂತ ಮುಂಚಿನಿಂದಲೂ ಒಬ್ಬರನ್ನೊಬ್ಬರು ಪ್ರೀತಿಸಿದ್ದಾರೆ. ಕೈ ಕೈ ಹಿಡಿದುಕೊಂಡು ನೂರಾರು ದಿನಗಳು ಓಡಾಡಿದ್ದಾರೆ. ಬಹುಶಃ ಪ್ರೀತಿ-ಪ್ರೇಮ ಎನ್ನುವುದು ಮದುವೆ ಮಾಡಿಕೊಳ್ಳುವುದಕ್ಕಿಂತ ಮುಂಚೆ ಇರುವಂತೆ ಮದುವೆ ಆದ ಮೇಲೆ ಇರುವುದಿಲ್ಲವೇನೋ ಎನ್ನುವ ಸಂದೇಹ ಚಿರಂಜೀವಿ ಮತ್ತು ಚಂದ್ರಕಲಾ ಇಬ್ಬರ ಗಮನಕ್ಕೂ ಬಂದಿದೆ. ಆದರೆ ಅದನ್ನು ಮೀರಿ ನಾವು ಯಾವಾಗಲೂ ಹೀಗೆ ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಗೌರವಿಸುತ್ತ ಇರಬೇಕು ಎಂದು ಮಾತನಾಡಿಕೊಂಡಿದ್ದಾರೆ.

ಒಂದು ಜೋಡಿ ಪ್ರೀತಿಸುತ್ತಿರುವಾಗ ನಡೆದುಕೊಳ್ಳುವ ರೀತಿ ಮತ್ತು ಮದುವೆ ಆದ ಮೇಲೆ ನಡೆದುಕೊಳ್ಳುವ ರೀತಿ ಬದಲಾಗುತ್ತಲೆ ಹೋಗುತ್ತದೆ. ಇನ್ನು ಮಕ್ಕಳಾದ ಮೇಲೆ.... ಮಕ್ಕಳು ದೊಡ್ಡವರಾಗುತ್ತಿದ್ದಂತೆ... ಅವರಿಗೆ ವಯಸ್ಸಾಗುತ್ತಿದ್ದಂತೆ ..... ಅವರ ನಡತೆಯೂ ಬದಲಾಗುತ್ತ ಹೋಗುತ್ತದೆ.

ಪ್ರೀತಿ ಎಂದರೆ ಏನು ಎಂದು ಎಳೆ ಪ್ರೇಮಿಗಳನ್ನು.... ಮಧ್ಯ ವಯಸ್ಸಿನವರನ್ನು.... ಯುವಕರನ್ನು ಕೇಳಿದಾಗ ಅವರು ಬೇರೆ ಬೇರೆ ವ್ಯಾಖ್ಯಾನ ನೀಡುತ್ತಾರೆ. ಪ್ರೀತಿಯೆ ಬೇರೆ, ಸೆಕ್ಸ್ ಬೇರೆ. ಅದೇನೆ ಆಗಲಿ ಯೌವ್ವನವನ್ನು ಸವಿಯುವ ಸಮಯದಲ್ಲಿ ಸವಿದು ಬಿಡಬೇಕು ಎನ್ನುವುದು ಚಂದ್ರಕಲಾ ಮತ್ತು ಚಿರಂಜೀವಿಯ ಲೆಕ್ಕಚಾರ.

ಇನ್ನು ಹೆಣ್ಣು ಮಕ್ಕಳಿಗಂತು ವಯಸ್ಸು ಯಾಕಾದರು ಆಗುತ್ತದೆ? ಯಾವಾಗಲು ಯುವತಿಯರಾಗಿಯೆ ಇದ್ದುಬಿಡಬೇಕು ಎಂದು ಹಂಬಲಿಸುತ್ತಿರುತ್ತಾರೆ. ಅದನ್ನು ಹಣದಿಂದ ಕೊಂಡುಕೊಳ್ಳುವಂತಹ ಪರಿಸ್ಥಿತಿ ಪ್ರಪಂಚದಲ್ಲಿ ಉದ್ಭವಿಸಿದರೆ ಹೇಗಿರುತ್ತದೆ? ಹೋದ ಯವ್ವನ ಮತ್ತೆ ಮರಳಿ ಬರವುದಿಲ್ಲ. ಮನುಷ್ಯನಿಂದ ತಡೆಯಲಾರದ ಎಷ್ಟೋ ವಿಷಯಗಳಲ್ಲಿ ಸಮಯ ಮತ್ತು ಯೌವ್ವನವು ಸೇರಿವೆ.

ಈಗ ಅದನ್ನೆಲ್ಲ ಯೋಚಿಸಲು ಸಮಯವಿಲ್ಲ. ಚಿರಂಜೀವಿ ಮತ್ತು ಚಂದ್ರಕಲಾ ಈಗಾಗಲೆ ಎಲ್ಲೆಲ್ಲಿಗೆ ಹೋಗಬೇಕು, ಎಷ್ಟೆಷ್ಟು ದಿನಗಳು ಇರಬೇಕು...? ಲೆಕ್ಕಚಾರಗಳನ್ನು ಹಾಕಿ ಹಾಕಿ ದಿನ ರಾತ್ರಿ ಯೋಚಿಸಿದ್ದಾರೆ.

ಅಂತಿಮವಾಗಿ ಅವರು ಪ್ರವಾಸ ಮಾಡುವ ನೀಲಿ ನಕ್ಷೆಯನ್ನು ತಯಾರು ಮಾಡಿ ರೈಲು ಟಿಕೆಟ್‌ಗಳನ್ನು ಯಾವಾಗಲೊ ಕಾದಿರಿಸಿದ್ದಾರೆ. ದೇಶ ಸುತ್ತುವವರಿಗೆ ಹನಿಮೂನ್ ಹೋಗುವವರಿಗೆ ಸ್ವಿಡ್ಜರ್‌ಲ್ಯಾಂಡ್, ಹಾಂಗ್‌ಕಾಂಗ್, ಸಿಂಗಾಪೂರ್, ಜಪಾನ್, ಪ್ಯಾರೀಸ್ ಲಂಡನ್, ಅಮೇರಿಕಾ, ಅಂಟಾರ್ಟಿಕಾ, ಆರ್ಕಟಿಕ, ಹಿಮಾಲಯ ಹೀಗೆ ಪ್ರಪಂಚದಲ್ಲಿ ಅನೇಕ ಸ್ಥಳಗಳಿವೆ. ಎಲ್ಲರೂ ಎಲ್ಲಾ ಸ್ಥಳಗಳಿಗೂ ಹೋಗಿಬರಲು ಸಾಧ್ಯವಿಲ್ಲ. ಒಂದು ಹಣ ಇರಬೇಕು, ಎರಡು ಜೀವನವನ್ನು ಮತ್ತು ಪ್ರಪಂಚವನ್ನು ಪ್ರೀತಿಸುವ ಅಭಿಲಾಷೆ ಇರಬೇಕು. ಕೆಲವರಿಗೆ ಹಣವಿದ್ದರೆ ಅಭಿಲಾಷೆ ಇರುವುದಿಲ್ಲ, ಇನ್ನೂ ಕೆಲವರಿಗೆ ಅಭಿಲಾಷೆ ಇದ್ದರೆ ಹಣ ಇರುವುದಿಲ್ಲ.

ಚಿರಂಜೀವಿ ಮತ್ತು ಚಂದ್ರಕಲಾ ಕುಳಿತುಕೊಂಡು ತಾವು ನೋಡಬೇಕಾದ ಸ್ಥಳಗಳನ್ನು ಪರಿಶೀಲಿಸತೊಡಗಿದರು. ನಮ್ಮ ದೇಶದ ಪ್ರಖ್ಯಾತ ಸ್ಥಳಗಳಾದ ಸೈಲೆಂಟ್ ವ್ಯಾಲಿ, ಊಟಿ, ಕೊಡೈಕೆನಾಲ್ ಅಜಂತಾ ಎಲ್ಲೋರ, ಎಲಿಪೆಂಟಾ, ಗೋವಾ, ಆಗ್ರಾ, ಜಯಪುರ, ಉದಯಪುರ, ಮೌಂಟ್ ಅಬು, ಅರಾವಳಿ ಬೆಟ್ಟಗಳು, ಕುಲು ಮನಾಲಿ, ಹಿಮಾಲಯದ ಶ್ರೀನಗರ, ವ್ಯಾಲಿ ಆಫ್ ಫ್ಲವರ್ಸ್,

ಸಿಮ್ಲಾ, ಮಸೂರಿ, ನೈನಿತಾಲ್ ಗಂಗೋತ್ರಿ, ಕಾಜೀರಂಗ, ನೀಲಿ ಬೆಟ್ಟಗಳು, ಖಜರೋಹ ಇತ್ಯಾದಿ ಸ್ಥಳಗಳನ್ನು ಪರಿಶೀಲಿಸಿದ ಮೇಲೆ ಪ್ರಸ್ತುತ ಪ್ರವಾಸದ ಪಟ್ಟಿಯಲ್ಲಿ ಆಗ್ರಾ ಮೊದಲ ಸ್ಥಳವಾಗಿತ್ತು. ಅನಂತರ ಡೆಲ್ಲಿ, ಶ್ರೀನಗರ ಅಲ್ಲಿಂದ ಸಾಧ್ಯವಾದರೆ ಜಯಪುರ, ಉದಯಪುರ ನೋಡಿಕೊಂಡು, ಗೋವಾಗೆ ಬಂದು ಅಲ್ಲಿಂದ ಬೆಂಗಳೂರಿಗೆ ಹಿಂದಿರುಗಬೇಕು. ಇದು ಅವರ ಪ್ರವಾಸ ಪಟ್ಟಿ.

ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ ಎನ್ನುವುದು ಹಳೆ ಗಾದೆ. ಮದುವೆ ಎಲ್ಲೆ ನಡೆಯಲಿ ಮದುವೆಯಾದ ಮೇಲೆ ಸ್ವರ್ಗ ಅನ್ನುವುದು ಇದೆ ಎಂಬುದನ್ನು ಹೆಣ್ಣು-ಗಂಡು ಕಂಡಿಡಿಯಬೇಕು. ಅದು ಕಂಡುಕೊಳ್ಳಬೇಕಾದರೆ ಹೆಣ್ಣು-ಗಂಡಿಗೆ ಸರಿಯಾದ ವಯಸ್ಸಿನಲ್ಲಿ ಮದುವೆಯಾಗಬೇಕು. ಜೊತೆ ಜೊತೆಗೆ ಅವರು ಎಲ್ಲಾ ರೀತಿಯ ತಾಪತ್ರಯಗಳಿಂದ ಮುಕ್ತರಾಗಿರಬೇಕು. ಇಬ್ಬರು ಒಬ್ಬರನ್ನೊಬ್ಬರು ಪ್ರೀತಿಸುತ್ತಿರಬೇಕು. ಆಗ ಮಾತ್ರ ಅವರು ಸ್ವರ್ಗವನ್ನು ಕಂಡುಕೊಳ್ಳಬಹುದು. ಒಟ್ಟಿನಲ್ಲಿ ಚಿರಂಜೀವಿ ಮತ್ತು ಚಂದ್ರಕಲಾ ಮದುವೆಯಾದ ಮೇಲೆ ನಿಜವಾಗಿ ಇದೆ ಮೊದಲಿಗೆ ಹನಿಮೂನ್‌ಗೆ ಹೋಗುವ ಹಾಗೆ ಪರಿತಪಿಸುತ್ತಿದ್ದಾರೆ. ಇಬ್ಬರ ಮನಸ್ಸು ಒಂದೇ ರೀತಿಯಾಗಿ ಹಾಡುತ್ತಿದೆ. ಒಂದು ತಿಂಗಳು ಕಾಲ ಎಲ್ಲವನ್ನು ಮರೆತು ಚಂದ್ರಕಲಾಳ ಪ್ರೀತಿಗಾಗಿ, ಸಂತೋಷಕ್ಕಾಗಿ ಮೀಸಲಿಡಬೇಕೆಂದು ಚಿರಂಜೀವಿ ಯೋಚಿಸುತ್ತಿದ್ದಾನೆ.

ಎರಡು ದೊಡ್ಡ ವಿಐಪಿ ಸೂಟ್‌ಕೇಸುಗಳಲ್ಲಿ ಚಿರಂಜೀವಿ ಮತ್ತು ಚಂದ್ರಕಲಾ ಧರಿಸುವ ಬಟ್ಟೆಗಳನ್ನು, ಬೆಡ್‌ಶೀಟುಗಳನ್ನು ಮತ್ತು ಟವೆಲುಗಳನ್ನು ತುಂಬಿಕೊಂಡರು. ಇನ್ನೆರಡು ಸಣ್ಣ ಬ್ಯಾಗುಗಳಲ್ಲಿ ಚಂದ್ರಕಲಾಳ ಶೃಂಗಾರ ಸಾಮಾಗ್ರಿಗಳು, ಒಂದಿಷ್ಟು ಪುಸ್ತಕಗಳು ಇನ್ನಿತರ ಸಾಮಾನುಗಳು ತುಂಬಿಕೊಂಡವು. ಚಂದ್ರಕಲಾ ತಾಯಿ ಎರಡು, ಮೂರು ದಿನಗಳಿಗಾಗುವಷ್ಟು ತಿಂಡಿಗಳನ್ನು ಮಾಡಿಕೊಟ್ಟಳು. ಐದು ಲೀಟರಿನ ಕೂಲ್ ಕೇಜಿನಲ್ಲಿ ನೀರು ತುಂಬಿಕೊಂಡರು. ಪ್ರವಾಸ ಮಾಡುವಾಗ ಆದಷ್ಟು ಕಡಿಮೆ ಸಾಮಾನುಗಳು ಇರಬೇಕು ಎನ್ನುತ್ತಲೆ ಅವರು ಸಾಕಷ್ಟು ಸಾಮಾನುಗಳನ್ನು ತುಂಬಿಕೊಂಡಿದ್ದರು. ನಾವು ಹನಿಮೂನ್‌ಗೆ ಹೋಗುತ್ತಿದ್ದೆವೊ ಇಲ್ಲ ವರ್ಗವಾಗಿ ಯಾವುದೊ ಊರಿಗೆ ಸಾಮಾನುಗಳನ್ನೆಲ್ಲ ಹೊತ್ತುಕೊಂಡು ಹೋಗುತ್ತಿದ್ದೇವೊ ಎನ್ನುವುದಾಗಿ ಚಿರಂಜೀವಿ ಯೋಚಿಸುತ್ತಿದ್ದ. ಜೊತೆಗೆ ಒಂದು ಕ್ಯಾಮರಾ ಕೂಡ ತೆಗೆದುಕೊಂಡರು.

ಅಂತು ಅವರು ಪ್ರವಾಸ ಹೊರಡುವ ದಿನ ಬಂದೇ ಬಿಟ್ಟಿತು. ಸಾಯಂಕಾಲ ಹದಿನೆಂಟು ಇಪ್ಪತ್ತೈದು ಗಂಟೆಗೆ ಬೆಂಗಳೂರಿಂದ ಹೊರಡುವ ಕರ್ನಾಟಕ ಎಕ್ಸ್‌ಪ್ರೆಸ್‌ನ ಹವಾನಿಯಂತ್ರಣ ಬೋಗಿಯಲ್ಲಿ ಚಿರಂಜೀವಿ ಮತ್ತು ಚಂದ್ರಕಲಾ ಇಬ್ಬರೂ ಕುಳಿತಿದ್ದಾರೆ. ತಮ್ಮ ಸಾಮಾನುಗಳನ್ನು ಬರ್ತ್‌ಗಳ ಮೇಲೆ ಮತ್ತು ಕೆಳಗೆ ಇಟ್ಟು ಸರಿಯಾಗಿದೆ ತಾನೆ ಎಂದು ಮತ್ತೊಮ್ಮೆ ಪರಿಶೀಲಿಸಿಕೊಂಡರು. ರೈಲು ಹೊರಡಲು ಕೇವಲ ಐದು ನಿಮಿಷಗಳು ಮಾತ್ರ ಉಳಿದಿವೆ. ಚಂದ್ರಕಲಾ ತಾಯಿ ಮತ್ತು ತಂದೆ ನೆನ್ನೆಯಿಂದ ಹತ್ತಾರು ಸಲ ಹೇಳಿದ ಮಾತುಗಳನ್ನು ರೈಲು ಬೋಗಿ ಸೇರಿಕೊಳ್ಳುವ ಮುಂಚೆಯೂ ಮತ್ತೊಮ್ಮೆ ಹೇಳಿದ್ದಾರೆ. ಹಣವನ್ನು ಒಪನ್ ಡಿ.ಡಿ. ಗಳ ಮೂಲಕ ಮತ್ತು ಕ್ಯಾಷ್ ಮೂಲಕ ತೆಗೆದುಕೊಂಡಿದ್ದಾರೆ.

ಸರಿಯಾದ ಸಮಯಕ್ಕೆ ಸಿಗ್ನಲ್ ಪಡೆದುಕೊಂಡ ರೈಲು ನಿಧಾನವಾಗಿ ಚಲಿಸತೊಡಗಿತು. ಹೊರಗೆ ನಿಂತಿರುವ ಚಂದ್ರಕಲಾ ತಂದೆ, ತಾಯಿ ಮತ್ತು ತಂಗಿ ಆರತಿ ಕೈ ಬೀಸಿದರು. ಕಿಟಕಿ ಗಾಜುಗಳಿಂದ ಹೊರಗೆ ನೋಡುತ್ತಿದ್ದರೆ ಸೂರ್ಯ ತಣ್ಣಗಾಗಿ, ಮೋಡಗಳು ಮಳೆಯನ್ನು ಸುರಿಸಲು ಅಣಿ ಮಾಡಿಕೊಂಡಂತೆ ತೋರುತ್ತಿವೆ. ರೈಲು ವೇಗವನ್ನು ಹೆಚ್ಚಿಸಿಕೊಳ್ಳುತ್ತಿದ್ದಂತೆ ಚಂದ್ರಕಲಾ, ಚಿರಂಜೀವಿಯ ಕಣ್ಣುಗಳು ಆಳಕ್ಕೆ ಒಮ್ಮೆ ಇಣುಕಿ ನೋಡಿದರೆ, ಚಿರಂಜೀವಿ, ಚಂದ್ರಕಲಾಳ ಹೃದಯದೊಳಕ್ಕೆ ಇಣಿಕಿ ನೋಡಿದ. ಚಂದ್ರಕಲಾಳ ಹೃದಯ ಚಿಲ್ಲನೆ ತಂಪೇರಿದಂತಾಗಿ ಪ್ರೀತಿ...... ಪ್ರೀತಿ...... ಎಂದು ಚೀರಿಕೊಂಡಿತು.

ಈಗ ಎದುರು ಬದುರಿಗೆ ಅಕ್ಕಪಕ್ಕ ಕುಳಿತಿರುವವರು ಒಬ್ಬರನ್ನೊಬ್ಬರು ನೋಡಿಕೊಂಡರು. ರೈಲು ಎನ್ನುವುದು ಒಂದು ಮಿನಿ ಭಾರತವಿದ್ದಂತೆ. ಇದೆಲ್ಲವನ್ನು ವಿಜ್ಞಾನಿಗಳು ಮಾನವನಿಗೆ ನೀಡಿದ ಕೊಡುಗೆ. ಯಾವುದೊ ಮಣ್ಣಿನಲ್ಲಿ ಹುಟ್ಟಿದವರು, ಯಾವುದೊ ಭಾಷೆ ಮಾತನಾಡುವವರು..... ಯಾವುದೊ ಉಡುಗೆ ತೊಡುಗೆ ತೊಟ್ಟವರು... ಹಲವು ಆಚಾರ ವಿಚಾರಗಳ ಜನರು ಒಟ್ಟಾಗಿ ಕುಳಿತು ತಮ್ಮ ತಮ್ಮ ಡೆಸ್ಟಿನೇಷನ್‌ಗಳಿಗೆ ತಲುಪುವರು. ಒಟ್ಟಿನಲ್ಲಿ ಹಲವು ಆಚಾರ ವಿಚಾರಗಳ ಸಂಗಮ ರೈಲಿನಲ್ಲಿ ತುಂಬಿರುತ್ತದೆ.

ಪ್ರೇಮಿಗಳಿಗೆ ಪಾರ್ಕಿನಲ್ಲಿ ದೊರಕುವಂತಹ ಅವಕಾಶಗಳು ರೈಲಿನಲ್ಲಿ ದೊರಕುವುದಿಲ್ಲ. ರೈಲಿನಲ್ಲಿ ರಾತ್ರಿಯಾಗಿ ಒಳಗಿರುವ ದೀಪಗಳು ಆರಿಹೋಗಿ ಎಲ್ಲರೂ ಮಲಗಿದ ಮೇಲೆ ಪ್ರೇಮಿಗಳು ಏನಾದರು ಸಾಹಸಗಳನ್ನು ನಡೆಸಬಹುದು.

ಹೆಚ್ಚೆಂದರೆ ಎಲ್ಲರ ಎದುರಿಗೆ ಕೈ ಕೈ ಹಿಡಿದುಕೊಂಡು, ಇಲ್ಲ ಭುಜದ ಮೇಲೆ ಕೈ ಹಾಕಿಕೊಂಡು ಜಾಸ್ತಿಯೆಂದರೆ ಮಡಿಲಲ್ಲಿ ಮಲಗಿಕೊಳ್ಳಬಹುದು. ಅದು ಕೂಡ ಸ್ವಲ್ಪ ನಾಚಿಕೆ ಇಲ್ಲದವರು ಮಾತ್ರ ನಡೆಸುವ ಸಾಹಸವೊ ಏನೊ ಎನ್ನುವ ಸಂದೇಹ ಚಿರಂಜೀವಿಯ ಮನಸ್ಸಿನಲ್ಲಿ ಮೂಡುತ್ತಿದ್ದಂತೆ ಚಂದ್ರಕಲಾ ಸ್ವಲ್ಪ ಹತ್ತಿರಕ್ಕೆ ಜರುಗಿ ಅವನ ಒಳಗಿನ ಮನಸ್ಸನ್ನು ತಾನು ಅರಿತುಕೊಂಡಂತೆ ಅವನ ಕೈಯನ್ನು ತೆಗೆದುಕೊಂಡು ತನ್ನ ಎರಡು ಕೈಗಳ ಮಧ್ಯ ಸೇರಿಸಿಕೊಂಡು ಕಿಟಕಿಯಲ್ಲಿ ಹೊರಗಡೆಗೆ ನೋಡತೊಡಗಿದಳು.

ಅವರ ಇಬ್ಬರ ಮನಸ್ಸಿಗೆ ನೆಮ್ಮದಿ ತಂದಿದ್ದ ಇನ್ನೊಂದು ವಿಷಯ ಎಂದರೆ ಎದುರುಗಿರುವ ಎರಡು ಬರ್ತ್‌ಗಳಲ್ಲಿ ಮಧ್ಯ ವಯಸ್ಸಿನ ದಂಪತಿಗಳು ಕುಳಿತಿರುವುದು. ಪಕ್ಕದಲ್ಲಿರುವ ಎರಡು ಬರ್ತ್‌ಗಳಲ್ಲಿ ಒಂದು ಬರ್ತ್ ಖಾಲಿ ಇದ್ದು ಇನ್ನೊಂದರಲ್ಲಿ ಬಿಳಿ ಕುಂಬಳಕಾಯಿ ಆಕಾರದ ವಯಸ್ಸಾದ ಮಾರ್ವಾಡಿಯೊಬ್ಬ ಕುಳಿತಿದ್ದಾನೆ. ಬೋಗಿಯ ಒಳಗೆ ಹವಾನಿಯಂತ್ರಣ ಶಬ್ಧದ ಜೊತೆಗೆ ರೈಲು ಓಡುತ್ತಿರುವ ಶಬ್ಧ ಕೇಳಿ ಬರುತ್ತಿದೆ. ಜೊತೆಗೆ ಬೋಗಿಯಲ್ಲಿ ಹೇರಳ ಮಾತುಗಳು ಕೇಳಿ ಬರುತ್ತಿವೆ. ಜನರು ಇನ್ನೂ ತಮ್ಮ ತಮ್ಮ ಸಾಮಾನುಗಳನ್ನು ತೆಗೆದು ಮೇಲೆ ಇಟ್ಟುಕೊಳ್ಳುತ್ತಿದ್ದಾರೆ. ಬೆಡ್‌ಶೀಟ್‌ಗಳನ್ನು ಹಾಸಿಕೊಳ್ಳುವವರು, ಚಪ್ಪಲಿಗಳನ್ನು ತೆಗೆದು ಕಾಲಿಗೆ ಹಾಕಿಕೊಳ್ಳುವವರು, ಬಟ್ಟೆಗಳನ್ನು ಬದಲಾಯಿಸಿಕೊಳ್ಳುವವರು ಹೀಗೆ ಎಲ್ಲರೂ ವಿಶ್ರಮಿಸಿಕೊಳ್ಳುವಂತೆ ತೋರುತ್ತಿದ್ದಾರೆ. ಅಷ್ಟರಲ್ಲಿ ಒಂದು ಕಡೆಯಿಂದ ಟಿಟಿ ಬಂದು ಟಿಕೆಟ್‌ಗಳನ್ನು ಚೆಕ್ ಮಾಡುತ್ತಿದ್ದಾನೆ. ಬೋಗಿಯಲ್ಲಿದ್ದ ರೈಲು ಸಿಬ್ಬಂದಿ ಎಲ್ಲರಿಗೂ ಒಂದೊಂದು ಬಿಳಿ ತಲೆದಿಂಬನ್ನು ಬ್ಲಾಂಕೆಟನ್ನು ಬೇಕಾದವರಿಗೆಲ್ಲ ಕೇಳಿ ಕೇಳಿ ಕೊಡುತ್ತಿದ್ದಾರೆ.

ಎದುರಿಗೆ ಕುಳಿತಿದ್ದ ಮಧ್ಯವಯಸ್ಸಿನ ವ್ಯಕ್ತಿ ತನ್ನ ಪತ್ನಿಯ ಜೊತೆಗೆ ಹಿಂದಿಯಲ್ಲಿ ಮಾತನಾಡುತ್ತ ಆಗಾಗ ಚಿರಂಜೀವಿ ಮತ್ತು ಚಂದ್ರಕಲಾಳ ಕಡೆಗೆ ನೋಡುತ್ತಿದ್ದಾನೆ. ಆತನ ಪತ್ನಿ ಜೋರಾಗಿ ಮಾತನಾಡಿದರೆ ಲಿಪ್‌ಸ್ಟಿಕ್ ಎಲ್ಲಿ ಹಾಳಾಗುತ್ತದೊ ಎಂದು ಕಿಟಕಿ ಕಡೆಗೆ ನೋಡುತ್ತಾ ಒಂದೊಂದೆ ಪದವನ್ನು ಮಾತನಾಡುತ್ತಿದ್ದಾಳೆ. ಗೋಧಿ ಬಣ್ಣದ ಆಕೆ ತುಟಿಗಳ ಮೇಲೆ ತೆಳು ನಗುವನ್ನು ಲೇಪಿಸಿಕೊಂಡು ಆಗಾಗ ಗಂಡನ ಕಡೆಗೆ ನೋಡುತ್ತಿದ್ದಾಳೆ.

ಚಂದ್ರಕಲಾ ಸಾಧಾರಣಾ ದಿನಗಳಿಗಿಂತ ಇಂದು ಹೆಚ್ಚು ಸೊಗಸಾಗಿ ಕಾಣುತ್ತಿದ್ದಾಳೆ. ಬಿಳಿಬಣ್ಣ, ಕೋಲು ಮುಖ, ಸಂಪಿಗೆ ಮೂಗು, ಮೂಗಿನಲ್ಲಿ

ಹೊಳೆಯುತ್ತಿರುವ ಒಂದು ಕಲ್ಲಿನ ಮೂಗುನತ್ತು, ತಿದ್ದಿದಂತಹ ಕಣ್ಣುಬ್ಬುಗಳ ಕೆಳಗೆ ಹೊಳೆಯುವ ಕಣ್ಣುಗಳು, ಹಣೆಯಲ್ಲಿ ಸಣ್ಣ ಬೊಟ್ಟು, ನುಣುಪಾದ ಕೆನ್ನೆಗಳು, ಗಲ್ಲ. ಕಪ್ಪು ಕೂದಲನ್ನು ಎಳೆದು ಕಟ್ಟಿರುವ ಉದ್ದನೆ ಜಡೆ. ಅರೆ ತೋಳಿನ ಬ್ಲೌಸು, ಅವಳ ದೇಹದ ಬಣ್ಣಕ್ಕೆ ಒಪ್ಪುವಂತಹ ಸೀರೆ. ಟೋಟಲ್ ಆಗಿ ಇಂದು ಸೊಗಸಾಗಿ ಕಾಣುತ್ತಿದ್ದಾಳೆ. ಹೆಣ್ಣುಗಳು ಬೇರೆ ಬೇರೆ ಬಣ್ಣದ ಉಡುಪುಗಳನ್ನು ಧರಿಸಿದಾಗ ಬೇರೆ ಬೇರೆಯಾಗಿ ಕಾಣಿಸುತ್ತಾರಲ್ಲ? ಎಂಬುದಾಗಿ ಚಿರಂಜೀವಿ ಯೋಚಿಸುತ್ತಿದ್ದಾನೆ. ಚಿರಂಜೀವಿಯ ಕಣ್ಣುಗಳನ್ನು ನೋಡಿದ ಚಂದ್ರಕಲಾ ಚಿರಂಜೀವಿ ಸ್ವಲ್ಪ ಮಟ್ಟಿಗೆ ಏನು ಯೋಚಿಸುತ್ತಿದ್ದಾನೆ ಎನ್ನುವುದನ್ನು ಅರಿತುಕೊಂಡು ಸಣ್ಣದಾಗಿ ನಕ್ಕಳು.

ಯಾರೆ ಆಗಲಿ ಉಲ್ಲಾಸದಿಂದ ನಕ್ಕಾಗ ಮುಖದ ಸ್ನಾಯುಗಳು ತಮಗೆ ತಾವೆ ಸಡಿಲಗೊಂಡು ಮುಖದ ಅಂದವನ್ನು ಹೆಚ್ಚಿಸಿಬಿಡುತ್ತವೆ. ಒಬ್ಬ ಮನುಷ್ಯ ಕೋಪಗೊಂಡಾಗ ಐವತ್ತೆರಡು ಸ್ನಾಯುಗಳು ಗಂಟಿಕ್ಕಿಕೊಳ್ಳುತ್ತವೆ. ಅದೆ ಒಬ್ಬರು ಮುಖದ ಮೇಲೆ ನಗುವನ್ನು ತಂದುಕೊಂಡಾಗ ಕೇವಲ ಹದಿನೇಳು ಸ್ನಾಯುಗಳು ಸಡಿಲಗೊಳ್ಳುತ್ತವೆ. ಒಂದು ಕ್ಷಣದ ನಗು, ಒಂದು ಹಂಬಲವಾದ ಮಾತು ಮನುಷ್ಯರ ನಡುವೆ ಅಗಾಧವಾದ ಪ್ರೀತಿ ಪ್ರೇಮವನ್ನು ಕಲಿಸಿಬಿಡುತ್ತದೆ. ಅದೆ ಕೋಪ ಅದರ ವಿರುದ್ಧವಾದ ಕತ್ತಿ.

ರೈಲು ಬೆಂಗಳೂರನ್ನು ಬಿಟ್ಟು ಹಸುರು ಗಿಡ ಮರಗಳನ್ನು ಸೀಳಿಕೊಂಡು ಸಾಗುತ್ತಿದೆ. ಎದುರುಗಿದ್ದ ಮಧ್ಯ ವಯಸ್ಸಿನ ವ್ಯಕ್ತಿ -

"ಡೆಲ್ಲಿ ಹೋಗ್ತಾ ಇದ್ದೀರಾ...?" ಚಿರಂಜೀವಿಯನ್ನು ಕೇಳಿದ. "ಹೌದು! ಮೊದಲು ಆಗ್ರಾ ನೋಡಿ ಆಮೇಲೆ ಡೆಲ್ಲಿಗೋಗ್ತೀವಿ" ಚಿರಂಜೀವಿ ಉತ್ತರಿಸಿದ.

ಕಿಟಕಿಯಲ್ಲಿ ನೋಡುತ್ತಿದ್ದ ಚಂದ್ರಕಲಾ ಈ ಕಡೆಗೆ ತಿರುಗಿಕೊಂಡಿದ್ದೆ ಎದುರಿಗಿದ್ದ ಮಹಿಳೆ ಮುಗುಳು ನಕ್ಕಳು. ಚಂದ್ರಕಲಾ ಕೂಡ ಮುಖದ ಮೇಲೆ ನಗು ತಂದುಕೊಂಡಳು.

"ನಯಾ ಶಾದಿ ಹೈ ಕ್ಯಾ......?" ಆಕೆಯ ಪ್ರಶ್ನೆ. "ಇಲ್ಲ, ಒನ್ ಇಯರ್ ಓಲ್ಡ್" ಎಂದಳು ಚಂದ್ರಕಲಾ.

"ನನಗೆ ಕನ್ನಡ ಬರುತ್ತೆ. ನನ್ನ ಪತ್ನಿಗೆ ಇನ್ನೂ ಸರಿಯಾಗಿ ಕನ್ನಡ ಬರೊದಿಲ್ಲ" ಆತ ಹೇಳಿದ. "ನನಗೂ ಬರುತ್ತೆ" ಆಕೆ ಗಂಡನ ಕಡೆಗೆ ನೋಡಿ ಹೇಳಿದಳು. ಚಂದ್ರಕಲಾ ಇಬ್ಬರನ್ನೂ ನೋಡಿ ನಕ್ಕಳು.

"ಉತ್ತರದ ಕಡೆ ಪ್ರವಾಸಾನ....? ಸರ್ವೀಸ್ ಮಾಡ್ತಾ ಇದ್ದೀರಾ...?"

"ಹೌದು! ಪ್ರವಾಸ, ನಾನು ಇಲ್ಲೆ ಬೆಂಗ್ಳೂರಿನಲ್ಲಿ ಸರ್ವೀಸ್‌ನಲ್ಲಿದ್ದೀನಿ" ಚಿರಂಜೀವಿ ಉತ್ತರಿಸುತ್ತಿದ್ದಂತೆ -"ಯಾವ ಡಿಪಾರ್ಟ್‌ಮೆಂಟ್....?" "ಪೊಲೀಸ್"

"ಓ ನೈಸ್.... ನಿಮ್ಮ ಪ್ರೊಫೆಷನ್....?" "ಡಿವೈಎಸ್ಪಿ" ಉತ್ತರಿಸಿದ.

"ಹೆಸರು......?" "ಚಿರಂಜೀವಿ ಅಂತ." "ನಿಮ್ಮ ಹೆಸರು ತುಂಬಾ ಕೇಳಿದ್ದೀನಿ."

"ಓ ನೈಸ್. ನಿಮ್ಮ ಪರಿಚಯ ಆಗಿದ್ದಕ್ಕೆ ತುಂಬಾ ಖುಷಿಯಾಯಿತು."

"ಥ್ಯಾಂಕ್‌ಯು" ಚಿರಂಜೀವಿ ಹೇಳಿದ. "ನೀವು......?" "ನಾನು ಒಬ್ಬ ಸೀನಿಯರ್ ಜಿಯಾಲಜಿಸ್ಟ್ ಘನಶ್ಯಾಮ್‌ಸಿಂಗ್ ಅಂತ. ಇಲ್ಲಿ ಬೆಂಗ್ಳೂರಿನಲ್ಲಿ ಜಿಎಸ್‌ಐ ನಲ್ಲಿದ್ದೀನಿ. ಮೂಲವಾಗಿ ನಾನು, ಲಖನೌದವನು. ಈಕೆ ನನ್ನ ಶ್ರೀಮತಿ, ಲಕ್ಷ್ಮಿ" ಎನ್ನುತ್ತಿದ್ದಂತೆ ಆತನ ಪತ್ನಿ "ನಮಸ್ತೆ" ಎಂದು ಕೈ ಮುಗಿದಳು. ಈಗ ಚಿರಂಜೀವಿ ಮತ್ತು ಚಂದ್ರಕಲಾ ಇಬ್ಬರೂ ಕೈ ಮುಗಿದರು.

"ಲಖನೌ ತುಂಬಾ ಒಳ್ಳೇ ನಗರ ಅಂತಾರೆ. ನಿಮಗೆ ಹಿಂದಿ, ಉರ್ದು ಚನ್ನಾಗಿ ಬರಬಹುದು? ಎನ್ನುತ್ತಿದ್ದಂತೆ ಚಿರಂಜೀವಿ "ಪರವಾಗಿಲ್ಲ ಬರುತ್ತೆ. ಲಖನೌದಲ್ಲಿ ಉರ್ದೂನೆ ಹಿಂದಿ, ಹಿಂದೀನೆ ಉರ್ದು, ಎರಡೂ ಒಂದಾಗೋಗಿದೆ" ಎಂದ ಸಿಂಗ್.

"ಒಂದೆರಡು ಶಾಹಿರಿ ಘಜಲ್ ಹೇಳ್ತೀರಾ....? ಚಿರಂಜೀವಿ ಉತ್ಸಾಹದಿಂದ ಕೇಳಿದ. ಘಜಲ್ ಕೇಳಿದ್ದೀನಿ. ಆದರೆ ನನಗೆ ಹೇಳೋದು ಬರೋದಿಲ್ಲವಲ್ಲ" ಪಶ್ಚಾತ್ತಾಪದಿಂದ ಸಿಂಗ್ ಹೇಳಿದರು.

"ನೀವು ಜಿಎಸ್‌ಐನಲ್ಲಿ ಏನು ಮಾಡ್ತೀರಾ?" ಚಿರಂಜೀವಿ ಪ್ರಶ್ನೆಗೆ "ಹ್ಞು, ಅದನ್ನು ಬೇಕಾದರೆ ಹೇಳ್ತೀನಿ. ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ನೂರಾಐವತ್ತು ವರ್ಷಗಳ ಹಳೆಯ ವಿಭಾಗ. ಚಿನ್ನ ಬೆಳ್ಳಿ ವಜ್ರ ವೈಢೂರ್ಯ ಕಲ್ಲಿದ್ದಲು ಕಬ್ಬಿಣ ಪೆಟ್ರೋಲು ಭೂಮಿಯಲ್ಲಿರುವ ಎಲ್ಲಾ ಖನಿಜಗಳನ್ನು ಕಂಡಿಡಿಯುವುದು.... ಭೂವೈಜ್ಞಾನಿಕ ನಕ್ಷೆಯನ್ನು ತಯಾರು ಮಾಡುವುದು.. ವೈಮಾನಿಕ ಸರ್ವೆ ನಡೆಸುವುದು.... ಭೂಮಿಯ ಚರಿತ್ರೆಯ ಜೊತೆಗೆ ಸಂಬಂಧಪಟ್ಟ ಸಸ್ಯ ಪ್ರಾಣಿಗಳನ್ನು, ಅವುಗಳ ಪಳೆಯುಳಿಕೆಗಳನ್ನು ಸಂಶೋಧಿಸುವುದು... ಅಂತರ್ಜಲ, ಸಮುದ್ರ ವಿಜ್ಞಾನ ಉಲ್ಕಾಪಾತ, ನಕ್ಷತ್ರಮಂಡಲ ವಿಶ್ವದ ಪರಿಭ್ರಮಣ ಹೀಗೆ ಎಲ್ಲದರ ಬಗ್ಗೆಯೂ ಸಂಶೋಧನೆಗಳನ್ನು ನಡೆಸುತ್ತೇವೆ....! ಹೀಗೆ ಭೂವಿಜ್ಞಾನದ ಬಗ್ಗೆ ಒಂದು ಬೃಹತ್ ಭಾಷಣವನ್ನು ಘನಶ್ಯಾಮ್‌ಸಿಂಗ್ ಹೇಳಿ ಮುಗಿಸಿದರು. ಅನಂತರ ಎಲ್ಲರೂ ಮಾತನಾಡಿ.... ಮಾತನಾಡಿ ಸ್ವಲ್ಪ ಸುಮ್ಮನೆ ಕುಳಿತುಕೊಂಡರು.

ಹನಿಮೂನ್‌ಗೆ ಹೋಗುವವರು ರೈಲಿನಲ್ಲಿ ಹೋಗಬಾರದು ಎನ್ನುವುದಾಗಿ ಚಿರಂಜೀವಿ ಮತ್ತು ಚಂದ್ರಕಲಾ ಮನಸ್ಸು ಹೇಳುತ್ತಿತ್ತು. ಹನಿಮೂನ್‌ಗೆ ಹೋಗುವವರು ಎಲ್ಲಿಗೆ ಹೋದರು ಇಬ್ಬರೆ ಇರಬೇಕು. ಆದರೆ ಇಲ್ಲಿ ಹಾಗುವುದಿಲ್ಲವಲ್ಲ. ಇಬ್ಬರು ಆಗಾಗ ಕಣ್ಣುಗಳ ಮುಖಾಂತರ ಹೃದಯದ ಆಳಕ್ಕೆ ನೋಡಿಕೊಳ್ಳುತ್ತಿದ್ದಾರೆ. ಅನಂತರ ಏನಾದರು ಮಾತನಾಡಿಕೊಳ್ಳಬೇಕೆನಿಸಿ ಮುಖಗಳನ್ನು ಹತ್ತಿರಕ್ಕೆ ತಂದುಕೊಂಡರು.

"ಚಿರು ನಿನ್ನ ಹೈಟೆಸ್ಟು....? ಸರಿಯಾಗಿ ಹೇಳಬೇಕು. ಒಂದು ಮಿಲಿಮೀಟರ್ ಮಾತ್ರ ಫ್ಲಸ್ ಮೈನಸ್ ಇರಬಹುದು. ಅದಕ್ಕಿನ್ನ ಜಾಸ್ತಿ ಕಡಿಮೆ ಆಗ್‌ಬಾರದು?. ಚಂದ್ರಕಲಾ ಹೇಳುತ್ತಿದ್ದಂತೆ ತಲೆ ಕೂದಲನ್ನು ಸೇರಿಸಿಕೊಳ್ಳಬೇಕೋ... ಬಿಡಬೇಕೋ... ಚಿರಂಜೀವಿ ಪ್ರಶ್ನೆ. "ತಲೆ ಕೂದಲು ಮೇಲೆ ಒಂದು ಪುಸ್ತಕ ಇಟ್ಟುಕೊಂಡು ತಾನೆ ಅಳತೆ ಮಾಡೋದು" ಚಂದ್ರಕಲಾ ಪ್ರಶ್ನೆ.

"ಹೌದು! ಓಕೆ. ಒನ್ ಹಂಡ್ರೆಡ್ ಸವೆಂಟಿಫೈವ್ ಸೆಂಟಿಮೀಟರ್. ಅಂದರೆ 5.95 ಅಡಿಗಳು." "ನಿನ್ನ ಎತ್ತರ ಎಷ್ಟು?" ಚಿರಂಜೀವಿ ಕೇಳಿದ.

"ಒನ್ ಹಂಡ್ರೆಡ್ ಸಿಕ್ಸಟಿ ಫೈವ್ ಸೆಂಟಿ ಮೀಟರ್" ಎಂದಳು ಚಂದ್ರಕಲಾ.

"ನಿನ್ನ ಮೆಸರ್ ಮೆಂಟ್ಸ್ ಹೇಳ್ತೀನಿ ಕೇಳು...?" ಚಿರಂಜೀವಿ ಹೇಳಿದ್ದೆ ಚಂದ್ರಕಲಾ ಕಣ್ಣುಗಳನ್ನು ಸಣ್ಣಗೆ ಮಾಡಿಕೊಂಡು ಅವನನ್ನೇ ನೋಡಿದಳು.

"ನಿನ್ನ ಟೋಟಲ್ ತೂಕ 110 ಪೌಂಡ್ಸ್. ದೇಹದ ಅಳತೆ 35 24 35, ಮೂಗಿನ ಉದ್ದ ಒಂದು ಮುಕ್ಕಾಲು ಅಂಗುಲ, ಬಾಯಿಯ ಉದ್ದ ಎರಡು ಮುಕ್ಕಾಲು ಅಂಗುಲ, ಮುಗುಳು ನಕ್ಕಾಗ ಇನ್ನರ್ಧ ಸೆ.ಮಿ. ಜೋರಾಗಿ ನಕ್ಕಾಗ 2.5 ಅಂಗುಲ, ಕಣ್ಣು ರೆಪ್ಪೆಗಳ ನಡುವಿನ ಗೆರೆ 2.55 ಸೆ.ಮಿ. ಕಣ್ಣುಬ್ಬುಗಳು 3 ಸೆ.ಮೀ. ಉದ್ದ..." ಹೀಗೆ ಹೇಳುತ್ತಾ ಹೋಗುತ್ತಿದ್ದಂತೆ ಇಬ್ಬರು ಹೆಣ್ಣು ಮಕ್ಕಳು ನಗು ನಗುತ್ತಾ ಓಡಿ ಬಂದು ಅವರ ಪಕ್ಕದಲ್ಲಿ ಕುಳಿತುಕೊಂಡರು.

ಓಡಿ ಬಂದ ಮಕ್ಕಳು ಒಬ್ಬರನ್ನೊಬ್ಬರು ಹೊಡೆದುಕೊಳ್ಳುತ್ತಾ.... ತಳ್ಳಾಡುತ್ತಾ ಪ್ರಪಂಚವನ್ನೇ ಮರೆತಂತೆ ನಗಾಡುತ್ತಿದ್ದು ಎಲ್ಲರೂ ಅವರ ಕಡೆಯೇ ನೋಡತೊಡಗಿದರು. ಅವರ ಹಿಂದೆಯೇ ಬಂದ, ಬಹುಶ ಅವರ ತಂದೆ,

"ಜಾದಾ ಗಲಾಟ ನೈಕರನಾ, ಆಂಕಲ್ ಲೋಗ್ ಮಾರೇಗಾ" ಎಂದು ಎಚ್ಚರಿಸಿದರು. ಎದುರಿಗಿದ್ದ ಸಿಂಗ್ ಅವರು,

"ನೀವು ಹೋಗಿ ನಮಗೆ ಇಂತಹವರ ಅಗತ್ಯ ಈಗ ತುಂಬಾ ಜರೂರಿಯಾಗಿದೆ. ಸ್ವಲ್ಪ ಹೊತ್ತು ಮಾತಾಡಿಸ್ತೀವಿ" ಎಂದರು. ಬಂದವರು ನಗುತ್ತಾ ಹಿಂದಕ್ಕೆ ಹೊರಟುಹೋದರು. ಇಬ್ಬರು ಎರಡು ಬೊಂಬೆಗಳಂತೆ ಕಾಣುವ ಅವಳಿ ಜವಳಿ ಹೆಣ್ಣು ಮಕ್ಕಳು. ನಿಷ್ಕಳಂಕವಾದ ಅವರ ನಗು, ಎಲ್ಲರನ್ನು ಒಮ್ಮೆಲೆ ತಮ್ಮೊಂದಿಗೆ ಎಲ್ಲಿಗೆ ಕೊಂಡೊಯ್ದಂತೆ ಕಾಣಿಸುತ್ತಿತ್ತು. ಅವರು ಮಾತನಾಡುತ್ತಿರುವ ತೊದಲು ನುಡಿಗಳಲ್ಲಿ ಸುತ್ತಲಿದ್ದವರಿಗೆ ಎರಡು ಮಾತುಗಳು ಅರ್ಥವಾಗುತ್ತಿದ್ದರೆ ಇನ್ನೆರಡು ಮಾತುಗಳು ಅರ್ಥವಾಗುತ್ತಿರಲಿಲ್ಲ. ಚಂದ್ರಕಲಾ ಇಬ್ಬರನ್ನು ಕೈ ಹಿಡಿದು ಕೂರಿಸಿ-

"ವಾಟ್ ಈಸ್ ಯುವರ್ ನೇಮ್.....?" ಎಂದಳು. ನಗುತ್ತಾ ಇಬ್ಬರು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ "ಶೀ ಈಸ್ ಸ್ವೀಟಿ..... ಶೀ ಈಸ್ ಮೀಟಿ" ಎಂದರು. "ದೊನೋ ಮೀಟಾ ಹೈ" ಎಂದರೆ ಸಿಂಗ್ "ದೊ ನೊ ಸ್ವೀಟ್ ಹೈ ಎಂದರು ಶ್ರೀಮತಿ ಸಿಂಗ್. ಅಷ್ಟರಲ್ಲಿ ಅವರಿಬ್ಬರು, ಅಲ್ಲಿಂದ ತಳ್ಳಾಡುತ್ತಾ ಎದ್ದುಬಿದ್ದು ನಗುತ್ತಾ ಕರೆಯುತ್ತಿದ್ದರು ನಿಲ್ಲದೆ ಹೊರಟು ಹೋದರು. "ಎಷ್ಟು ಚೆನ್ನಾಗಿದ್ದಾರೆ ಮಕ್ಕಳು...?" ಚಂದ್ರಕಲಾ ಆಶ್ಚರ್ಯವಾಗಿ ಹೇಳಿದಳು. ಇದಕ್ಕೆ ಮುಂಚೆ ಅದೆ ಪುಟಾಣಿಗಳು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಒಬ್ಬೊಬ್ಬರಾಗಿ ಓಡಾಡಿದ್ದನ್ನು ಚಂದ್ರಕಲಾ ಮತ್ತು ಚಿರಂಜೀವಿ ಇಬ್ಬರೂ ಗಮನಿಸಿದ್ದರು. ಅವರಿಬ್ಬರು ಬೇರೆ ಬೇರೆ ಎಂದುಕೊಂಡಿರಲಿಲ್ಲ. ಇಬ್ಬರು ಅವಳಿ ಜವಳಿ ಎನ್ನುವುದು ಈಗ ಗೊತ್ತಾಯಿತು. ಆ ಮಕ್ಕಳು ಹೋದ ಮೇಲೆ ಚಂದ್ರಕಲಾ ಏನೋ ಗಂಭೀರವಾಗಿ ಯೋಚಿಸುತ್ತಿರುವಂತೆ ತೋರಿದಳು.

ಚಿರಂಜೀವಿ ಅವಳಿ ಜವಳಿ ಸೃಷ್ಟಿಯ ಬಗ್ಗೆ ಯೋಚಿಸತೊಡಗಿದ. ಕೆಲವು ತಿಂಗಳುಗಳ ಹಿಂದೆ ಅಮೆರಿಕಾದಲ್ಲಿ ಒಂದೇ ತಾಯಿಯ ಗರ್ಭದಲ್ಲಿ ಅವಳಿ ಜವಳಿ ಮಕ್ಕಳು ಹುಟ್ಟಿದ್ದು ಅವುಗಳಲ್ಲಿ ಒಂದು ನೀಗ್ರೋ ಮಗು, ಒಂದು ಬಿಳಿ ಮಗುವಾಗಿದ್ದು ಪತ್ರಿಕೆಗಳಲ್ಲೆಲ್ಲ ಪ್ರಕಟವಾಗಿತ್ತು. ಒಂದು ಮಗು ಹುಟ್ಟುವುದಕ್ಕೆ ಕೇವಲ ಒಂದು ವಿರ್‍ಯಾಣ ಮಾತ್ರ ಬೇಕಾಗುತ್ತದೆ. ಆದರೆ ಇಬ್ಬರು ಪುರುಷರ ಎರಡು ವೀರ್‍ಯಾಣಗಳು ಗರ್ಭಕೋಶ ತಲುಪಿರುವುದೆ ಇದಕ್ಕೆ ಕಾರಣವಾಗಿತ್ತು. ಪ್ರಕೃತಿ ಎಷ್ಟೊಂದು ನಿಗೂಢ ಎನಿಸಿತು. ಚಂದ್ರಕಲಾ ತನಗೆ ಅವಳಿ ಜವಳಿ ಮಕ್ಕಳು ಹುಟ್ಟಿದರೆ ಹೇಗೆ....? ಎನ್ನುವ ಯೋಚನೆಯಲ್ಲಿ ಮುಳುಗಿ ಹೋದಳು.

ಈ ನಡುವೆ ಶ್ರೀಮತಿ ಸಿಂಗ್ ಮತ್ತು ಚಂದ್ರಕಲಾ ಕನ್ನಡ ಹಿಂದಿ ಇಂಗ್ಲೀಷ್ ಮಿಶ್ರಿತ ಭಾಷೆಗಳಲ್ಲಿ ಸಾಕಷ್ಟು ಮಾತನಾಡಿದ್ದರು. ರಾತ್ರಿಯ ಊಟಕ್ಕೆ ಆರ್ಡರ್

ತೆಗೆದುಕೊಂಡಿದ್ದ ಸಪ್ಲೇಯರ್ಸ್ ರಾತ್ರಿ ಸುಮಾರು ಎಂಟುಕಾಲು ಗಂಟೆಗಲ್ಲು ಆರ್ಡರ್ ಮಾಡಿದವರಿಗೆಲ್ಲ ಊಟ ಸರಬರಾಜು ಮಾಡಿದ್ದು ಹೆಚ್ಚು ಕಡಿಮೆ ಎಲ್ಲರೂ ಆಗಲೆ ತಿಂದು ಮುಗಿಸಿದರು. ಚಂದ್ರಕಲಾ ಮತ್ತು ಚಿರಂಜೀವಿ ಕೂಡ ಮನೆಯಿಂದ ತಂದಿದ್ದ ತಿಂಡಿಗಳನ್ನು ತಿಂದು ಮುಗಿಸಿ ಒಂದೇ ಬ್ಲಾಂಕೆಟ್ ಒಳಗೆ ಕುಳಿತುಕೊಂಡು ಮಾತನಾಡಿಕೊಳ್ಳುತ್ತಿದ್ದಾರೆ.

"ಈ ರೈಲಿನವರು ಸರಿಯಲ್ಲ" ಚಿರಂಜೀವಿ ಹೇಳಿದ್ದ ಚಂದ್ರಕಲಾ "ಯಾಕೆ?" ಎಂದಳು. "ಹೊಸದಾಗಿ ಮದುವೆಯಾದವರಿಗೆ, ಪತಿ ಪತ್ನಿಯರಿಗೆ ಜೋಡಿ ಬರ್ತಿರಬೇಕು" ಎಂದ. "ಯಾಕೆ ರೈಲಿನಲ್ಲಿ ಯಾರೂ ನಿದ್ದೆ ಮಾಡಬಾರದಂತಾನ...?" ಚಂದ್ರಕಲಾ ಹೇಳಿದಳು. "ಹೌದು! ನೀನು ಹೇಳೋದು ಸರೀನೆ. ನಮ್ಮ ಜನಕ್ಕೆ ಈಗ್ಲೇನೆ ಡಿಸಿಪ್ಲೈನ್ ಇಲ್ಲ" ಎಂದ. ಎದುರಿಗಿದ್ದ ಸಿಂಗ್ ದಂಪತಿಗಳು ಆಗಲೆ ಮಲಗಿದ್ದರು ಇನ್ನೂ ನಿದ್ದೆಗೆ ಜಾರಿಕೊಂಡಿರಲಿಲ್ಲ. ಚಂದ್ರಕಲಾ ಮತ್ತು ಚಿರಂಜೀವಿ ಇನ್ನೂ ಪಿಸು ಮಾತುಗಳಲ್ಲಿ ತೊಡಗಿಕೊಂಡಿದ್ದಾರೆ. ಮಧ್ಯ ಮಧ್ಯ ಜನರು ಓಡಾಡುತ್ತ ಬಾತ್‌ರೂಂ ಕಡೆಗೆ ಹೋಗಿ ಬರುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಹದ್ದು ಮೀರಿ ನಡೆದುಕೊಳ್ಳುವುದು ಹೇಗೆ?

ರಾತ್ರಿ ಹತ್ತುಗಂಟೆ ಆಯಿತು. ಹನ್ನೊಂದು ಗಂಟೆ ಆಯಿತು. ಚಂದ್ರಕಲಾ, ಚಿರಂಜೀವಿ ಇಬ್ಬರು ಕಿಟಕಿಯಲ್ಲಿ ಹೊರಕ್ಕೆ ನೋಡುತ್ತಾ ಕುಳಿತುಕೊಂಡಿದ್ದಾರೆ. ಆಗಾಗ ನಿಧಾನವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಇಬ್ಬರ ದೇಹಗಳು ಯಾವುದೊ ಸಮ್ಮೋಹನಕ್ಕೆ ಸಿಲುಕಿಕೊಂಡಿವೆ. ಇಬ್ಬರ ಹೃದಯಗಳು ಒಂದೇ ಸಮನೆ ಹೊಡೆದುಕೊಳ್ಳುತ್ತಿವೆ. ಪ್ರೀತಿಯ ವಿಷಯದಲ್ಲಿ ಎಲ್ಲರದು ಒಂದೇ ಸ್ಥಿತಿ, ಬಡವರು, ಹಣವಂತರು, ಬುದ್ಧಿವಂತರು, ಅಧಿಕಾರಿಗಳು ಎಲ್ಲರದು ಅದೇ ಸ್ಥಿತಿ. ಚಳಿಗೂ ಮನುಷ್ಯರ ದೇಹಕ್ಕೂ ಹಿತವಾದ ನಂಟು.

ಚಂದ್ರಕಲಾ ಚಿರಂಜೀವಿಯನ್ನು ತಬ್ಬಿಕೊಂಡಳು. ಕಾಮಕ್ಕೆ ಸಿಲುಕಿ ಕೊಂಡವರು ಸಮಯ ಬಂದಾಗ ಎಲ್ಲಾ ಹದ್ದುಗಳನ್ನು ಮೀರಿಬಿಡುತ್ತಾರೆ. ಇಬ್ಬರೂ ಒಂದು ದೀರ್ಘವಾದ ಚುಂಬನ ಕೊಟ್ಟುಕೊಂಡರು. "The kiss is reverberating electrifying sparks voluptuous sensation" ಎನ್ನುವಂತಿತ್ತು. ಮಧ್ಯ ರಾತ್ರಿಯವರೆಗೆ ತಬ್ಬಿ ಕುಳಿತಿದ್ದ ಎರಡು ದೇಹಗಳು ವಿಧಿಯಿಲ್ಲದೆ ಎರಡು ಬರ್ತ್‌ಗಳ ಮೇಲೆ ಬೇರೆ ಬೇರೆಯಾದವು.

ರೈಲು ಒಂದೇ ಸಮನೆ ಓಡುತ್ತಿದೆ. ಕೆಳಗಿನ ಬರ್ತ್‌ನಲ್ಲಿ ನಿದ್ದೆ ಮಾಡುತ್ತಿದ್ದ ಚಿರಂಜೀವಿ ಬಟ್ಟೆ ಸರಿಸಿ ಕಿಟಕಿಯಲ್ಲಿ ನೋಡುತ್ತಾನೆ. ಪೂರ್ವದಲ್ಲಿ ಚುಮು ಚುಮು ಬೆಳಕು ಮೂಡುತ್ತಿದೆ. ಚಿರಂಜೀವಿ ಹಾಗೆ ಕಿಟಕಿಯಲ್ಲಿ ಹಾದುಹೋಗುವ ದೃಶ್ಯಗಳನ್ನು ನೋಡುತ್ತಾ ಕುಳಿತುಕೊಂಡ. ಕಪ್ಪು ನೆಲ, ಕನ್ನಡದಲ್ಲಿ ಬರೆದಿದ್ದ ಹೆಸರುಗಳು ಹಾದುಹೋದವು. ಇನ್ನು ಕರ್ನಾಟಕದಲ್ಲೆ ಇದ್ದೀವಿ ಎಂದುಕೊಂಡ. ಭೂಮಿಯ ಮೇಲೆ ಸಸ್ಯಪ್ರಾಣಿಗಳು ಬೆಳಕಿನಿಂದ ವಂಚನೆಗೊಂಡಿದ್ದರೆ ಈ ಲೋಕ ಹೀಗಿರುತ್ತಿರಲಿಲ್ಲ ಎನ್ನುವ ಯೋಚನೆ ಬಂದಿತು. ಈಗ ಇನ್ನಷ್ಟು ಬೆಳಕಾಗಿ ಒಬ್ಬೊಬ್ಬರೆ ಎದ್ದು ಕುಳಿತು ಆಕಳಿಸುತ್ತಿದ್ದಾರೆ. ಇನ್ನೂ ಕೆಲವರು ಗೊರಕೆ ಹೊಡೆಯುತ್ತಲೆ ಇದ್ದರು. ಚಂದ್ರಕಲಾ ಯಾವುದೊ ಕನಸಿನಿಂದ ಎಚ್ಚೆತ್ತುಕೊಂಡು ಕೆಳಗಿದ್ದ ಚಿರಂಜೀವಿಯ ಕಡೆಗೆ ನೋಡಿದ್ದೆ ಚಿರಂಜೀವಿ ನಗುತ್ತಾ "ಗುಡ್ ಮಾರ್ನಿಂಗ್" ಎಂದ. ಚಂದ್ರಕಲಾ "ಗುಡ್ ಮಾರ್ನಿಂಗ್" ಎಂದು ನಿಧಾನವಾಗಿ ಇಳಿದುಬಂದು ಪಕ್ಕದಲ್ಲಿ ಕುಳಿತುಕೊಂಡಳು.

ರೈಲು ದೊಡ್ಡ ದೊಡ್ಡ ನಿಲ್ದಾಣಗಳು ಬಂದಾಗ ನಿಲ್ಲುತ್ತಿತ್ತು. ಹತ್ತುವವರು ಮತ್ತು ಇಳಿಯುವವರ ನಡುವೆ ಒಂದೆರಡು ನಿಮಿಷಗಳು ಕಳೆದು ಗದ್ದಲದೊಂದಿಗೆ ರೈಲು ಮತ್ತೆ ಹೊರಟುಬಿಡುತ್ತಿತ್ತು. ಚಹ ಕಾಫಿ ತಿಂಡಿ ಊಟ ಮಾತು ವಿಶ್ರಾಂತಿ ನಿದ್ದೆ ಹೀಗೆ ಬೆಂಗಳೂರು ಬಿಟ್ಟ ಮೇಲೆ ಸುಮಾರು ನಲವತ್ತು ಗಂಟೆಗಳ ನಂತರ ಅಂದರೆ ಎರಡನೇ ದಿನ ಬೆಳಗ್ಗೆ ಏಳುಗಂಟೆಗೆ ಆಗ್ರಾ ನಿಲ್ದಾಣದಲ್ಲಿ ರೈಲು ನಿಂತಿತ್ತು. ಚಿರಂಜೀವಿ ಮತ್ತು ಚಂದ್ರಕಲಾ ಸಹಪ್ರಯಾಣಿಕರಿಗೆ ವಂದನೆಗಳನ್ನು ಸಲ್ಲಿಸಿ ಇಳಿದುಕೊಂಡರು. ಲಖನೌಗೆ ಹೋಗಬೇಕಿದ್ದ ಸಿಂಗ್ ಕುಟುಂಬ ಮಧ್ಯರಾತ್ರಿ ಜಾನ್ಸಿಯಲ್ಲೆ ಇಳಿದುಕೊಂಡಿತ್ತು.

ರೈಲು ಇಳಿದಿದ್ದೆ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರ ಹಿಂಡು ಅವರನ್ನು ಸುತ್ತುವರಿಯಿತು. ಯಾವುದಾದರೂ ಪೊಲೀಸ್ ವಿಶ್ರಾಂತಿ ಗೃಹದಲ್ಲಿ ಉಳಿದುಕೊಳ್ಳಬೇಕೋ ಹೋಟೆಲ್‌ನಲ್ಲಿ ಇಳಿದುಕೊಳ್ಳಬೇಕೋ ಎನ್ನುವ ಜಿಜ್ಞಾಸೆಯಲ್ಲಿ ಬಿದ್ದಿದ್ದ ಚಿರಂಜೀವಿ ಅಂತಿಮವಾಗಿ ತನ್ನ ತರಬೇತಿಯ ಸಹೋದ್ಯೋಗಿ ಸುರೇಶ್ ಮಿಟ್ಟಲ್‌ಗೆ ರೈಲು ನಿಲ್ದಾಣದಿಂದ ಫೋನ್ ಮಾಡಿ ಫ್ಯಾಮಿಲಿ ಸಮೇತ ಬಂದಿರುವುದಾಗಿ ತಿಳಿಸಿದ.

"ಒಂದೆರಡು ದಿನ ಮೊದಲೆ ಫೋನ್ ಮಾಡಬಾರದಿತ್ತೆ...? ಒಳ್ಳೆ ಅರೇಂಜ್‌ಮೆಂಟ್ಸ್ ಮಾಡ್ತಾ ಇದ್ದೆ. ನೀನು ನಿಲ್ದಾಣದ ಹೊರಗಡೆ ಇರು. ಹದಿನೈದು

ನಿಮಿಷಗಳಲ್ಲಿ ಪೊಲೀಸ್ ಕಾರು ಬರುತ್ತೆ. ಮಿಕ್ಕಿದ್ದೆಲ್ಲ ನೇರವಾಗಿ ಮಾತನಾಡೋಣ" ಎಂದೇಳಿದ ಮಿಟ್ಟಲ್ ಫೋನ್ ಇಟ್ಟುಬಿಟ್ಟರು. ದಂಪತಿಗಳಿಬ್ಬರು ನಿಲ್ದಾಣದ ಹೊರೆಯಾಳುಗಳಿಂದ ಲಗೇಜು ಹೊರೆಸಿಕೊಂಡು ನಿಲ್ದಾಣದ ಹೊರಗೆ ನಿಂತುಕೊಂಡರು. ಹೇಳಿದಂತೆ ಸರಿಯಾಗಿ ಹದಿನೈದು ನಿಮಿಷಗಳಲ್ಲಿ ಕಾರು ಬಂದಿತ್ತು. ಚಿರಂಜೀವಿ ಮತ್ತು ಚಂದ್ರಕಲಾ ಕಾರಿನ ಹತ್ತಿರಕ್ಕೆ ಬರುತ್ತಿದ್ದಂತೆ ಚಾಲಕ ಇಳಿದು ಬಂದು ಸೆಲ್ಯೂಟ್ ಹೊಡೆದು, ಬಾಗಿಲು ತೆಗೆದು ನಿಂತುಕೊಂಡ. ಚಂತ್ರಕಲಾ ಕಾರಿನ ಒಳಗೆ ಕುಳಿತುಕೊಂಡಳು. ಕೂಲಿ ಆಳುಗಳು ಲಗೇಜನ್ನು ಡಿಕ್ಕಿಯಲ್ಲಿ ಹಾಕಿದ ಮೇಲೆ ಚಿರಂಜೀವಿ ಕಾರಿನ ಒಳಗೆ ಕುಳಿತುಕೊಂಡ. ಲಗೇಜನ್ನು ಡಿಕ್ಕಿಯಲ್ಲಿ ಹಾಕಿಸಿದ ಚಾಲಕ ಕಾರನ್ನು ಹದಿನೈದು ನಿಮಿಷಗಳಲ್ಲಿ ಸುರೇಶ್ ಮಿಟ್ಟಲ್ ಮನೆ ಮುಂದೆ ನಿಲ್ಲಿಸಿದ.

ಸುರೇಶ್ ಹೊರಗೆ ಬಂದು ಚಿರಂಜೀವಿಯನ್ನು ತಬ್ಬಿಕೊಂಡು ಅನಂತರ "ನಮಸ್ತೆ ಬಾಬಿಜೀ" ಎಂದು ಕೈ ಮುಗಿದ. ಚಂದ್ರಕಲಾ ಬಾಬಿಜೀ ಎಂದಿದ್ದಕ್ಕೆ ನಾಚಿಕೊಳ್ಳುತ್ತಾ ಕೈ ಮುಗಿದಳು.

"ಬನ್ನಿ ಒಳಗಡೆ ಬನ್ನಿ.... ನಾನು ರೈಲು ನಿಲ್ದಾಣಕ್ಕೆ ಬರಲಿಲ್ಲ ಸಾರಿ" ಎಂದ.

"ಪರವಾಗಿಲ್ಲ" ಚಿರಂಜೀವಿ ಹೇಳಿದ.

"ನೋಡಿ, ನೀವು ಎಷ್ಟು ದಿನ ಬೇಕೋ ಅಷ್ಟು ದಿನ ಇರಿ. ನಮ್ಮ ಮನೆಯಲ್ಲೆ ಸ್ಪೆಷಲ್ ಗೆಸ್ಟ್ ರೂಮಿದೆ. ನಿಮಗೆ ಏನು ಬೇಕೋ ಎಲ್ಲಾ ಸೌಕರ್ಯನೂ ಇದೆ. ಎರಡೊತ್ತು ಮನೆಯಲ್ಲಿ ಊಟ ಮಾಡಿ... ಎರಡೊತ್ತು ಒಳ್ಳೆ ಹೋಟಲಿಗೋಗೋಣ. ಕಾರು ಕಳಿಸ್ತೀನಿ. ಆಗ್ರಾ ಎಲ್ಲಾ ಆರಾಮಾಗಿ ನೋಡಿಕೊಂಡು ಬನ್ನಿ" ಹೀಗೆ ಮಿಟ್ಟಲ್ ಒಂದೇ ಸಮನೆ ಹೇಳುತ್ತಿದ್ದಂತೆ -

"ನಿಮಗೆ ಯಾಕ್ ತೊಂದರೆ ....?" ಚಿರಂಜೀವಿ ಹೇಳಿದ್ದೆ -

"ನಮಗೆ ತೊಂದರೇನ.... ಅಂದರೆ ನಾವು ಸೌತ್ ಇಂಡಿಯಾಗೆ ಬರಬಾರ್ದು ಅಂತಾನ...?"

ಮಿಟ್ಟಲ್ ಹೇಳುವಷ್ಟರಲ್ಲಿ ಚಿರಂಜೀವಿ "ಇಲ್ಲ ... ಇಲ್ಲ" ಎಂದ. ಅಷ್ಟರಲ್ಲಿ ಶ್ರೀಮತಿ ಮಿಟ್ಟಲ್ ದೂರದಿಂದಲೇ ಕೈ ಜೋಡಿಸುತ್ತ ಹತ್ತಿರಕ್ಕೆ ಬಂದು "ನಮಸ್ತೆ" ಎಂದಳು. ಚಿರಂಜೀವಿ ಎದ್ದು ನಿಂತು ಕೈ ಜೋಡಿಸಿದ. "ಈಕೆ ನನ್ನ ಶ್ರೀಮತಿ ತುಳಸಿ... ತರಬೇತಿಯಲ್ಲಿ ಎಲ್ಲಿಗೂ ಬಂದಿರಲಿಲ್ಲ" ಮಿಟ್ಟಲ್ ಪರಿಚಯಿಸಿದ. ಚಂದ್ರಕಲಾ ಕೂಡ ಕೈ ಜೋಡಿಸಿದಳು. ಈಗ ಎಲ್ಲರೂ ಎದುರುಬದುರಿಗೆ ಕುಳಿತುಕೊಂಡರು.

"ರಾಮ್‌ಸಿಂಗ್ ಮೊದಲು ಚಹ ಬಿಸ್ಕಟ್ ಕೊಡು. ಅನಂತರ ಒಳ್ಳೆ ನಾಷ್ಟ ಮಾಡು" ಎಂದರು ಮಿಟ್ಟಲ್. "ಜೀ ಸಾಬ್" ಎಂದಿದ್ದೆ ರಾಮ್‌ಸಿಂಗ್ ಅಡಿಗೆ ಮನೆಗೆ ಓಡಿಹೋದ. ಕುಶಲೋಪರಿ ನಡೆಯುತ್ತಿದ್ದಂತೆ ನೀರಿನ ಜೊತೆಗೆ ಚಹ ಮತ್ತು ಬಿಸ್ಕಟ್‌ಗಳನ್ನು ರಾಮ್‌ಸಿಂಗ್ ತಂದಿಟ್ಟ. ಚಹ ಕುಡಿದು ಒಂದೆರಡು ಬಿಸ್ಕಟ್ ತಿಂದನಂತರ ಮಿಟ್ಟಲ್ ಇಬ್ಬರನ್ನು ಕರೆದುಕೊಂಡೋಗಿ ಗೆಸ್ಟ್‌ರೂಮ್ ತೋರಿಸಿಬಂದರು. ಅವರ ಲಗೇಜ್ ಆಗಲೆ ಆ ಕೋಣೆ ಸೇರಿಕೊಂಡಿತ್ತು.

"ಮೊದಲು ನೀವು ಸ್ನಾನ ಮಾಡಿ ಬನ್ನಿ. ನಾಷ್ಟಾ ಮಾಡಿಕೊಂಡು ಪ್ರೋಗ್ರಾಂ ಮಾಡೋಣ" ಎಂದು ಮಿಟ್ಟಲ್ ಅಲ್ಲಿಂದ ಹೊರಟು ಹೋದ. ಅನಂತರ ಎಲ್ಲರೂ ತಿಂಡಿ ತಿಂದ ಮೇಲೆ ಚಿರಂಜೀವಿ ಮತ್ತು ಚಂದ್ರಕಲಾ ಮಿಟ್ಟಲ್ ವ್ಯವಸ್ಥೆ ಮಾಡಿದ ಒಂದು ಖಾಸಗಿ ಕಾರಿನಲ್ಲಿ ಆಗ್ರಾ ಸುತ್ತಿ ನೋಡಲು ಹೊರಟರು. ಚಿರಂಜೀವಿ ಅಲ್ಲಿನ ಪೊಲೀಸ್ ಕಾರನ್ನು ಉಪಯೋಗಿಸಲು ನಿರಾಕರಿಸಿದ್ದ. ಆದರೆ ಜತೆಯಲ್ಲಿ ಒಬ್ಬ ಪೊಲೀಸ್ ಪೇದೆ ಮಫ್ತಿಯಲ್ಲಿ ಹೊರಟ.

ಆಗ್ರಾ ಎಂದರೆ ತಾಜ್‌ಮಹಲ್ ... ತಾಜ್‌ಮಹಲ್ ಎಂದರೆ ಶಹಜಹಾನ್ ಮತ್ತು ಮುಮ್ತಾಜ್‌ರ ಪ್ರೀತಿಯ ಸಂಕೇತ. ಮೊದಲು ಫತ್ತೆಪುರ ಸಿಕ್ರಿಯನ್ನು ನೋಡಿ ಅನಂತರ ಯಮುನಾ ದಡದಲ್ಲಿರುವ ಆಗ್ರಾ ಕೋಟೆಯನ್ನು ನೋಡಿದ ಚಿರಂಜೀವಿ ಮತ್ತು ಚಂದ್ರಕಲಾ ಮೂಕಸ್ಮಿತರಾಗಿಬಿಟ್ಟರು. ಕೆಂಪು ಜಲಜ ಶಿಲೆಗಳಲ್ಲಿ ನಿರ್ಮಿತವಾಗಿರುವ ಆ ಮಹಲುಗಳು ಕಟ್ಟಿದ ದಿನಗಳಲ್ಲಿ ಇನ್ನಷ್ಟು ಸೊಗಸಾಗಿ ಕಾಣಿಸಿಕೊಂಡಿರಬೇಕು? ಎಷ್ಟುವರ್ಷಗಳು ಕಟ್ಟಿರಕಬೇಕು? ಎಷ್ಟು ಜನರು ಸೇರಿ ಕಟ್ಟಿರಬೇಕು....?

- ಭೂಮಿಯ ಮೇಲೆ ಇಂತಹ ಅದ್ಭುತ ಕೋಟೆ, ಅರಮನೆಗಳನ್ನು ಕಟ್ಟಿಸಿದವರು. ... ರಾಜ್ಯಗಳನ್ನು ಆಳಿದವರು ಇಂದು ಯಾರೂ ಉಳಿದಿಲ್ಲ. ಆದರೆ ಅವರ ಗತವೈಭವಚರಿತ್ರೆಯನ್ನು ನೆನಪಿಸುವ ಸ್ಮಾರಕಗಳು ಮಾತ್ರ ನಿಂತಿವೆ. ಮಧ್ಯಾಹ್ನ ಒಂದು ಹೋಟೆಲಿನಲ್ಲಿ ಊಟ ಮಾಡಿ ಸಾಯಂಕಾಲದವರೆಗೂ ಗೆಸ್ಟ್‌ರೂಮಿನಲ್ಲಿ ವಿಶ್ರಾಂತಿ ಪಡೆದುಕೊಂಡ ಚಿರಂಜೀವಿ ಮತ್ತು ಚಂದ್ರಕಲಾ ಬೆಳದಿಂಗಳಲ್ಲಿ ತಾಜ್‌ಮಹಲನ್ನು ನೋಡಲು ಸಾಯಂಕಾಲವೆ ಹೊರಟರು.

ತಾಜ್‌ಮಹಲ್‌ನ ಕಾಂಪೌಂಡ್ ದ್ವಾರದಿಂದ ಮುಂದಕ್ಕೆ ನೋಡಿದರೆ ಸ್ವಲ್ಪ ದೂರದಲ್ಲಿ ಅದೆ ತರಹ ಕಾಣುವ ಇನ್ನೊಂದು ದ್ವಾರ. ಆ ದ್ವಾರದಿಂದ ಸ್ವಲ್ಪ

ದೂರ ನಡೆದರೆ ಮುಂದೆ ದೂರದಲ್ಲಿ ತಾಜ್‌ಮಹಲ್ ಮಸುಮಸುಕಾಗಿ ಕಾಣಿಸಿಕೊಂಡಿತು. ಆ ಬಾಗಿಲು ದಾಟಿದ್ದೆ ವಿಶಾಲ ನೀಲಾಕಾಶದ ಕೆಳಗೆ ತಾಜ್‌ಮಹಲ್ ಕಾಣಿಸಿಕೊಂಡಿತು. ಅಮೃತಶಿಲೆಗಳ ಆ ಮಹಲಿನ ನಿಜವಾದ ಬಣ್ಣ ಯಾವುದು? ಎನ್ನುವುದು ತಕ್ಷಣ ಇಬ್ಬರಿಗೂ ಗೊತ್ತಾಗಲಿಲ್ಲ. ಇಬ್ಬರು ಕೈ ಹಿಡಿದು ಕೊಂಡು ಅದರ ಎದುರಿಗೆ ಅಯಸ್ಕಾಂತಕ್ಕೆ ಸಿಕ್ಕಿಕೊಂಡ ಕಬ್ಬಿಣ ಚೂರುಗಳಂತೆ ನಡೆದುಹೋಗುತ್ತಿದ್ದಾರೆ. ಹುಣ್ಣಿಮೆ ಬೆಳಕಿನಲ್ಲಿ ಕರಗಿಹೋಗುವಂತಹ ಬಣ್ಣ.

ಇಬ್ಬರು ಸ್ವಲ್ಪ ದೂರದಲ್ಲಿ ನಿಂತುಕೊಂಡು ಸುಮಾರು ಹೊತ್ತು ಕಣ್ಣು ತುಂಬಿಕೊಂಡರು. ಅನಂತರ ಹತ್ತಿರ ಹೋಗಿ ಸುತ್ತಲು ನೋಡಿ ಒಳಗೆ ಮುಮ್ತಾಜ್‌ಳ ಸಮಾಧಿಯನ್ನು ನೋಡಿದರು. ಹಿಂದೆ ಗಂಗೆಯನ್ನು ಸೇರುವ ತವಕದಿಂದ ಯಮುನಾ ನದಿ ತಾಜ್‌ಮಹಲ್‌ನ ಪೌಳಿಯನ್ನು ಮುತ್ತಿಕ್ಕಿ ಸದ್ದಿಲ್ಲದೆ ಹರಿಯುತ್ತಿದೆ. ಹತ್ತಿರ ನಿಂತು ಮಹಲಿನ ನೆತ್ತಿಯನ್ನು ನೋಡಿದರೆ ಆಕಾಶದಲ್ಲಿ ತಾಜ್‌ಮಹಲ್ ತನ್ನ ಗುಮ್ಮಟಗಳೆಂಬ ಪರಿವಾರದ ಜೊತೆಗೆ ಎಲ್ಲಿಗೋ ಆಕಾಶದಲ್ಲಿ ತೇಲಿಹೋದಂತೆ ಕಾಣಿಸುತ್ತಿದೆ. ಸುತ್ತಲು ಸಣ್ಣ ಸಣ್ಣ ಗುಮ್ಮಟಗಳು; ಮಧ್ಯ ಒಂದು ದೊಡ್ಡ ಗುಮ್ಮಟ. ಚಿರಂಜೀವಿ ಮತ್ತು ಚಂದ್ರಕಲಾ ಹತ್ತಾರು ಸಲ ಒಬ್ಬರನ್ನೊಬ್ಬರು ನೋಡಿಕೊಂಡು ಮಾತುಗಳು ಬರದೆ ಬೆರಗಾಗಿದ್ದಾರೆ.

ಈಗ ಗಂಡ-ಹೆಂಡತಿಯರ ಜೋಡಿಗಳು, ಪರಿವಾರಗಳು ಗುಂಪು ಗುಂಪಾಗಿ ತಾಜ್ ಮಹಲಿನ ಎದುರಿಗೆ ಸುಮಾರು ನೂರು ಇನ್ನೂರು ಮೀಟರುಗಳು ದೂರದಲ್ಲಿ ಹುಲ್ಲಿನ ಮೇಲೆ ಕುಳಿತುಕೊಂಡು ಎಲ್ಲರೂ ತಾಜ್‌ಮಹಲ್ ಕಡೆಗೆ ನೋಡುತ್ತಿದ್ದಾರೆ. ಸೂರ್ಯ ಪಶ್ಚಿಮದಲ್ಲಿ ಮುಳುಗಿಹೋಗಿ ಪೂರ್ವದಲ್ಲಿ ಚಂದ್ರನು ಏರಿಬರಲಿದ್ದಾನೆ. ಜೊತೆಗೆ ಪೂರ್ವದಲ್ಲಿ ಚಂದ್ರನಿಗಿಂತ ಮುಂಚೆ ರಂಗು ರಂಗಿನ ಬಣ್ಣಗಳು ಓಕುಳಿಯಾಡಲು ತವಕಗೊಳ್ಳುತ್ತಿವೆ. ಚಂದ್ರಕಲಾ ಮತ್ತು ಚಿರಂಜೀವಿ ಹುಲ್ಲಿನ ಮೇಲೆ ಕುಳಿತುಕೊಂಡು ನೋಡುತ್ತಿದ್ದಾರೆ. ವಿರಳಾವಾಗಿ ಓಡಾಡುತ್ತಿರುವ ಮೋಡಗಳ ಕೆಳಗೆ ತಾಜ್‌ಮಹಲ್ ರೆಕ್ಕೆಗಳನ್ನು ಕಟ್ಟಿಕೊಂಡು ಓಡುತ್ತಿರುವ ದೇವಲೋಕದ ಅಪ್ಸರೆಯಂತೆ ತೋರುತ್ತಿದೆ.

ನೋಡುವ ಜನರಿಗಿಂತ ತಾಜ್‌ಮಹಲ್ ಹೆಚ್ಚು ಕಾತುರದಿಂದ ಬೆಳದಿಂಗಳ ಚಂದ್ರನಿಗಾಗಿ ಪೂರ್ವದ ಕಡೆಗೆ ನೋಡುತ್ತಾ ಚಡಪಡಿಸುವಂತಿದೆ. ಈಗ ತಾಜ್‌ಮಹಲ್ ಸುತ್ತಲಿದ್ದ ವಿದ್ಯುತ್ ದೀಪಗಳು ಆರಿಹೋದವು. ಆಕಾಶ, ಆಕಾಶದ

ಕೆಳಗೆ ತಾಜ್‌ಮಹಲ್ ಮಾತ್ರ ಕಾಣುತ್ತಿದೆ. ಎದುರಿಗೆ ಜನರು ಚಂದ್ರನ ಆಗಮನಕ್ಕೆ ಕಾಯುತ್ತಿದ್ದಾರೆ. ಪೂರ್ವದಲ್ಲಿ ಬೆಳಕಿನ ಕಿರಣಗಳು ಒಡೆದುಕೊಳ್ಳುತ್ತಿದ್ದಂತೆ ತಾಜ್‌ಮಹಲ್ ಮೇಲೆ ಬೆಳಕಿನ ಕಿರಣಗಳು ಹರಿದಾಡತೊಡಗಿದವು. ಅಮೃತಶಿಲೆಗಳ ಮೇಲೆ ಬೀಳುತ್ತಿದ್ದ ಬೆಳಕಿನ ಕಿರಣಗಳನ್ನು ಹೀರಿಕೊಂಡು ತಾಜ್‌ಮಹಲ್ ಬಣ್ಣ ಬಣ್ಣದ ಚಿತ್ತಾರಗಳನ್ನು ಸೃಷ್ಟಿಸತೊಡಗಿತು. ಸುತ್ತಲು ಕುಳಿತದ್ದವರೆಲ್ಲ ತಮಗೆ ಅರಿವಿಲ್ಲದೆಯೆ "ವಾವ್... ಬ್ಯೂಟಿಫುಲ್... ಸೂಪರ್..." ಎಂದು ಉದ್ಗಾರ ತೆಗೆಯುತ್ತಿದ್ದರು. ಚಂದ್ರಕಲಾ ಮತ್ತು ಚಿರಂಜೀವಿ ಇಬ್ಬರು ಒಬ್ಬರ ಕಣ್ಣಲ್ಲಿ ಒಬ್ಬರು ನೋಡಿಕೊಂಡರು.

ತಾಜ್‌ಮಹಲ್ ಜೀವ ತುಂಬಿಕೊಂಡು ವಿಧ ವಿಧ ಬಣ್ಣಗಳಲ್ಲಿ ಯಮುನೆಯ ತಟದಲ್ಲಿ ಗೆಜ್ಜೆ ಕಟ್ಟಿಕೊಂಡು ನಾಟ್ಯವಾಡತೊಡಗಿತು. ನೋಡು ನೋಡುತ್ತಿದ್ದಂತೆ ಹುಣ್ಣಿಮೆಯ ಬೆಳದಿಂಗಳು ಮತ್ತು ತಾಜ್‌ಮಹಲ್ ಆಕಾಶದಲ್ಲಿ ಒಂದಾಗಿ ಕರಗಿ ಹೋಯಿತು. ಹಾಗೆ ನೋಡುವವರ ಕಣ್ಣುಗಳಲ್ಲೂ ತಾಜ್‌ಮಹಲ್ ನಿಶ್ಚಲವಾಗಿ ಉಳಿದುಹೋಗಿತ್ತು.

* * *

ರಾತ್ರಿ ಮಿಟ್ಟಲ್ ಮನೆಯಲ್ಲಿ ಉತ್ತರಭಾರತ ಶೈಲಿಯ ಊಟ ಮಾಡಿದ ಚಿರಂಜೀವಿ ಮತ್ತು ಚಂದ್ರಕಲಾ ಗೆಸ್ಟ್‌ರೂಂ ಸೇರಿಕೊಂಡರು. ಬೆಳಗ್ಗೆಯಿಂದ ಓಡಾಡಿ ಓಡಾಡಿ ಕಾಲುಗಳು ನೋವಾಗುತ್ತಿದೆ ಎಂದು ಚಂದ್ರಕಲಾ ಫ್ಯಾನಿನ ಕೆಳಗೆ ಮೈಚೆಲ್ಲಿದಳು. ಚಿರಂಜೀವಿ ಆಗ್ರಾ ಫತ್ತೆಪುರಸಿಕ್ರಿಯ ಬಗ್ಗೆ ಕೊಂಡು ತಂದಿದ್ದ ಪುಸ್ತಕಗಳನ್ನು ಹಾಸಿಗೆ ಮೇಲೆ ಮಲಗಿಕೊಂಡು ಓದತೊಡಗಿದ.

ಈಗಿನ ಆಗ್ರಾ ಒಂದು ಕಾಲದಲ್ಲಿ "ಬ್ರಿಜ್ ಭೂಮಿ"ಯಾಗಿತ್ತು. ಪುರಾಣಗಳ ಪ್ರಕಾರ ಈ ನಗರಕ್ಕೆ ಹದಿನಾರು ಬಾಗಿಲುಗಳಿದ್ದವು. ಮೂರು ಸಾವಿರ ವರ್ಷಗಳ ಹಿಂದೆ ಅಗ್‌ಸೇನ್ ಎಂಬ ರಾಜ ಈ ನಗರಕ್ಕೆ ಬುನಾದಿ ಹಾಕಿದ್ದ. ಅವನ ನೆನಪಿನ ಹೆಸರೆ ಆಗ್ರ. ಹತ್ತಾರು ರಾಜರು ರಾಜ್ಯವಾಳಿದ ಮೇಲೆ ಅಂತಿಮವಾಗಿ ಆಗ್ರ ಮೊಘಲರ ವಶವಾಯಿತು.

ಮೊಘಲರ ರಾಜ ಜಹಂಗೀರ್ ಆಸ್ಥಾನದಲ್ಲಿ ಪರ್ಷಿಯಾ ಮೂಲದ ಆಸಿಫ್‌ಖಾನ್ ಎಂಬ ಮಂತ್ರಿಯಿದ್ದ. ಈ ಮಂತ್ರಿಯ ಮಗಳೆ ಅಜುಮಂದ್ ಬಾನು ಬೇಗಂ ಅಥವಾ ಮುಮ್ತಾಜ್. ಅವಳದು ಅಪ್ರತಿಮ ಸೌಂದರ್ಯ. ಅವಳ ಚೆಲುವಿಗೆ

ಜಹಂಗೀರ ಮಗನಾದ ಷಹಜಹಾನ್ ಮಾರುಹೋದ. ಮುಮ್ತಾಜ್, ಷಹಜನಾನನ ಎರಡನೆ ಪತ್ನಿ. ಕಿ. ಶ. 1631 ರಲ್ಲಿ ಶಹಜಹಾನ್ ದಕ್ಷಿಣದಲ್ಲಿದ್ದ. ಖಾನ್‌ಜಹಾನ್ ಲೋದಿಯ ಆಕ್ರಮಣವನ್ನು ತಡೆಗಟ್ಟಲು ದಕ್ಷಿಣಕ್ಕೆ ಹೊರಟ. ಜತೆಯಲ್ಲಿ ಮುಮ್ತಾಜ್‌ಳನ್ನು ಕರೆದುಕೊಂಡು ಹೊರಟ. ದಕ್ಷಿಣದ ಬರಾಮ್‌ಪುರದಲ್ಲಿ ಆಕೆ ಎರಡನೆ ಮಗುವಿಗೆ ಜನ್ಮ ನೀಡುವ ಸಮಯದಲ್ಲಿ ಗರ್ಭಕೋಷದಲ್ಲಿನ ತೊಂದರೆಯಲ್ಲಿ ಸಿಕ್ಕಿಕೊಂಡಳು. ಇದನ್ನು ನೋಡಿದ ಶಹಜಹಾನ್ ದುಃಖದಲ್ಲಿ ಮುಳುಗಿಹೋದ.

ಮುಮ್ತಾಜ್, ಶಹಜಹಾನ್ ಕೈಗಳನ್ನು ಹಿಡಿದುಕೊಂಡು ಗಳಗಳನೆ ಅತ್ತಳು. "ನಿನ್ನನ್ನು ನಾನು ಗಾಢವಾಗಿ ಪ್ರೀತಿಸುತ್ತೇನೆಂದು ಈ ಪ್ರಪಂಚಕ್ಕೆ ಹೇಗೆ ತೋರಿಸಲು" ಎಂದು ಶಹಜಹಾನ್ ರೋಧಿಸಿದ. ಮುಮ್ತಾಜ್, ಮಕ್ಕಳನ್ನು ಚನ್ನಾಗಿ ನೋಡಿಕೊಳ್ಳುವಂತೆ ತಿಳಿಸಿ ಮತ್ತೊಂದು ಮದುವೆಯನ್ನು ಮಾಡಿಕೊಳ್ಳುವಂತೆ ಬೇಡಿಕೊಂಡಳು. ಜತೆಗೆ ಅವಳ ಜ್ಞಾಪಕ್ಕೆಂದು ಇಡೀ ಪ್ರಪಂಚವೆ ನೆನಪಿನಲ್ಲಿ ಇಟ್ಟುಕೊಳ್ಳುವಂತಹ ಒಂದು ಸ್ಮಾರಕವನ್ನು ಕಟ್ಟಿಸಲು ಪ್ರಾರ್ಥಿಸಿಕೊಂಡಳು. ಜುಲೈ 17, 1632 ರಂದು ಮುಮ್ತಾಜ್ ತನ್ನ ಪ್ರೀತಿಯ ಗಂಡನಾದ ಶಹಜಹಾನನ್ನು ಬಿಟ್ಟು ಇಹಲೋಕ ಸೇರಿಕೊಂಡಳು.

ಶಹಜಹಾನ್ ಎರಡು ವರ್ಷಗಳು ಕಾಲ ಸಾರ್ವಜನಿಕವಾಗಿ ಯಾರಿಗೂ ಕಾಣಿಸಿಕೊಳ್ಳಲಿಲ್ಲ. ಅನಂತರ ತಾಜ್‌ಮಹಲ್ ಕಟ್ಟಲು ಪ್ರಪಂಚದ ಹೆಸರಾಂತ ಕಲೆಗಾರರನ್ನು ಮತ್ತು ಕುಶಲ ಕರ್ಮಿಗಳನ್ನು ಸಂಪರ್ಕಿಸತೊಡಗಿದ. ತಾಜ್‌ಮಹಲಿನ ವಿನ್ಯಾಸವನ್ನು ಇಟಲಿಯ ಜರ್ ನಿ ಮೊವೆರೊನಿಯೊ ಇಲ್ಲ ಫ್ರಾನ್ಸ್‌ನ ಆ ಸ್ಟೀನ್ ಡಿ ಬೋರ್ಡಿಯಾಕ್ಸ್ ರೂಪಿಸಿದ ಎಂದು ಯುರೋಪಿನವರು ಹೇಳುತ್ತಾರೆ. ಆದರೆ ಭಾರತದ ಚರಿತ್ರೆಕಾರರು ಇದು ಶುದ್ಧ ಸುಳ್ಳು ಇದರ ಮೂಲ ವಿನ್ಯಾಸಕಾರರು ಭಾರತದ ಶಿರಾಜ್ ಎನ್ನುತ್ತಾರೆ. ಶಿರಾಜ್ ತನ್ನ ಪತ್ನಿಯ ಜ್ಞಾಪಕಾರ್ತಕ್ಕಾಗಿ ರೂಪಿಸಿದ ವಿನ್ಯಾಸವೆ ತಾಜ್‌ಮಹಲ್ ಆಗಿ ಎದ್ದುನಿಂತಿತು ಎನ್ನುತ್ತಾರೆ.

ತಾಜ್‌ಮಹಲ್ ಕಟ್ಟಲು ಇಪ್ಪತ್ತು ಸಾವಿರ ಕಾರ್ಮಿಕರು ಹನ್ನೆರಡು ವರ್ಷಗಳು ಕಾಲ ದುಡಿದರೆಂದು ನಂಬಲಾಗಿದೆ. ಇದಕ್ಕಾಗಿ ದೇಶ-ವಿದೇಶಗಳ ರಾಜರಿಂದ, ಧನಿಕರಿಂದ ಚಿನ್ನ ಬೆಳ್ಳಿ ವಜ್ರ ವೈಢೂರ್ಯ, ಹವಳ ಪಚ್ಚೆ ಮತ್ತಿತರ ಸಾಮಾಗ್ರಿಗಳನ್ನು ಕೊಂಡುಕೊಳ್ಳಲಾಯಿತು ಮತ್ತು ದಾನವಾಗಿ ಪಡೆಯಲಾಯಿತು ಎಂಬುದಾಗಿ

ತಿಳಿದುಬರುತ್ತದೆ. ತಾಜ್‌ಮಹಲ್‌ಗೆ ಬಳಸಿರುವ ಕೆಂಪು ಹರಳು ಕಲ್ಲು ಮತ್ತು ಅಮೃತ ಶಿಲೆಗಳನ್ನು ರಾಜಸ್ಥಾನ ಮತ್ತು ಮಧ್ಯಪ್ರದೇಶ ನರ್ಮದಾ ನದಿಯ ದಡಗಳಿಂದ ತರಿಸಲಾಯಿತು. ಆ ಕಾಲಕ್ಕೆ ತಾಜ್‌ಮಹಲ್ ಕಟ್ಟಲು ಮೂರು ಕೋಟಿ ರೂಪಾಯಿಗಳು ಖರ್ಚಾಯಿತು ಎನ್ನಲಾಗಿದೆ.

ತಾಜ್‌ಮಹಲ್ ಮುಂದಿನ ವಿಶಾಲ ತೋಟ ಉತ್ತರ-ದಕ್ಷಿಣಕ್ಕೆ ವಿಶಾಲ ಎಂಟುನೂರು ಅಡಿಗಳಿದ್ದು, ಪೂರ್ವ-ಪಶ್ಚಿಮಕ್ಕೆ ಒಂದು ಸಾವಿರ ಅಡಿಗಳಿದೆ. ತಾಜ್‌ಮಹಲಿಗೆ ಎರಡು ಅಡಿ ಪಾಯಗಳಿದ್ದು ಮೊದಲನೆಯದು ನೆಲದಿಂದ ನಾಲ್ಕೂವರೆ ಅಡಿಗಳು ಎತ್ತರವಿದ್ದರೆ, ಎರಡನೆ ಅಡಿ ಪ್ರಾಯದ ಎತ್ತರ ಹದಿನೆಂಟು ಅಡಿಗಳು. ತಾಜ್‌ಮಹಲಿನ ಒಟ್ಟು ಎತ್ತರ ಇನ್ನೂರು ನಲವತ್ತಾ ಮೂರು ಅಡಿಗಳು. ನಾಲ್ಕು ಮೂಲೆಗಳಲ್ಲಿರುವ ಮಿನಾರುಗಳ ಎತ್ತರ ನೂರಾ ನಲವತ್ತು ಅಡಿಗಳು. ಮಿನಾರಿನ ತುತ್ತ ತುದಿಯ ಗುಮ್ಮಟಕ್ಕೆ ತಲಾ ಎಂಟು ಕಿಟಕಿಗಳಿವೆ. ಗೋಡೆಗಳ ಮೇಲೆಲ್ಲ ಅರಬಿಕ್ ಭಾಷೆಯಲ್ಲಿ ಕೆತ್ತಲಾಗಿದೆ. ತಾಜ್‌ಮಹಲ್ ಕಟ್ಟಡ, ಅದರೊಳಗಿನ ಶಿಲೆಗಳು ಮತ್ತು ಸ್ತಂಭಗಳು ಎಲ್ಲವು ಅಷ್ಟಕೋನಾಕೃತಿ ಆಕಾರದಲ್ಲಿವೆ.

ಇಂತಹ ಅದ್ಭುತ ಕಾರಣಗಳಾದ ಮುಮ್ತಾಜ್ ಅದನ್ನು ನೋಡುವ ಭಾಗ್ಯವನ್ನು ಪಡೆಯಲಿಲ್ಲ. ಶಹಜಹಾನ್ ಮಾತ್ರ ಒಬ್ಬಂಟಿಯಾಗಿ ತಾಜ್‌ಮಹಲ್ ನೋಡುತ್ತಾ ತನ್ನ ನೆಚ್ಚಿನ ಮುಮ್ಮತಾಜಳನ್ನು ನೆನಪಿನ ಹಿತ್ತಲಿಗೆ ಬರಮಾಡಿಕೊಳ್ಳುತ್ತಿದ್ದನಂತೆ. ಆದರೆ ನಾವು ಮುಮ್ತಾಜ್ ಬದುಕಿದ್ದರೆ ತಾಜಮಹಲು ನೋಡುತ್ತಿರಲಿಲ್ಲ.

ಚಿರಂಜೀವಿ ತಾಜ್‌ಮಹಲ್ ಬಗ್ಗೆ ಪುಸ್ತಕವನ್ನು ಓದಿ ಮುಗಿಸಿದ ಮೇಲೆ ಸ್ವಲ್ಪ ಹೊತ್ತು ಹಾಗೆ ಸುಮ್ಮನೆ ಯೋಚಿಸುತ್ತ ಕುಳಿತ. ಈ ರಾಜರು ಬುದ್ಧಿಶಾಲಿಗಳೊ..... ಸರ್ವಾಧಿಕಾರಿಗಳೊ....... ಮೂರ್ಖರೊ ಒಂದೂ ಅರ್ಥವಾಗವುದಿಲ್ಲ.

ತಾಜ್‌ಮಹಲನ್ನು ಶಹಜಹಾನ್ ಮುಮ್ತಾಜ್‌ಳ ನೆನಪಿಗಾಗಿ ಕಟ್ಟಿಸಿದ. ಆದರೆ ಕಟ್ಟಿದವರು ನಿಜವಾಗಿಯೂ ಶ್ರಮಜೀವಿಗಳಾದ ಕೂಲಿಕಾರರು. ಕಟ್ಟಿಸಿದವರು ಯಾರು ಎಂದರೆ ಶಹಜಹಾನ್ ಎನ್ನುತ್ತಾರೆ. ಆದರೆ ತಮ್ಮ ದೇಹಗಳನ್ನು ಸುಣ್ಣ ಗಾರೆ ಮಾಡಿಕೊಂಡು ಕಟ್ಟಿದವರ ಕಥೆಗಳು ಎಲ್ಲಿಯೂ ಪ್ರಸ್ತಾಪವಾಗಲಿಲ್ಲ. ಎಲ್ಲವನ್ನು ಚರಿತ್ರೆಯಲ್ಲಿ ಮರೆಮಾಚಲಾಯಿತು. ಕಟ್ಟುವಾಗ ಎಷ್ಟು ಜನರು ಕೈಕಾಲುಗಳನ್ನು ಮುರಿದುಕೊಂಡರು. ಎಷ್ಟು ಜನ ಸತ್ತರ.....? ಎಲ್ಲವು ಭೂಮಿ

ಸೇರಿ ಹೋಯಿತು. ತಾಜ್‌ಮಹಲ್‌ನ ಮುಖ್ಯ ವಿನ್ಯಾಸಕಾರನ ಬಲಕೈಯನ್ನೇ ಕ್ರೂರಿಯಾದ ಶಹಜಹಾನ್ ಕತ್ತರಿಸಿಬಿಟ್ಟನಂತೆ. ಆ ವಿನ್ಯಾಸಕಾರ ಇನ್ನೆಲ್ಲೂ ಅಂತಹ ಮಹಲನ್ನು ಕಟ್ಟಬಾರದೆಂದು. ಇದೆಂತಹ ಅನ್ಯಾಯ?

ಬಹಳ ಹೊತ್ತಿನ ತನಕ ಚಿರಂಜೀವಿ ಹಾಗೆ ಯೋಚಿಸುತ್ತಿದ್ದ. ಆಗಲೆ ಒಂದು ನಿದ್ರೆ ಹೊಡೆದಿದ್ದ ಚಂದ್ರಕಲಾಗೆ ಜ್ಞಾಪಕ ಬಂದು "ಯಾಕೆ ಲೈಟ್ ಆಫ್ ಮಾಡಲಿಲ್ಲ ಬಾರದೆ...." ಎಂದಳು. ಚಿರಂಜೀವಿಗೆ ಮನಸ್ಸು ಖಾಲಿ ಖಾಲಿಯಾಗಿತ್ತು. ಚಂದ್ರಕಲಾ ಪಕ್ಕಕ್ಕೆ ತಿರುಗಿಕೊಂಡು ಚಿರಂಜೀವಿಯನ್ನು ತಬ್ಬಿಕೊಂಡಳು. ಚಿರಂಜೀವಿ ತಲೆ ಪಕ್ಕದಲ್ಲೆ ಇದ್ದ ಸ್ವಿಚ್ ಒತ್ತಿ ಅರ್ಧ ಮನಸ್ಸಿನ ಜೊತೆಗೆ ಪಕ್ಕಕ್ಕೆ ತಿರುಗಿಕೊಂಡ. ಅದೇಕೊ ಅವನಿಗೆ ಆ ಹೊತ್ತಿಗೆ ಅವನ ತಂದೆ, ತಾಯಿಯ ಜ್ಞಾಪಕ ಬಂದುಬಿಟ್ಟಿತು. ಚಂದ್ರಕಲಾ ಏನು ತಿಳಿದುಕೊಳ್ಳುವಳೊ ಎಂದು ಅವಳ ಕಡೆಗೆ ತಿರುಗಿ ಅವಳ ಮೇಲೆ ಬಂದು ಕೈ ಎತ್ತಿ ಹಾಕಿಕೊಂಡ. ಗೋಡೆ ಗಡಿಯಾರದ ಸದ್ದಿನಲ್ಲಿ ಈಗ ಚಿರಂಜೀವಿ ನಿಧಾನವಾಗಿ ನಿದ್ರೆಗೆ ಜಾರಿಕೊಳ್ಳುತ್ತಿದ್ದ.

* * *

ಮರುದಿನ, ನಮಗೆ ಕಾರು ಬೇಡ, ನಾವೆ ಸಾಧ್ಯವಾದಷ್ಟು ಆಟೋ, ಟ್ಯಾಕ್ಸಿ ಹಿಡಿದು ಓಡಾಡಿಕೊಂಡು ಬರುತ್ತೇವೆಂದು ಮಿಟ್ಟಲ್‌ಗೆ ತಿಳಿಸಿದ ಚಿರಂಜೀವಿ ಮತ್ತು ಚಂದ್ರಕಲಾ ಆಗ್ರಾ ಸುತ್ತಲು ಹೊರಟರು. ಸಾಯಂಕಾಲದವರೆಗೆ ಅಲ್ಲಿ ಇಲ್ಲಿ ಸುತ್ತಾಡಿ, ಸಾಮಾನುಗಳನ್ನು ಕೊಂಡಕೊಂಡು ಕುಲ್ಫಿ, ಜಿಲೇಬಿ, ಸಮೂಸ, ಪಾನ್ ಪೂರಿ ತಿಂದರು. ಆ ರಾತ್ರಿ ಮಿಟ್ಟಲ್ ದಂಪತಿಗಳು, ಚಿರಂಜೀವಿ ದಂಪತಿಗಳನ್ನು ಒಂದು ಒಳ್ಳೆ ಮುಘಲ್ ಹೋಟಲಿಗೆ ಕರೆದೊಯ್ದು ಮುಘಲ್ ಶೈಲಿಯ ಮಾಂಸಾಹಾರ ಊಟ ಮಾಡಿದರು. ಆದರೆ ಚಿರಂಜೀವಿ ಮಿಟ್ಟಲ್ ಜೊತೆಗೆ ಜಗಳವಾಡಿ ಹೋಟೆಲ್ ಬಿಲ್ಲನ್ನು ತಾನೆ ಕೊಟ್ಟ. ಹೋಟೆಲಿನಲ್ಲಿ, ದಾರಿಯಲ್ಲಿ ಸಾಕಷ್ಟು ಮಾತನಾಡಿದ ಎರಡು ಕುಟುಂಬಗಳು ಮತ್ತೆ ಮನೆ ಸೇರಿಕೊಂಡವು.

ಮರುದಿನ ಚಿರಂಜೀವಿ ಮತ್ತು ಚಂದ್ರಕಲಾ ತಮ್ಮ ಲಗೇಜುಗಳ ಜೊತೆಗೆ ಡೆಲ್ಲಿ ಕಡೆಗೆ ಪ್ರಯಾಣ ಬೆಳೆಸಿದರು. ಆಗ್ರಾ ಬಿಡುವಾಗ ಮಿಟ್ಟಲ್ ಮತ್ತು ಶ್ರೀಮತಿ ಮಿಟ್ಟಲ್‌ಗೆ ವಂದನೆಗಳನ್ನು ಸಲ್ಲಿಸಿ ಬೆಂಗಳೂರಿಗೆ ಬರುವಂತೆ ಆಹ್ವಾನ ನೀಡಿದರು. ಆಗ್ರಾದಿಂದ ಕೇವಲ ನಾಲ್ಕೂವರೆ ಗಂಟೆ ಪ್ರಯಾಣ ಮಾಡಿ ದೆಹಲಿ ತಲುಪಿ ರೈಲು ನಿಲ್ದಾಣಕ್ಕೆ ಹತ್ತಿರದಲ್ಲೆ ಇರುವ ಒಂದು ಹೋಟೆಲಿನಲ್ಲಿ ಇಳಿದುಕೊಂಡರು.

ಸಾಯಂಕಾಲ ನಾಲ್ಕು ಗಂಟೆಯವರೆಗೆ ವಿಶ್ರಾಂತಿ ಪಡೆದು ಅನಂತರ ಡೆಲ್ಲಿ ನೋಡಲು ಹೊರಟರು. ಒಂದು ವಿಶಾಲವಾದ ಮೈದಾನದ ಕೆಳಗಿರುವ ಪಾಲಿಕಾ ಬಜಾರು, ಕರೋಲ್‌ಬಾಗ್ ಸುತ್ತಾಡಿ ಅಲ್ಲಿಯೇ ಒಂದು ಹೋಟಲಿನಲ್ಲಿ ಊಟ ಮಾಡಿ, ತಾವಿದ್ದು ಹೋಟೆಲು ಸೇರಿಕೊಂಡರು. ಮರುದಿನ ಬೆಳಿಗ್ಗೆ ಸ್ಥಳೀಯ ಬಸ್ಸಿನಲ್ಲಿ ಡೆಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟರು.

ಮಹಾತ್ಮಗಾಂಧಿ, ಜವಹರಲಾಲ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಸಮಾಧಿಗಳು, ಕೆಂಪು ಕೋಟೆ, ಜುಮ್ಮಾ ಮಸೀದಿ, ಜಂತರ್ ಮಂತರ್, ಪಾರ್ಲಿಮೆಂಟು, ರಾಷ್ಟ್ರಪತಿ ಭವನ, ಇಂಡಿಯಾಗೇಟು, ಕುತುಬ್‌ಮಿನಾರ್, ಮೃಗಾಲಯ ಹೀಗೆ ಎಲ್ಲವನ್ನು ನೋಡಿ ಸಾಯಂಕಾಲ ಹೋಟಲಿಗೆ ಬರುವುದರೊಳಗೆ ಚಂದ್ರಕಲಾ ಸುಸ್ತಾಗಿ ಹೋಗಿದ್ದಳು.

"ಅಬ್ಬ! ನಾವು ಹನಿಮೂನ್‌ಗೆ ಬಂದಿದ್ದೇವೊ ಇಲ್ಲ ಟೂರ್ ಮಾಡೂದಕ್ಕೆ ಬಂದಿದ್ದೇವೊ....?" ಚಂದ್ರಕಲಾ ಮಂಚದ ಮೇಲೆ ಮೈ ಚೆಲ್ಲುತ್ತಾ ಕೇಳಿದಳು. ಚಿರಂಜೀವಿ "ಎರಡಕ್ಕೂ" ಎಂದ. "ಹಾಗಾದರೆ ನಾಳೆ ಒಂದು ದಿನ ಎಲ್ಲಿಗೂ ಹೋಗೂದು ಬೇಡ" ಎಂದಳು. "ಓ ಅದಕ್ಕೇನಂತೆ ಹಾಗೆ ಆಗಲಿ" ಚಿರಂಜೀವಿ ಹೇಳಿದ.

"ಮತ್ತೆ ಶ್ರೀನಗರಕ್ಕೆ ಹೋಗಬೇಕಲ್ಲ?" ಎಂದಳು. "ಹೋಗೋಣ ನಾಳೆ ಇಡೀ ದಿನ ಇದೆ ಹೋಟಲಿನಲ್ಲಿ ಇದ್ದುಬಿಡೋಣ. ಚಿರಂಜೀವಿ ಹೇಳುತ್ತಿದ್ದಂತೆ - "ಬೇಡ. ನಾಳೆ ಬೆಳಿಗ್ಗೇನೆ ಡೆಲ್ಲಿಯಿಂದ ಶ್ರೀನಗರಕ್ಕೆ ಹೋಗಿಬಿಡೋಣ" ಚಂದ್ರಕಲಾ ಹೇಳಿದಳು. "ಒಂದು ದಿನದಲ್ಲಿ ಡೆಲ್ಲಿಯಿಂದ ಶ್ರೀನಗರಕ್ಕೆ ಹೋಗೊದಕ್ಕೆ ಆಗೂದಿಲ್ಲ. ಜಮ್ಮೂನಲ್ಲಿ ಒಂದು ರಾತ್ರಿ ಇದ್ದೆ ಹೋಗಬೇಕು. ಜಮ್ಮುನಿಂದ ಶ್ರೀನಗರಕ್ಕೆ ರೈಲಿಲ್ಲ. ಬಸ್ಸಿನಲ್ಲೆ ಹೋಗ್ಬೇಕು. ಬೇಕಾದರೆ ನಾಳೆ ರಾತ್ರಿ ರೈಲಿನಲ್ಲಿ ಜಮ್ಮೂಗೆ ಹೋಗಿಬಿಡೋಣ. ನಮಗೆ ಡೆಲ್ಲಿಯಿಂದ ರೈಲು ಟಿಕೆಟ್ ಇರೂದು ನಾಳಿದ್ದು ರಾತ್ರಿ. ನಾಳೆ ಬೆಳಗ್ಗೆ ಹೋಗಿ ನಾಳೆಗೆ ಟಿಕೆಟ್ ಟ್ರೈ ಮಾಡೋಣ ಸಿಕ್ಕಿದರೆ ನಾಳೆ ರಾತ್ರಿಗೆ, ಇಲ್ಲ ನಾಳಿದ್ದು ರಾತ್ರಿಗೆ ಹೋಗೊದು ಇದ್ದೆ ಇದೆ" ಚಿರಂಜೀವಿ ಹೇಳಿದ.

"ಸರಿ ಹಾಗಾದರೆ ನಾಳೆ ಟಿಕೆಟ್‌ಗೆ ಟ್ರೈ ಮಾಡೋಣ" ಚಂದ್ರಕಲಾ ಹೇಳಿದಳು.

"ಅದು ಹೇಗಾದರು ಆಗಲಿ. ಇವೊತ್ತು ರಾತ್ರಿಗೆ ನೀನು ಸ್ವಲ್ಪ ಡ್ರಿಂಕ್ಸ್ ತೆಗೆದುಕೋಬೇಕು" ಚಿರಂಜೀವಿ ನಗುತ್ತಾ ಹೇಳಿದ. "ಇಲ್ಲ... ಇಲ್ಲ ನಾನು ತೆಗೆದುಕೊಳ್ಳುವುದಿಲ್ಲ. ನೀನೂ ತೆಗೆದುಕೊಳ್ಳಬೇಡ" ಚಂದ್ರಕಲಾ ಹೇಳಿದಳು.

"ನೀನು ತೆಗೆದುಕೊಂಡರೆ ತಾನೆ ನಾನು ತೆಗೆದುಕೊಳ್ಳೋದು. ಇಲ್ಲ ಅಂದರೆ ಇಬ್ಬರಿಗೂ ಬೇಡ" ಎಂದ. "ಬರ್ತಾ ಬರ್ತಾ ನಿನಗೆ ಪೊಲೀಸ್ ಬುದ್ಧಿ ಬರ್ತಾಯಿದೆ. ಅದಕ್ಕೆ ಐಪಿಎಸ್ ಬೇಡ ಬೇಡ ಅಂತ ಬಡಕೊಂಡೆ. ಈಗಲೂ ಸಮಯ ಇದೆ. ನೀನು ಐಎಎಸ್ ಪರೀಕ್ಷೆಗೆ ಕುಳಿತುಕೊ" ಚಂದ್ರಕಲಾ ಹಳೆ ರಾಗ ಎಳೆದಳು.

"ಐಎಎಸ್ ಮಾಡಿದ ಮೇಲೆ ಕುಡಿಯೂದಿಲ್ಲ ಅಂತ ಏನು ಗ್ಯಾರಂಟಿ....?" ಚಿರಂಜೀವಿ ಪ್ರಶ್ನೆ. "ಅದೇನೊ ಅಪ್ಪ..... ನೀನು ಮಾತ್ರ ಕುಡಿಯಬೇಡ" ಎಂದಳು.

"ಜೀವನದಲ್ಲಿ ಎಲ್ಲಾನು ಅನುಭವಿಸಬೇಕು ನೋಡು" ಹೀಗೆ ಇಬ್ಬರೂ ಸುಮಾರು ಹೊತ್ತು ಹಗರುವಾಗಿ ಜಗಳವಾಡಿದರು. ಅನಂತರ ರೂಮಿಗೆ ಊಟ ತರಿಸಿಕೊಂಡು ತಿಂದು ಮುಗಿಸಿದರು.

ಮರುದಿನ ರಾತ್ರಿ 9.10ಕ್ಕೆ ಡೆಲ್ಲಿಯಿಂದ ಹೊರಡುವ ಜಮ್ಮು ತಾವಿ ಎಕ್ಸ್‌ಪ್ರೆಸ್‌ನಲ್ಲಿ ಟಿಕೆಟ್ ದೊರೆತಿದ್ದರಿಂದ ಅವರು ರೈಲಿನಲ್ಲಿ ಕುಳಿತಿದ್ದರು. ಡೆಲ್ಲಿಯಿಂದ ಜಮ್ಮುವಿಗೆ ಸುಮಾರು ಹದಿನಾಲ್ಕು ಗಂಟೆಗಳು ಕಾಲ ರೈಲು ಪ್ರಯಾಣವಿದ್ದು ರೈಲು ಹೊರಡುವ ಮುನ್ನ ಡೆಲ್ಲಿಯಲ್ಲಿ ಊಟ ಮಾಡಿ ರೈಲು ಹತ್ತಿದರು. ಚಳಿ ಇನ್ನಷ್ಟು ತೀವ್ರವಾಗಿದ್ದು ಇಬ್ಬರು ಸ್ವೆಟರುಗಳನ್ನು ಧರಿಸಿ ಕುಳಿತಿದ್ದಾರೆ. ಜಮ್ಮು ತಾವಿ ಎಕ್ಸ್‌ಪ್ರೆಸ್‌ನಲ್ಲಿ ಹವಾನಿಯಂತ್ರಣ ಬೋಗಿಗಳು ಇಲ್ಲದ ಕಾರಣ ಮೊದಲನೆ ತರಗತಿಯ ಡಬ್ಬಿಯಲ್ಲಿ ಇಬ್ಬರೆ ಕುಳಿತಿದ್ದಾರೆ. ಆ ಕುಪ್ಪೆಯಲ್ಲಿ ನಾಲ್ಕು ಬರ್ತ್‌ಗಳಿದ್ದು ಎರಡು ಖಾಲಿಯಾಗಿವೆ. ರೈಲು ಹೊರಡಲು ಇನ್ನೂ ಕಾಲುಗಂಟೆ ಸಮಯ ಇರುವುದರಿಂದ ಯಾರಾದರು ಬರಬಹುದು. ಚಂದ್ರಕಲಾ ಯಾರು ಬರಬಾರದೆಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದಾಳೆ.

ಅಷ್ಟರಲ್ಲಿ ರೈಲು ಹೊರಟುಬಿಟ್ಟಿತು. ಯಾರೂ ಬರಲಿಲ್ಲ. ಟಿಟಿ ಬಂದು ಟಿಕೆಟು ಚೆಕ್ ಮಾಡಿ "ನಿಲ್ದಾಣ ಬಂದಾಗ ಮಾತ್ರ ಬಾಗಿಲು ತೆಗೆಯಿರಿ ಇಲ್ಲ ಅಂದರೆ ತೆಗೆಯಬೇಡಿ" ಎಂದೇಳಿ ಹೊರಟುಹೋದ. ಚಿರಂಜೀವಿ ಟಿಟಿ ಹೋಗಿದ್ದೆ ಬೋಲ್ಟ್ ಹಾಕಿದ. ಹವಾನಿಯಂತ್ರಣದ ಬೋಗಿಯಲ್ಲಿ ರೈಲು ಓಡುವ ಸದ್ದೆ ಬರುತ್ತಿರಲಿಲ್ಲ. ಆದರೆ ಮೊದಲನೆ ತರಗತಿಯ ಕುಪ್ಪೆಯಲ್ಲಿ ಬಾರಿ ಸದ್ದು ಬರುತ್ತಿತ್ತು.

"ರಾತ್ರಿಯಲ್ಲ ಇದೆ ರೀತಿ ಶಬ್ಧ ಬರ್‍ತಾಯಿದ್ರೆ ಹೇಗ್ರಿ..... ನಿದ್ದೆ ಮಾಡೊದು...?" ಚಂದ್ರಕಲಾ ಪ್ರಶ್ನಿಸಿದಳು. ರಾತ್ರಿಯಲ್ಲಿ ನಿದ್ದೆ ಮಾಡು ಅಂತ ಯಾರು ಹೇಳಿದರು ನಿನಗೆ?" ಚಿರಂಜೀವಿ ನಕ್ಕ. "ಹೌದು! ಹನಿಮೂನು ಅಂದ್ರೆ ಏನು....?" ಚಂದ್ರಕಲಾ ಇದ್ದಕ್ಕಿದ್ದಂತೆ ಕೇಳಿದಳು.

"ಮೂನ್‌ನಿಂದ ಒಂದೊಂದೆ ಹನಿ ಬಿಳೊದೆ ಹನಿಮೂನ್" ಚಿರಂಜೀವಿ ತನ್ನದೆ ವಿಶೇಷ ವ್ಯಾಖ್ಯಾನ ನೀಡಿದ. "ತು..... ನಿನ್ನದು ತುಂಬಾನೆ ಅತಿಯಾಯಿತು" ಚಂದ್ರಕಲಾ ನಾಚಿಕೊಂಡಳು. "ಇದರಲ್ಲಿ ನಾಚಿಕೊಳ್ಳೊ ಅಂತಾದು ಏನಿದೆ...?" ಇಂಗ್ಲೀಷ್‌ನಲ್ಲಿ ಬಹಳಷ್ಟು ಪದಗಳಿಗೆ ಅರ್ಥವೆ ಇರೂದಿಲ್ಲ. ಹನಿಮೂನ್ ಅಂದರೆ ಇಂಗ್ಲೀಷ್ ಡಿಕ್ಷನರಿಯಲ್ಲಿ ಏನು ಬರೆದಿರುತ್ತೆ ಗೊತ್ತ...? ಹೊಸದಾಗಿ ಮದುವೆಯಾದವರು ರಜೆಯಲ್ಲಿ ಹೋಗೊದು ಅಂತಿರುತ್ತೆ. ನಾನು ಕೊಟ್ಟ ವಿವರಣೆಗಾದರು ಸ್ವಲ್ಪ ಅರ್ಥ ಇರುತ್ತೆ" ಅಂದ. "ಹೋಗ್ಲಿ ಸುಮ್ಮನೆ ಇರ್‍ರಿ ಯಾರಾದರು ಕೇಳಿಸಿಕೊಂಡಾರು" ಚಂದ್ರಕಲಾ ಮೃದುವಾಗಿ ಹೇಳಿದಳು. ರೈಲು ಓಡುವುದು ಸಾಕಷ್ಟು ಸದ್ದು ಬರುತ್ತಿರುವುದರಿಂದ ಸ್ವಲ್ಪ ಜೋರಾಗಿಯೆ ಮಾತನಾಡಿಕೊಳ್ಳಬೇಕಾಗಿತ್ತು.

"ನಾವು ಜಮ್ಮೂಗೆ ಬೆಳಗ್ಗೇನೆ ಬಸ್ಸಿನಲ್ಲಿ ಹೋಗಿದ್ದರೆ ಚೆನ್ನಾಗಿತ್ತು. ಸುತ್ತಲು ಸೀನರಿ ನೋಡ್ತಾ ಹೋಗಬಹುದಾಗಿತ್ತು. ಈಗಲೂ ಪರವಾಗಿಲ್ಲ. ಜಮ್ಮು ತಲುಪುವುದು ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ. ಬೆಳಗ್ಗೆ ಹನ್ನೊಂದು ಗಂಟೆವರೆಗೂ ನೋಡಬಹುದು. ಆದರೆ ರಾತ್ರಿ ಏನೂ ನೋಡೊದಕ್ಕೆ ಆಗೊದಿಲ್ಲ. ಅಂಬಾಲ, ಲೂದಿಯಾನ, ಅಮೃತಸರ ರಾತ್ರೀನೇ ಬಂದುಬಿಡುತ್ತೆ" ಚಿರಂಜೀವಿ ಹೇಳುತ್ತಿದ್ದಂತೆ-

"ರಾತ್ರೀನೆ ಚೆನ್ನಾಗಿರುತ್ತೆ ಮಲಗಿಕೊಂಡು ಹೋಗಬಹುದು" ಚಂದ್ರಕಲಾ ಹೇಳಿದಳು.

"ಹೌದಲ್ಲ!" ಎಂದಿದ್ದೆ ಚಿರಂಜೀವಿ ಚಂದ್ರಕಲಾಳನ್ನು ಬಾಹುಗಳಲ್ಲಿ ತಬ್ಬಿಕೊಂಡ. ಚಂದ್ರಕಲಾ ಕೂಡ ಚಿರಂಜೀವಿಯ ಬಂಧನಕ್ಕೆ ಸಹಕರಿಸಿದಳು. ಹಿತವಾದ ಚಳಿ ಅವರನ್ನು ಇನ್ನಷ್ಟು ಹತ್ತಿರಕ್ಕೆ ತಂದಿತ್ತು. ಬೆಂಗಳೂರಿನಿಂದ ದೆಹಲಿಗೆ ಬಂದಾಗ ಅವರಿಗೆ ಇಷ್ಟೊಂದು ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಈಗ ಅದನ್ನು ಸೇರಿಸಿ ತಮ್ಮ ಹಿಂದಿನ ಬಾಕಿಯನ್ನು ತೀರಿಸಿಕೊಳ್ಳಲು ಅಣುವಾಗುತ್ತಿದ್ದರು. ಆದರೆ ಒಂದೇ ಒಂದು ಭಯ. ಖಾಲಿ ಇರುವ ಬರ್ತ್‌ಗಳಿಗೆ ಯಾರಾದರು ಬಂದು ಬಿಟ್ಟರೆ....?

ಎನ್ನುವುದು. ಮಧ್ಯದಲ್ಲಿ ಪಂಜಾಬ್, ಹರಿಯಾಣ ರಾಜ್ಯದ ದೊಡ್ಡ ದೊಡ್ಡ ನಿಲ್ದಾಣಗಳಿವೆ. ಯಾರಾದರು ಬಂದೆ ಬರಬಹುದು. ಅಷ್ಟರೊಳಗೆ ಏನು ಬೇಕೊ ಎಲ್ಲವನ್ನು ಮುಗಿಸಿಕೊಳ್ಳಬೇಕು ಎಂಬುದಾಗಿ ಚಿರಂಜೀವಿ ಯೋಚಿಸುತ್ತಿದ್ದಂತೆ ರೈಲು ನಿಧಾನವಾಗತೊಡಗಿತು.

"ಯಾವುದೊ ನಿಲ್ದಾಣ ಬರ್ತಿದೆ....? ಖಾಲಿ ಇರುವ ಬರ್ತ್‌ಗಳಿಗೆ ಯಾರಾದರು ಬಂದರು ಬರಬಹುದು....?" ಚಿರಂಜೀವಿ ಹೇಳಿದ.

"ಅಯ್ಯೋ ದೇವರೆ ಯಾರೂ ಬರಬಾರದು" ಚಂದ್ರಕಲಾ ಮತ್ತೊಮ್ಮೆ ದೇವರಲ್ಲಿ ಮೊರೆ ಇಟ್ಟಳು. ರೈಲು ನಿಂತುಕೊಂಡಿತು. ಜನರ ಗದ್ದಲ, ಇಬ್ಬರು ಕಿಟಕಿಯಿಂದ ಹೊರಕ್ಕೆ ಇಣಕಿ ನೋಡಿದರು. "ಪಾಣಿಪತ್ ಜಂಕ್ಷನ್" ಎಂದು ಬರೆದಿತ್ತು. ಕೆಲವು ನಿಮಿಷಗಳ ನಂತರ ರೈಲು ಮತ್ತೆ ಹೊರಟಿತು.

"ಸಧ್ಯ ಯಾರೂ ಬರಲಿಲ್ಲ" ಚಂದ್ರಕಲಾ ಹೇಳಿದ್ದೆ ತಡ. ಅವರಿರುವ ಕುಪ್ಪೆಯ ಬಾಗಿಲನ್ನು ಯಾರೊ ತಟ್ಟಿದಂತಾಗಿ ಚಿರಂಜೀವಿ ಎದ್ದುಹೋಗಿ ಬಾಗಿಲು ತೆಗೆದ.

"ಎಕ್ಸ್‌ಕ್ಯೂಸ್ಮಿ ಈ ಎರಡು ಮೂರನೆ ಸಂಖ್ಯೆಯ ಬರ್ತ್‌ಗಳು ನಮ್ಮದೆ" ಎಂದು ಲಗೇಜ್ ಸಮೇತ ಇಬ್ಬರು ಒಳಕ್ಕೆ ಬಂದರು. ಮಧ್ಯವಯಸ್ಸಿನ ದೃಢಕಾಯ ದೇಹದ ಪಂಜಾಬಿ ದಂಪತಿಗಳು, ಬಂದಿದ್ದೆ ಲಗೇಜನ್ನು ಅಲ್ಲಿ ಇಲ್ಲಿ ತೂರಿಸಿ ಕುಳಿತು ಕೊಳ್ಳುತ್ತಾ ಇಬ್ಬರ ಕಡೆಗೆ ಮುಗುಳು ನಗುತ್ತಾ -

"ಹಲೊ ನನ್ನೆಸರು ಮಹೇಂದ್ರಸಿಂಗ್ ಈಕೆ ನನ್ನ ಪತ್ನಿ" ಎಂದು ಚಿರಂಜೀವಿ ಕಡೆಗೆ ಕೈ ನೀಡಿದ. ಚಿರಂಜೀವಿ ಹಲೊ ಗ್ಲಾಡ್ ಟು ಮೀಟ್ ಯು" ಎಂದು ಕೈ ಕುಲುಕಿದ. "ಐಯಾಮ್ ಚಿರಂಜೀವಿ. ಈಕೆ ನನ್ನ ಪತ್ನಿ" ಎಂದ. ಎಲ್ಲರೂ "ನಮಸ್ತೆ.... ನಮಸ್ತೆ" ಎಂದರು. ಗೋಧಿ ಬಣ್ಣ, ಆರೂವರೆ ಅಡಿ ಎತ್ತರ, ಉಂಗುರಾಕಾರದ ದೊಡ್ಡ ಮೀಸೆಗಳು, ತಿದ್ದಿ ತೀಡಿ ನೆಟ್ಟಾಕೆ ಕಟ್ಟಿರುವ ಕಪ್ಪು ಬಿಳಿ ಮಿಶ್ರಿತ ಗಡ್ಡ. ತಲೆ ಮೇಲೆ ದೊಡ್ಡದಾದ ಪಗಡಿ. ಉದ್ದನೆ ಮೂಗು, ಎಲ್ಲಕ್ಕಿಂತ ಮಿಗಿಲಾಗಿ ನಗು ಮುಖ. ಅದೆ ಬಣ್ಣದ ಮಹಿಳೆ. ಉದ್ದನೆ ಮೂಗು, ಲಿಪ್‌ಸ್ಟಿಕ್ ಹಚ್ಚಿದಂತಹ ಗುಲಾಬಿ ತುಟಿಗಳು. ಅದೆ ನಗು ಮುಖ. ನಿಧಾನವಾಗಿ ಮಾತುಗಳಲ್ಲಿ ತೊಡಗಿಕೊಂಡರು. ಚಿರಂಜೀವಿ ಐಪಿಎಸ್ ಆಫೀಸರ್ ಎಂದು ತಿಳಿದಿದ್ದೆ ಮಹೇಂದ್ರಸಿಂಗ್ "ನೀವು ನಾಳೆ ಬೆಳಗ್ಗೆ ನಮ್ಮ ಜೊತೆಗೆ ಅಮೃತಸರದಲ್ಲಿ ಇಳಿದುಕೊಂಡು ಬಿಡಿ. ಅಲ್ಲಿಂದ ನಮ್ಮೂರಿಗೆ ಬಂದು ಎರಡು ದಿನ ಇದ್ದು ಆಮೇಲೆ

ಜಮ್ಮೂಗೋಗಿ" ಎಂದು ಆಹ್ವಾನಿಸಿದರು. ಚಿರಂಜೀವಿ "ಇಲ್ಲ ನಿಮಗ್ಯಾಕೆ ತೊಂದರೆ. ನಮ್ಮಲ್ಲಿ ಸಾಕಷ್ಟು ಲಗೇಜ್ ಬೇರೆ ಇದೆ" ಎಂದು ವಿನಯದಿಂದಲೆ ನಿರಾಕರಿಸಿದ. ಚಿರಂಜೀವಿ ಒಳಗೊಳಗೆ ಪ್ರೈವೆಸಿ ಹೇಗೂ ಹಾಳಾಯಿತು. ಪಂಜಾಬ್ ಬಗ್ಗೆಯಾದರು ತಿಳಿದುಕೊಳ್ಳೋಣವೆಂದು ಪಂಜಾಬ್ ಜನರ ಬಗ್ಗೆ, ಅವರ ಉಡುಗೆ ತೊಡುಗೆ ಸಾಂಸ್ಕೃತಿಕ ವಿಚಾರಗಳ ಬಗ್ಗೆ ಕೇಳಿ ಕೇಳಿ ತಿಳಿದುಕೊಂಡ. ಚಂದ್ರಕಲಾ ಅವರು ಮಾತನಾಡುವುದನ್ನು ಕೇಳುತ್ತಾ ಕೇಳುತ್ತಾ ನಿದ್ದೆಗೆ ಜಾರಿಕೊಂಡಳು. ರೈಲು ಅದೇ ರೀತಿಯಾಗಿ ರಾತ್ರಿಯೆಲ್ಲ ಓಡುತ್ತಲೆ ಇತ್ತು.

* * *

ಈಗ ಚುಮು ಚುಮು ಬೆಳಕು ಮೂಡುತ್ತಿದೆ. ರೈಲು ರಾತ್ರಿಯೆಲ್ಲ ಓಡಿ ತಣ್ಣಗಾದಂತೆ ಹಸುರು ಬಯಲುಗಳಲ್ಲಿ ಚಲಿಸುತ್ತಿದೆ. ಒಂದೇ ಸಮತಟ್ಟಾದ ನೆಲ. ಎಲ್ಲಿ ನೋಡಿದರು ಹಸರುಗದ್ದೆ ತೋಟಗಳು. ಪಂಚನದಿಗಳು ಹರಿಯುತ್ತಿರುವ ಪಂಜಾಬ್ ನಿಜವಾಗಿಯು ಸಮೃದ್ಧವೆ ಎಂದುಕೊಂಡ ಚಿರಂಜೀವಿ. ಯಾವುದೊ ಒಂದು ದೊಡ್ಡ ರೈಲು ಜಂಕ್ಷನ್ ಬಂದು ರೈಲು ನಿಧಾನವಾಗಿ ನಿಂತುಕೊಂಡಿತು. ಹೊರಗಡೆ ಲೂದಿಯಾನ ಎಂಬ ಹೆಸರು ಕಾಣಿಸಿಕೊಂಡಿತು.

ಮಹೇಂದ್ರಸಿಂಗ್ "ಫಸ್ಟ್‌ಕ್ಲಾಸ್ ಒಳಕ್ಕೆ ಯಾರೂ ಬರೂದಿಲ್ಲ. ಏನಾದರೂ ಬೇಕಾದರೆ ನಾವೆ ಹೊರಕ್ಕೋಗಿ ತೆಗೆದುಕೊಂಡು ಬರಬೇಕು. ಏನಾದರೂ ಬೇಕಾದರೆ ಹೇಳಿ. ಇಲ್ಲ ಬನ್ನಿ ಹೊರಗಡೆಗೆ ಹೋಗೋಣ. ಹತ್ತು ನಿಮಿಷ ನಿಲ್ಲುತ್ತೆ" ಬನ್ನಿ ಎಂದು ಚಿರಂಜೀವಿಯನ್ನು ಕರೆದರು. ಶ್ರೀಮತಿ ಮಹೇಂದ್ರಸಿಂಗ್ ಆಗಲೆ ಎದ್ದು ಕುಳಿತಿದ್ದು, ಚಂದ್ರಕಲಾ ಕೂಡ ಮಲಗಿದ ಕಡೆಯೆ ಕದಲಾಡುತ್ತಿದ್ದಳು. ಚಿರಂಜೀವಿ ಮತ್ತು ಚಂದ್ರಕಲಾ ರಾತ್ರಿ ಯಾವ ಸಾಹಸಗಳನ್ನು ಮಾಡದೆ ದೂರ ದೂರ ಬರ್ತ್‌ಗಳಲ್ಲಿ ಮಲಗಿದ್ದರು.

"ಏನಾದರು ಬೇಕಾ....?" ಚಿರಂಜೀವಿ ಕೇಳಿದ. "ನನಗೆ ಏನೂ ಬೇಡ" ಚಂದ್ರಕಲಾ ಹೇಳಿದಳು. "ಹತ್ತು ನಿಮಿಷ ನಿಲ್ಲುತ್ತಂತೆ ಹೊರಗೋಗಿ ಬರ್ತೀನಿ" ಎಂದ ಚಿರಂಜೀವಿ ಹೊರಕ್ಕೆ ನಡೆದ. ಚಂದ್ರಕಲಾ ಮೇಲಿನ ಬರ್ತ್‌ನಿಂದ ಇಳಿದು ಬಂದು ಕೆಳಗಿನ ಬರ್ತ್‌ನಲ್ಲಿ ಕುಳಿತುಕೊಂಡು ಹೊರಕ್ಕೆ ನೋಡಿದಳು. ಒಂದೇ ಜನ. ಎಲ್ಲಿ ನೋಡಿದರು ಕುರ್ತಾ ಪೈಜಾಮ ಧರಿಸಿ, ಪಗಡಿ ಸುತ್ತುಕೊಂಡಿರುವ ಸರದಾರ್ಜಿಗಳು, ಶಾಲಾವಾರ್ ಕಮೀಜಾಗಳಲ್ಲಿ ಮಹಿಳೆಯರು. ಎತ್ತರೆತ್ತರದ

ದೃಢಕಾಯ ಜನ. ಸಮೊಸ, ಜಿಲೇಬಿ ರೋಟಿ, ಸಾಸುವೆ ಎಣ್ಣೆ ವಾಸನೆ. ನಾಲ್ಕು ಚಹಗಳನ್ನು ಮಣ್ಣಿನ ಕುಡಿಕೆಗಳಲ್ಲಿ ತೆಗೆದುಕೊಂಡ ಮಹೇಂದ್ರಸಿಂಗ್ ಎರಡನ್ನು ಚಿರಂಜೀವಿ ಕೈಗೆ ಕೊಟ್ಟು ಇನ್ನೆರಡನ್ನು ತಾನು ತೆಗೆದುಕೊಂಡು ಬೋಗಿಯ ಒಳಗೆ ಬರುತ್ತಿದ್ದಂತೆ ರೈಲು ಚಲಿಸತೊಡಗಿತು.

"ಚಹ ಫಸ್ಟ್‌ಕ್ಲಾಸಾಗಿರುತ್ತೆ. ನಿಮ್ಮೂರಿನಲ್ಲಿ ಹೇಗಿರುತ್ತೊ ಗೊತ್ತಿಲ್ಲ. ಅಲ್ಲೆಲ್ಲ ಕಾಫಿ ಅಲ್ಲವೆ....? ನಮ್ಮೂರ ಚಹ ಕುಡಿದು ನೋಡಿ? ಮಹೇಂದ್ರಸಿಂಗ್ ಹೇಳಿದ. ಚಿರಂಜೀವಿ ಒಂದನ್ನು ಚಂದ್ರಕಲಾಗೆ ಕೊಟ್ಟು ಇನ್ನೊಂದನ್ನು ತಾನು ಕುಡಿದ. ಗಟ್ಟಿ ಹಾಲಿನಲ್ಲಿ ಮಾಡಿದ್ದ ಚಹ ನಿಜವಾಗಿಯು ಚೆನ್ನಾಗಿತ್ತು. ಮಣ್ಣಿನ ಕುಡಿಕೆಗಳಲ್ಲಿ ಚಹ ಕುಡಿದು ಕುಡಿಕೆಗಳನ್ನು ಪಕ್ಕಕ್ಕಿಟ್ಟರು. ಮತ್ತೆ ಮಾತುಕತೆ, ರೈಲು ಓಟ. ಸುತ್ತಲು ಹಸುರ ಬಯಲುಗಳು.... ನೇಗಿಲು ಟ್ರಾಕ್ಟರುಗಳು.... ರೈತರು...... ನೀರಿನ ಝುರಿಗಳು.... ದೊಡ್ಡ ದೊಡ್ಡ ನದಿಗಳು..... ಹಾರಾಡುತ್ತಿರುವ ಹಕ್ಕಿಗಳು.... ಸುಂದರವಾದ ದೃಶ್ಯಗಳು.

ಅಮೃತಸರ ಬಂದಿದ್ದೆ ಮಹೇಂದ್ರಸಿಂಗ್ ದಂಪತಿಗಳು ಇಳಿದುಕೊಂಡುಬಿಟ್ಟರು. ಈಗ ಕುಪ್ಪೆಯಲ್ಲಿ ಚಿರಂಜೀವಿ ಮತ್ತು ಚಂದ್ರಕಲಾ ಇಬ್ಬರೆ ಉಳಿದುಕೊಂಡರು. ಮಧ್ಯಾಹ್ನ ಹನ್ನೆರಡು ಗಂಟೆಗೆ ರೈಲು ಜಮ್ಮು ತಲುಪಿತು. ಸುತ್ತಲು ಸಣ್ಣಪುಟ್ಟ ತಪ್ಪಲುಗಳು. ಜಮ್ಮು ನಗರವನ್ನು ಇಬ್ಭಾಗ ಮಾಡಿ ಹರಿಯುವ ತಾವಿನದಿ. ಲಗೇಜ್ ಜೊತೆಗೆ ಇಳಿದುಕೊಂಡ ಚಿರಂಜೀವಿ ಮತ್ತು ಚಂದ್ರಕಲಾ ಒಂದು ಹೋಟಲು ಸೇರಿಕೊಂಡರು.

ಈಗಲೆ ಶ್ರೀನಗರ ಹೋಗೂದಕ್ಕೆ ಆಗೂತ್ತದೆಯೆ ಎಂದು ವಿಚಾರಿಸಿದಾಗ, ಆಗುತ್ತದೆ ಆದರೆ ರಾತ್ರಿ ಒಂಭತ್ತು ಹತ್ತು ಗಂಟೆ ಆಗಿಬಿಡುತ್ತದೆ. ಜೊತೆಗೆ ರಾತ್ರಿ ಯಾರೂ ಗಾಡಿ ಓಡಿಸುವುದಿಲ್ಲ. ಅಪಾಯ ಎಂದರು. ರಾತ್ರಿ ಇಲ್ಲೆ ಇದ್ದು ನಾಳೆ ಬೆಳಗ್ಗೆ ಹೋಗುವುದೆ ವಾಸಿ ಎಂದು ಆ ರಾತ್ರಿ ಅಲ್ಲೆ ಉಳಿದುಕೊಂಡರು.

* * *

ಮರುದಿನ ಬೆಳಗ್ಗೆ ಒಂಭತ್ತು ಗಂಟೆಗೆ ಚಿರಂಜೀವಿ ಮತ್ತು ಚಂದ್ರಕಲಾ ಇದ್ದ ಬಸ್ಸು ಶ್ರೀನಗರ ಕಡೆಗೆ ಹೊರಟಿತು. ಹಿಮಾಲಯ ಎಂದ ತಕ್ಷಣ ಹಲವು ರೀತಿಯ ವಿಷಯಗಳು ಮನಸ್ಸಿಗೆ ಬಂದುಬಿಡುತ್ತವೆ. ಹಿಮಾಲಯದ ಬಗ್ಗೆ ಸಾಕಷ್ಟು ಕೇಳಿರುವ ಮತ್ತು ಪುಸ್ತಕಗಳಲ್ಲಿ ಓದಿರುವ ಚಿರಂಜೀವಿ ಮತ್ತು ಚಂದ್ರಕಲಾ ಬಸ್ಸು ಹೊರಟಿದ್ದೆ

ಕಿಟಕಿಯ ಹೊರಕ್ಕೆ ಕಣ್ಣುಗಳನ್ನು ನೆಟ್ಟು ಕುಳಿತರು. ಬಸ್ಸ್ ಓವರ್ ಹೊದಿಕೆಯ ಎತ್ತರವಾದ ಗಿರಿಶಿಖರಗಳು... ಆಳವಾದ ಸ್ವಚ್ಛನೀರಿನ ಝರಿಗಳು..... ಹಚ್ಚ ಹಸುರ ಸಸ್ಯರಾಶಿ.... ಹಾರಾಡುವ ಮುಗಿಲುಗಳು....! ಕುಂಕುಮ ಕೆನ್ನೆ, ನೀಳ ಮೂಗಿನ ಕಾಶ್ಮೀರಿ ಕನ್ನೆಯರು...... ಆಪಲ್ ಆಕ್ರೋಟ್ ಬಾದಮಿ ತೋಟಗಳು.... ಸುಂದರವಾದ ಉದ್ಯಾನವನಗಳು.... ಹೀಗೆ ಎಲ್ಲವನ್ನು ಊಹಿಸಿಕೊಂಡ ದಂಪತಿಗಳು ಹೊರಗಡೆಗೆ ನೋಡುತ್ತಿದ್ದಾರೆ. ಬಸ್ಸಿನಲ್ಲಿ ಭಾರತದ ಮೂಲೆ ಮೂಲೆಯಿಂದ ಬಂದವರೆಲ್ಲ ಇದ್ದಾರೆ. ಎಲ್ಲರೂ ಬೆಚ್ಚನೆಯ ಉಡುಪುಗಳನ್ನು ಧರಿಸಿ ಹಿಮಾಲಯದ ಸೊಬಗನ್ನು ಸವಿಯಲು ಕಾತರದಿಂದ ಎದುರು ನೋಡುತ್ತಿದ್ದಾರೆ.

ಬಸ್ಸು ನಿಧಾನವಾಗಿ ಚಲಿಸುತ್ತಾ ತಾವಿ ನದಿಯ ದಡದಲ್ಲಿಯೆ ಹೋಗುತ್ತಿದೆ. ಚಂದ್ರಕಲಾ, ಚಿರಂಜೀವಿಯನ್ನು ನೋಡಿ "ರೀ ನನಗ್ಯಾಕೊ ಭಯಾ ಆಗುತ್ತೇರಿ" ಎಂದಳು. ಚಿರಂಜೀವಿ ಯಾಕೆ ಎನ್ನುವಂತೆ ಚಂದ್ರಕಲಾ ಮುಖವನ್ನೇ ನೋಡಿದ.

"ಇದೇನ್ರಿ ಇಷ್ಟು ದೊಡ್ಡ ನದಿ....? ನದಿ ಪಕ್ಕದಲ್ಲೆ ಹೋಗ್ತಾ ಇದೆ ಬಸ್ಸು....!" ಎಂದಳು.

"ಏನೂ ಭಯ ಪಡಬೇಡ. ಅವರೆಲ್ಲಾ ತುಂಬಾ ಎಕ್ಸ್‌ಪರ್ಟ್ ಚಾಲಕರು..." ಚಿರಂಜೀವಿ ಧೈರ್ಯ ಹೇಳಿದ. ಮಿಲಿಯಾಂತರ ವರ್ಷಗಳಿಂದ ಹಿಮಾಲಯ ಪರ್ವತಗಳ ಮೇಲಿಂದ ಉರುಳಿ ಬಂದಿರುವ ರಾಶಿ ರಾಶಿ ಮಕ್ಕಲು ಮಣ್ಣು ಮತ್ತು ಗುಂಡುಕಲ್ಲುಗಳು ಹಿಮಾಲಯದ ಕವಚಗಳಂತೆ ತಬ್ಬಿಕೊಂಡಿವೆ. ಕೆಳ ಹಿಮಾಲಯ ತಪ್ಪಲುಗಳನ್ನು ಸುತ್ತಿ ಬಳಸಿ ತಿರುವುಗಳ ಮುಖಾಂತರ ಎತ್ತರ ಎತ್ತರಕ್ಕೆ ಏರುತ್ತಿದ್ದ ಬಸ್ಸು ಹೇರಳ ಸಸ್ಯರಾಶಿಯ ಜೊತೆಗೆ ಬಿಳಿಮೋಡಗಳ ಒಳಗೆ ನುಗ್ಗಿ ಉದ್ದಾಮಪುರ ತಲುಪಿ ಉಸ್ಸೆಂದು ನಿಂತುಕೊಂಡಿತು.

ಬಸ್ಸನ್ನು ಉದ್ದಾಮಪುರದಲ್ಲಿ ನಿಲ್ಲಿಸಿದ ಸಿಬ್ಬಂದಿ "ಅರ್ಧಗಂಟೆ ವಿರಾಮ. ಚಹ ನಾಷ್ಟ ಮಾಡಿ ಬನ್ನಿ" ಎಂದರು. ಚಿರಂಜೀವಿ ಮತ್ತು ಚಂದ್ರಕಲಾ ಇಳಿದು ಬಂದರು. ಸುತ್ತಲು ತಪ್ಪಲುಗಳನ್ನು ಅಪ್ಪಿಕೊಂಡಿರುವ ಹಸಿರು ಕವಚಗಳು.... ಕೊರಕಲು ನದಿಗಳು.... ಎಲ್ಲಕ್ಕಿಂತ ಮಿಗಿಲಾಗಿ ತಪ್ಪಲುಗಳನ್ನು ಸುತ್ತುವರಿದು ಚಲಿಸುತ್ತಿರುವ ಮೋಡಗಳು... ಜೊತೆಗೆ ಒಂದೇ ಚಳಿ. ಇಬ್ಬರೂ ಒಂದು ಹೋಟಲು ಒಳಗೆ ಬಂದು ಕುಳಿತುಕೊಂಡರು. ಪಂಜಾಬಿ ಚೋಳಾ ಬಟೂರಾ,

ಮದ್ರಾಸಿ ದೋಸಾ ಇಡ್ಲಿ, ಮಳಯಾಳಿ ಕಾಕಾ ಚಹ ಎಲ್ಲವೂ ಅಲ್ಲಿ ದೊರಕುತ್ತಿತ್ತು. ಒಂದೊಂದು ವಡೆ ತಿಂದು ಚಹ ಕುಡಿದು ಮತ್ತೆ ಬಸ್ಸೇರಿ ಕುಳಿತರು. ಬಸ್ಸು ಮತ್ತೆ ತಾವಿ ನದಿಯ ಜತೆಯೆ ಸಾಗತೊಡಗಿತು. ಹಾಗೆ ಸುಮಾರು ದೂರ ಚಲಿಸಿದ ಮೇಲೆ ತಾವಿ ನದಿಗೆ ವಿದಾಯ ಹೇಳಿದ ಬಸ್ಸು ಈಗ ಸಮತಟ್ಟಾದ ಪ್ರದೇಶದಲ್ಲಿ ನಿರಾಳವಾಗಿ ಸಾಗತೊಡಗಿತು. ಬಸ್ಸು ಆ ಅಂಕು ಡೊಂಕು ರಸ್ತೆಯಲ್ಲಿ ಶಬ್ಧ ಮಾಡುತ್ತ ಹಾವಿನಂತೆ ಎದೆಯುಸಿರು ಬಿಡುತ್ತಾ ಸಾಗುತ್ತಿದ್ದಾಗ ಅಕ್ಕಪಕ್ಕದಲ್ಲಿನ ಕೊರಕಲು ಆಳ ಪ್ರಪಾತಗಳನ್ನು ನೋಡುತ್ತಿದ್ದ ಚಂದ್ರಕಲಾಳ ಎದೆ ದಸ್ಸೆನ್ನುತ್ತಿತ್ತು. ಚಿರಂಜೀವಿಯು ಕೆಲವೊಮ್ಮೆ ಬೆರಗಾಗುತ್ತಿದ್ದ.

ಸುತ್ತಲು ಸಮೃದ್ಧವಾದ ಹಸಿರು..., ಬುದುಬುದು ಗದ್ದೆಗಳು ...ಹಸಿರು ಗದ್ದೆಗಳಲ್ಲಿ ಬೆಳ್ಳಕ್ಕಿಗಳಂತೆ ಸಾಲು ಸಾಲಾಗಿ ಕೆಲಸ ಮಾಡುತ್ತಿರುವ ಕಾಶ್ಮೀರಿ ಹೆಣ್ಣುಗಳು.... ಕೊರಕಲು ನದಿಗಳು... ಸಾಲು ಸಾಲು ಮರಗಳು ಆಪಲ್ ಬಾದಾಮಿ ತೋಟಗಳು. ಬಸ್ಸಿನಲ್ಲಿ ಇರುವವರು ಇದು ಚಿನಾಬ್ ನದಿ, ಇದು ಜೇಲಮ್‌ನದಿ, ಇದು ರಾವಿ, ಇದು ಸಟ್ಲೆಜ್‌ನದಿ, ಇದು ವೈಷ್ಣವಿ ದೇವಿ ಮಂದಿರಕ್ಕೆ ಹೋಗುವ ದಾರಿ ಹೀಗೆ ಮಾತನಾಡಿಕೊಳ್ಳುತ್ತಿದ್ದರು.

ಅಂತು ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಬಸ್ಸು ಭೂಮಿಯ ಮೇಲಿನ ಒಂದು ಸುಂದರ ಪ್ರದೇಶವಾದ ಶ್ರೀನಗರ ಕಣಿವೆ ಸೇರಿಕೊಂಡಿತು. ಚಿರಂಜೀವಿ ಮತ್ತು ಚಂದ್ರಕಲಾ ದಾಲ್ ಸರೋವರದ ಹತ್ತಿರವೆ ಇದ್ದ ಗುಲಶ್ಯನ್ ಹೋಟೆಲಿನಲ್ಲಿ ಇಳಿದುಕೊಂಡರು. ಮೈನಡಿಗಿಸುವ ಚಳಿ. ಕೋಣೆಗೆ ಬಂದ ರೂಮುಬಾಯಿ -

"ಕುಡಿಯಲು ನೀರು ಬೇಕಾದರೆ ಹೇಳಿ ಬಿಸಿ ನೀರು ತಂದುಕೊಡುತ್ತೇನೆ" ಎಂದ. "ಸ್ನಾನಕ್ಕೆ", ಎಂದಾಗ "ಸ್ನಾನಕ್ಕೂ ಬಿಸಿ ನೀರು ಕೊಡುತ್ತೇನೆ!" ಎಂದ.

"ಹಾಗಾದರೆ ಮೊದಲು, ಸ್ನಾನ ಮಾಡೊದಕ್ಕೆ ಒಂದು ಬಕೆಟ್ ನೀರು ತಂದ್ಕೊಡು ಎಂದಿದ್ದೆ ರೂಮ್‌ಬಾಯಿ ಹೊರಗೋಗಿ ಬಿಸಿ ನೀರು ತಂದಿಟ್ಟು, ಎರಡು ನಿಮಿಷಗಳೂ ಆಗಲಿಲ್ಲ. ನೀರು ತಣ್ಣಗಾಗಿ ಹೋಗಿತ್ತು. ಚಿರಂಜೀವಿ ಸ್ನಾನ ಮುಗಿಸಿ ಓಡಿ ಬಂದು ಗಡಗಡ ನಡುಗುತ್ತಲೆ ಬಟ್ಟೆ ಹಾಕಿಕೊಂಡು ಕುಳಿತುಕೊಂಡ. ಚಂದ್ರಕಲಾ-

"ಚಳಿಗಾಲದಲ್ಲಿ ಬರಬಾರದಿತ್ತು" ಎಂದರೆ ಚಿರಂಜೀವಿ ಇಲ್ಲಿಗೆ ಚಳಿಗಾಲದಲ್ಲೆ ಬರಬೇಕು" ಎಂದ. "ಇದೇನು ಇಷ್ಟೊಂದು ಚಳಿ ಇದಿಯಲ್ಲ...?" ಚಂದ್ರಕಲಾ

ಗಡಗಡ ನಡುಗುತ್ತಾ ಹೇಳಿದಳು. ಚಿರಂಜೀವಿ ಬೆಲ್ಲು ಹೊಡೆದಿದ್ದೆ ರೂಮ್‌ಬಾಯಿ ಬಂದ. "ಹೀಟರ್ ಇಲ್ಲವ....?" ಚಿರಂಜೀವಿ ಕೇಳಿದ. "ಇದೆ ಸಾರ್ ಎಕ್ಸ್‌ಟ್ರಾ ಚಾರ್ಜ್ ಆಗುತ್ತೆ" ರೂಮ್‌ಬಾಯಿ ಹೇಳಿದ. "ಅದು ಎಷ್ಟಾದರು ಆಗಲಿ ತೆಗೆದುಕೊಂಡು ಬಾ. ಮೊದಲೆ ಹೇಳೂದಕ್ಕೆ ಆಗೂದಿಲ್ಲವ...?" ರೂಮ್‌ಬಾಯಿ ಓಡಿಹೋಗಿ ಹೀಟರ್ ತಂದು ಒಂದು ಮೂಲೆಯಲ್ಲಿಟ್ಟು ಸ್ವಿಚ್ಹಾಕಿ ಹೊರಟುಹೋದ.

ಚಂದ್ರಕಲಾ ಹೀಟರ್ ಹತ್ತಿರಕ್ಕೆ ಬಂದು ಕೈಗಳನ್ನು ಶಾಲುವಿಂದ ಹೊರಕ್ಕೆ ತೆಗೆದು ಕುಳಿತುಕೊಂಡಳು. ಮೈ ಸ್ವಲ್ಪ ಬಿಸಿಯಾಗಿ, ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು.

"ಬಿಸಿನೀರು ಹೇಳ್ಲೇನು ಸ್ನಾನ ಮಾಡೂದಕ್ಕೆ....?" ಚಿರಂಜೀವಿ ಹೇಳಿದ್ದೆ, "ಬೇಡಪ್ಪ ನಾನು ಸ್ನಾನ ಮಾಡೂದಿಲ್ಲ. ನಾಳೆ ಬೆಳಗ್ಗೆ ಮಾಡ್ತೀನಿ. ಇಲ್ಲಿ ಯಾರೂ ಸ್ನಾನ ಮಾಡೋತರ ಕಾಣಿಸ್ತಿಲ್ಲ" ಎಂದಳು ಚಂದ್ರಕಲಾ. "ಹಿಲ್ಸ್‌ನಲ್ಲಿ ಇರೋರು ಯಾರೂ ಸರಿಯಾಗಿ ಸ್ನಾನ ಮಾಡೂದಿಲ್ಲ. ಮುಖ ಕೈ ಕಾಲು ತೊಳೆದುಕೊಳ್ಳೂದೇ ಹೆಚ್ಚು" ಚಿರಂಜೀವಿ ಹೇಳಿದ. "ಗಬ್ಬು ಹೊಡೆಯೂದಿಲ್ಲವ....?" ಚಂದ್ರಕಲಾ ಪ್ರಶ್ನೆ. "ಎಲ್ಲರೂ ಗಬ್ಬಾದರೆ ಏನೂ ವ್ಯತ್ಯಾಸ ಇರೂದಿಲ್ಲವಲ್ಲ" ಚಿರಂಜೀವಿ ನಗುತ್ತಾ ಹೇಳಿದ. ಚಂದ್ರಕಲಾ, ಚಿರಂಜೀವಿಯನ್ನೆ ದುರುಗುಟ್ಟಿ ನೋಡಿದಳು. ಚಿರಂಜೀವಿ ನಕ್ಕ.

* * *

ಚಂದ್ರಕಲಾ ಮತ್ತು ಚಿರಂಜೀವಿ ಹಾಸಿಗೆ ಮೇಲೆ ಕುಳಿತುಕೊಂಡಿದ್ದಾರೆ. ಕೋಣೆಯಲ್ಲಿ ಹೀಟರ್ ಉರಿಯುತ್ತಿದ್ದರಿಂದ ಮನಸ್ಸಿಗೆ ಆರಾಮೆನಿಸಿ ಹೀಟರನ್ನು ಇನ್ನಷ್ಟು ಹತ್ತಿರಕ್ಕೆ ಎಳೆದುಕೊಂಡು ಇಬ್ಬರೂ ಮತ್ತಷ್ಟು ಹತ್ತಿರಕ್ಕೆ ಸರಿದು ಕುಳಿತುಕೊಂಡರು. ಚಿರಂಜೀವಿ, ಚಂದ್ರಕಲಾ ಕಡೆಗೆ ನೋಡಿದ. ಚಂದ್ರಕಲಾ, ಚಿರಂಜೀವಿಯ ನೋಟವನ್ನು ಎದುರಿಸಲಾರದೆ ಪಕ್ಕಕ್ಕೆ ತಿರುಗಿಕೊಂಡಳು. ಚಿರಂಜೀವಿಯ ಆ ನೋಟ ಈ ರಾತ್ರಿ ಒಂದು ಅದ್ಭುತ ರಾತ್ರಿ ಆಗಬೇಕು ಎನ್ನುವಂತಿತ್ತು.

ಭೂಮಿ ಸೂರ್ಯನ ಸುತ್ತ, ಗಾಳಿ, ನೀರು ಭೂಮಿಯ ಸುತ್ತ ಹಾಗೆ ಗಂಡು ಹೆಣ್ಣಿನ ಸುತ್ತ ಸುತ್ತುತ್ತಿರುತ್ತಾರೆ. ಇವರ ನಡುವಿನ ಆಕರ್ಷಣೆ ವರ್ಣಿಸಲು ಅಸಾಧ್ಯ.

ಕವಿಯ ಪದಗಳಿಗೂ ನಿಲುಕುವಂತದ್ದಲ್ಲ. ಅದೊಂದು ಅದ್ಭುತ. ಚಿರಂಜೀವಿ ಒಂದು ವಿಶೇಷ ಬಾಟಲನ್ನು ತೆಗೆದು ಎರಡು ಗ್ಲಾಸುಗಳಿಗೆ ಸುರಿದು ಅದರಲ್ಲಿ ಸೋಡಾ ಬೆರೆಸಿದ. ಅನಂತರ ರೂಮ್‌ಬಾಯ್ ಮುಖಾಂತರ ತರಿಸಿದ್ದ ವಿಶೇಷ ಕಾಶ್ಮೀರಿ ಕುರಿಯ ಮಟನ್ ಫ್ರೈಯ್ ಮತ್ತು ಕಾಶ್ಮೀರಿ ಬಿರಿಯಾನಿಯನ್ನು ಬಿಚ್ಚಿ ಹೀಟರಿನ ಹತ್ತಿರ ಇಟ್ಟ. ಚಿರಂಜೀವಿಯ ಹಲವು ದಿನಗಳ ಕಳಕಳಿಯ ಒತ್ತಾಯದಿಂದ ಚಂದ್ರಕಲಾ ಮೊದಲ ಬಾರಿಗೆ ಕಂಪನಿ ಕೊಡುವುದಾಗಿ ಒಪ್ಪಿಕೊಂಡಿದ್ದಳು. ಜೊತೆಗೆ ಮತ್ತೆ ಯಾವಾಗಲು ಜೊತೆಯಲ್ಲಿ ಕುಡಿಯಲು ಆಹ್ವಾನಿಸಬಾರದೆಂದು ಭಾಷೆ ತೆಗೆದುಕೊಂಡಿದ್ದಳು. ಚಿರಂಜೀವಿ ತನ್ನ ತರಬೇತಿಯಲ್ಲಿ ಅದೊಂದು ಉದ್ಯೋಗದ ಭಾಗ ಎನ್ನುವಂತೆ ಎಲ್ಲಾ ಅಧಿಕಾರಿಗಳ ಜೊತೆಗೆ ಪಾರ್ಟಿಗಳಲ್ಲಿ ಮಿತವಾಗಿ ತೆಗೆದುಕೊಳ್ಳುತ್ತಿದ್ದ.

ಚಿರಂಜೀವಿ ಎರಡು ಗ್ಲಾಸುಗಳನ್ನು ಎರಡು ಕೈಗಳಲ್ಲಿ ತೆಗೆದುಕೊಂಡು ಕಡಿಮೆಯಿದ್ದ ಗ್ಲಾಸನ್ನು ಚಂದ್ರಕಲಾಗೆ ಕೊಡುತ್ತ "ನಿನಗೆ ಸ್ವಲ್ಪಾನೆ ಹಾಕಿದ್ದೀನಿ. ಹಿಮಾಲಯದ ಈ ಚಳಿಯಲ್ಲಿ ಸ್ವಲ್ಪವಾದರು ಕುಡಿಯಲೆಬೇಕು. ಇಲ್ಲ ಅಂದರೆ ಹನಿಮೂನ್ ಆಗೊದಿಲ್ಲ" ಎಂದ. ಚಂದ್ರಕಲಾಳ ಮುಖ ಆಗಲೆ ಭಯ ಮತ್ತು ನಾಚಿಕೆಯಿಂದ ಕೆಂಪೇರಿಹೋಗಿತ್ತು.

"ನೋಡು ನನಗೇನಾದರು ಆಗಿಬಿಟ್ಟರೆ...?" ಎಂದು ಚಿರಂಜೀವಿಯನ್ನೇ ನೋಡಿದಳು. "ಕಮಾನ್ ಡಿಯರ್... ಈ ಪ್ರಪಂಚದಲ್ಲಿ ಯಾರೂ ಕುಡಿಯೂದಿಲ್ಲವ....? ಯುರೋಪಿನಲ್ಲಿ ಎಲ್ಲಾ ಮಹಿಳೆಯರು ತೆಗೆದುಕೊಳ್ತಾರೆ. ಊಟದ ಜೊತೆಗೆ ದಿನಾಗಲು ಒಂದೊಂದು ಪೆಗ್ ತೆಗೆದುಕೊಂಡರೆ ಆರೋಗ್ಯಕ್ಕೆ ತುಂಬಾ ಒಳ್ಳೆದು? ಹೀಗೆ ಏನೇನೊ ಹೇಳಿದ ಚಿರಂಜೀವಿ, ಚಂದ್ರಕಲಾಗೆ ಒಂದು ಗುಟುಕು ಕುಡಿಸುವಲ್ಲಿ ಸಫಲನಾಗಿದ್ದ. ಒಂದು ಗುಟುಕು ನುಂಗಿದ ಚಂದ್ರಕಲಾ -

"ಅಬ್ಬಾ ಗಂಟ್ಲಲ್ಲಿ ಕರಕರ ಅನ್ನುತ್ತೆ" ಎಂದಳು. ಚಿರಂಜೀವಿ ಮಟನ್ ತುಣುಕುಗಳನ್ನು ತೆಗೆದು ಚಂದ್ರಕಲಾ ಬಾಯಿಗಿಡುತ್ತ ತಾನೂ ಡ್ರಿಂಕ್ಸ್ ಜೊತೆಗೆ ಒಂದೊಂದು ತೆಗೆದುಕೊಳ್ಳುತ್ತಿದ್ದ. ಈಗ ಚಂದ್ರಕಲಾ ಒಂದೆರಡು ಗುಟುಕು ಕುಡಿದು ಮಟನ್ ತಿನ್ನತೊಡಗಿದಳು.

ಚಿರಂಜೀವಿ, ಚಂದ್ರಕಲಾ ಒಬ್ಬರನ್ನೊಬ್ಬರು ನೋಡಿಕೊಂಡರು. ಚಳಿ ಸ್ವಲ್ಪ ಸ್ವಲ್ಪವಾಗಿ ದೂರಾವಾಗುತ್ತಿತ್ತು. ಚಿರಂಜೀವಿ, ಚಂದ್ರಕಲಾಳನ್ನು ನಿಧಾನವಾಗಿ

ಸ್ಪರ್ಶಿಸುತ್ತಾ ತುಟಿಗಳನ್ನು ಚುಂಬಿಸಿದ. ಅವರ ನಡುವಿನ ಸ್ಪರ್ಶ ಹತ್ತಿರವಾದಂತೆ ಅದ್ಭುತವಾಗುತ್ತ ಹೋಗುತ್ತಿತ್ತು. ಮೊದಲ ಬಾರಿಗೆ ಕುಡಿದವ್ವ ಚಂದ್ರಕಲಾಗೆ ಮತ್ತೇರಿ ದೇಹ ಯಾವುದೋ ಆನಂದ ಮತ್ತು ಉನ್ಮಾದದಿಂದ ತೇಲಾಡುವಂತೆ ಕಂಡಿತು. ಚಂದ್ರಕಲಾ ಮೊದಲ ಬಾರಿಗೆ ನಾಚಿಕೆ ಕಳೆದುಕೊಂಡವಳಂತೆ ಚಿರಂಜೀವಿಯ ಜೊತೆಗೆ ಶೃಂಗಾರದ ಸಂಭಾಷಣೆಯಲ್ಲಿ ತೊಡಗಿಕೊಂಡಳು. ಚಿರಂಜೀವಿ ಇನ್ನೂ ಆ ಸ್ಥಿತಿಗೆ ತಲುಪಿಲ್ಲದ ಕಾರಣ ಚಂದ್ರಕಲಾಳ ಮಾತುಗಳನ್ನು ಆನಂದಿಸುತ್ತಾ ಜೊತೆಗೆ ತಾನೂ ಅದೇ ರೀತಿಯಾಗಿ ಮಾತನಾಡುತ್ತಿದ್ದ. ಬಟ್ಟೆಗಳು ಒಂದೊಂದಾಗಿ ದೂರವಾಗತೊಡಗಿದವು. ಆ ರಾತ್ರಿ ಅವರ ನಡುವೆ ನಿಜವಾಗಿಯೆ ಅದ್ಭುತ ರಾತ್ರಿಯಾಗಿ ಕಳೆದು ಹೋಯಿತು.

ಮರುದಿನ ಬೆಳಗ್ಗೆ ಹತ್ತು ಗಂಟೆಯಾದರು ಚಂದ್ರಕಲಾ ಹಾಸಿಗೆಯಿಂದ ಏಳಲಿಲ್ಲ. ಚಿರಂಜೀವಿ ಬಿಸಿನೀರಿನಲ್ಲಿ ಸ್ನಾನ ಮಾಡಿದ ಮೇಲೆ ಚಂದ್ರಕಲಾಳನ್ನು ಸ್ನಾನ ಮಾಡುವಂತೆ ಎಬ್ಬಿಸಿದ. ಚಂದ್ರಕಲಾ ಮೊದಲ ರಾತ್ರಿ ಶೀಲ ಕಳೆದುಕೊಂಡವಳಂತೆ ಚಿರಂಜೀವಿಗೆ ಮುಖ ತೋರಿಸದೆ ಪಕ್ಕಕ್ಕೆ ತಿರುಗಿ ಕೊಂಡಳು. ಅನಂತರ ಬಹಳ ಹೊತ್ತಿನ ನಂತರ "ನೀನು ನನ್ನೊತೆ ಮಾತನಾಡಬೇಡ" ಎಂದು ಸ್ನಾನದ ಕೊಠಡಿಗೆ ಹೊರಟು ಹೋದಳು. ಚಿರಂಜೀವಿ ಮತ್ತು ಚಂದ್ರಕಲಾ ಆ ಇಡೀ ದಿನ ಗುಲ್‌ಮಾರ್ಗ್‌ನ ಹಿಮದ ಧೂಳಿನಲ್ಲಿ ಓಡಾಡಿದ್ದರು.... ಒಬ್ಬರ ಮೇಲೆ ಒಬ್ಬರು ಹಿಮಧೂಳನ್ನು ಸ್ವರ್ಗದಲ್ಲಿ ಅಪ್ಸರೆಯರು ಗಂಧರ್ವರು ಹೂವುಗಳನ್ನು ಚೆಲ್ಲಿಕೊಳ್ಳುವಂತೆ ಚೆಲ್ಲಿಕೊಂಡರು. ಮೊಘಲರು ಸ್ಥಾಪಿಸಿದ್ದ ಸುಂದರ ಹೂತೋಟಗಳಲ್ಲಿ ಕೈಕ್ಕೆ ಎಣೆದುಕೊಂಡು ಸುತ್ತಾಡಿದರು. ಡಾಲ್ ಸರೋವರದ ಮೇಲೆ ಸಿಂಗರಿಸಿದ್ದ ತೆಪ್ಪೆಯ ಮೇಲೆ ಸುತ್ತಲಿನ ತಪ್ಪಲುಗಳನ್ನು ನೋಡುತ್ತಾ ಕಾಲ ಕಳೆದರು.... ಬರ್ಫ್ ಗುಡ್ಡಗಳ ಮೇಲೆಲ್ಲಾ ಓಡಾಡಿದರು. ಅನಂತರ ಸ್ವಲ್ಪ ಕಾಲ ನಡುಗುವ ಚಳಿಯಲ್ಲಿ ದಾಲ್ ಸರೋವರದ ಮೇಲೆ ತೇಲಾಡುವ ಮನೆಗಳಲ್ಲಿ ಕುಳಿತಿದ್ದು ನಡುಗುತ್ತಲೆ ತಾವಿದ್ದ ಹೋಟೆಲ್ ಸೇರಿ ಹೀಟರ್ ಮುಂದೆ ಕುಳಿತುಕೊಂಡರು.

ಮರುದಿನ ಕುದುರೆ ಸವಾರಿ ಮಾಡಿ ಸೋನಾಮಾರ್ಗ್ ಸಂತೆಯನ್ನು ನೋಡಿಕೊಂಡು ಬಂದರು. ಮೂರನೆ ದಿನ ಶ್ರೀನಗರದ ಬೀದಿಗಳಲ್ಲಿ ಸುತ್ತಾಡಿ ಚಂದ್ರಕಲಾ ತಾಯಿ ತಂದೆ ಮತ್ತು ತಂಗಿಗೆ ಉಣ್ಣೆ ಶಾಲುಗಳನ್ನು ಮತ್ತಿತರ

ವಸ್ತುಗಳನ್ನು ಕೊಂಡುಕೊಂಡರು. ಆ ದಿನ ಹೋಟಲಿಗೆ ಬಂದ ಮೇಲೆ ಚಿರಂಜೀವಿಯ ಮನಸ್ಸಿಗೆ ಏನಾಯಿತೋ ಏನೋ ಮಾತನಾಡದೆ ಸುಮ್ಮನಾಗಿಬಿಟ್ಟ. ಚಂದ್ರಕಲಾ ಸುಮಾರು ಹೊತ್ತು ಕೇಳಿದ ಮೇಲೆ ತನ್ನ ತಂದೆ ತಾಯಿ ಜ್ಞಾಪಕ ಬಂದುದಾಗಿ ಹೇಳಿದ. "ನನ್ನ ತಂದೆ ತಾಯಿ ಇದ್ದಿದ್ದರೆ ತಾನೂ ಅವರಿಗಾಗಿ ಉಣ್ಣೆ ಶಾಲುಗಳನ್ನು ಕೊಂಡುಕೊಳ್ಳುತ್ತಿದ್ದೆ" ಎಂದು ಚಿರಂಜೀವಿ ಹೇಳಿದಾಗ ವಿಚಲಿತಗೊಂಡ ಚಂದ್ರಕಲಾ ತಾನೂ ಕಣ್ಣಿನಲ್ಲಿ ನೀರು ತುಂಬಿಕೊಂಡಳು. ಇನ್ನೆರಡು ದಿನಗಳನ್ನು ಶ್ರೀನಗರದಲ್ಲಿ ಕಳೆದ ಮೇಲೆ ಅವರು ಎಲ್ಲವನ್ನು ಪ್ಯಾಕ್ ಮಾಡಿಕೊಂಡು ಹಿಮಾಲಯ ಶಿಖರಗಳಿಂದ ಇಳಿದುಬಂದರು.

* * *

ಚಿರಂಜೀವಿ ಮತ್ತು ಚಂದ್ರಕಲಾ ಶ್ರೀನಗರದಿಂದ ದೆಹಲಿಗೆ ಬಂದು, ದೆಹಲಿಯಲ್ಲಿ ಒಂದು ರಾತ್ರಿ ತಂಗಿದ್ದು ಅಲ್ಲಿಂದ ನೇರವಾಗಿ ಬೆಂಗಳೂರಿಗೆ ಬಂದುಬಿಟ್ಟರು. ಈ ನಡುವೆ ಚಂದ್ರಕಲಾ ತಂದೆ ತಾಯಿಗೆ ಫೋನ್ ಮಾಡಿದಾಗ ಚಿರಂಜೀವಿಯನ್ನು ಸಾಧ್ಯವಾದಷ್ಟು ಬೇಗ ಹಿಂದಿರುಗಿ ಬರಲು ಪೊಲೀಸ್ ಕಮೀಷನರ್ ಅವರು ತಿಳಿಸಿರುವುದಾಗಿ ತಿಳಿಯಿತು. ಸಾಧ್ಯವಾದರೆ ಜಯಪುರ, ಉದಯಪುರ ಮತ್ತು ಗೋವಾ ಸುತ್ತಿಬರಲು ಅವರು ಮೊದಲೆ ನಿಶ್ಚಯಿಸಿದ್ದರು. ಆದರೆ ಪ್ರಯಾಣವನ್ನು ಮಧ್ಯದಲ್ಲಿಯೆ ಮೊಟಕುಗೊಳಿಸಿ ಹಿಂದಿರುಗಿ ಬಂದರು. ಜೊತೆಗೆ ಅಷ್ಟು ದೂರ ಪ್ರಯಾಣ ಮಾಡಲು ಚಂದ್ರಕಲಾ ಕೂಡ ಹಿಂಜರಿದಿದ್ದಳು.

ಚಿರಂಜೀವಿ ಬೆಂಗಳೂರಿಗೆ ಬಂದು ಡ್ಯೂಟಿ ರಿಪೋರ್ಟ್ ಮಾಡಿಕೊಂಡ. ಒಂದು ತಿಂಗಳು ರಜೆ ಹಾಕಿದ್ದರು ಅನಿವಾರ್ಯ ಕಾರಣಗಳಿಂದ ಹದಿನೈದು ದಿನಗಳು ಕಾಲ ಡ್ಯೂಟಿ ಬಿಟ್ಟು ಹೊರಗಿದ್ದುದಕ್ಕೆ ಯಾವುದೊ ಪ್ರಪಂಚದಿಂದ ಹಿಂದಿರುಗಿ ಬಂದಂತೆ ತೋರುತ್ತಿತ್ತು.

ಚಿರಂಜೀವಿ ಕಮೀಷನರ್ ಅವರನ್ನು ಸಂದಿಸಿದಾಗ, ಪೊಲೀಸ್ ಕಮೀಷನರ್ ಅವರು "ಸಾರಿ ಚಿರಂಜೀವಿ ರಜೆ ಮುಗಿಯೂದಕ್ಕೆ ಮುಂಚೆಯೆ ನಿನ್ನನ್ನು ಕರೆಸಿಕೊಳ್ಳಬೇಕಾಯಿತು. ಹೆಡ್‌ಕ್ವಾರ್ಟರ್ಸ್‌ನ ಡಿವೈಎಸ್‌ಪಿಗೆ ವರ್ಗ ಆಗಿದೆ. ಬೇರೆಯವರು ಬರೋವರಿಗೆ ಅಡಿಷನಲ್ ಚಾರ್ಜ್‌ನ್ನು ನೀನೆ ನೋಡಿಕೊಳ್ಳಬೇಕು" ಎಂದರು.

"ಪರವಾಗಿಲ್ಲ ಸರ್. ನಮಗೂ ಪ್ರಯಾಣ ಮಾಡಿ ಮಾಡಿ ಬೋರಾಗೋಗಿತ್ತು. ನೀವು ಕರೆಸಿದ್ದು ಒಳ್ಳೆಯದೆ ಆಯಿತು" ಎಂದ ಚಿರಂಜೀವಿ.

"ವೆರಿಗುಡ್ ನೀವು ಹೋಗಬಹುದು" ಎಂದರು ಕಮೀಷನರ್. ಚಿರಂಜೀವಿ ಕಮೀಷನರ್ ಕಛೇರಿಯಿಂದ ಬೀಳ್ಕೊಂಡು ತನ್ನ ಕೆಲಸದಲ್ಲಿ ತೊಡಗಿಕೊಂಡ.

* * *

೬

ಒಂದು ದಿನ ಚಿರಂಚೀವಿ ಕಛೇರಿಯಲ್ಲಿ ಕುಳಿತು ಯಾವುದೋ ಫೈಲಿನಲ್ಲಿ ತಲ್ಲೀನನಾಗಿದ್ದ. ಅವನ ಎದುರಿಗಿದ್ದ ಫೋನ್ ಮೊಳಗಿ, ಕೈಗೆ ರಿಸೀವರ್ ತೆಗೆದುಕೊಂಡು,

"ಹಲೋ...... ಚಿರಂಜೀವಿ ಇಯರ್"..... ಎಂದ.

"ಮಿಸ್ಟರ್ ಚಿರಂಜೀವಿ ನಾನು ಕಮೀಷನರ್..... ಕಂಟೋನ್‌ಮೆಂಟ್ ರೈಲ್ವೇ ನಿಲ್ದಾಣದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಅಪಘಾತ ಆಗಿದೆ ಎಂದು ಫೋನ್ ಬಂದಿದೆ..... ತಕ್ಷಣ ಹೋಗುವುದು"..... ಎಂದು ಫೋನ್ ಇಟ್ಟುಬಿಟ್ಟರು.

ಚಿರಂಜೀವಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಪೇದೆಗಳ ಜೊತೆಗೆ ಧಾವಿಸಿದ. ವಿದ್ಯಾರ್ಥಿಯ ಒಂದು ಕಾಲು ಅಕ್ಕಪಕ್ಕದಲ್ಲಿ ಎಲ್ಲೂ ಕಾಣಿಸಲಿಲ್ಲ. ರಕ್ತ ಸುತ್ತಲು ಹೆಪ್ಪುಗಟ್ಟಿದ್ದು, ಹುಡುಗ ಪ್ರಜ್ಞಾಹೀನನಾಗಿದ್ದಾನೆ. ಜನರು, ಗುಂಪು ಗುಂಪಾಗಿ ನಿಂತು ದೂರದಿಂದಲೇ ನೋಡುತ್ತಿದ್ದಾರೆ. ಹತ್ತಿರ ಹೋಗಿದ್ದ ಚಿರಂಜೀವಿ...

"ಏನಾಯಿತು......?" ಪ್ರಶ್ನಿಸಿದ.

"ಸಾರ್ ರೈಲು ನಿಧಾನವಾಗಿ ಚಲಿಸುತ್ತಿರುವಾಗ ಕೆಳಕ್ಕೆ ಧುಮುಕಿದ. ಅವನು ನೇತಾಕಿಕೊಂಡಿದ್ದ ಬ್ಯಾಗು ಬಾಗಿಲಲ್ಲಿದ್ದ ಕೊಕ್ಕಗೆ ಹೇಗೋ ಸಿಕ್ಕಿಕೊಂಡು ಓಡುವ ರೈಲು ಮತ್ತು ಫ್ಲಾಟ್ ಫಾರಂ ಮಧ್ಯೆ ಬಿದ್ದುಬಿಟ್ಟ. ನಾವು ಆ ಹುಡುಗನನ್ನು ಆಸ್ಪತ್ರೆಗೆ ಸಾಗಿಸಲು ರೈಲು ಹಳಿಗಳಿಂದ ಪಕ್ಕಕ್ಕೆ ಎತ್ತಿಡಲೋದರು ಬಿಡಲಿಲ್ಲ. ಆ ಹುಡುಗನೆ ಇಲ್ಲಿಗೆ ತವಳುತ್ತಾ ಬಂದು ಅಯ್ಯೋ ನನ್ನನ್ನ ಬೇಗ ಆಸ್ಪತ್ರೆಗೆ ಸಾಗಿಸಿ ಎಂದು ತನ್ನ ಬ್ಯಾಗಿನಲ್ಲಿದ್ದ ರೂಪಾಯಿಗಳ ಕಂತೆಯನ್ನು ಎಲ್ಲರಿಗೂ ಎತ್ತಿ ತೋರಿಸುತ್ತಾ ಅಂಗಲಾಚಿ ಅಂಗಲಾಚಿ ಹಾಗೆ ಮಲಗಿಬಿಟ್ಟ. ಪೊಲೀಸರು ಬರುವವರೆಗೂ ಯಾರನ್ನೂ ಬಿಡುವುದಿಲ್ಲವೆಂದು ಅಡ್ಡ ನಿಂತುಬಿಟ್ಟ

ಆ ಬೇಪರ್ಸಿ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರ್ ಎಂದು ಅಲ್ಲಿದ್ದವರೆಲ್ಲ ಅವನ ಕಡೆಗೆ ಕೈ ತೋರಿಸಿದರು.

ಚಿರಂಜೀವಿಗೆ ಏನಾಯಿತೋ ಏನೋ........ ಸ್ಟೇಷನ್ ಮಾಸ್ಟರ್ ಹತ್ತಿರಕ್ಕೆ ಧಾವಿಸಿ ಕೈಯಲ್ಲಿದ್ದ ಬೆತ್ತದಿಂದ ಸ್ಟೇಷನ್ ಮಾಸ್ಟರಿಗೆ ಒಂದೇ ಸಮನೆ ನಾಯಿಗೆ ಬಾರಿಸಿದಂತೆ ಬಾರಿಸಿಬಿಟ್ಟ.

ಅನಂತರ ಹುಡುಗನನ್ನು ತುಂಡಾಗಿದ್ದ ಕಾಲಿನ ಸಮೇತ ಎತ್ತಿ ಜೀಪಿನಲ್ಲಾಕಿಕೊಂಡು ಆಸ್ಪತ್ರೆ ಕಡೆಗೆ ಧಾವಿಸಿದ. ಅಲ್ಲಿದ್ದವರೆಲ್ಲ ಮತ್ತೊಮ್ಮೆ ಸ್ಟೇಷನ್ ಮಾಸ್ಟರಿಗೆ ಇನ್ನಷ್ಟು ಗೂಸುಗಳನ್ನು ಬಿಟ್ಟು ಮನಸ್ಸಿಗೆ ಸ್ವಲ್ಪ ನೆಮ್ಮದಿ ತಂದುಕೊಂಡರು.

ಹುಡುಗ ಕೊನೆಗೂ ಉಳಿಯಲಿಲ್ಲ. ವಿಚಿತ್ರವೆಂದರೆ ಚಿರಂಜೀವಿಯ ಮೇಲೆ ಕಂಟೋನ್‌ಮೆಂಟ್ ರೈಲ್ವೇ ನಿಲ್ದಾಣದ ಉದ್ಯೋಗಿಗಳು ಕರ್ತವ್ಯದಲ್ಲಿದ್ದ ಉದ್ಯೋಗಿಯನ್ನು ಹೊಡೆದಿದ್ದಾರೆಂದು ಯೂನಿಯನ್ ಮುಖಾಂತರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು. ಇದೆಂತಹ ಯೂನಿಯನ್ ಎಂದು ಚಿರಂಜೀವಿ ಆಶ್ಚರ್ಯಗೊಂಡ. ಅದೇನೂ ಆಗಲಿಲ್ಲ, ಆದರೆ ಕಮೀಷನರ್ ಅವರು ಚಿರಂಜೀವಿಗೆ ಸ್ವಲ್ಪ ತಾಳ್ಮೆಯಿಂದ ನಡೆದುಕೊಳ್ಳುವಂತೆ ಉಪದೇಶ ನೀಡಿದರು. ಈ ವಿಷಯ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಯಿತು.

* * *

ಇನ್ನೊಂದು ದಿನ ಇದ್ದಕ್ಕಿದ್ದಾಗೆ ರಾತ್ರಿ ಶ್ರೀರಾಮಪುರದ ಕೊಳಚೆ ಪ್ರದೇಶದಲ್ಲಿ ವಾಸಿಸುವ ನಿವಾಸಿಗಳು ಕೆಲವರು ಸತ್ತಿರುವುದಾಗಿಯೂ ಮತ್ತು ಇನ್ನೂ ಕೆಲವರು ಪ್ರಜ್ಞಾಹೀನರಾಗಿ ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿದುಬಂದಿತು. ಕಳ್ಳಭಟ್ಟಿ ಸಾರಾಯಿ ಸೇವನೆಯೇ ಇದಕ್ಕೆ ಕಾರಣವಿರಬೇಕೆಂದು ಊಹಿಸಲಾಯಿತು.

ರಾತ್ರೋರಾತ್ರಿ ಪೇದೆಗಳ ಜೊತೆಗೆ ಧಾವಿಸಿದ ಚಿರಂಜೀವಿ ಅಲ್ಲಿನ ದೃಶ್ಯಗಳನ್ನು ನೋಡಿ ಆಶ್ಚರ್ಯಚಕಿತನಾದ. ಮೇಲು ನೋಟಕ್ಕೆ ಸುಂದರವಾಗಿ ಕಾಣುವ ಉದ್ಯಾನನಗರಿ ಬೆಂಗಳೂರಿನ ನಡುವೆ ಇಂತಹ ಕೊಳಚೆ ಪ್ರದೇಶಗಳು ಇರಲು ಸಾಧ್ಯವೇ......? ಜನರು ಇಷ್ಟು ಹೀನ ಸ್ಥಿತಿಯಲ್ಲಿ ಬದುಕುತ್ತಿರುವುದನ್ನು ಊಹಿಸಲೂ ಅವನಿಂದ ಸಾಧ್ಯವಾಗಲಿಲ್ಲ. ಎಲ್ಲಿ ನೋಡಿದರು ಗುಡಿಸಿಲುಗಳ ಮುಂದೆ ಆಕ್ರಂದನ ಮಾಡುತ್ತಿರುವ ಹೆಂಗಸರು, ಮಕ್ಕಳು ಪ್ರಜ್ಞೆ

ಕಳೆದುಕೊಂಡಿರುವ ಹತ್ತಾರು ಜನ ಗಂಡಸರನ್ನು ಪೊಲೀಸರು ಅವರ ಸಂಬಂಧಿಗಳ ಸಹಾಯದಿಂದ ಆಸ್ಪತ್ರೆಗೆ ಸಾಗಿಸಿ ಬರುತ್ತಿದ್ದಾರೆ. ಆಗಲೆ ಹತ್ತಾರು ಜನರು ಸಾವನ್ನಪ್ಪಿ ಅವರ ಹೆಣಗಳನ್ನು ಗುಡಿಸಿಲುಗಳ ಮುಂದೆ ಮಲಗಿಸಿ ಹೆಂಗಸರು, ಮಕ್ಕಳು ಗೋಳಾಡುತ್ತಿದ್ದಾರೆ. ಗಂಡಸರ ಜೊತೆಗೆ ಕಳ್ಳಭಟ್ಟಿ ಕುಡಿದ ಕೆಲವು ಹೆಂಗಸರು ಸತ್ತಿದ್ದಾರೆ.

ದಿನವಿಡೀ ದುಡಿದು ಹೊಟ್ಟೆ ತುಂಬಾ ಊಟವನ್ನು ತಿನ್ನಲಾರದ ಈ ಜನ ಕುಡಿಯುವ ಚಟಕ್ಕೆ ಯಾಕಾದರೂ ಅಂಟಿಕೊಳ್ಳುತ್ತಾರೆ ಎನ್ನುವುದು ಚಿರಂಜೀವಿಗೆ ಅರ್ಥವಾಗಲಿಲ್ಲ. ಎರಡು ದಿನಗಳಲ್ಲಿ ಇಪ್ಪತ್ತೈದು ಜನರು ಸತ್ತು, ಏಳು ಜನರು ಚಿಂತಾಜನಕ ಸ್ಥಿತಿಯಲ್ಲಿದ್ದು, ವಿವಿಧ ಆಸ್ಪತ್ರೆಗಳಲ್ಲಿ ಚೇತರಿಸಿಕೊಳ್ಳುತ್ತಿದ್ದರು. ಚಿರಂಜೀವಿಯ ಅಪ್ಪಣೆಯಂತೆ ಕಳ್ಳಭಟ್ಟಿ ಮಾರುತ್ತಿದ್ದ ಹಲವು ವ್ಯಾಪಾರಿಗಳನ್ನು ಪೊಲೀಸರು ಹಿಡಿದು ತಂದರು. ಚಿರಂಜೀವಿ ಎಲ್ಲರನ್ನು ಒಳಕ್ಕಾಗಿ ಗುಂಡಾಗಿದ್ದ ನಾಲ್ಕಾರು ಪೊಲೀಸರಿಗೆ ಚೆನ್ನಾಗಿ ತದುಕುವಂತೆ ಅಪ್ಪಣೆ ನೀಡಿದ. ಪೊಲೀಸರಿಗೆ ಸಣ್ಣ ಪುಟ್ಟ ರೌಡಿಗಳನ್ನು ಬಿಟ್ಟು ದೊಡ್ಡ ದೊಡ್ಡ ರೌಡಿಗಳನ್ನು, ರಾಜಕೀಯ ಹಿನ್ನೆಲೆ ಇರುವವರನ್ನು ತದುಕಲು ಅಷ್ಟು ಸಲೀಸಾಗಿ ಅಪ್ಪಣೆ ದೊರಕುತ್ತಿರಲಿಲ್ಲ. ಈಗ ಅಪ್ಪಣೆ ಸಿಕ್ಕಿದ್ದೆ ಸಾಕೆಂದು, ಚಿಲ್ಲರೆ ರೌಡಿಗಳನ್ನು ತದಕಿದಂತೆ ಮನಸಾ ಇಚ್ಛೆ ಎಲ್ಲನ್ನೂ ಚೆನ್ನಾಗಿ ತದಕಿಬಿಟ್ಟರು. ಇಷ್ಟಕ್ಕೂ ಯಾರಿಗೂ ಮೈ ಮೇಲೆ ರಕ್ತ ಕಾಣಿಸಿಕೊಳ್ಳಲಿಲ್ಲ. ತಮ್ಮ ಜೀವನದಲ್ಲಿಯೇ ಇಷ್ಟು ಏಟುಗಳನ್ನು ಪೊಲೀಸರಿಂದ ತಿಂದಿರದ ಕಳ್ಳಭಟ್ಟಿ ಸಾರಾಯಿ ಮಾರುವ ವ್ಯಾಪಾರಿಗಳು ಮತ್ತು ರೌಡಿಗಳು ದಂಗಾಗಿಬಿಟ್ಟರು. ಈ ವ್ಯಾಪಾರವನ್ನು ಬಿಟ್ಟು, ಬೇರೆ ಏನಾದರೂ ವ್ಯಾಪಾರ ನೋಡಿಕೊಳ್ಳುವುದೇ ವಾಸಿಯೆಂದು ಕೆಲವರು ತೀರ್ಮಾನಕ್ಕೆ ಬಂದರು.

ಬಂಧಿಸಿರುವ ಎಲ್ಲಾ ಕಳ್ಳಭಟ್ಟಿ ವ್ಯಾಪಾರಿಗಳು ಮತ್ತು ರೌಡಿಗಳನ್ನು ಬೇಯಲ್ ಮೇಲೆ ಬಿಡಿಸಿಕೊಳ್ಳಲು ಒಬ್ಬ ಲಾಯರು ಕಪ್ಪು ಕೋಟು ಧರಿಸಿ ಶ್ರೀರಾಮಪುರ ಪೊಲೀಸ್ ಠಾಣೆಗೆ ಬಂದ. ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಚಿರಂಜೀವಿಯ ಧೈರ್ಯದಿಂದ ಬಿಡಲಾಗುವುದಿಲ್ಲ... ನಾವೆ ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತೇವೆಂದು ಮರುದಿನವೆ ನ್ಯಾಯಾಲಯಕ್ಕೆ ಕರೆದುಕೊಂಡೋಗೆ ನಿಲ್ಲಿಸಿಬಿಟ್ಟರು. ಆಗಲೇ ತಲ್ಲಣಗೊಂಡಿದ್ದ ಬೆಂಗಳೂರಿನ ಜನ ಅಪರಾಧಿಗಳಿಗೆ ತೀವ್ರವಾದ ಶಿಕ್ಷೆ ಆಗಲೇಬೇಕೆಂದು ಎಲ್ಲೆಲ್ಲೂ ಒತ್ತಾಯ

ತಂದರು. ಪತ್ರಿಕೆಗಲು ಪೋಲಿಸರನ್ನು, ರೌಡಿಗಳನ್ನು ಮತ್ತು ರಾಜಕೀಯ ನಾಯಕರನ್ನು ಚೆನ್ನಾಗಿ ನಿಂದಿಸಿ ಬರೆದವು. ನ್ಯಾಯಾಲಯ ಬಂಧಿಸಿದ್ದ ಎಲ್ಲಾ ಅಪರಾಧಿಗಳನ್ನು ಒಂದು ವಾರ ಪೊಲೀಸರಿಗೆ ಒಪ್ಪಿಸಿ ಮುಂದಿನ ತನಿಖೆಯನ್ನು ಮಾಡುವಂತೆ ಆದೇಶ ನೀಡಿ ಇದಕ್ಕೆ ಕಾರಣರಾದ ಎಲ್ಲರನ್ನು ಶೀಘ್ರವೇ ಬಂಧಿಸುವಂತೆ ಎಚ್ಚರಿಕೆ ನೀಡಿತು.

ಬಂಧಿತ ಅಪರಾಧಿಗಳನ್ನು ಪೊಲೀಸರು ಮತ್ತೊಮ್ಮೆ ತದಕಲು ಅವಕಾಶವನ್ನು ಗಿಟ್ಟಿಸಿಕೊಂಡರು. ಈಗಾಗಲೆ ಮೈ ಚಳಿ ಬಿಟ್ಟು ಹೋಗುವಂತೆ ಮೈ ಹುಣ್ಣಾಗಿಸಿಕೊಂಡಿದ್ದ ಅಪರಾಧಿಗಳು ಎಲ್ಲವನ್ನೂ ಕಕ್ಕಿಬಿಟ್ಟರು. ಅದರ ಹಿಂದೆ ದೊಡ್ಡ ದೊಡ್ಡ ರಾಜಕೀಯ, ಮಾಫೀಯ ನಾಯಕರೆ ಇರುವುದು ಸಾಬೀತಾಯಿತು. ರಾಜಕಾರಣಿಗಳು ದಾಖಲೆಗಳ ಸಮೇತ ಕೇಸನ್ನು ಹೇಗಾದರು ಮಾಡಿ ಮುಚ್ಚಲು ತೆರೆಮರೆಯಲ್ಲಿ ಪ್ರಯತ್ನಗಳನ್ನು ನಡೆಸತೊಡಗಿದರು. ಶ್ರೀರಾಮಪುರದ ಸರ್ಕಲ್ ಇನ್ಸ್‌ಪೆಕ್ಟರ್ ಆ ದಾಖಲೆಗಳನ್ನೆಲ್ಲ ಚಿರಂಜೀವಿಯ ಕೈಗೆ ನೀಡುತ್ತಾ,

"ಸರ್ ಇವುಗಳನ್ನು ನನ್ನಿಂದ ಬಚ್ಚಿಡಲಾಗುವುದಿಲ್ಲ...... ಹೇಗಾದರು ನೀವೇ ಈ ದಾಖಲೆಗಳನ್ನು ಕಾಪಾಡಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು" ಎಂದು ಕೊಟ್ಟುಬಿಟ್ಟರು.

ಸಾರ್ವಜನಿಕರ ಒತ್ತಾಯದಿಂದ ರಾಜಕಾರಣಿಗಳು, ಪೊಲೀಸ್ ವಿಭಾಗಕ್ಕೆ ತೀವ್ರ ಚರ್ಯೆಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶನ ನೀಡಿ ಈಗ ಪೇಚಾಟಕ್ಕೆ ಸಿಕ್ಕಿಕೊಂಡಿತ್ತು. ಕಳ್ಳಬಟ್ಟಿ ಸಾರಾಯಿಯ ವ್ಯಾಪಾರ ಮಾಮೂಲು ಎಂದು ತಿಳಿದಿದ್ದ ಪೊಲೀಸ್ ಕಮೀಷನರ್ ಅವರು ಇದೆಲ್ಲಾ ಮಾಮೂಲೇ ಎಂದು ಗೊತ್ತಿದ್ದರು ಚಿರಂಜೀವಿಯ ಸಮೇತ ಇನ್ನೂ ಕೆಲವರನ್ನು ಕೋಣೆಗೆ ಕರೆಸಿ

"ಏನ್ರಿ ಇದೆಲ್ಲಾ.....?" ಎಂದು ಗೊಣಗಿದರು. ಪೊಲೀಸ್ ಕಥೆಗಳನ್ನು ಎಷ್ಟೋ ಗೋಪ್ಯವಾಗಿ ಮರೆಮಾಚಿದರು. ಆದರೂ ಯಾವುದೋ ಮೂಲಗಳಿಂದ ಅಥವಾ ಸಾರ್ವಜನಿಕರ ಪ್ರತಿಕ್ರಿಯೆಗಳಿಂದ ಪತ್ರಿಕೆಗಳವರು ಹೇಗೆ ತಿಳಿದುಕೊಂಡು ಬರೆದು ಬಿಡುತ್ತಿದ್ದರು.

"ನಮ್ಮ ವಿಭಾಗದಿಂದ ಯಾವ ವಿವರಗಳು ಯಾವುದೇ ಕಾರಣಕ್ಕೂ ಹೊರಗಡೆಗೆ ಹೋಗಬಾರದು" ಎಂಬುದಾಗಿ ಕಮೀಷನರ್ ಅವರು ಮನವಿ

ಮಾಡಿಕೊಂಡರು. ಈ ಕೇಸಿನಲ್ಲಿ ಹೆಚ್ಚೂ ಕಡಿಮೆಯಾದರೆ ಚಿರಂಜೀವಿ ಮತ್ತು ಶ್ರೀರಾಮಪುರ ಸರ್ಕಲ್ ಇನ್ಸ್‌ಪೆಕ್ಟರಿಗೆ ವರ್ಗ ಕಟ್ಟಿಟ್ಟ ಬುತ್ತಿ ಎನ್ನುವುದಾಗಿ ಗುಮಾನಿ ಹುಟ್ಟಿಕೊಂಡಿತು.

* * *

೬

ಮದುವೆ ಮಾಡಿಕೊಂಡಾಗಿನಿಂದ ಓದುವುದನ್ನು ಮರೆತು ಹೋಗಿದ್ದ ಚಿರಂಜೀವಿ ಒಂದು ವರ್ಷದ ಪೊಲೀಸ್ ತರಬೇತಿಯಲ್ಲಿ ಪೊಲೀಸ್ ಇಲಾಖೆಯ ಫೈಲುಗಳನ್ನು, ಪೊಲೀಸ್ ಸಾಹಿತ್ಯವನ್ನು ಬಿಟ್ಟು ಮತ್ತೇನನ್ನು ಓದಲಾಗಲಿಲ್ಲ. ಇದರ ನಡುವೆ ಐ.ಎ.ಎಸ್.ಗೆ ಮತ್ತೆ ಆಯ್ಕೆಯಾಗಬೇಕೆಂಬ ಅವನ ಆಸೆ ಸ್ವಲ್ಪ ಸ್ವಲ್ಪವಾಗಿ ಇಂಗಿ ಹೋಗುತ್ತಿತ್ತು.

ಚಂದ್ರಕಲಾಳ ಜೊತೆಗೆ ಹೆಚ್ಚು ಸಮಯವನ್ನು ಕಳೆಯಬೇಕೆನ್ನುವ ಆಸೆಯೂ ಅಷ್ಟಾಗಿ ಈಡೇರುತ್ತಿರಲಿಲ್ಲ. ಒಬ್ಬ ಅಧಿಕಾರಿಗೆ ಕರ್ತವ್ಯ ಮತ್ತು ಕುಟುಂಬ ಎರಡು ಕಣ್ಣುಗಳಾಗಿದ್ದು, ಎರಡನ್ನು ಏಕಕಾಲಕ್ಕೆ ತೃಪ್ತಿಯಾಗಿ ನಿಭಾಯಿಸುವುದು ಸುಲಭದ ಕೆಲಸವಲ್ಲ ಎನ್ನುವುದು ಚಿರಂಜೀವಿಗೆ ಈಗೀಗ ಮನವರಿಕೆಯಾಗುತ್ತಿತ್ತು. ಎರಡನ್ನು ಸರಿದೂಗಿಸಿಕೊಂಡು ಹೋಗುವುದೂ ಒಬ್ಬ ದಕ್ಷ ಅಧಿಕಾರಿಯ ಕೆಲಸವು ಹೌದು.

ಚಿರಂಜೀವಿ ಕಛೇರಿಗೆ ಹೋದ ಮೇಲೆ ಚಂದ್ರಕಲಾ ತನ್ನ ತಾಯಿ ಮತ್ತು ಗೆಳತಿಯರ ಮನೆಗಳಿಗೆ, ಪೊಲೀಸ್ ಅಧಿಕಾರಿಗಳ ಕುಟುಂಬ ಕಲ್ಯಾಣ ಏರ್ಪಡಿಸುವ ಕಾರ್ಯಕ್ರಮಗಳಿಗೆ ಹೋಗಿ ಬರುತ್ತಿದ್ದಳು. ಕೆಲವೊಮ್ಮೆ ಸಹೋದ್ಯೋಗಿ ಅಧಿಕಾರಿಗಳ ಮನೆಗಳಲ್ಲಿ ನಡೆಯುವ ಸಮಾರಂಭಗಳಿಗೂ ಚಿರಂಜೀವಿ ದಂಪತಿಗಳನ್ನು ಆಹ್ವಾನಿಸುತ್ತಿದ್ದರು. ಇದರ ನಡುವೆ ಚಂದ್ರಕಲಾ, ಬ್ಯೂಟಿಪಾರ್ಲರ್, ಮನೆ ವಿನ್ಯಾಸ, ತೋಟಗಾರಿಕೆ ಇತ್ಯಾದಿ ತರಬೇತಿಗಳನ್ನು ಮುಗಿಸಿದ್ದಳು.

ಚಿರಂಜೀವಿ ಮತ್ತು ಚಂದ್ರಕಲಾ ಡೈನಿಂಗ್ ಟೇಬಲಿನ ಮೇಲೆ ಊಟ ಮಾಡುತ್ತಿದ್ದಾರೆ.

"ಎಲ್ಲಾ ತರಬೇತಿಗಳು ಸರಿ, ಕುಕ್ಕಿಂಗ್ ತರಬೇತಿಯನ್ನು ಯಾಕೆ ಮಾಡಲಿಲ್ಲ...?" ಚಿರಂಜೀವಿ ತಿನ್ನುತ್ತಾ ಪ್ರಶ್ನಿಸಿದ.

"ನಾನು ಮಾಡುವ ಅಡಿಗೆ ರುಚಿ ಇಲ್ಲವೆ?" ಚಂದ್ರಕಲಾ ಮುಖವನ್ನು ಗಂಟಿಕ್ಕಿಕೊಂಡಳು. ಒಳ್ಳೆ ಪ್ರಶ್ನೆಯನ್ನು ಕೇಳಿದೆನಲ್ಲ ಎಂದುಕೊಂಡ ಚಿರಂಜೀವಿ.

"ನೀನು ನಿಜವಾಗಿಯೂ ಒಳ್ಳೆ ಅಡಿಗೆ ಮಾಡ್ತೀಯ" ಎಂದ. ಚಂದ್ರಕಲಾ ಹಾಗೆ ಇದ್ದಳು.

ಚಿರಂಜೀವಿ ಮಾತು ಮುಂದುವರಿಸಿದ

"ಆರೋಗ್ಯಕ್ಕೆ ಒಳ್ಳೆ ಆಹಾರ ಎಂದರೆ ಚೈನೀಸ್ ಆಹಾರ ಎನ್ನುತ್ತಾರೆ. ಈಗ ಪ್ರಪಂಚದಲ್ಲಿ ಚೈನೀಸ್ ಆಹಾರ ತುಂಬಾ ಪಾಪ್ಯುಲರ್ ಆಗಿದೆ. ಈ ದಿನ ನಮ್ಮ ಕಛೇರಿಯಲ್ಲಿ ಯಾರೋ ಹೇಳುತ್ತಿದ್ದರು. ಇಂಗ್ಲೆಂಡಿನಲ್ಲಿ ಕೆಲಸ ಮಾಡಬೇಕಂತೆ... ಅಮೇರಿಕಾದ ಸಂಬಳ ದೊರಕಬೇಕಂತೆ... ಚೈನೀಸ್ ಆಹಾರ ತಿನ್ನಬೇಕಂತೆ... ಜೊತೆಗೆ ಭಾರತದ ಹೆಣ್ಣನ್ನು ಮದುವೆಯಾಗಬೇಕಂತೆ...... ಈಗ ಹೆಚ್ಚೂ ಕಡಿಮೆ ನನಗೆ ಎಲ್ಲಾ ದೊರಕಿದೆ ಆದರೆ ಚೈನೀಸ್ ಆಹಾರ ಮಾತ್ರ ಇಲ್ಲ" ಎಂದ.

"ಅಬ್ಬಾ..... ಒಂದು ಮಾತನ್ನು ಮುಚ್ಚಿಕೊಳ್ಳಲು ಇಷ್ಟು ಮಾತುಗಳನ್ನು ಹೇಳಬೇಕಾಗಿತ್ತೆ" ಎಂದಳು ಚಂದ್ರಕಲಾ.

"ವಂದನೆಗಳು ಪ್ರಿಯತಮ" ಎಂದ ಚಂದ್ರಕಲಾ, ಚಿರಂಜೀವಿಯನ್ನು ಹಿಂದಿನಿಂದ ಗಟ್ಟಿಯಾಗಿ ತಬ್ಬಿಕೊಂಡಳು.

ಊಟ ಮುಗಿದ ನಂತರ ಚಂದ್ರಕಲಾ ಚಿರಂಜೀವಿಯನ್ನು ತಬ್ಬಿಕೊಂಡೇ ಕೋಣೆಯ ಒಳಕ್ಕೆ ಹೋದಳು.

ಸಾಯಂಕಾಲ ಸಮಯ ಐದೂವರೆ ಗಂಟೆ. ಚಿರಂಜೀವಿ ಡ್ಯೂಟಿ ಮುಗಿಸಿಕೊಂಡು ಅಂಬಾಸಿಡರ್ ಕಾರಿನಲ್ಲಿ ಮನೆಗೆ ಬರುತ್ತಿದ್ದ. ಮಳೆ ಸಣ್ಣದಾಗಿ ತೂರುತ್ತಿತ್ತು. ಅವನ ಹಿಂದಿನಿಂದ ಮುಂದಕ್ಕೆ ಬಂದ ಒಂದು ಮಾರುತಿ ಕಾರು ವೇಗವಾಗಿ ಧಾವಿಸಿತ್ತು. ಅದರ ಹಿಂದೆಯೇ ಒಂದು ಮಾರುತಿ ವ್ಯಾನು ಅದನ್ನು ಹಿಂಬಾಲಿಸುವಂತೆ ಧಾವಿಸಿತು. ಅಂಬಾಸಿಡರ್ ಓಡಿಸುತ್ತಿದ್ದ ಪೋಲೀಸ್ ಪೇದೆಗೆ ಚಿರಂಜೀವಿ, ವೇಗವನ್ನು ಹೆಚ್ಚಿಸುವಂತೆ ಹೇಳಿದ. ಮೂರು ವಾಹನಗಳು ಒಂದರ ಹಿಂದೆ ಒಂದು ಧಾವಿಸುತ್ತಿವೆ.

ಸುಮಾರು ಎರಡು ಮೂರು ಕಿಲೋಮೀಟರುಗಳು ದೂರ ಓಡಿದ ಮೇಲೆ ರಸ್ತೆ ತೀವ್ರ ತಿರುವಿನಿಂದ ಕೂಡಿದ್ದು ನಾಲ್ಕು ರಸ್ತೆಗಳು ಸಂಧಿಸುವ ವೃತ್ತ ಬಂದಿತು. ಜನರ ಓಡಾಟವು ಹೆಚ್ಚಾಗಿತ್ತು. ಸುಮಾರು ಹಿಂದಿದ್ದ ಚಿರಂಜೀವಿಯ ವಾಹನ ಈಗ ವೃತ್ತದ ಹತ್ತಿರಕ್ಕೆ ಸಮೀಪಿಸಿತ್ತು. ಬಹುಶಃ ಆ ವಾಹನ ಪೋಲೀಸ್ ವಾಹನವೆಂದು ಮುಂದಿದ್ದ ಮಾರುತಿ ಕಾರಿನಲ್ಲಿದ್ದವರಿಗೆ ತಿಳಿದಿತ್ತೋ ಏನೋ ಅಂತೂ ಅದನ್ನು ಹಿಂಬಾಲಿಸುತ್ತಿದ್ದ ಮಾರುತಿ ವ್ಯಾನಿನಲ್ಲಿದ್ದವರಿಗೆ ಚಿರಂಜೀವಿ ಇದ್ದ ವಾಹನ ಪೋಲೀಸ್‌ನವರ ವಾಹನವೆಂದು ಗೊತ್ತಿರಲಿಲ್ಲ ಎನಿಸುತ್ತದೆ.

ಮಾರುತಿ ಕಾರಿನಲ್ಲಿದ್ದ ಇಬ್ಬರು ಯುವಕರು ಕಾರನ್ನು ನಿಲ್ಲಿಸಿ ರಸ್ತೆಯಲ್ಲಿ ಓಡಲು ಪ್ರಾರಂಭಿಸಿದರು. ಕಾರಿನಲ್ಲೇ ಇದ್ದಿದ್ದರೆ ಅವರು ಸುರಕ್ಷಿತವಾಗಿ ಇರುತ್ತಿದ್ದರೋ ಏನೋ ಹಿಂದೆಯೇ ನಿಲ್ಲಿಸಿದ ಮಾರುತಿ ವ್ಯಾನಿನಲ್ಲಿದ್ದ ನಾಲ್ಕು ದಢೂತಿ ಕಟ್ಟಾಳುಗಳು ಅವರನ್ನು ಹಿಂಬಾಲಿಸುತ್ತ ಓಡಿದರು. ಇನ್ನೊಂದು ತಿರುವಿನಲ್ಲಿ ವೇಗವಾಗಿ ಧಾವಿಸಿ ಬರುತ್ತಿದ್ದ ಒಂದು ಕಾರು ಮತ್ತು ಬಿ.ಟಿ.ಎಸ್. ಬಸ್ಸು ಚಾಲಕರು ನಾಲ್ಕಾರು ಜನ ಓಡಿ ಬರುವುದನ್ನು ನೋಡಿ ಬ್ರೇಕ್ ಹಾಕಿ ನಿಲ್ಲಿಸಿದರು. ಮುಂದೆ ಓಡುತ್ತಿರುವ ಇಬ್ಬರು ಯುವಕರು ಎದುರಿಗೆ ಬರುತ್ತಿರುವ ವಾಹನಗಳಿಂದ ತಪ್ಪಿಸಿಕೊಳ್ಳಲು ರಸ್ತೆಯ ಒಂದು ಕಡೆಗೆ ಇಬ್ಬರೂ ಓಡಿದರು. ಅಷ್ಟರಲ್ಲಿ ಹಿಂದೆ ಓಡಿ ಬರುತ್ತಿದ್ದ ನಾಲ್ಕು ಧಾಂಡಿಗರು ವೇಗವಾಗಿ ಓಡಿ ಇಬ್ಬರನ್ನು ಅಡ್ಡಗಟ್ಟಿದರು. ನೋಡುತ್ತಿರುವ ಜನ ದಿಕ್ಕಾಪಾಲಾಗಿ ಓಡತೊಡಗಿದರು. ಚಿರಂಜೀವಿ, ಅಷ್ಟರಲ್ಲಿ ತನ್ನಲ್ಲಿದ್ದ ಪಿಸ್ತೂಲನ್ನು ಕಿಟಕಿಯ ಒಳಗಿಂದ ಗುರಿ ಮಾಡಿಕೊಂಡು ಅಂಬಾಸಿಡರ್ ಕಾರನ್ನು ನಿಧಾನವಾಗಿ ಚಲಿಸುವಂತೆ ಪೇದೆಗೆ ಹೇಳಿದ.

ಸುತ್ತುವರಿದಿರುವ ನಾಲ್ಕು ಧಾಂಡಿಗರ ಪೈಕಿ ಇಬ್ಬರ ಕೈಗಳಲ್ಲಿ ಎಕೆ47 ಮಾದರಿಯ ಎರಡು ಗನ್ನುಗಳಿದ್ದು ಆ ಯುವಕರ ಕಡೆಗೆ ಗುರಿ ಮಾಡಿದ್ದೆ ಕ್ಷಣಗಳಲ್ಲಿ ಇಬ್ಬರ ದೇಹಗಳನ್ನು ಗುಂಡುಗಳು ಪಟ್ ಪಟ್ ಎಂದು ತೂರಿ ಹೋದವು. ದೂರದಿಂದ ನೋಡುತ್ತಿದ್ದವರೆಲ್ಲ ಬೆಕ್ಕಸಬೆರಗಾಗಿ, ದಿಗ್ಮೂಢರಾಗಿ ನಿಂತು ಬಿಟ್ಟರು. ಇಬ್ಬರು ಕೆಳಕ್ಕೆ ಉರುಳುವ ಮುಂಚೆಯೇ ಹಿಂದಕ್ಕೆ ತಿರುಗಿಕೊಂಡ ನಾಲ್ಕು ಆಗಂತುಕರಲ್ಲಿ ಗನ್ನು ಹಿಡಿದುಕೊಂಡಿರುವ ಇಬ್ಬರ ಮೇಲೆ

ಚಿರಂಜೀವಿ ಕಾರಿನ ಕಿಟಕಿಯಿಂದಲೇ 0.38 ಮಿ.ಮಿ.ನ ಒಂದೊಂದು ಗುಂಡನ್ನು ಸರಿಯಾಗಿ ಗುರಿ ಮಾಡಿ ಪಿಸ್ತೂಲ್ ಟ್ರಿಗರ್ ಒತ್ತಿದ.

ಈಗ ಅಂಬಾಸಿಡರ್ ಕಾರಿನವರು ಯಾರೋ ಪೋಲೀಸರ ಕಾರು ಇದ್ದಂತೆ ಇದೆಯಲ್ಲ ಎಂದುಕೊಳ್ಳುವಷ್ಟರಲ್ಲಿ ಒಬ್ಬ ಕೆಳಕ್ಕೆ ಉರುಳಿ ಇನ್ನೊಬ್ಬ ಗನ್ನನ್ನು ಕಾರಿನ ಕಡೆಗೆ ಗುರಿ ಮಾಡಿದ. ತಕ್ಷಣವೇ ಚಿರಂಜೀವಿ ಪಿಸ್ತೂಲಿನಿಂದ ಇನ್ನೊಂದು ಗುಂಡು ಅವನ ಎದೆಯ ಒಳಕ್ಕೆ ತೂರಿಕೊಂಡಿತು. ಮೊದಲಿಗೆ ಕೆಳಕ್ಕೆ ಬಿದ್ದಿದ್ದವನು ಎದ್ದು ಕಾರಿನ ಒಳಕ್ಕೆ ಸೇರಿಕೊಂಡು ಬಿಟ್ಟ. ಅಷ್ಟರಲ್ಲಿ ಇನ್ನಿಬ್ಬರು ಕಾರಿನ ಒಳಗಡೆ ಸೇರಿಕೊಂಡಿದ್ದು ಕಾರು ಒಂದೇ ವೇಗವಾಗಿ ಧಾವಿಸಿ ಮಾಯವಾಯಿತು.

ಕೆಳಗಡೆ ಬಿದ್ದಿದ್ದ ಒಬ್ಬ ಧಾಂಡಿಗನನ್ನು ಚಿರಂಜೀವಿ ತನ್ನ ಕಾರಿನಲ್ಲಾಕಿಕೊಂಡು ಅವನಿಂದ ದೂರ ಬಿದ್ದಿದ್ದ ಎಕೆ47 ಮಾದರಿಯ ಗನ್ನನ್ನು ತನ್ನ ಕುರ್ಚಿಯಲ್ಲಿ ಸುತ್ತಿಕೊಂಡು ಕಾರಿನಲ್ಲಿಟ್ಟುಕೊಂಡು ಜಯನಗರದ ಒಂದು ಆಸ್ಪತ್ರೆಗೆ ಧಾವಿಸಿದ. ಅವನ ದೇಹದೊಳಕ್ಕೆ ಎರಡು ಗುಂಡುಗಳು ತೂರಿದ್ದವು. ಒಂದು ಕಾಲಿನಲ್ಲಿ, ಇನ್ನೊಂದು ಭುಜಕ್ಕೆ, ಭುಜಕ್ಕೆ ಗುರಿ ಹಿಡಿದ ಗುಂಡು ಅದೇಗೋ ಅವನ ಎದೆಯೊಳಕ್ಕೆ ತೂರಿಕೊಂಡಿತ್ತು. ಆಗಂತುಕರು ಚಿರಂಜೀವಿಯನ್ನು ಗಮನಿಸಿರಲಿಲ್ಲ. ಚಿರಂಜೀವಿ ಪಿಸ್ತೂಲಿನ ಟ್ರಿಗರ್ ಒತ್ತುವುದಕ್ಕೂ ಆಗಂತುಕರು ಅವಸರದಲ್ಲಿ ಹಿಂದಕ್ಕೆ ತಿರುಗಿಕೊಂಡು ಓಡುವುದು ಒಂದೇ ಸಮಯವಾಗಿತ್ತು. ಓಡಿ ಹೋದವರಲ್ಲಿ ಒಬ್ಬನ ದೇಹದೊಳಕ್ಕೆ ಚಿರಂಜೀವಿ ನೇರವಾಗಿ ಗುಂಡು ತೂರಿಸಿದ್ದರು ಹೇಗೆ ಎದ್ದು ಹೋದ ಎಂದು ಆಶ್ಚರ್ಯಪಟ್ಟ.

ಆಗಂತುಕನನ್ನು ಆಸ್ಪತ್ರೆಯಲ್ಲಿ ಸೇರಿಸಿ ಡಾಕ್ಟರ್ ಎದುರಲ್ಲಿ ಮಾಹಿತಿಯನ್ನು ಪಡೆದುಕೊಳ್ಳುತ್ತಿರುವ ಸಮಯದಲ್ಲಿ ಅವನು ಕೊನೆ ಉಸಿರೆಳೆದ. ಇದನ್ನು ನೋಡಿದ ಚಿರಂಜೀವಿಯ ನಾಲಿಗೆ ಒಮ್ಮೆಲೆ ಒಣಗಿ ಹೋದಂತಾಯಿತು. ನಾಲ್ಕು ಧಾಂಡಿಗರು ಆಕ್ರಮಣ ನಡೆಸಿದ ಇಬ್ಬರು ಯುವಕರನ್ನು ಅದೇ ಆಸ್ಪತ್ರೆಗೆ ತಂದಾಗ ಒಬ್ಬ ಸತ್ತು ಇನ್ನೊಬ್ಬ ಶಸ್ತ್ರಚಿಕಿತ್ಸೆಯಿಂದ ಪಾರಾಗಿದ್ದ. ಆದರೂ ಅವನು ಮಾತನಾಡಲು ಕನಿಷ್ಠ ಎರಡು ದಿನಗಳಾದರೂ ಬೇಕಿದೆಯೆಂದು ಆಸ್ಪತ್ರೆಯ ಮೂಲಗಳು ತಿಳಿಸಿದವು. ಚಿರಂಜೀವಿ ಬೆಳಗ್ಗೆ ಯಾರ ಮುಖ

ನೋಡಿದ್ದನೋ, ಏನು ಗ್ರಹಚಾರವೋ ಎಲ್ಲವೂ ಸಿನಿಮಾದಲ್ಲಿನ ಕಥೆಯಂತೆ ನಿಮಿಷಗಳಲ್ಲಿ ನಡೆದುಹೋಗಿತ್ತು.

ಪೋಲೀಸ್ ಮುಖ್ಯಸ್ಥರೆಲ್ಲ ಗುಂಪು ಗುಂಪಾಗಿ ಆಸ್ಪತ್ರೆಗೆ ಧಾವಿಸಿ ಬಂದು "ಈ ಚಿರಂಜೀವಿ ಇದೇನು ಮಾಡಿಬಿಟ್ಟ" ಎಂದು ತಲೆ ತಲೆ ಚಚ್ಚಿಕೊಂಡರು. ಪತ್ರಿಕೆಗಳು ಚಿರಂಜೀವಿಯನ್ನು ಇಡೀ ರಾತ್ರಿ ಸುತ್ತುವರಿದು ಬೆಳಗ್ಗೆ ಅವನ ಭಾವಚಿತ್ರಗಳ ಸಮೇತ ಬಣ್ಣ ಬಣ್ಣದ ಕಥೆಗಳನ್ನು ಕಟ್ಟಿ, ಸತ್ತವರ ಚಿತ್ರಗಳನ್ನು ಪ್ರಕಟಿಸಿದರು. ಬೆಳಗ್ಗೆ ಎದ್ದ ತಕ್ಷಣ ಎಲ್ಲರ ಬಾಯಲ್ಲೂ ಅದೇ ಸುದ್ದಿಯಾಯಿತು. ಆದರೆ ಚಿರಂಜೀವಿ ಮಾತ್ರ ಎಲ್ಲರಿಗೂ ಒಂದೇ ಉತ್ತರವನ್ನು ನೀಡಿದ್ದ.

"ನನಗೆ ಅದರ ಬಗ್ಗೆ ಏನೂ ಗೊತ್ತಿಲ್ಲ.... ತನಿಖೆ ಮಾಡುತ್ತಿದ್ದೇನೆ. ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವವರು ಎಚ್ಚರಗೊಂಡರೆ ಎಲ್ಲವು ಬಯಲಾಗುತ್ತದೆ" ಎಂದು ಹೇಳಿಕೆ ನೀಡಿದ.

ಬೆಳಗಿನ ಪತ್ರಿಕೆಗಳಲ್ಲಿ ಇನ್ನೂ ಕೆಲವು ಸ್ವಾರಸ್ಯಕರ ಮಾಹಿತಿಗಳು ಪ್ರಕಟವಾಗಿದ್ದವು. ಆ ಕ್ರಮಣಕಾರರು ಸಾಯಿಸಿದವರಲ್ಲಿ ಒಬ್ಬ ಅಂಡರ್ ವರ್ಲ್ಡ್ ರೌಡಿಯಾಗಿದ್ದು ಅವನ ರಾಜ್ಯದ ಮುಖ್ಯ ಶಾಸಕರ ಜೊತೆಗೆ ನಿಕಟ ಸಂಪರ್ಕ ಹೊಂದಿರುವುದಾಗಿ ಬರೆಯಲಾಗಿತ್ತು. ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಇನ್ನೊಬ್ಬ ರೌಡಿ ಯಾವುದೋ ಗಲ್ಲಿಯ ಮರಿ ರೌಡಿಯೆಂದು ಬರೆಯಾಲಾಗಿತ್ತು. ಇನ್ನು, ಆಕ್ರಮಣ ಮಾಡಿದ ರೌಡಿಗಳಲ್ಲಿ ಸತ್ತವನು ಯಾರೆಂದು ಇದುವರೆಗೂ ತಿಳಿದಿಲ್ಲ. ಬಹುಶಃ ಅವನು ಮುಂಬಯಿಯಿಂದ ಕರೆತಂದಿರುವ ಬಾಡಿಗೆ ಕೊಲೆಗಾರ ಇರಬಹುದೆಂದು ಪತ್ರಿಕೆ ವರದಿಗಳಲ್ಲಿ ಅನುಮಾನಿಸಲಾಗಿತ್ತು.

ಮಾರುತಿ ವ್ಯಾನಿನಲ್ಲಿ ಪರಾರಿಯಾಗಿರುವ ಮೂವರನ್ನು ಹಿಡಿಯಲು ಪೋಲೀಸ್ ವಿಭಾಗ ವ್ಯಾಪಕವಾಗಿ ತನಿಖೆ ನಡೆಸುತ್ತಿದೆ ಎಂದು ತಿಳಿಸಲಾಗಿತ್ತು. ಆಶ್ಚರ್ಯವೆಂದರೆ ಆಕ್ರಮಣಕ್ಕೆ ಬಳಸಿದ ವಾಹನ ಕರ್ನಾಟಕದಲ್ಲಿ ನೊಂದಣಿಯಾಗಿರುವ ವಾಹನವಲ್ಲವೆಂದು ನಂಬಲಾಗಿದೆ ಎಂದು ಹೇಳಲಾಗಿತ್ತು. ಜೊತೆಗೆ ಆ ಸಂಖ್ಯೆಯ ಕಾರು ಎಲ್ಲಿಯೂ ಇದುವರೆಗೆ ದೊರೆತಿಲ್ಲ. ಬಹುಶಃ ಎರಡು ಮೂರು ವಾಹನಗಳ ಮೂಲಕ ಈಗಾಗಲೇ ಒಬ್ಬೊಬ್ಬರು ಒಂದೊಂದು

ದಿಕ್ಕಿನಲ್ಲಿ ಬೆಂಗಳೂರಿಂದ ಪರಾರಿಯಾಗಿರಬಹುದು ಅಥವಾ ಬೆಂಗಳೂರಿನಲ್ಲೇ ಎಲ್ಲಾದರೂ ಅಡಗಿಕೊಂಡಿರುವ ಸಂಭವವನ್ನೂ ತಳ್ಳಿಹಾಕುವಂತಿಲ್ಲ ಎಂದು ಬರೆಯಲಾಗಿತ್ತು.

ಚಿರಂಜೀವಿಯ ಸಾಹಸಗಳನ್ನು ಕೇಳಿದ ಚಂದ್ರಕಲಾ ಒಮ್ಮೆಲೇ ಭೂಮಿಗೆ ಕುಸಿದುಹೋದಳು.

"ನಾನು ಈ ಐ.ಪಿ.ಎಸ್. ಬೇಡ.... ಬೇಡ, ಐ.ಎ.ಎಸ್. ಗೆ ಸೇರಬೇಕೆಂದು ಬಡಕೊಂಡೆ. ನೀವು ನನ್ನ ಮಾತು ಕೇಳಲಿಲ್ಲ. ಈಗಲೂ ಕಾಲ ಮಿಂಚಿಲ್ಲ, ರಾಜೀನಾಮೆ ನೀಡಿ ಮತ್ತೆ ಸಿವಿಲ್ ಪರೀಕ್ಷೆಗೆ ಕುಳಿತುಕೊಳ್ಳಿ. ಇಲ್ಲ, ಬೇರೆ ಯಾವುದಾದರೂ ಕೆಲಸವನ್ನು ಹುಡುಕೋಣ" ಹೀಗೆ ಏನೇನೋ ಬಡಬಡಿಸುತ್ತಿದ್ದಳು. ಚಿರಂಜೀವಿ ಸುಮ್ಮನೆ ಕುಳಿತು ಯೋಚಿಸುತ್ತಿದ್ದ. ಚಂದ್ರಕಲಾ ಕೊನೆಗೆ ದುಃಖಿಸುತ್ತಾ ಸುಮ್ಮನಾದಳು.

"ನೋಡು ಚಂದ್ರಕಲಾ ನೀನೇಳುವ ಹಾಗೆ ರಾಜೀನಾಮೆ ನೀಡುವುದಕ್ಕಾಗುವುದಿಲ್ಲ. ಹಾಗೆ ರಾಜೀನಾಮೆ ನೀಡಿದರೂ ನಾವು ಹೊರಗಡೆ ಬದುಕುವುದಕ್ಕೆ ಸಾಧ್ಯವಿಲ್ಲ. ಆ ಹಂತವನ್ನು ನಾವು ಮೀರಿದ್ದೇವೆ. ಬೇಕಾದರೆ ಇದೇ ಕೆಲಸದಲ್ಲಿ ಇದ್ದುಕೊಂಡು ಮತ್ತೆ ಸಿವಿಲ್ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಆದರೆ ಈ ಪೋಲೀಸ್ ಕೆಲಸದ ನಡುವೆ ಅದು ಸಾಧ್ಯವಿಲ್ಲ ಎನಿಸುತ್ತದೆ" ಎಂದು ಚಿರಂಜೀವಿ ಚಂದ್ರಕಲಾಳನ್ನು ಸಮಾಧಾನಪಡಿಸಿದ.

"ಯಾರು ಯಾರನ್ನಾದರೂ ಸಾಯಿಸಲಿ, ನೀವ್ಯಾಕೆ ಆ ರೌಡಿಗಳನ್ನು ಸಾಯಿಸಿದಿರಿ? ಅವರು ಸುಮ್ಮನೆ ಇರುತ್ತಾರೆಯೇ? ಅದು ಮುಂಬಯಿ ಅಂಡರ್ ವರ್ಲ್ಡ್ ರೌಡಿಗಳಂತೆ" ಎಂದು ಅಳತೊಡಗಿದಳು.

"ಹೊ... ಚಂದ್ರಕಲಾ ನೀನು ಓದಿರುವವಳು.... ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡು.

ನನಗೆ ಏನೂ ಆಗುವುದಿಲ್ಲ. ನೀನು ದಯವಿಟ್ಟು ಸುಮ್ಮನೆ ಇರು" ಎಂದು ಚಿರಂಜೀವಿ ಹತ್ತಿರಕ್ಕೆ ಬಂದು ಅವಳ ಗಲ್ಲವನ್ನು ಹಿಡಿದು ಮೇಲಕ್ಕೆತ್ತಿ ಕಣ್ಣುಗಳನ್ನು ಒರೆಸಿ,

"ಬ್ಯೂಟಿಫುಲ್, ತುಂಬಾ ಸುಂದರವಾಗಿ ಕಾಣೆಸ್ತೀಯ" ಎಂದ.

ಹೌದು, ಇನ್ನು ಮೇಲೆ ದಿನಾಗಲೂ ಅಲ್ಲಾನೇ ಇರ್ತೀನಿ.... ಇನ್ನೂ ಸುಂದರವಾಗಿ ಕಾಣಿಸ್ತೀನಿ" ಎಂದು ಮುಖವನ್ನು ತಿರುಗಿಸಿಕೊಂಡಳು.

ಆ ಮಾತು ಹೇಳಿದ ಚಂದ್ರಕಲಾಗೂ ನಗುವನ್ನು ತಡೆದುಕೊಳ್ಳಲಾಗದೆ ಮುಸಿ ಮುಸಿ ನಕ್ಕಳು, ಚಿರಂಜೀವಿ ಕೂಡ ನಕ್ಕ. ದಕ್ಷಿಣ ಧ್ರುವದಲ್ಲಿ ಆರು ತಿಂಗಳುಗಳಿಂದ ಹೆಪ್ಪು ಗಟ್ಟಿದ ಬರ್ಫ್‌ಗುಡ್ಡ ಒಮ್ಮೆಲೆ ಕರಗಿತು.

ದಿನಾ ಬೆಳಗ್ಗೆ ಚಿರಂಜೀವಿಯ ಬಗ್ಗೆ ಪತ್ರಿಕೆಗಳಲ್ಲಿ ಹಲವು ರೀತಿಯ ವರದಿಗಳು ಕಾಣಿಸಿಕೊಳ್ಳುತ್ತಿದ್ದವು. ಎಲ್ಲೆಲ್ಲಿಂದಲೊ ಇಂಗ್ಲೀಷ್ ಪತ್ರಿಕೆಗಳು ಮತ್ತು ದೂರದರ್ಶನಗಳ ವರದಿಗಾರರು ಮನೆಗೆ, ಕಛೇರಿಗೆ ಬಂದು ಚಿರಂಜೀವಿಯ ಜೊತೆಗೆ ಇಂಟರ್‌ವ್ಯೂ ತೆಗೆದುಕೊಳ್ಳಲು ಕಾಯುತ್ತಿದ್ದರು. ಪೋಲೀಸ್ ವಿಭಾಗ ಚಿರಂಜೀವಿಯನ್ನು ಸ್ವಲ್ಪ ಎಚ್ಚರಿಕೆಯಿಂದಲೇ ಇರುವಂತೆ ಎಚ್ಚರಿಸಿತು.

ಆಶ್ಚರ್ಯವೆಂದರೆ ಯಾವ ರಾಜಕಾರಣಿಗಳೂ ಈ ಕೇಸಿನ ಬಗ್ಗೆ ಚಕಾರವೆತ್ತದೆ ಇರುವುದನ್ನು ಗಮನಿಸಿದ ಪೋಲೀಸ್ ಕಮೀಷನರ್ ಸ್ವಲ್ಪ ನಿರಾಳವಾದರು. ಆದರ ಜೊತೆಗೆ ಸಾರ್ವಜನಿಕರು, ಪತ್ರಿಕೆಗಳು ಮತ್ತು ಕೆಲವು ರಾಜಕಾರಣಿಗಳು ಕೂಡ ಪೋಲೀಸ್ ವಿಭಾಗವನ್ನು ಪ್ರಶಂಸೆ ಮಾಡಿದರು. ಮುಖ್ಯವಾಗಿ ಈ ಕೇಸಿನ ಶ್ರಮವೆಲ್ಲ ಚಿರಂಜೀವಿಗೆ ದೊರಕಬೇಕೆಂದು ಪೋಲೀಸ್ ವಿಭಾಗವೆ ಹೇಳಿಕೊಂಡಿತು.

ಮತ್ತೆ ಇದ್ದಕ್ಕಿದ್ದಂತೆ ಪತ್ರಿಕೆಗಳಲ್ಲಿ ವರದಿಗಳು ಕಾಣಿಸಿಕೊಂಡವು. ಚಿರಂಜೀವಿ ಆರು ತಿಂಗಳುಗಳ ಹಿಂದೆ ಶ್ರೀರಾಮಾಪುರದ ಕಳ್ಳಭಟ್ಟಿ ದುರಂತದ ಕೇಸಿನಲ್ಲೂ ಸಹ ದುರಂತಕ್ಕೆ ಕಾರಣವಾದವರನ್ನೆಲ್ಲ ಬಂಧಿಸಿ ಕೇಸನ್ನು ಕೋರ್ಟಿಗೆ ಎಳೆದಿದ್ದರು. ಕೆಲವು ರಾಜಕಾರಣಿಗಳ ಕೈವಾಡದಿಂದ ತನಿಖೆ ಮಾಡಿದ ಫೈಲನ್ನು ಅವರ ಕೈಯಿಂದ ಕಿತ್ತು ಕೊಂಡು ಗೃಹ ಮಂತ್ರಿಗೆ ತಲುಪಿಸಲಾಯಿತೆಂದು, ಅನಂತರ ಆ ಪೈಲನ್ನು ನಾಶ ಮಾಡಿ ಸುಳ್ಳು ಫೈಲನ್ನು ಸೃಷ್ಟಿಸಲಾಯಿತೆಂದೂ ಒಂದು ಪತ್ರಿಕೆ ವರದಿ ಮಾಡಿತು. ಇದೆಲ್ಲ ಗೃಹಮಂತ್ರಿ ಮತ್ತು ಮುಖ್ಯಮಂತ್ರಿಯವರು, ತಮ್ಮ ಪಕ್ಷದವರೇ ಆದ ಇಬ್ಬರು ಶಾಸಕರನ್ನು ಉಳಿಸಲು ಈ ಕೃತ್ಯವನ್ನು ಎಸಗಿದರೆಂದು ಪತ್ರಿಕೆಗಳು ಬರೆದವು.

ಈ ವರದಿಯನ್ನು ನೋಡಿದ ಪೋಲೀಸ್ ಕಮೀಷನರ್, ಒಂದು ಕಡೆ ಹಲ್ಲುಗಳನ್ನುಮಸೆದರೆ, ಇನ್ನೊಂದು ಕಡೆ ಗೃಹಮಂತ್ರಿ ಮತ್ತು

ಮುಖ್ಯಮಂತ್ರಿಗಳು ಮತ್ತೆ ಏನೋ ಗ್ರಹಚಾರ ಬಂದಂತಿದೆಯಲ್ಲ ಎಂದು ಒಳಗೊಳಗೆ ಬುಸುಗುಟ್ಟಿದರು. ಈ ವರದಿ ಹೊಸತಲ್ಲವಾದರೂ ಮತ್ತೆ ಕೆದಕುತ್ತಿರುವ ಈ ಪತ್ರಿಕೆಗಳ ಸಂಪಾದಕರನ್ನು ಹೊಸಕಿ ಬಿಡಬೇಕು ಎನ್ನುವುದಾಗಿ ಕೆಲವು ಶಾಸಕರು ವಿಧಾನಸೌಧದಲ್ಲಿಯೇ ಮಾತನಾಡಿಕೊಂಡರು.

ಇದರಿಂದ ಬೆದರಿದ ಶಾಸಕರಿಬ್ಬರು ಗೃಹಮಂತ್ರಿಯ ಕಿವಿಯಲ್ಲಿ

"ಈ ಚಿರಂಜೀವಿ ಎಂಬ ಹುಳುವನ್ನು ನೀರಿಲ್ಲದ ಕಾಡಿಗೆ ಎಸೆದುಬಿಟ್ಟರೆ ಹೇಗೆ? ಎನ್ನುವುದಾಗಿ ಕಿವಿ ಚುಚ್ಚಿದರು.

ಗೃಹ ಮಂತ್ರಿಗಳು -

"ಉಪಾಯವೇನೋ ಒಳ್ಳೆಯದೆ. ಆದರೆ ಇದು ಸರಿಯಾದ ಸಮಯವಲ್ಲ. ಈಗ ಅವನನ್ನು ವರ್ಗ ಮಾಡಿದರೆ ಈ ಪೀತ ಪತ್ರಿಕೆಗಳ ಸಂಪಾದಕರು ನಮ್ಮ ಮೇಲೆ ಇನ್ನಷ್ಟು ರಾಡಿ ಎರಚಿಬಿಡುವರು. ಸ್ವಲ್ಪ ದಿನ ತಾಳಿ, ಅವನಿಗೆ ತೋರಿಸೋಣ ನಮ್ಮ ಅಧಿಕಾರ" ಎಂದರು.

ಅಲ್ಲಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಿಂದ ಪಾರಾದವನನ್ನು ಪೋಲೀಸ್ ಕಛೇರಿಗೆ ಚಿರಂಜೀವಿ ಕರೆಸಿಕೊಂಡು ನಡೆದದ್ದನ್ನೆಲ್ಲ ಚಾಚೂ ತಪ್ಪದೆ ಒಪ್ಪಿಸುವಂತೆ ಹೇಳಿದ. ಅವನು, ಸತ್ತವನ ಬಗ್ಗೆ ಏನೂ ಬಿಟ್ಟುಕೊಡಲು ಮುಂದಾದಂತೆ ತೋರಲಿಲ್ಲ.

ಸತ್ತವನು ಬೆಂಗಳೂರಿನಲ್ಲಿ ಪ್ರಖ್ಯಾತ ರೌಡಿಯೆಂದು ಎಲ್ಲರಿಗೂ ಗೊತ್ತಿರುವ ವಿಷಯವಾದರೂ, ಅವನನ್ನು ಸಾಯಿಸಲು ಯಾರು ಕಾರಣವೆನ್ನುವ ಪ್ರಶ್ನೆಗೆ

"ನನಗೇನೂ ಗೊತ್ತಿಲ್ಲ, ಆ ದಿನ ಡ್ರೈವರ್ ಇಲ್ಲದ ಕಾರಣ ನನ್ನ ಕೈಗೆ ಗಾಯ ಆಗಿದ್ದರಿಂದ ವಾಹನ ಓಡಿಸಲಾಗದೆ ಹೋಯಿತು. ಆದರೆ ಕುಮಾರಸ್ವಾಮಿ ಬಡಾವಣೆಯಲ್ಲಿ ಸ್ವಲ್ಪ ಕೆಲಸವಿದ್ದರಿಂದ ನಾನು ಅವನ ಜೊತೆಗೆ ಹೋದೆ. ಆಮೇಲೆ ಏನಾಯಿತು ಎನ್ನುವುದು ನಿಮಗೆ ಗೊತ್ತಿದೆ" ಎಂದೇಳಿದ. ಬೇರೆ ದಾರಿಯಿಲ್ಲದೆ ಅವನನ್ನು ಕೋರ್ಟಿಗೆ ಹಾಜರುಪಡಿಸಿದಾಗಲೂ ಅದೇ ಮಾತನ್ನು ಹೇಳಿ ತಪ್ಪಿಸಿಕೊಂಡಿದ್ದ.

ಒಟ್ಟಿನಲ್ಲಿ ಕೆಲವು ಮೂಲಗಳಿಂದ ಈ ಹತ್ಯೆಯ ಹಿಂದೆ ರಾಜ್ಯದ ಇಬ್ಬರು ಶಾಸಕರ ಕೈವಾಡ ಇರುವುದಾಗಿ ತಿಳಿದುಬಂದಿತ್ತು. ಆದರೆ ಸರಿಯಾದ ಆಧಾರಗಳು ದೊರಕದಾಗಿ ಚಿರಂಜೀವಿ ಏನೂ ಮಾಡಲಾಗದೆ ಸುಮ್ಮನಾದ. ಇನ್ನು ಹತ್ಯೆ ಮಾಡಿ ತಪ್ಪಿಸಿಕೊಂಡು ಪರಾರಿಯಾದವರನ್ನು ಹಿಡಿಯಲಾಗದೆ ಇರುವುದು ಕೇಸು

ಮುಂದುವರಿಯುವುದಕ್ಕೆ ಇನ್ನೊಂದು ಹಿನ್ನಡೆ ಆಗಿತ್ತು. ರಾಜ್ಯದ ಪೋಲೀಸರು ಅವರನ್ನು ಹಿಡಿಯಲು ಮಹಾರಾಷ್ಟ್ರದ ಪೋಲೀಸರ ಸಂಪರ್ಕವನ್ನು ಬೆಳೆಸಿದರು. ಅವರಲ್ಲಿ ಒಬ್ಬರನ್ನು ಮಾತ್ರ ಚಿರಂಜೀವಿ ಚೆನ್ನಾಗಿ ಗುರುತಿಸಬಲ್ಲ. ಸಾರ್ವಜನಿಕರಿಂದಲೂ ಆ ರೌಡಿಗಳು ಬೆಂಗಳೂರಿನವರಲ್ಲ ಎಂಬುದಾಗಿ ತಿಳಿದುಬಂದಿತ್ತು.

* * *

ಚಂದ್ರಕಲಾ ಒಬ್ಬ ಅಸಲಿ ಪೋಲೀಸ್ ಅಧಿಕಾರಿಯ ಪತ್ನಿಯಾಗಿ ರೂಪಗೊಳ್ಳುತ್ತಿದ್ದಳು. ಚಿರಂಜೀವಿ ತನ್ನ ತಾಯಿ ಮತ್ತು ತಂದೆಯ ಪ್ರೀತಿಯನ್ನು ಏಳು ವರ್ಷಗಳಿಗೆ ಮಗುವಿದ್ದಾಗಲೇ ಕಳೆದುಕೊಂಡಿದ್ದ. ಅದೆಲ್ಲವನ್ನೂ ಈಗ ಚಂದ್ರಕಲಾಳ ರೂಪದಲ್ಲಿ ಪಡೆದುಕೊಳ್ಳುತ್ತಿದ್ದ.

ತಾಯಿಯ ಮಮತೆಯಾಗಲಿ, ತಂದೆಯ ಪ್ರೀತಿಯಾಗಲಿ, ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರ ಒಡನಾಟದ ಸವಿಯನ್ನು ಚಿರಂಜೀವಿ ಎಂದೂ ಸವಿದಿರಲಿಲ್ಲ. ಅವನು ಒಂದು ಕುಟುಂಬದ ಅನ್ಯೋನ್ಯತೆಗಳ ನಡುವಿನ ಸಂಬಂಧಗಳಿಂದ ಪೂರ್ಣವಾಗಿ ವಂಚಿತನಾಗಿದ್ದ. ಚಂದ್ರಕಲಾಳ ಗೆಳೆತನ ಪ್ರಾರಂಭವಾದಂದಿನಿಂದ ಒಂದು ಹೆಣ್ಣಿನ ಪ್ರೀತಿ, ಸ್ಪರ್ಶ, ಸುಖ, ದುಃಖ, ಕೋಪ, ತಾಪ ಏನೆಂಬುದನ್ನು ಅನುಭವಿಸಿದ್ದ.

ಚಿರಂಜೀವಿಯ ಜೀವನದಲ್ಲಿ ಮೊದಲಿಗೆ ಹೆಜ್ಜೆಯೂರಿದ ಹೆಣ್ಣು ಚಂದ್ರಕಲಾ. ಆದುದರಿಂದಲೋ ಏನೋ ಚಂದ್ರಕಲಾ ಎಂದರೆ ಚಿರಂಜೀವಿಗೆ ಎಲ್ಲಿಲ್ಲದ ಪ್ರೀತಿ. ಚಂದ್ರಕಲಾ ಚಿರಂಜೀವಿಯನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡಿದ್ದಾಳೆ. ಯಾವ ರೀತಿಯ ಕೋಪ, ತಾಪಗಳು, ಸಂದೇಹಗಳಿಲ್ಲದ ಅವರ ದಾಂಪತ್ಯ ಜೀವನ ಬೇರೆಯವರಿಗೆ ಆದರ್ಶಪ್ರಾಯವಾಗಿ ಕಾಣಿಸುತ್ತಿತ್ತು.

೭

ಚಿರಂಜೀವಿಯ ಹತ್ತಿರಕ್ಕೆ ಪತ್ರಿಕೆಯವರು, ಪೋಲೀಸನವರು, ಸಂಘ ಸಂಸ್ಥೆಗಳು, ಸಾರ್ವಜನಿಕರು ಯಾವುದೇ ತೊಂದರೆಗಳಿದ್ದರೂ ನೇರವಾಗಿ ಬಂದು ತಮ್ಮ ತೊಂದರೆಗಳಿಗೆ ಪರಿಹಾರ ಪಡೆಯುತ್ತಿದ್ದರು. ಚಿರಂಜೀವಿ ಒಬ್ಬ

ಪೋಲೀಸ್ ಅಧಿಕಾರಿಯಾದರೂ ಜನಸಾಮಾನ್ಯರ ಹಿತೈಷಿಯಂತೆ ವರ್ತಿಸತೊಡಗಿದ. ಸಾರ್ವಜನಿಕರು ಅವನನ್ನು ಹಲವು ಸಭೆ ಸಮಾರಂಭಗಳಿಗೆ ಆಹ್ವಾನಿಸಿ ತಮ್ಮ ಮೆಚ್ಚಿಗೆಯನ್ನು ಸೂಚಿಸತೊಡಗಿದರು.

ಚಿರಂಜೀವಿಯ ಬೆಂಗಳೂರಿನ ಜನರ ನಡುವೆ ಅತ್ಯಂತ ವಿಶ್ವಾಸನೀಯ ವ್ಯಕ್ತಿಯಾಗಿ ಪರಿಚಿತನಾಗಿಬಿಟ್ಟಿದ್ದ. ಚಂದ್ರಕಲಾ ಕೂಡ ಆಗಾಗ ಕೆಲವು ಸಾಂಸ್ಕೃತಿಕ ಸಮಾರಂಭಗಳಿಗೆ ಪತಿಯ ಜೊತೆಗೆ ಹೋಗಿ ಬರುತ್ತಿದ್ದಳು.

ಬೆಂಗಳೂರಿನ ಎಷ್ಟೋ ಚಿಲ್ಲರೆ ರೌಡಿಗಳನ್ನು ಕಛೇರಿಗೆ ಕರೆದು, ಅವರಿಗೆ ಬುದ್ಧಿವಾದವನ್ನು ಹೇಳಿ ಅವರ ಯೋಗ್ಯತೆಗೆ ತಕ್ಕ ಹಾಗೆ ಕೆಲಸಗಳನ್ನು ಕೊಡಿಸಿರುವುದಲ್ಲದೆ, ಕೆಲವರಿಗೆ ಬ್ಯಾಂಕುಗಳಲ್ಲಿ, ರಾಜ್ಯ ಸರಕಾರದಿಂದ ಸಾಲ ಕೊಡಿಸಿ ಸ್ವಂತ ಉದ್ಯೋಗಗಳಲ್ಲಿ ತೊಡಗಿಸಿದ್ದ.

ದಾರಿಗೆ ಬಂದ ರೌಡಿಗಳ ಕೈ-ಕಾಲುಗಳನ್ನು ಮುರಿದು, ರೌಡಿತನ ಮತ್ತು ಕಳ್ಳತನಗಳನ್ನು ಪೂರ್ಣವಾಗಿಯೇ ನಿಲ್ಲಿಸಿಬಿಟ್ಟಿದ್ದ. ಅಂಗಡಿಗಳಲ್ಲಿ ಮಾರ್ಕೆಟ್‌ಗಳಲ್ಲಿ ಮಾಮೂಲಿ, ಪಡೆಯುವವರನ್ನು ಸಿನಿಮಾ ಹಾಲುಗಳ ಮುಂದೆ ಟಿಕೆಟ್ ಮಾರುವ ಮತ್ತು ಬಸ್ಸು ನಿಲ್ದಾಣಗಳಲ್ಲಿ ಪಿಕ್‌ಪಾಕೇಟ್ ಹೊಡೆಯುವವರನ್ನು ಸಹ ಬಿಟ್ಟಿರಲಿಲ್ಲ. ಚಿರಂಜೀವಿಯ ಹೆಸರು ಕೇಳಿದ್ದೇ ರೌಡಿಗಳು, ಕಳ್ಳರು ಎದುರಿಕೊಳ್ಳುವಂತೆ ಮಾಡಿಬಿಟ್ಟಿದ್ದ. ಚಿರಂಜೀವಿ ಇದ್ದಕ್ಕಿದ್ದಾಗೆ ಮುಷ್ಟಿಯಲ್ಲಿ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದ್ದ. ಚಿರಂಜೀವಿಯನ್ನು ನೋಡಿದ್ದೇ ಕಳ್ಳರು, ರೌಡಿಗಳು ಉಚ್ಚೆ ಹೊಯ್ದುಕೊಳ್ಳುತ್ತಿದ್ದರು. ಚಿರಂಜೀವಿಯ ಹೆಸರು ಬೆಂಗಳೂರಿನಲ್ಲಿ ಮನೆ ಮಾತಾಗಿ ಹೋಯಿತು.

* * *

ಈ ನಡುವೆ ಒಂದು ದಿನ ಇದ್ದಕ್ಕಿದ್ದಾಗೆ ಚಿರಂಜೀವಿಯನ್ನು ಪೋಲೀಸ್ ವಿಭಾಗದಿಂದ ಕಿತ್ತು ಅಬಕಾರಿ ವಿಭಾಗಕ್ಕೆ ಎಸೆದು ಬಿಟ್ಟರು. ಚಿರಂಜೀವಿ ಇದನ್ನು ಮೊದಲೆ ನಿರೀಕ್ಷಿಸಿದ್ದು ಯಾವ ರೀತಿಯಲ್ಲೂ ತಲೆ ಕೆಡಿಸಿಕೊಳ್ಳದೆ ಪೋಲೀಸ್ ಕಛೇರಿಯಲ್ಲಿ ಡ್ಯೂಟಿ ಹ್ಯಾಂಡ್ ಹೋವರ್ ಮಾಡಿ ಅಬಕಾರಿ ವಿಭಾಗದ ಕಛೇರಿಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡ. ಅವನಿಗೊಂದು ಸಣ್ಣ ಔತಣ ಕೂಟವನ್ನು ಪೋಲೀಸ್ ಕಚೇರಿಯಲ್ಲಿ ಏರ್ಪಡಿಸಲಾಗಿತ್ತು. ಮೇಲಿನ ಅಧಿಕಾರಿಗಳು ಕೆಲವರು ಚಿರಂಜೀವಿಯ ಸೇವೆಯನ್ನು ಹೊಗಳಿದರು. ಅವನ

ಕೆಳಗಿನ ಅಧಿಕಾರಿಗಳು ಚಿರಂಜೀವಿ ವಿಭಾಗವನ್ನು ಬಿಟ್ಟೋದುದರಿಂದ ತುಂಬಾ ನೊಂದುಕೊಂಡರು.

ಪತ್ರಿಕೆಯವರು, ಸಾರ್ವಜನಿಕರು ಚಿರಂಜೀವಿಯ ವರ್ಗದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರೆ, ರಾಜಕಾರಣಿಗಳು ಗಟ್ಟಿಯಾದ ನಿಲುವನ್ನೇ ಸರಯಾದ ಸಮಯದಲ್ಲಿ ತೆಗೆದುಕೊಂಡಿದ್ದರು. ಪೋಲೀಸ್ ವಿಭಾಗಕ್ಕೂ ಗೂಂಡಾಗಳಿಗೂ, ರಾಜಕಾರಣಿಗಳಿಗೂ ಹೇಗೆ ತ್ರಿಕೋಣ ಸಂಬಂಧವಿದೆಯೋ ಹಾಗೆ ಅಬಕಾರಿ ವಿಭಾಗಕ್ಕೂ, ರಾಜಕಾರಣಿಗಳಿಗೂ ಗೂಂಡಾಗಳಿಗೂ ಎಲ್ಲಿಲ್ಲದ ಸಂಬಂಧವಿತ್ತು.

ಚಿರಂಜೀವಿ ಅಬಕಾರಿ ವಿಭಾಗದಲ್ಲಿ ಸೇರಿಕೊಂಡ ತಕ್ಷಣವೆ ಅಲ್ಲಿನ ಕಡತಗಳೆಲ್ಲವನ್ನು ಬಿಚ್ಚಿದ. ಅಲ್ಲಿನ ಅಧಿಕಾರಿಗಳ ಜೊತೆಗೆ ಅಬಕಾರಿ ವಿಭಾಗದ ಬಗಗೆ ವಿಶ್ಲೇಷಣೆ ನಡೆಸಿದ. ಮುಖ್ಯವಾಗಿ ಬೆಂಗಳೂರಿನ ಸುತ್ತಮುತ್ತಲು ಹೊರ ಪ್ರದೇಶಗಳಲ್ಲಿ ಕಳ್ಳತನವಾಗಿ ತಯಾರಿಸುವ ಸೆಕೆಂಡ್ಸ್‌ಗಳ ವಿವರಗಳನ್ನು ತಿಳಿದುಕೊಂಡ. ಆ ಕಳ್ಳ ಕಾರ್ಖಾನೆಗಳಲ್ಲಿ ರಾಜ್ಯದಲ್ಲಿ ದೊರಕುವ ಎಲ್ಲಾ ಲೇಬಲುಗಳ ಸೆಕೆಂಡ್ಸ್‌ಗಳನ್ನು ತಯಾರಿ ಮಾಡುತ್ತಿದ್ದರು. ಅದರ ಹಿಂದೆ ಇರುವ ಶಕ್ತಿಗಳನ್ನು ಸಹ ಪಿನ್ ಮಾಡಲು ಪ್ರಯತ್ನಿಸಿದ.

ಬೆಂಗಳೂರಿನ ಪ್ರತಿಷ್ಠ ಬಾರುಗಳಲ್ಲೂ ಸೆಕೆಂಡ್ಸ್ ಮಾರುವುದಾಗಿ ತಿಳಿದು ಬಂದಿತು. ಇನ್ನು, ಬೀದಿ ಬೀದಿಗೂ, ರಸ್ತೆ ರಸ್ತೆಗೂ ಇರುವ ಬಾರುಗಳಲ್ಲಿ ಒಂದು ಒರಿಜಿನಲ್ ಬಾಟಲಿದ್ದರೆ, ಸೆಕೆಂಡ್ಸ್‌ಗೆ ಸೇರಿದ ಒಂಬತ್ತು ಬಾಟಲುಗಳನ್ನು ಮಾರುತ್ತಿದ್ದರು. ಚಿರಂಜೀವಿ ಮಾಹಿತಿಗಳನ್ನು ಸಂಗ್ರಹಿಸುತ್ತಾ ಹೋದಂತೆ ಅವನ ತಲೆ ಗಿರ್ರನೆ ತಿರುಗಿದಂತಾಯಿತು.

ಸೆಕೆಂಡ್ಸ್ ತಯಾರಿ ಮಾಡುತ್ತಿರುವ ಬಾರಿ ಕುಳಗಳ ಹಿನ್ನೆಲೆಯನ್ನು ಮತ್ತು ಅವರು ಸಂಪರ್ಕ ಹೊಂದಿರುವ ವಿಧಾನಸೌಧದ ಬಾಗಿಲುಗಳನ್ನು ಬಡಿದಾಗ ಎಷ್ಟೋ ಶಾಸಕರೆ ಸೆಕೆಂಡ್ಸ್ ಕಾರ್ಖಾನೆಗಳ ಹಿಂದಿನ ಮಾಲೀಕರಾಗಿದ್ದರು. ಸೆಕೆಂಡ್ಸ್ ಮೂಲಕ ಸಂಗ್ರಹವಾಗುವ ಹಣದ ಲೆಕ್ಕವನ್ನಂತೂ ಅಂದಾಜು ಮಾಡಲಿಕ್ಕೆ ಅವನಿಂದ ಸಾಧ್ಯಾವಾಗದೆ ಹೋಯಿತು. ರಾಜ್ಯದಲ್ಲಿ ಚುನಾವಣೆಗೆ ಪ್ರತಿ ಸಲವೂ ಖರ್ಚಾಗುವ ಕೋಟ್ಯಾಂತರ ರೂಪಾಯಿಗಳ ಹೆಚ್ಚು ಹಣ ಸೆಕೆಂಡ್ಸ್ ತಯಾರಿ ಮಾಡುವವರಿಂದಲೇ ಸಂಗ್ರಹವಾಗುವ ವಿಷಯ ತಿಳಿದು ಬಂದಿತು. ಕೋಟ್ಯಾಂತರ ರೂಪಾಯಿಗಳ ಕಪ್ಪು ವ್ಯವಹಾರವಿರುವ ಈ ವಿಭಾಗಕ್ಕೆ

ತನ್ನನ್ನು ಏಕೆ ವರ್ಗ ಮಾಡಿದರು ಎನ್ನುವ ಪ್ರಶ್ನೆ ಚಿರಂಜೀವಿಯನ್ನು ಕಾಡತೊಡಗಿತು.

ಒಂದು, ತನಗೆ ಹಣದ ಆಮಿಷ ತೋರಿಸಿ ಭ್ರಷ್ಟ ಅಧಿಕಾರಿಯಾಗಿ ಪರಿವರ್ತಿಸುವ ಉದ್ದೇಶವಿರಬೇಕು, ಎರಡು ಸೆಂಕೆಂಡ್ಸ್ ತಯಾರಿಕೆಯನ್ನು ನಿಲ್ಲಿಸಿ ರಾಜ್ಯದ ಬೊಕ್ಕಸಕ್ಕೆ ಹೆಚ್ಚುಹಣ ಹರಿದುಬರಲಿ ಎನ್ನುವ ಉದ್ದೇಶವಿರಬೇಕು...? ಇದರ ಜೊತೆಗೆ ಬೇರೆ ಇನ್ನೇನಾದರೂ ಉದ್ದೇಶ ಇದೆಯೋ ಏನೋ ಎನ್ನುವ ಸಂದೇಹವೂ ಚಿರಂಜೀವಿಯನ್ನು ಕಾಡದೆ ಇರಲಿಲ್ಲ.

ಚಿರಂಜೀವಿಯನ್ನು ಅಬಕಾರಿ ವಿಭಾಗಕ್ಕೆ ವರ್ಗ ಮಾಡಿದ ವಿಷಯವನ್ನು ಕೇಳಿದ್ದೆ ಹಲವರಿಗೆ ತಲೆ ನೋವು ಪ್ರಾರಂಭವಾಯಿತು. ಸೆಕೆಂಡ್ಸ್ ತಯಾರಿಕರಿಗೂ, ಮಾರಾಟಗಾರರಿಗೂ ಮತ್ತು ಅದಕ್ಕೆ ಸಂಬಂಧಪಟ್ಟ ಶಾಸಕರಿಗೂ, ಗೂಂಡಾಗಳಿಗೂ ಮೈಚಳಿ ಬಿಟ್ಟಂತಾಯಿತು. ಇಷ್ಟು ದಿನ ನಾಲಿಗೆ ಚಪ್ಪರಿಸುತ್ತಿದ್ದ ಅಬಕಾರಿ ವಿಭಾಗದ ಹಲವು ಭ್ರಷ್ಟ ಅಧಿಕಾರಿಗಳು ಒಳ್ಳೆ ಗ್ರಹಚಾರ ಆಯಿತಲ್ಲಪ್ಪ ಎಂದು ಒಳಗೊಳಗೆ ನೊಂದುಕೊಂಡರು. ಒಂದು ಆಯಕಟ್ಟಿನ ಸ್ಥಳದಲ್ಲಿ ಕುಳಿತಿರುವ ಒಬ್ಬ ಅಬಕಾರಿ ಇನ್ಸ್‌ಪೆಕ್ಟರ್ ಇರುವ ಕಛೇರಿಗೆ ತಿಂಗಳಿಗೆ ಏನಿಲ್ಲವೆಂದರೂ ಕೆಲವು ಲಕ್ಷ ರೂಪಾಯಿಗಳ ಕಟ್ಟುಗಳು ತಾನಾಗಿಯೇ ಬಂದು ಬೀಳುತ್ತಿದ್ದವು. ಈ ಹಣ ಮೇಲಿನಿಂದ ಕೆಳಗಿನವರೆಗೂ ಎಲ್ಲರಿಗೂ ಇಷ್ಟಿಷ್ಟೆಂದು ಹಂಚಿಕೆಯಾಗುತ್ತಿತ್ತು.

ಇದು ಬರಿ ಅಬಕಾರಿ ವಿಭಾಗದ ನೆಟ್‌ವರ್ಕ್ ಸಿಸ್ಟಮ್ ಅಲ್ಲ. ರಾಜ್ಯದಲ್ಲಿರುವ ಎಲ್ಲಾ ವಿಭಾಗಗಳಲ್ಲೂ ನಡೆಯುವ ಮಾಮೂಲಿ ಲಂಚವೆಂಬ ನೆಟ್‌ವರ್ಕ್ ಸಿಸ್ಟಮ್. ಅದು ಯಾವುದೇ ವಿಭಾಗವಾಗಿರಬಹುದು. ಪ್ರಸ್ತುತ ಎಲ್ಲಾ ವಿಭಾಗಗಳಲ್ಲೂ ರಾಜಾರೋಷವಾಗಿ ನಡೆಯುತ್ತದೆ. ಲಂಚ ಕೊಡದಿದ್ದರೆ ಎಲ್ಲಿಯೂ ಯಾವ ವಿಭಾಗದಲ್ಲಿಯೂ ಯಾವ ಕೆಲಸವೂ ನಡೆಯುವುದಿಲ್ಲ. ಅದಕ್ಕಿನ್ನು ಮುಖ್ಯವಾದ ವಿಷಯವೆಂದರೆ ಎಲ್ಲಾ ವಿಭಾಗಗಳಲ್ಲೂ ಎಲ್ಲಾ ಕೆಲಸಗಳಿಗೂ ಇಷ್ಟಿಷ್ಟೆಂದು ಆಯಾ ಕಛೇರಿಗಳ ಅಧಿಕಾರಿಗಳೇ ಲಂಚವನ್ನು ಫಿಕ್ಸ್ ಮಾಡಿ ಬಿಟ್ಟಿದ್ದಾರೆ.

ಗೊತ್ತಿರುವವರಾದರೆ ಅಥವಾ ಗೊತ್ತಿರುವವರ ಮೂಲಕ ಹೋಗಿದ್ದೆಯಾದರೆ ಸ್ವಲ್ಪ ಕನ್ಸೆಶನ್ ದೊರಕಬಹುದೇ ವಿನಹ ಲಂಚವಿಲ್ಲದೆ ಕೆಲಸ ಮಾತ್ರ

ನಡೆಯುವುದಿಲ್ಲ. ಈ ರೀತಿಯ ವ್ಯವಹಾರಗಳನ್ನು ಸರಕಾರವೆ ಗೆಜೆಟ್ ಮೂಲಕ ಹೊರಡಿಸಿಬಿಟ್ಟರೆ ಸಾರ್ವಜನಿಕರು ತಮ್ಮ ಕೆಲಸಗಳಿಗೆ ಶೀಘ್ರವೇ ಪರಿಹಾರವನ್ನು ಮಾಡಿಕೊಳ್ಳಬಹುದು ಎನ್ನುವ ಅಭಿಪ್ರಾಯಗಳು ಈಗ ಸಾರ್ವಜನಿಕರಲ್ಲಿ ಒಮ್ಮತವಾಗಿ ಮೂಡಿ ಬರುತ್ತಿದೆ. ಅದು ಕೆಲವೇ ವರ್ಷಗಳಲ್ಲಿ ಕಾರ್ಯರೂಪಕ್ಕೆ ಬಂದರೂ ಆಶ್ಚರ್ಯ ಪಡಬೇಕಾಗಿಲ್ಲ.

ಚಿರಂಜೀವಿ ಅಬಕಾರಿ ವಿಭಾಗದಲ್ಲಿ ತನ್ನ ಹಳೆ ಪೋಲೀಸ್ ಚಾಳಿಯನ್ನು ಪ್ರಾರಂಭಿಸಲು ಸನ್ನಿದ್ಧನಾದ. ಇದ್ದಕ್ಕಿದ್ದಾಗೆ, ದಿಢೀರಂದು ಯಾವುದೋ ಬಾರಿನಲ್ಲಿ, ಯಾವುದೋ ರಸ್ತೆಯಲ್ಲಿ ಯಾವುದೋ ಹೊತ್ತಿನಲ್ಲಿ ಕಾಣಿಸಿಕೊಳ್ಳತೊಡಗಿದ. ಹತ್ತಾರು ಲೇಬಲುಗಳ ನಕಲಿ ಮಾಲನ್ನು ಮಾರುತ್ತಿರುವ ಬಾರುಗಳ ಪರ್ಮಿಟ್‌ಗಳನ್ನು ರದ್ದು ಗೊಳಿಸತೊಡಗಿದ. ಲೈಸನ್ಸ್ ಇಲ್ಲದೆ ಮಾರುತ್ತಿರುವ ಬಾರುಗಳು ಮತ್ತು ಹೋಟಲುಗಳು ಮಾಲಿಕರು ತಾವೇ ಬಾಗಿಲುಗಳು ಮುಚ್ಚಿಕೊಂಡು ಸುಮ್ಮನಾದರು.

ಸರಕಾರದ ಬೊಕ್ಕಸಕ್ಕೆ ಇದ್ದಕ್ಕಿದ್ದಾಗೆ ಅಬಕಾರಿ ಇಲಾಖೆಯ ಮೂಲಕ ಬರುತ್ತಿದ್ದ ಆದಾಯ ಒಮ್ಮೆಲೇ ಏರತೊಡಗಿತು. ಅಬಕಾರಿ ಮಂತ್ರಿಗಳಿಗೆ ಇದು ಒಳ್ಳೆಯ ಸೂಚನೆಯಾದರೂ ಸಾರ್ವಜನಿಕರಿಗೆ ಪತ್ರಿಕೆಗಳ ಮೂಲಕ ಇದನ್ನು ತಿಳಿಸುವುದೋ ಬೇಡವೋ ಎನ್ನುವ ಗೊಂದಲದಲ್ಲಿ ಸಿಕ್ಕಿಕೊಂಡರು. ಏಕೆಂದರೆ ಇದರ ಹಿಂದೆ ಇರುವ ಶಕ್ತಿಗಳು, ಮಂತ್ರಿಗಳ ಮೂಲಕ ಚಿರಂಜೀವಿಯನ್ನು ಅಬಕಾರಿ ಇಲಾಖೆಯಿಂದ ಎತ್ತಂಗಡಿ ಮಾಡಿಸಿದರೆ ತನ್ನ ಮೇಲೆ ಅಪವಾದ ಬರುವ ಗುಮಾನಿ ಅಬಕಾರಿ ಮಂತ್ರಿಗಳಿಗೆ ಎದ್ದಿತು. ಒಂದು ರೀತಿಯಲ್ಲಿ ಅಬಕಾರಿ ಮಂತ್ರಿಗಳಿಗೆ ಚಿರಂಜೀವಿಯ ನಿರ್ಭಯತೆ ಮತ್ತು ಸಾಹಸ ನುಂಗಲಾರದ ತುತ್ತಾಗಿ ಪರಿಣಮಿಸಿತು.

* * *

ಚಂದ್ರಕಲಾ ಮತ್ತು ಚಿರಂಜೀವಿ ಈಗ ಇನ್ನಷ್ಟು ಅನ್ಯೋನ್ಯದಿಂದ ಕಾಲವನ್ನು ಕಳೆಯುತ್ತಿದ್ದರು. ಇಬ್ಬರೂ ಇನ್ನಷ್ಟು ತೂಕವನ್ನು ಹೆಚ್ಚಿಸಿಕೊಂಡು ಕೆನ್ನೆಗಳನ್ನೆಲ್ಲ ಉಬ್ಬಿಸಿಕೊಂಡರು. ಚಿರಂಜೀವಿ, ಚಂದ್ರಕಲಾಳ ಕೆನ್ನೆಗಳನ್ನು ಆಗಾಗ ಮುಟ್ಟಿ ನೋಡುತ್ತಾ ಇಡ್ಲಿಗಳು ಎಂದು ಗೇಲಿ ಮಾಡುತ್ತಿದ್ದ. ಚಿರಂಜೀವಿ ಮತ್ತು ಚಂದ್ರಕಲಾಗೆ ಈಗೀಗ ಮಗುವಿನ ಮೇಲೆ ಆಸೆ ಮೂಡುತ್ತಿತ್ತು. ಚಂದ್ರಕಲಾಳ

ತಾಯಿ ಮತ್ತು ತಂದೆಯೂ ಸಹ ಬಹಳ ದಿನಗಳಿಂದ ಚಂದ್ರಕಲಾಳನ್ನು ಒತ್ತಾಯ ಮಾಡುತ್ತಲೆ ಬರುತ್ತಿದ್ದರು.

ಒಂದು ದಿನ ರಾತ್ರಿ ಇಬ್ಬರೂ ಮಗುವಿನ ಬಗ್ಗೆಯೇ ಸುಮಾರು ಹೊತ್ತು ಮಾತನಾಡಿಕೊಳ್ಳುತ್ತಿದ್ದರು.

"ನಾವು ಇನ್ನು ಮಗುವಿಗಾಗಿ ತಡ ಮಾಡುವುದು ಬೇಡ.... ಇದು ಡಿಸೆಂಬರ್ ತಿಂಗಳಾಗಿದ್ದು ಈಗ ಪ್ರಯತ್ನಿಸುವುದೇ ಒಳ್ಳೆಯದು. ಸೆಪ್ಟೆಂಬರ್ ತಿಂಗಳಲ್ಲಿ ಗಂಡು ಮಗು, ಅಕ್ಟೋಬರ್ ತಿಂಗಳಲ್ಲಿ ಹೆಣ್ಣು ಮಗು ಹುಟ್ಟಬಹುದು" ತಂದ್ರಕಲಾ ಹೇಳಿದಳು.

"ಹೌದೆ? ಅದೇಗೆ?" ಚಿರಂಜೀವಿ ಪ್ರಶ್ನಿಸಿದ.

"ಗಂಡು ಮಗು ಒಂಬತ್ತು ತಿಂಗಳ ನಂತರ ಹುಟ್ಟಿದರೆ, ಹೆಣ್ಣು ಮಗು ಹತ್ತು ತಿಂಗಳಾದ ಮೇಲೆ ಹುಟ್ಟುತ್ತದೆ" ಎಂದಳು.

"ಓ.... ಹೊ..... ಹಾಗೊ?" ಚಿರಂಜೀವಿ ತಲೆಯಾಡಿಸಿದ.

ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ವಾತಾವರಣ ಹಿತವಾಗಿಯೇ ಇರುತ್ತದೆ" ಚಂದ್ರಕಲಾ ಲೆಕ್ಕ ಹಾಕಿದಳು.

"ಬೆಂಗಳೂರಿನಲ್ಲಿ ಯಾವ ಕಾಲ ಹಿತವಾಗಿರುವುದಿಲ್ಲ?" ಚಿರಂಜೀವಿ ಪ್ರಶ್ನಿಸಿದ.

"ಏಪ್ರಿಲ್ ಮತ್ತು ಮೇ ತಿಂಗಳು ಬಿಸಿಲು, ಶೆಕೆ ಇರುವುದಿಲ್ಲವೇ?" ಚಂದ್ರಕಲಾ ಪ್ರಶ್ನಿಸಿದಳು.

"ಅದೊಂದು ಬಿಸಿಲೆ? ಅಷ್ಟೂ ಬಿಸಿಲು ಮೈಗೆ ಬೀಳದಿದ್ದರೆ ಸೋಮಾರಿಗಳಾಗಿ ಬಿಡುವುದಿಲ್ಲವೆ?" ಚಿರಂಜೀವಿ ಹೇಳಿದ.

"ಆಯಿತು ಈ ದಿನದಿಂದ ಗರ್ಭ ನಿರೋಧಕ ಯಾವುದೇ ವಸ್ತುಗಳನ್ನು ಉಪಯೋಗಿಸುವುದು ಬೇಡ"ವೆಂದು ಇಬ್ಬರೂ ತೀರ್ಮಾನಿಸಿದರು.

"ಆದರೆ ಋತುಮತಿಯಾಗುವ ಮದ್ಯದ ದಿನಗಳಲ್ಲಿ ಗರ್ಭ ಧರಿಸುವ ದಿನಗಳನ್ನು ಗುರುತಿಸುವುದಾದರೂ ಹೇಗೆ?" ಎನ್ನುವ ಸಂದೇಹ ಚಿರಂಜೀವಿಗೆ ಬಂದಿತು.

"ಅದೆಲ್ಲಾ ನಿಮಗ್ಯಾಕೆ? ಒಮ್ಮೆ ನಾವು ಗರ್ಭ ನಿರೋಧಕ ವಸ್ತುಗಳನ್ನು ತ್ಯಜಿಸಿ ಬಿಟ್ಟರೆ ಮಿಕ್ಕ ವಿಷಯ ತನಗೆ ತಾನೇ ಆಗುತ್ತದೆ" ಚಂದ್ರಕಲಾ ಹೇಳಿದಳು.

"ಆಯಿತು ನಾನಿನ್ನು ಮಲಗುತ್ತೇನೆ" ಎಂದ ಚಿರಂಜೀವಿ ಕರ್ಲಾನ್ ಮೆಟ್ರಿಸ್ ಮೇಲೆ ಉರುಳಿಕೊಂಡು, ಪಕ್ಕಕ್ಕೆ ತಿರುಗಿಕೊಂಡು "ಗುಡ್ ನೈಟ್" ಎಂದ.

"ಯಾಕೆ ಮಗು ಬೇಡವೆ?" ಚಂದ್ರಕಲಾ ನಗುತ್ತಾ ಚಿರಂಜೀವಿಯನ್ನು ತನ್ನ ಕಡೆಗೆ ತಿರುಗಿಸಿಕೊಂಡಳು. ವಿದ್ಯುತ್ ದೀಪದ ಸ್ವಿಚ್ಚನ್ನು ಮಲಗಿರುವ ಕಡೆಯಿಂದಲೇ ಆಫ್ ಮಾಡಿದ ಚಿರಂಜೀವಿ.

"ಗಂಡೋ ಹೆಣ್ಣೋ" ಪ್ರಶ್ನಿಸಿದ.

"ಅದು ಹೆಣ್ಣುಗಳಿಂದ ಸಾಧ್ಯವಿಲ್ಲ, ಗಂಡಸರೆ ತೀರ್ಮಾನಿಸಬೇಕು"

"ಹೌದೆ! ಇದು ಒಳ್ಳೇ ಗ್ರಹಚಾರವಾಯಿತಲ್ಲ... ಹೆಣ್ಣು-ಗಂಡು, ಅವಳಿ ಜವಳಿ ಮಕ್ಕಳಾಗಲಿ ಬಿಡು" ಎಂದ ಚಿರಂಜೀವಿ. ಇಬ್ಬರೂ ನಕ್ಕರು.

* * *

ಚಿರಂಜೀವಿ ಎಂದಿನಂತೆ ಒಂದು ದಿನ ಬೆಳಗ್ಗೆ ಸ್ನಾನ ಮಾಡಿ ಚಂದ್ರಕಲಾಳ ಜತೆಗೆ ತಿಂಡಿ ತಿಂದು ಕಛೇರಿಗೆ ಹೊರಡಲು ತಯಾರಾದ. ಬೆಳಗ್ಗೆಯಿಂದ ಒಂದು ಕಣ್ಣು ಹೊಡೆದುಕೊಳ್ಳುತ್ತಲೇ ಇರುವುದನ್ನು ಚಿರಂಜೀವಿ, ಚಂದ್ರಕಲಾಗೆ ಹೇಳಿದ.

ಚಂದ್ರಕಲಾ ಕೂಡ ತನಗೇಕೋ ಇಂದು ಮನಸ್ಸು ಒಂದು ರೀತಿಯಲ್ಲಿ ಖಾಲಿಖಾಲಿಯಾಗಿ ಇರುವುದಾಗಿ ತಿಳಿಸಿದಳು. ಚಿರಂಜೀವಿ ಕಾರಿನಲ್ಲಿ ಕುಳಿತುಕೊಂಡ ನಂತರವೂ ಚಂದ್ರಕಲಾ ಕಾವಲುಕಾಯುವ ಪೇದೆಯನ್ನು ಕಳುಹಿಸಿ ಹಿಂದಕ್ಕೆ ಕರೆಸಿದಳು. ಚಿರಂಜೀವಿ ಕಾರಿನಿಂದ ಇಳಿದು ಹಿಂದಕ್ಕೆ ಬಂದ.

ಚಂದ್ರಕಲಾ "ರೀ ಇವೊತ್ತು ಮನೆಯಲ್ಲೇ ಇದ್ದು ಬಿಡಿ" ಎಂದಳು. ಚಿರಂಜೀವಿಗೆ ಏನೂ ಹೇಳಲೂ ತೋಚದೆ,

"ಆಯಿತು ಕಛೇರಿಗೆ ಮಧ್ಯಾಹ್ನ ಹೋಗುತ್ತೇನೆ" ಎಂದು ಸೋಫಾ ಮೇಲೆ ಕುಳಿತುಕೊಂಡು ಚಂದ್ರಕಲಾಳನ್ನು ಕುಳಿತುಕೊಳ್ಳುವಂತೆ ಹೇಳಿದ.

"ಇಲ್ಲಿ ಬೇಡ ಒಳಗಡೆ ನಡೆಯಿರಿ" ಎಂದು ಬೆಡ್‌ರೂಮಿನೊಳಕ್ಕೆ ಕರೆದೊಯ್ದಳು. ಚಿರಂಜೀವಿ ಅಲ್ಲಿಂದಲೇ ಕಛೇರಿಗೆ ಫೋನ್ ಮಾಡಿ ಈ ದಿನ ಬರುವುದಿಲ್ಲ, ನಾಳೆ ಬರುತ್ತೇನೆಂದು ತಿಳಿಸಿದ.

ಅನಂತರ ಬಟ್ಟೆಗಳನ್ನು ಬದಲಿಸಿ ಚಂದ್ರಕಲಾಳ ಪಕ್ಕದಲ್ಲಿ ಕುಳಿತುಕೊಂಡು "ಏನಾಗುತ್ತಿದೆ" ಎಂದು ವಿಚಾರಿಸಿದ.

"ಏನೋ ಒಂದು ರೀತಿಯಲ್ಲಿ ಭಯ, ಸಂಕಟ ತುಂಬಿಕೊಂಡಂತೆ ಆಗುತ್ತದೆ....?" ಎಂದು ಮೈಯೆಲ್ಲಾ ನಡುಗಿದಂತೆ ಮಾಡಿದಳು.

ಚಿರಂಜೀವಿ ಫೋನ್ ಮಾಡಿ ಡಾಕ್ಟರನ್ನು ಕರೆಸಿದ. ಚಂದ್ರಕಲಾಗೆ ಮೊದಲ ಬಾರಿಗೆ ಗಾಬರಿಯಾಗಿ, ಚಿರಂಜೀವಿಯನ್ನೇ ನೋಡುತ್ತಾ ಕುಳಿತಳು. ಚಿರಂಜೀವಿಗೆ ಒಂದೂ ಅರ್ಥವಾಗದೆ ಅವಳನ್ನೇ ನೋಡುತ್ತಾ ಕುಳಿತ. ಅಷ್ಟರಲ್ಲಿ ಡಾಕ್ಟರು ಬಂದಿದ್ದು ಚಂದ್ರಕಲಾಳ ನಾಡಿಯನ್ನು, ದೇಹವನ್ನು ಪರೀಕ್ಷಿಸಿದ ಮೇಲೆ

"ಏನು ಗಾಬರಿಪಡುವಂತಹ ವಿಷಯವಿಲ್ಲ. ಸ್ವಲ್ಪ ಗ್ಯಾಸ್ ಆಗಿದೆಯಷ್ಟೆ" ಎಂದೇಳಿ ತಿನ್ನುವ ವಿಚಾರದಲ್ಲಿ ಬದಲಾವಣೆಯಾಗಬೇಕೆಂದು ಒಂದು ದೊಡ್ಡ ಪಟ್ಟಿಯನ್ನೇ ಹೇಳಿಬಿಟ್ಟ. ಆಗಲೆ ನುಂಗುವಂತೆ ಎರಡು ಗುಳಿಗೆಗಳನ್ನು ಕೊಟ್ಟು ಮಾತ್ರೆಗಳನ್ನು ಬರೆದುಕೊಟ್ಟ. ಗುಳಿಗೆಗಳನ್ನು ನುಂಗಿದ ಚಂದ್ರಕಲಾ

"ಗ್ಯಾಸ್ ಆದರೆ ಈ ತರಹ ಆಗುತ್ತದೆಯೆ....?" ಕೇಳಿದಳು.

"ಹೌದು! ಗ್ಯಾಸ್ ಆದರೇನೆ ಹಾಗಾಗುವುದು... ನೀವೇನೂ ಗಾಬರಿ ಪಡಬೇಡಿ. ಕೇವಲ ಹದಿನೈದು ನಿಮಿಷಗಳಲ್ಲಿ ಎಲ್ಲವೂ ಸರಿಹೋಗುತ್ತದೆ.... ನಾಲ್ಕೈದು ದಿನಗಳಿಂದ ಸರಿಯಾದ ಸಮಯದಲ್ಲಿ ಊಟ ತೆಗೆದುಕೊಂಡಂತೆ ಕಾಣಿಸುತ್ತಿಲ್ಲ...." ಡಾಕ್ಟರು ಹೇಳಿದರು.

"ಹಾಗೇನೂ ಇಲ್ಲ. ನಮ್ಮ ಮನೆಯವರು ಮಧ್ಯಾಹ್ನ ಊಟಕ್ಕೆ ಬರುತ್ತಾರೆಂದು ಕೆಲವು ದಿನಗಳು ಊಟಮಾಡದೆ ಕಾದು ಕಾದು ಕೊನೆಗೂ ಅವರು ಬರದೆ ಲೇಟಾಗಿ ಊಟ ಮಾಡಿದೆ...." ಎಂದಳು.

"ಹೋ.... ಹಾಗೆ ಮಾಡಬೇಡಿ ಆ ರೀತಿಯ ಅಭ್ಯಾಸವನ್ನು ಈಗಲೇ ತ್ಯಜಿಸಿಬಿಡಿ. ಊಟದ ಸಮಯಕ್ಕೆ ಏನಾದರೂ ಸ್ವಲ್ಪ ತಿಂದುಬಿಡಿ. ಈಗೇಗಿದೆ....?" ಡಾಕ್ಟರು ಕೇಳಿದರು.

"ಈಗ ಸ್ವಲ್ಪ ಪರವಾಗಿಲ್ಲ... " ಚಂದ್ರಕಲಾ ಹೇಳಿದಳು.

"ನಾನೇಳಲಿಲ್ಲವೆ....? ನೀವೇನೂ ಭಯ ಪಡಬೇಡಿ. ಐದು ದಿನಗಳು ನಾನು ಬರೆದುಕೊಟ್ಟಿರುವ ಮಾತ್ರೆಗಳನ್ನು ತೆಗೆದುಕೊಳ್ಳಿ. ಎಲ್ಲವೂ ಸರಿಹೋಗುತ್ತದೆ" ಎಂದೇಳಿದ ಡಾಕ್ಟರು ಹೊರಟುಹೋದರು.

ಚಂದ್ರಕಲಾ ಹತ್ತಿಪ್ಪತ್ತು ನಿಮಿಷಗಳಿಗೆ ಮಾಮೂಲಿಯಾದಳು. ಚಿರಂಜೀವಿಗೆ ಸಮಾಧಾನವಾಯಿತು. ಪಕ್ಕದಲ್ಲಿ ಕುಳಿತ ಚಿರಂಜೀವಿ-

"ಇದೇನು ಇದ್ದಕ್ಕಿದ್ದಾಗೆ ಹೀಗೆ ಭಯ ಹುಟ್ಟಿಸಿಬಿಟ್ಟೆಯಲ್ಲ....!" ಎಂದ.

ಚಂದ್ರಕಲಾ ನಗುತ್ತಾ "ರೀ ನಾನೇನು ಬೇಕಂತಲೇ ಮಾಡಿದೆನೆ...? ಅದೇನೋ ಹಾಗಾಗಿಬಿಟ್ಟಿತು.... ನಿಜವಾಗಿಯೂ ಅದು ಗ್ಯಾಸಿನಿಂದಲೇ ಹಾಗಾಯಿದೆಯೆ...?" ಚಂದ್ರಕಲಾ ಪ್ರಶ್ನಿಸಿದಳು.

"ಡಾಕ್ಟರು ಸುಳ್ಳು ಹೇಳುತ್ತಾರೆಯೇ....?" ಚಿರಂಜೀವಿ ಪ್ರಶ್ನಿಸಿದ.

"ಹಾಗಾದರೆ ಡಾಕ್ಟರು ಹೇಳಿದ್ದು ಸರಿಯೇ ಇರಬೇಕು" ಚಂದ್ರಕಲಾ ಹೇಳಿದಳು.

"ನೋಡು ಚಂದ್ರಕಲಾ ಈಗ ಅದೆಲ್ಲಾ ಬೇಡ. ಮರೆತುಬಿಡು. ಬೇರೆ ಏನಾದರೂ ಮಾತಾಡು" ಎಂದ. ಆ ದಿನ ಚಿರಂಜೀವಿ ಮನೆ ಬಿಟ್ಟು ಎಲ್ಲೂ ಹೋಗಲಿಲ್ಲ. ಟಿ.ವಿ. ನೋಡುತ್ತಾ, ಪುಸ್ತಕಗಳನ್ನು ಓದುತ್ತಾ, ಚಂದ್ರಕಲಾಳ ಜೊತೆಯೇ ಕಾಲ ಕಳೆದ. ಸಾಯಂಕಾಲ ಇಬ್ಬರೂ ಚಂದ್ರಕಲಾಳ ತಾಯಿ ಮನೆಗೆ ಹೋಗಿ ಬಂದರು.

ಮರುದಿನ ಬೆಳಗ್ಗೆ ಎಂದಿನಂತೆ ತನ್ನ ದಿನನಿತ್ಯ ಕಾರ್ಯಗಳನ್ನು ಮುಗಿಸಿದ ಚಿರಂಜೀವಿ ಚಂದ್ರಕಲಾಳಿಂದ ಬೇರ್ಪಟ್ಟ. ಚಂದ್ರಕಲಾ ಅವನ ಕಾರು ಹೋಗುತ್ತಿರುವುದನ್ನೇ ನಿಂತು ನೋಡಿದಳು. ಕಾರು ಕಾಂಪೌಂಡು ದಾಟಿ ರಸ್ತೆಗೆ ಹೋಗಿ ಇನ್ನೊಂದು ಅಡ್ಡರಸ್ತೆಯಲ್ಲಿ ತಿರುಗಿಕೊಂಡಿತು.

ಚಿರಂಜೀವಿ ಎಂದಿನಂತೆ ಕಛೇರಿಯ ಕೆಲಸಗಳಲ್ಲಿ ತೊಡಗಿಕೊಂಡ. ಕೆಳಗಿನ ಅಧಿಕಾರಿಗಳು ಕೆಲವರು ಚಿರಂಜೀವಿಗೆ ಇಲಾಖೆಯ ಒಳಗುಟ್ಟುಗಳನ್ನು ಹೇಳತೊಡಗಿದರು.

"ಸರ್ ನೀವು ಇಷ್ಟೊಂದು ಸ್ಟ್ರಿಕ್ಟ್ ಆಗಿ ಇರಬೇಡಿ ಎಂದು ನಾವು ಹೇಳುವುದಿಲ್ಲ... ಅದು ನಿಮ್ಮಿಷ್ಟ... ನೀವು ದೊಡ್ಡ ಅಧಿಕಾರಿಗಳು... ನಾವು ನಿಮ್ಗೆ ಹೇಳಬಾರದು. ಆದರೆ ಯಾವುದೋ ಹೊತ್ತಿನಲ್ಲಿ, ಯಾವುದೋ ಸ್ಥಳದಲ್ಲಿ ಇದ್ದಕ್ಕಿದ್ದಾಗೆ ಒಬ್ಬರೇ ಕಾಣಿಕೊಳ್ಳಬೇಡಿ... ಹೋದರೂ ಆದಷ್ಟು ಪೇದೆಗಳನ್ನು ಜೊತೆಗೆ ಕರೆದುಕೊಂಡೋಗಿ.... ಅಬಕಾರಿ ಇಲಾಖೆಗೆ ಬಂದ ಮೇಲೆ ಬಹಳ ಜನರಿಗೆ ಹೊಟ್ಟೆ ಉರಿದಿದೆ. ದೊಡ್ಡ ದೊಡ್ಡ ಗೂಂಡಾಗಳು, ಸಂಕೆಂಡ್ಸ್ ತಯಾರಕರಿಗೂ, ಅಂಡರ್ ವರ್ಲ್ಡ್ ಗೂಂಡಾಗಳಿಗೂ ದೊಡ್ಡ ಹೊಡೆತ ಬಿದ್ದಿದೆ. ಯಾವುದಕ್ಕೂ ನೀವು ಎಚ್ಚರಿಕೆಯಿಂದ ಇರುವುದು ಒಳ್ಳೆಯದು" ಎಂದು ಎಚ್ಚರಿಸಿದರು.

ಅವರ ಮಾತುಗಳನ್ನು ಕೇಳುತ್ತಿದ್ದ ಚಿರಂಜೀವಿ -

"ಅವೆಲ್ಲಾ ನಮ್ಮ ಹಣೆಬರಹ... ಯಾರ ಹಣೆಯಲ್ಲಿ ಏನು ಬರೆದಿದೆಯೋ...? ಯಾರೂ ತಪ್ಪಿಸಲು ಸಾಧ್ಯವಿಲ್ಲ" ಎಂದು ನಕ್ಕುಬಿಟ್ಟ. ಚಿರಂಜೀವಿ ತನ್ನ ಕೆಳಗಿನ ಅಧಿಕಾರಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು ಅವರಿಂದ ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದ ಹಾಗಾಗಿ ಇಲಾಖೆಯಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಕೈಕಟ್ಟಿದಂತಾದರೂ ಚಿರಂಜೀವಿಯನ್ನು ಒಳಗೊಳಗೆಯೇ ಪ್ರೀತಿಸುತ್ತಿದ್ದರು.

ಚಿರಂಜೀವಿಯ ಚಟುವಟಿಕೆಗಳು ಅವನ ಜೊತೆಗೆ ಇರುವವರಿಗೂ ತಿಳಿಯುತ್ತಿರಲಿಲ್ಲ. ಕೆಲವೊಮ್ಮೆ ಅವನ ಸಾಹಸಗಳನ್ನು ಪತ್ರಿಕೆಗಳಲ್ಲಿ ಮಾತ್ರ ಓದಿ ತಿಳಿದುಕೊಳ್ಳಬೇಕಾಗಿತ್ತು.

೮

ಅಂದು ಸಾಯಂಕಾಲ ನಾಲ್ಕು ಗಂಟೆಗೆ ಚಿರಂಜೀವಿ ಕಛೇರಿಯಲ್ಲಿದ್ದಾಗ ಒಂದು ಫೋನ್ ಕರೆ ಬಂದಿತು.

"ಹಲೋ... ಚಿರಂಜೀವಿ ಹಿಯರ್" ಎಂದ.

"ಮಿಸ್ಟರ್ ಚಿರಂಜೀವಿ ನಿಮಗೊಂದು ಸಂದೇಶ.... ಕನಕಪುರ ರಸ್ತೆಯಲ್ಲಿ ಬೆಂಗಳೂರು ಕಡೆಗೆ ಒಂದು ಟ್ರಕ್ಕಿಗೆ ಕಪ್ಪು ಬಣ್ಣದ ತಾರ್‌ಪಾಲೀನ್ ಕಟ್ಟಿದ್ದು ಅದರಲ್ಲಿ ಲಕ್ಷಾಂತರ ರೂಪಾಯಿಗಳಲ ಸೆಕೆಂಡ್ಸ್ ತುಂಬಿದೆ. ಅದು ಬೆಂಗಳೂರಿನ ಹೊರ ವಲಯದಲ್ಲಿರುವ ಒಮು ಬಂಗಲೆಯಲ್ಲಿ ಸೆಕೆಂಡ್ಸ್‌ನ್ನು ಇಳಿಸಲಿದೆ. ಟ್ರಕ್ಕು ಸಂಖ್ಯೆ MYK 1097 ಎಂದೇಳಿ ಫೋನ್ ಇಟ್ಟುಬಿಟ್ಟ.

ಚಿರಂಜೀವಿ ತನ್ನ ಗಡಿಯಾರವನ್ನು ನೋಡಿಕೊಂಡ. ಈ ರೀತಿಯ ಫೋನ್‌ಗಳು ಅವನಿಗೆ ಹೊಸದೇನೂ ಅಲ್ಲ. ಇಲಾಖೆಯ ವ್ಯಾನಿನಲ್ಲಿ ಇಬ್ಬರು ಪೇದೆಗಳನ್ನು, ಒಬ್ಬ ಸಬ್ ಇನ್ಸ್‌ಪೆಕ್ಟರ್‌ನ್ನು ಕೂರಿಸಿಕೊಂಡು ಕನಕಪುರ ರಸ್ತೆಯಲ್ಲಿ ಹೋಗುವಂತೆ ತಿಳಿಸಿದ. ನಲವತ್ತೈದು ನಿಮಿಷಗಳಲ್ಲಿ ಬೆಂಗಳೂರಿನ ಹೊರ ವಲಯವನ್ನು ತಲುಪಿದ ವ್ಯಾನು ಒಂದು ಕಡೆ ನಿಂತುಕೊಂಡಿತು.

ವ್ಯಾನು ನಿಂತುಕೊಂಡಿದ್ದೇ ತಡ, ಅದೇ ಸಮಯಕ್ಕೆ ಒಂದು ಟ್ರಕ್ಕು ದೂರದಲ್ಲಿ ಕಾಣಿಸಿಕೊಂಡಿತು. ಟ್ರಕ್ಕಿನ ಮುಂದೆ ಬರುತ್ತಿದ್ದ ಮಾರುತಿ ಕಾರು

ಹತ್ತಿರಕ್ಕೆ ಬರುತ್ತಿದ್ದಂತೆ ತನ್ನ ಎರಡೂ ಬದಿಯ ಕಿಟಕಿ ಗಾಜುಗಳನ್ನು ಮುಚ್ಚಿಕೊಳ್ಳುತ್ತಿರುವಂತೆ ತೋರಿತು. ಒಂದೇ ರಸ್ತೆಯಾದ್ದರಿಂದ ಮಾರುತಿ ಕಾರಾಗಲಿ, ಟ್ರಕ್ಕಾಗಲಿ ರಸ್ತೆಯಿಂದ ಬೇರೆ ಕಡೆಗೆ ತಿರುಗಿಕೊಳ್ಳಲು ದಾರಿಯಿಲ್ಲದೆ ಎದುರು ಬದುರಾಗಿ ಚಲಿಸುತ್ತಲೇ ಬಂದವು.

ಕಾರು ಹತ್ತಿರಕ್ಕೆ ಬಂದು ಮುಂದೆ ಸಾಗಿ ಹೋಯಿತು. ಕಾರಿನ ಎಲ್ಲಾ ಗಾಜುಗಳು ಕಪ್ಪು ಬಣ್ಣದ ಫೋಟೋಕ್ರೋಮ್ ಗ್ಲಾಸುಗಳಾಗಿದ್ದು ಒಳಗಿರುವವರನ್ನು ಗುರುತಿಸಲಾಗಲಿಲ್ಲ. ಕಾರಿನ ದೀಪಗಳು ನಿಲ್ಲುವ ಸೂಚನೆಗಳನ್ನು ತೋರಿಸುತ್ತಿದ್ದು ಅದರ ಹಿಂದೆ ಮುಂದೆ ಯಾವ ಗಾಡಿಯೂ ಕಾಣಿಸುತ್ತಿಲ್ಲ, ದೂರದಲ್ಲಿ ಬರುತ್ತಿರುವ ಒಂದೇ ಟ್ರಕ್ಕನ್ನು ಬಿಟ್ಟು. ಇದರಿಂದ ಸಂದೇಹಗೊಂಡ ಚಿರಂಜೀವಿ ಒಂದು ಕಡೆ ಕಾರನ್ನು, ಇನ್ನೊಂದು ಕಡೆ ಟ್ರಕ್ಕನ್ನು ನೋಡುತ್ತಿದ್ದಂತೆ ಟ್ರಕ್ಕು ದೂರದಲ್ಲೇ ನಿಂತುಕೊಂಡಿತು. ಸಂದೇಹ ಹೆಚ್ಚಾಗಿ ವ್ಯಾನನ್ನು ಟ್ರಕ್ಕಿನ ಹತ್ತಿರಕ್ಕೆ ಓಡಿಸುವಂತೆ ಚಿರಂಜೀವಿ, ಪೇದೆಗೆ ಸೂಚಿಸಿದ.

ವ್ಯಾನು ಟ್ರಕ್ಕಿನ ಹತ್ತಿರ ಹೋಗುತ್ತಿದ್ದಂತೆ, ಟ್ರಕ್ಕಿನ ಮೇಲೆ "MYK 1097" ಸಂಖ್ಯೆ ಇದ್ದು, ಟ್ರಕ್ಕನ್ನು ಸುತ್ತುವರಿಯಲಾಯಿತು. ಅಷ್ಟರಲ್ಲಿ ಟ್ರಕ್ಕಿನಲ್ಲಿದ್ದ ಇಬ್ಬರು ಇಳಿದು ಹೊಲಗಳ ಕಡೆಗೆ ಓಡಿದರು. ಚಿರಂಜೀವಿ ಮತ್ತು ಒಬ್ಬ ಪೇದೆ ಓಡಿಸಿಕೊಂಡೋಗಿ ಒಬ್ಬನನ್ನು ಹಿಡಿಯುವಷ್ಟರಲ್ಲಿ ಸಫಲರಾದರು. ಇನ್ನೊಬ್ಬನನ್ನು ಒಬ್ಬ ಪೇದೆ ಮತ್ತು ಸಬ್ ಇನ್ಸ್‌ಪೆಕ್ಟರ್ ಓಡಿಸಿಕೊಂಡೋದರೂ ಹಿಡಿಯಲಾಗದೆ ಹಿಂದಕ್ಕೆ ಬಂದರು.

ಎಲ್ಲರೂ ರಸ್ತೆಗೆ ಬರುತ್ತಿದ್ದಂತೆ ಅದೇ ಮಾರುತಿ ಕಾರಿ ವೇಗವಾಗಿ ಹಿಂದಕ್ಕೆ ಧಾವಿಸಿ ಬರುತ್ತಿರುವುದನ್ನು ಗಮನಿಸಿದ ಚಿರಂಜೀವಿ ಪೇದೆಗಳಿಗೆ ಹಿಡಿದುಕೊಂಡಿದ್ದವನ ಕೈಗಳನ್ನು ಕಟ್ಟುವಂತೆ ಹೇಳಿದ. ಅಷ್ಟರಲ್ಲಿ ಕಾರಿನೊಳಗಿಂದ "ಢಂ... ಢಂ...." ಎನ್ನುವ ಸದ್ದಾಗಿ ಚಿರಂಜೀವಿ ಮತ್ತು ಪೇದೆಗಳು ತತ್ತರಿಸಿಹೋದರು. ಇಬ್ಬರು ಪೇದೆಗಳು ಹಿಡಿದುಕೊಂಡಿದ್ದನವನ್ನು ಕೆಳಕ್ಕೆ ತಳ್ಳಿ ರಸ್ತೆಯ ಪಕ್ಕದಲ್ಲಿದ್ದ ಗಿಡಗಳ ಮರೆಯಲ್ಲಿ ಕುಳಿತುಕೊಂಡರು.

ಪಕ್ಕದಲ್ಲಿದ್ದ ನೆಲದಿಂದ ರಸ್ತೆ ಸುಮಾರು ಐದಾರು ಅಡಿಗಳು ಎತ್ತರ ಇರುವುದರಿಂದ ಅವರಿಗೆ ಗುಂಡುಗಳು ತಗುಲಲಿಲ್ಲ. ನೆಲಕ್ಕೆ ಬಿದ್ದವನು ಉರುಳಾಡಿ ಓಡಲು ಪ್ರಯತ್ನಿಸಿದ.

ಇಬ್ಬರು ಪೇದೆಗಳು ಅವನನ್ನು ಅಟ್ಟಿಸಿಕೊಂಡ್ಹೋಗಿ ಕೆಳಕ್ಕೆ ಕೆಡವಿ ಮತ್ತೆ ಹಿಡಿದುಕೊಂಡರು.

ಅಷ್ಟರಲ್ಲಿ ಟ್ರಕ್ಕಿನ ಹಿಂದಕ್ಕೆ ಬಂದಿದ್ದ ಚಿರಂಜೀವಿ ತನ್ನಲ್ಲಿದ್ದ ಪಿಸ್ತೂಲನ್ನು ತೆಗೆದುಕೊಂಡು ಕಾರಿನ ಕಿಟಕಿಗೆ ಗುರಿಯಿಟ್ಟು ಒಂದು ಗುಂಡನ್ನು ಕಿಟಕಿಯಲ್ಲಿ, ಇನ್ನೊಂದು ಗುಂಡನ್ನು ಕಾರಿನ ಟೈರಿಗೆ ಹೊಡೆಯುವುದರಲ್ಲಿ ಕಾರು ಮುಂದಕ್ಕೆ ವೇಗವಾಗಿ ಚಲಿಸಿತು. ಚಿರಂಜೀವಿ ಒಬ್ಬ ಪೇದೆಯ ಜೊತೆಗೆ ವ್ಯಾನಿನಲ್ಲಿ ಕುಳಿತುಕೊಂಡು ಮುಂದೆ ಓಡುತ್ತಿದ್ದ ಕಾರನ್ನು ಹಿಂಬಾಲಿಸತೊಡಗಿದ.

ಟ್ರಕ್ಕಿನ ಹತ್ತಿರ ಒಬ್ಬ ಪೇದೆಯನ್ನು ಕಾವಲಿರಿಸಿದ ಸಬ್ ಇನ್ಸ್‌ಪೆಕ್ಟರ್ ಸೆರೆ ಸಿಕ್ಕವನ ಕೈಗಳನ್ನು ಹಿಂದಕ್ಕೆ ಕಟ್ಟಿ ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಲಾರಿಯನ್ನು ನಿಲ್ಲಿಸಿ ಬೆಂಗಳೂರಿನ ಕಡೆಗೆ ಪ್ರಯಾಣ ಬೆಳೆಸಿದ.

* * *

ಬೆಳಗ್ಗೆ, ಚಿರಂಜೀವಿ ಮನೆ ಬಿಟ್ಟಾಗಿನಿಂದ ಅದೇಕೋ ಚಂದ್ರಕಲಾ ಹೇಳಿಕೊಳ್ಳಲಾಗದಂತಹ ಸಂಕಟವನ್ನು ಅನುಭವಿಸುತ್ತಿದ್ದಾಳೆ. ಮಧ್ಯಾಹ್ನ ಅಡಿಗೆ ಮಾಡಿಕೊಳ್ಳಲು ಅಡಿಗೆ ಮನೆಗೆ ಹೋದಾಗಲೂ ಕೈಯಲ್ಲಿ ಹಿಡಿದುಕೊಂಡ ಸಾಮಾನುಗಳೆಲ್ಲ ನಾಲ್ಕಾರು ಸಲ ಕೈಯಿಂದ ಜಾರಿ ಜಾರಿ ಕೆಳಕ್ಕೆ ಬಿದ್ದಿದ್ದವು. ಎರಡು ಮಾತ್ರೆಗಳನ್ನು ತೆಗೆದುಕೊಂಡ ಮೇಲೆ ಸ್ವಲ್ಪ ಸಮಾಧಾನವಾಗಿ ಹೆಸರಿಗೆ ಊಟ ಮಾಡಿ ಹಾಸಿಗೆ ಮೇಲೆ ಮಲಗಿಕೊಂಡಳು.

ಮಲಗಿಕೊಂಡು ಗಾಢ ನಿದ್ರೆಯಲ್ಲಿದ್ದಾಗ ಯಾವುದೋ ಒಂದು ಭಯಂಕರ ಕನಸು. ಚೀರಿಕೊಂಡು ಎದ್ದು ಕುಳಿತ ಚಂದ್ರಕಲಾ ಗೋಡೆಯಲ್ಲಿನ ಗಡಿಯಾರವನ್ನು ನೋಡಿದಾಗ ಸಮಯ ಐದೂವರೆ ಗಂಟೆ. ಚಿರಂಜೀವಿ ಸಾಮಾನ್ಯವಾಗಿ ಏನೂ ಕೆಲಸವಿಲ್ಲದ ದಿನ ಆರೂವರೆ ಗಂಟೆಗೆ ಮನೆಗೆ ಬಂದುಬಿಡುತ್ತಾನೆ.

ಚಂದ್ರಕಲಾ, ಚಿರಂಜೀವಿಯ ಕಛೇರಿಗೆ ಅಗತ್ಯವಿಲ್ಲದೆ ಫೋನ್ ಮಾಡುವುದಿಲ್ಲ. ಆದರೂ ಈ ದಿನ ಏಕೋ ಎದ್ದು ಮುಖ ತೊಳೆದುಕೊಂಡು ಚಿರಂಜೀವಿ ಕಛೇರಿಗೆ ಫೋನ್ ಮಾಡಿದಳು. ಚಿರಂಜೀವಿ ಡ್ಯೂಟಿ ಮೇಲೆ ಹೊರಗಡೆ ಹೋಗಿದ್ದು ಇನ್ನೂ ಬಂದಿಲ್ಲ ಎಂಬುದಾಗಿ ತಿಳಿಯಿತು. ಸುತ್ತಲೂ, ಕತ್ತಲು ಆವರಿಸಿಕೊಳ್ಳುತ್ತಿದೆ. ಆಗಂತುಕರ ಕಾರು ಮುಂದೆ, ಚಿರಂಜೀವಿಯ ವ್ಯಾನು ಹಿಂದೆ ವೇಗಾವಾಗಿ ಧಾವಿಸುತ್ತಿದೆ. ಕನಕಪುರ ರಸ್ತೆಯಲ್ಲಿ ಸುಮಾರು

ದೂರ ಚಲಿಸಿದ ಮೇಲೆ ಬಲಗಡೆಗೆ ತಿರುಗಿಕೊಂಡು ಹಳ್ಳಕೊಳ್ಳಗಳ ಸಣ್ಣ ರಸ್ತೆಯಲ್ಲಿ ಸುಮಾರು ಎರಡು ಕಿಲೋ ಮೀಟರುಗಳ ದೂರ ಚಲಿಸಿದ ಮೇಲೆ ಗಿಡಮರಗಳೇ ತುಂಬಿರುವ ಒಂದು ಕಾಡಿನ ಒಳಕ್ಕೆ ಕಾರು ನುಗ್ಗಿ ಹೋಯಿತು. ಚಿರಂಜೀವಿಯ ವ್ಯಾನು ಹಿಂದೆಯೇ ಹಿಮ್ಮೆಟ್ಟಿತು. ಇದ್ದಕ್ಕಿದ್ದ ಹಾಗೆ ಕಾಡಿನ ಮಧ್ಯೆ ಒಂದು ದೊಡ್ಡ ಕಾಂಪೌಂಡ್ ಕಾಣಿಸಿಕೊಂಡಿತು. ನಡುವೆ ವಿಶಾಲವಾದ ಖಾಲಿ ಸ್ಥಳ. ಹಲವು ಬಾಗಿಲುಗಳು, ಮುಚ್ಚಿರುವ ಕೊಠಡಿಗಳು, ಕಾರು ಅಲ್ಲಿಯವರೆಗೆ ಬಂದು ಆಮೇಲೆ ಕಾಣಿಸದಾಯಿತು.

ಚಿರಂಜೀವಿ ಸ್ವಲ್ಪ ಧೃತಿಗೆಟ್ಟವನಂತೆ ಸುತ್ತಲೂ ನೋಡಿದ, ವ್ಯಾನು ಓಡಿಸುತ್ತಿದ್ದ ಪೇದೆ ಆಗಲೆ ಅಧೈರ್ಯಗೊಂಡಿದ್ದು ಚಿರಂಜೀವಿ ಕಡೆಗೆ ಪಿಳಿಪಿಳಿ ನೋಡುತ್ತಿದ್ದ. ಚಿರಂಜೀವಿ ಜೀಪಿನಿಂದ ಇಳಿದು ಹೋಗಿ ಸುತ್ತಲೂ ಇದ್ದ ಬಾಗಿಲುಗಳಲ್ಲಿ ಒಂದನ್ನು ತೆರೆದು ನಿಧಾನವಾಗಿ ಒಳಕ್ಕೆ ಇಣಿಕಿ ನೋಡಿದ. ಕತ್ತಲು ರೂಮಿನ ಒಳಗೆ ಪೇರಿಸಿಟ್ಟಿರುವ ಹತ್ತಾರು ದೇಶ, ವಿದೇಶಿ ಬಾಟಲುಗಳಿರುವ ಬಾಕ್ಸ್‌ಗಳನ್ನು ಸೇರಿಸಲಾಗಿದೆ. ಇನ್ನೊಂದು ಕೊಠಡಿ ಎಲ್ಲಿ ನೋಡಿದರೂ ನೀಟಾಗಿ ಪೇರಿಸಿರುವ ಮದ್ಯದ ಬಾಕ್ಸ್‌ಗಳು. ಹತ್ತಿರ ಹೋಗಿ ಕೆಲವು ಬಾಕ್ಸ್‌ಗಳಿರುವ ಬಾಟಲುಗಳನ್ನು ಕೈಗೆ ತೆಗೆದುಕೊಂಡು ನೋಡಿದ. ಎಲ್ಲಾ ಸೆಕೆಂಡ್ಸ್ ಮಾಲೆ.

ಅಷ್ಟರಲ್ಲೆ ಹೊರಗೆ ಸದ್ದಾಗಿ ಪೇದೆ ಕೂಗಿಕೊಂಡ. ಈಗ ಪೂರ್ಣವಾಗಿ ಕತ್ತಲಾಗಿದೆ. ಒಂದು ಕೋಣೆಯಿಂದ ಚಿರಂಜೀವಿ ಪಿಸ್ತೂಲು ಹಿಡಿದು ನಿಧಾನವಾಗಿ ಹೊರಗಡೆಗೆ ಬಂದ. ಮೂವರು ದಾಂಢಿಗರು ರಾಡು, ಕೋಲುಗಳನ್ನು ಹಿಡಿದು ಚಿರಂಜೀವಿಯನ್ನು ಸುತ್ತುವರಿದರು. ಚಿರಂಜೀವಿಯ ಕೈಯಲ್ಲಿದ್ದ ಪಿಸ್ತೂಲನ್ನು ನೋಡಿದ ದಾಂಢಿಗರು ಸ್ವಲ್ಪ ಅಂಜಿಕೊಂಡಂತೆ ತೋರಿದರೂ, ಹಿಂದಕ್ಕೆ ಹೋಗಲಿಲ್ಲ. ಹೊರಗಡೆಯ ಬಾಗಿಲನ್ನು ಮುಚ್ಚಲಾಗಿದೆ. ಹಿಂದೆಯೆ ಬಂದು ಜೊತೆಯಲ್ಲಿದ್ದ ಪೇದೆ ಅಲ್ಲೇ ಒಂದು ಮೂಲೆಯಲ್ಲಿ ನಿಂತು ಮಿಕ ಮಿಕನೆ ನೋಡುತ್ತಿದ್ದಾನೆ.

ಚಿರಂಜೀವಿ ಇನ್ನು ಸಮಯ ಹಾಳು ಮಾಡುವುದು ಬೇಡವೆಂದು ಒಬ್ಬನ ಕಾಲಿಗೆ ಪಿಸ್ತೂಲನ್ನು ಗುರಿಯಿಡುತ್ತಿದ್ದಂತೆ ಹಿಂದಿನ ಬಾಗಿಲನ್ನು ತೆರೆದುಕೊಂಡು ನುಗ್ಗಿದ ಇನ್ನೊಬ್ಬ ಚಿರಂಜೀವಯ ಮೇಲ ಹಾರಿಬಿದ್ದ. ಕೆಳಕ್ಕೆ ಬಿದ್ದ ಚಿರಂಜೀವಿ

ಚೇತರಿಸಿಕೊಂಡು ಒಬ್ಬನ ತೋಳಿನಲ್ಲಿ, ಇನ್ನೊಬ್ಬನಿಗೆ ತೊಡೆಯಲ್ಲಿ ಎರಡು ಗುಂಡುಗಳನ್ನು ತೂರಿಸಿದ. ಪಿಸ್ತೂಲಿನಲ್ಲಿ ಈಗ ಒಂದು ಗುಂಡು ಮಾತ್ರ ಉಳಿದುಕೊಂಡಿದ್ದು, ಯಾವುದಕ್ಕೂ ಒಳಿತೆಂದು ಯಾರ ಮೇಲೂ ಪ್ರಯೋಗಿಸದೆ ಅವರ ಕಡೆಗೆ ಗುರಿಯಿಟ್ಟು ಬಾಗಿಲನ್ನು ತೆಗೆದುಕೊಂಡು ಮೊದಲು ಪೇದೆಯನ್ನು ಹೊರಕ್ಕೆ ಹೋಗಲು ದಾರಿ ಮಾಡಿಕೊಟ್ಟ. ಅನಂತರ ಮೂವರನ್ನು ಒಳಗಡೆಯೇ ಇಟ್ಟು ಬಾಗಿಲು ಮುಚ್ಚಿ ಹಿಂದಕ್ಕೆ ತಿರುಗಿಕೊಂಡಿದ್ದೇ ತಡ ಹೊರಗೆ ಕಾಯುತ್ತಿದ್ದ ನಾಲ್ಕಾರು ದಾಂಢಿಗರು ಚಿರಂಜೀವಿ ಮತ್ತು ಪೇದೆಯ ಮೇಲೆ ಒಮ್ಮೆಲೆ ಎರಗಿಬಿಟ್ಟರು. ಕತ್ತಲಲ್ಲಿ ಅವರು ಎಷ್ಟು ಜನರು ಇದ್ದರೊ ಏನೋ ಗೊತ್ತಾಗಲಿಲ್ಲ. ರಾಡು, ಕೋಲುಗಳಿಂದ ಒಂದೇ ಸಮನೆ ಚಿರಂಜೀವಯ ಮೇಲೆ ಪ್ರಹಾರ ಮಾಡಿಬಿಟ್ಟರು.

ಕೆಳಕ್ಕೆ ಬಿದ್ದ ಚಿರಂಜೀವಿ ಮತ್ತೆ ಚೇತರಿಸಿಕೊಂಡು ಒಬ್ಬರಿಂದ ಒಂದು ಉದ್ದವಾದ ಹಲಗೆಯನ್ನು ಕಿತ್ತುಕೊಂಡು ಎಲ್ಲರನ್ನೂ ಚಚ್ಚುತ್ತಿದ್ದಂತೆ ಪೇದೆ ಅವರಿಂದ ತಪ್ಪಿಸಿಕೊಂಡು ವ್ಯಾನನ್ನು ಸ್ಟಾರ್ಟ್ ಮಾಡಿ ಹಿಂದಕ್ಕೆ ತಿರುಗಿಸಿಕೊಂಡಿದ್ದ. ಆ ದಾಂಡಿಗರು ಚಿರಂಜೀವಿಯನ್ನು ಮಾತ್ರ ಗುರಿಯಾಗಿಟ್ಟುಕೊಂಡಿದ್ದರಿಂದ ಪೇದೆಯನ್ನು ಮರೆತಿದ್ದರು. ಚಿರಂಜೀವಿ ಅವರಿಂದ ತಪ್ಪಿಸಿಕೊಂಡು ವ್ಯಾನಿನ ಕಡೆಗೆ ಕುಂಟುತ್ತಾ ಬರುತ್ತಿದ್ದಂತೆ ಮುಖದ ಮೇಲೆ ಬೆಂಕಿ ಬಿದ್ದಂತಾಯಿತು. ಮುಖವನ್ನು ಎರಡು ಕೈಗಳಿಂದ ಮುಚ್ಚಿಕೊಂಡು ಹಿಂದಿನಿಂದ ವ್ಯಾನಿನ ಒಳಕ್ಕೆ ಹಕ್ಕಿಯಂತೆ ತೂರಿ ಕುಳಿತ.

ವ್ಯಾನು ಒಂದೇ ಸಮನೇ ವೇಗವಾಗಿ ಮುನ್ನುಗ್ಗಿಹೋಯಿತು. ಚಿರಂಜೀವಿಯ ಮುಖ ಬೆಂಕಿಯಿಂದ ದಹಿಸುತ್ತಿದ್ದು, ಒಂದು ಕಾಲನ್ನು ಸ್ವಲ್ಪವೂ ಸಡಿಸಲಾಗಲಿಲ್ಲ. ಪೇದೆ ವ್ಯಾನನ್ನು ಮುಖ್ಯ ರಸ್ತೆಯವರೆಗೂ ವೇಗವಾಗಿ ಓಡಿಸಿ, ಒಳಗಡೆ ಇರುವ ಬಲ್ಬ್ ಹಚ್ಚಿ ಹಿಂದಕ್ಕೆ ನೋಡಿದ...! ಅದು ಚಿರಂಜೀವಿಯ ಮುಖವೆ ಅಲ್ಲ. ಆಸಿಡ್ ಚೆಲ್ಲಿದ್ದರಿಂದ ಮುಖ ವಿಕಾರವಾಗಿ ಹೋಗಿದೆ. ಪೇದೆಗೆ ಕರುಳು ಕಿವಿಚಿದಂತಾಗಿ "ಸಾರ್" ಎಂದಿದ್ದೆ ಜೋರಾಗಿ ಅಳಲು ಪ್ರಾರಂಭಿಸಿಬಿಟ್ಟ.

"ರಾಮಯ್ಯ ನೀನು ಆದಷ್ಟು ಬೇಗನೆ ಆಸ್ಪತ್ರೆಗೆ ಓಡಿಸು" ಎಂದೇಳಿದ ಚಿರಂಜೀವಿ ಹಿಂದಿನ ಸೀಟಿನಲ್ಲಿ ಮಲಗಿಬಿಟ್ಟ. ಪೇದೆ ರಾಮಯ್ಯ ವ್ಯಾನನ್ನು ಓಡಿಸುತ್ತಾ ಮಧ್ಯೆ ಮಧ್ಯೆ ಚಿರಂಜೀವಿಯನ್ನು ಎರಡು ಮೂರು ಸಲ

ಮಾತನಾಡಿಸಿದರು, ಚಿರಂಜೀವ ಮಾತನಾಡಲಿಲ್ಲ. ರಾಮಯ್ಯ ನೇರವಾಗಿ ವ್ಯಾನನ್ನು ಜಯನಗರದ ಒಂದು ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿನ ಮುಂದೆ ನಿಲ್ಲಿಸಿದ.

ಸರಕಾರದ ವ್ಯಾನು ನೋಡಿದ್ದೇ ಡಾಕ್ಟರುಗಳು ಬಂದು ಚಿರಂಜೀವಿಯನ್ನು ಸ್ಟ್ರೆಚರ್ ಮೇಲೆ ಇಟ್ಟು ಒಳಕ್ಕೆ ತೆಗೆದುಕೊಂಡು ಹೋದರು. ಅಷ್ಟರಲ್ಲಿ ರಾಮಯ್ಯ ಅಬಕಾರಿ ಕಮೀಷನರ್ ಮನೆಗೆ ಫೋನ್ ಮಾಡಿ ತಿಳಿಸಿದ. ಕಮೀಷನರ್ ಫೋನ್ ತೆಗೆದುಕೊಂಡು ಇನ್ನಿತರ ಅಧಿಕಾರಿಗಳಿಗೆ ತಿಳಿಸಿದರು. ಎಲ್ಲರೂ ಆಸ್ಪತ್ರಗೆ ಧಾವಿಸಿ ಬಂದರು.

ಕಮೀಷನರ್, ಚಿರಂಜೀವಿಯ ಪತ್ನಿಗೆ ತಿಳಿಸುವುದೋ ಬೇಡವೋ ಎನ್ನುತ್ತಾ ಸ್ವಲ್ಪ ಹೊತ್ತು ಯೋಚಿಸಿ ಚಿರಂಜೀವಿಯ ಪರಿಸ್ಥಿತಿಯನ್ನು ತಿಳಿದುಕೊಂಡ ನಂತರ ಫೋನ್ ಮಾಡೋಣವೆಂದು ಸುಮ್ಮನಾದರು. ರಾತ್ರಿ ಹತ್ತು ಗಂಟೆಗೆ ಹೊರಗೆ ಬಂದ ಡಾಕ್ಟರು -

"ಪ್ರಾಣಕ್ಕೆ ಅಪಾಯವೇನೂ ಇಲ್ಲ. ತಲೆಗೆ ಪೆಟ್ಟಾಗಿ ಒಂಬತ್ತು ಹೊಲಿಗೆಗಳನ್ನು ಹಾಕಲಾಗಿದೆ. ಎಡಕಾಲು ಮುರಿದು ಹೋಗಿದ್ದು ಪ್ಲಾಸ್ಟರ್ ಹಾಕಲಾಗಿದೆ. ಆಸಿಡ್‌ನಿಂದ ಒಂದು ಕಡೆ ಮುಖ ಪೂರ್ಣವಾಗಿ ಸುಟ್ಟೋಗಿದೆ. ಪ್ರಜ್ಞೆ ಬರಲು ಇಪ್ಪತ್ತು ನಾಲ್ಕು ಗಂಟೆಗಳಾದರೂ ಬೇಕು" ಎಂದರು.

"ಈ ಯುವಕ ಇಷ್ಟೆಲ್ಲಾ ಯಾಕೆ ತೊಂದರೆ ಮಾಡಿಕೊಳ್ಳುತ್ತಾನೆ? ಛಿ ಪೂರ್ ಫೆಲೋ" ಕಮೀಷನರ್ ತಮ್ಮಲ್ಲೇ ಹಲುಬಿದರು.

ಕಮೀಷನರ್ ಇಬ್ಬರು ಅಧಿಕಾರಿಗಳನ್ನು ಕರೆದು ಶ್ರೀಮತಿ ಚಿರಂಜೀವಿ ಅವರಿಗೆ ತಿಳಿಸುವಂತೆ ಹೇಳಿದರು. ಆ ಅಧಿಕಾರಿಗಳು ನೇರವಾಗಿ ಚಿರಿಂಜೀವಿಯ ಮನೆಗೆ ತಲುಪಿ ಶ್ರೀಮತಿ ಚಂದ್ರಕಲಾಗೆ ವಿಷಯವನ್ನು ಮುಟ್ಟಿಸಿದರು. ಚಂದ್ರಕಲಾ ವಿಷಯವನ್ನು ಕೇಳುತ್ತಿದ್ದಂತೆ ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದುಬಿಟ್ಟಳು. ಮನೆಯಲ್ಲಿ ಬೇರೆ ಯಾರೂ ಹೆಂಗಸರಿಲ್ಲದ ಕಾರಣ ಅಧಿಕಾರಿಗಳಿಗೆ ಗಾಬರಿಯಾಗಿ ಕಾವಲು ಕಾಯುವ ಪೇದೆಯ ಸಹಾಯದಿಂದ ಚಂದ್ರಕಲಾಳ ತಾಯಿ, ತಂದೆಯನ್ನು ಕರೆದುಕೊಂಡು ಜೊತೆಗ ಡಾಕ್ಟರನ್ನು ಕರೆದು ತಂದರು. ವಿಷಯ ತಿಳಿದ ಡಾಕ್ಟರು ಚಂದ್ರಕಲಾಗೆ ಒಂದು ಚುಚ್ಚುಮದ್ದು ನೀಡಿ,

"ಅರ್ಧ ಗಂಟೆಯಲ್ಲಿ ಎಲ್ಲಾ ಸರಿಹೋಗುತ್ತದೆ" ಎಂದೇಳಿ ಹೊರಟು ಹೋದರು. ಅರ್ಧಗಂಟೆಗೆ ಮುಂಚೆಯೇ ಎದ್ದು ಕುಳಿತ ಚಂದ್ರಕಲಾ,

"ಪ್ಲೀಸ್..... ನನ್ನನ್ನು ಚಿರಂಜೀವಿಯ ಹತ್ತಿರಕ್ಕೆ ಕರೆದುಕೊಂಡು ಹೋಗಿ. ಚಿರಂಜೀವಿಗೆ ಏನಾಗಿದೆ? ಎಲ್ಲಿದ್ದಾರೆ? ಹೀಗೆ ಒಂದೇ ಸಮನೆ ರೋದಿಸಲು ಪ್ರಾರಂಭಿಸಿಬಿಟ್ಟಳು. ಅಧಿಕಾರಿಗಳು "ಚಿರಂಜೀವಿ ಅವರ ಪ್ರಾಣಕ್ಕೆ ಏನೂ ಆಗಿಲ್ಲ" ಎಂದು ಎಷ್ಟೇ ಹೇಳಿದರೂ ಕೇಳದ ಚಂದ್ರಕಲಾ,

"ನೀವೆಲ್ಲಾ ಏನೋ ಮುಚ್ಚಿಡುತ್ತಿದ್ದೀರಿ. ಚಿರಂಜೀವಿ..... ಚಿರಂಜೀವಿ" ಎನ್ನುತ್ತಾ ಗೋಳಾಡತೊಡಗಿದಳು.

ದಿಗ್ಮೂಢರಾದ ಅಧಿಕಾರಿಗಳು ಏನು ಮಾಡಬೇಕೋ ಒಂದೂ ಅರ್ಥವಾಗದೆ ನೋಡುತ್ತಾ ನಿಂತುಬಿಟ್ಟರು.

ಚಂದ್ರಕಲಾಳ ತಂದೆ, ತಾಯಿ ಮತ್ತು ಅಧಿಕಾರಿಗಳು ಅವಳನ್ನು ಸಮಾಧಾನಪಡಿಸುತ್ತಾ ಇಲಾಖೆಯ ವ್ಯಾನಿನಲ್ಲಿ ಕೂರಿಸಿಕೊಂಡು ಆಸ್ಪತ್ರೆ ತಲುಪಿದಾಗ ಸಮಯ ರಾತ್ರಿ ಹನ್ನೊಂದೂವರೆ ಗಂಟೆ.

ಚಿರಂಜೀವಿ ಒಂದು ಹಾಸಿಗೆಯ ಮೇಲೆ ಮಲಗಿದ್ದಾನೆ. ಒಂದು ಕಡೆ ಅರ್ಧ ಮುಖವನ್ನು ಬಿಟ್ಟರೆ ಇಡೀ ಮುಖ ಮತ್ತು ತಲೆಗೆ ಬ್ಯಾಂಡೇಜ್ ಹಾಕಿ ಕಟ್ಟಲಾಗಿದ್ದು ದೊಡ್ಡದಾದ ಪ್ಲಾಸ್ಟರ್ ಹಾಕಿದ ಎಡಕಾಲನ್ನು ಹಾಸಿಗೆ ಮೇಲೆ ಎತ್ತಿ ಕಟ್ಟಲಾಗಿದೆ. ದೇಹದ ಮೇಲೆ ಅಲ್ಲಲ್ಲಿ ಗಾಯಗಳಾಗಿದ್ದು ಎದೆಯ ಮೇಲೆ ಬಟ್ಟೆಯನ್ನು ಮುಚ್ಚಲಾಗಿದೆ.

ಚಂದ್ರಕಲಾ ಆ ಕೋಣೆಯ ಬಾಗಿಲನ್ನು ದಾಟಿ ಐದಾರು ಹೆಜ್ಜೆ ಹಾಕಿದಾಗ ಅಧಿಕಾರಿಯೊಬ್ಬರು ಚಿರಂಜೀವಿಯ ಹಾಸಿಗೆ ಕಡೆಗೆ ಕೈ ತೋರಿಸಿದರು. ಚಂದ್ರಕಲಾ, ಚಿರಂಜೀವಿಯನ್ನು ಹತ್ತಿರದಿಂದ ನೋಡಿದ್ದೇ ಮತ್ತೊಮ್ಮೆ ಪ್ರಜ್ಞೆ ಕಳೆದುಕೊಂಡು ನೆಲದ ಮೇಲೆ ಕುಸಿದುಬಿದ್ದಳು. ಗಾಬರಿಯಾದ ಅಧಿಕಾರಿಗಳು ನರ್ಸ್‌ಗೆ ತಿಳಿಸಿದ್ದೇ ಹತ್ತಿರ ಬಂದು ನೋಡಿದ ನರ್ಸ್, ರಾತ್ರಿ ಡ್ಯೂಟಿಯಲ್ಲಿದ್ದ ಡಾಕ್ಟರನ್ನು ಕರೆದುಕೊಂಡು ಬರಲು ಓಡಿಹೋದಳು.

ಇನ್ನೊಬ್ಬಳು ನರ್ಸ್ ಬಂದು ಚಂದ್ರಕಲಾಳನ್ನು ಹಾಸಿಗೆ ಮೇಲೆ ಮಲಗಿಸಿದಳು. ಡಾಕ್ಟರು ಬಂದು ಚಂದ್ರಕಲಾಳ ನಾಡಿಯನ್ನು ಪರೀಕ್ಷಿಸಿ

"ಹೊ.... ಸೀರಿಯಸ್ಸಾಗಿದೆ. ಸ್ಟ್ರೆಚರ್ ತಂದು ಎಮರ್ಜನ್ಸಿ ಕೋಣೆಗೆ ಸಾಗಿಸಿ" ಎಂದರು. ಓಡಿಹೋದ ನರ್ಸ್ ವಾರ್ಡ್‌ಬಾಯಿಯ ಜೊತೆಗೆ ಸ್ಟ್ರೆಚರ್ ತಳ್ಳಿಕೊಂಡು ಬಂದಳು. ಚಂದ್ರಕಲಾಳನ್ನು ಸ್ಟ್ರೆಚರ್ ಮೇಲೆ ಮಲಗಿಸಿಕೊಂಡು ಬಂದು ಎಮರ್ಜನ್ಸಿ ವಾರ್ಡಿನಲ್ಲಿ ವೆಂಟಿಲೇಟರ್ ಜೋಡಿಸಿದರು.

ಅರ್ಧ ಗಂಟೆಯಾದ ಮೇಲೆ ಎಮರ್ಜನ್ಸಿ ವಾರ್ಡಿನಿಂದ ಹೊರಕ್ಕೆ ಬಂದ ಡಾಕ್ಟರು

"ಎಷ್ಟೇ ಪ್ರಯತ್ನಪಟ್ಟರೂ ಉಳಿಯಲಿಲ್ಲ... ಐ ಯಾಮ್ ಸಾರಿ" ಎಂದೇಳಿ ಅಲ್ಲಿಂದ ಹೊರಟು ಹೋದರು.

ಈಗ ಚಂದ್ರಕಲಾಳ ತಾಯಿ ಕುಸಿದುಬಿದ್ದಳು. ನರ್ಸ್ ಮತ್ತೆ ಓಡಿಹೋಗಿ ಡಾಕ್ಟರನ್ನು ಕರೆದು ತಂದಳು. ಡಾಕ್ಟರು ಅವರ ನಾಡಿಯನ್ನು ಹಿಡಿದು ನೋಡಿ "ಏನು ಗಾಬರಿಯಾಗಬೇಡಿ" ಎಂದರು. ಅಷ್ಟರಲ್ಲಿ ಚಂದ್ರಕಲಾ ತಾಯಿ ಒಳಗೊಳಗೇ ಸಣ್ಣದಾಗಿ ಅಳುತ್ತಿರುವುದು ಕೇಳಿಸುತ್ತಿತ್ತು. ರಾತ್ರಿಯೆಲ್ಲಾ ಚಂದ್ರಕಲಾಳ ತಾಯಿ, ತಂದೆ ಜೊತೆಯಲ್ಲಿದ್ದ ಇಬ್ಬರು ಇಲಾಖೆಯ ಅಧಿಕಾರಿಗಳು "ಆಸ್ಪತ್ರೆಯ ಹೊರಗಡೆಯೇ ಕುಳಿತಿದ್ದರು. ಬೆಳಿಗ್ಗೆ ಚಂದ್ರಕಲಾ ತೀರಿಕೊಂಡ ವಿಷಯ ತಿಳಿದು ಕಮೀಷನರ್ ಮತ್ತು ಇಲಾಖೆಯ ಇನ್ನಿತರರು ಆಸ್ಪತ್ರೆಗೆ ಧಾವಿಸಿ ಬಂದರು.

ಚಿರಂಜೀವಿಗೆ ಪ್ರಜ್ಞೆ ಬರಲು ಇಪ್ಪತ್ತನಾಲ್ಕು ಗಂಟೆಗಳು ಬೇಕಾಗುತ್ತೆ ಎಂದು ಡಾಕ್ಟರು ಹೇಳಿದ್ದರು ಮಧ್ಯಾಹ್ನ ಒಂದೂವರೆ ಗಂಟೆಗೆ ಪ್ರಜ್ಞೆ ಸ್ವಲ್ಪ ಸ್ವಲ್ಪವಾಗಿ ಬರುತ್ತಿತ್ತು. ಅದಕ್ಕೆ ಮುಂಚೆಯೇ ಹನ್ನೊಂದೂವರೆ ಗಂಟೆಗೆಲ್ಲ ಚಂದ್ರಕಲಾಳ ಹೆಣದ ಪೋಸ್ಟ್‌ಮಾರ್ಟಮ್ ಮುಗಿಸಿದ್ದ ಡಾಕ್ಟರುಗಳು ಅವಳ ಹೆಣವನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿದ್ದರು. ಚಂದ್ರಕಲಾ, ತಂದೆ, ತಾಯಿ ಮತ್ತು ಇಲಾಖೆಯ ಅಧಿಕಾರಿಗಳು ಚಿರಂಜೀವಿ ಈ ಸ್ಥಿತಿಯಲ್ಲಿರುವಾಗ ಚಂದ್ರಕಲಾಳ ಹೆಣವನ್ನು ತೆಗೆದುಕೊಂಡು ಹೋಗುವುದು ಸರಿಯಲ್ಲವೆಂದು ಸಾಯಂಕಾಲದವರೆಗೆ ಕಾಯಲು ನಿಶ್ಚಯಿಸಿದರು.

ಚಿರಂಜೀವಿಗೆ ಸ್ವಲ್ಪ ಪ್ರಜ್ಞೆ ಮೂಡುತ್ತಿದ್ದಂತೆ ಸುತ್ತಲೂ ಕಣ್ಣು ಬಿಟ್ಟು ನೋಡಿದ. ಆಸ್ಪತ್ರೆ, ಹಾಸಿಗೆ ಮೇಲೆ ಎಡಕಾಲನ್ನು ಎತ್ತಿ ಕಟ್ಟಿ ದೊಡ್ಡದಾದ ಪ್ಲಾಸ್ಟರ್ ಹಾಕಲಾಗಿದೆ. ಎಡ ಕೈಯಿಂದ ತನ್ನ ಕೆನ್ನೆಯನ್ನು ಮುಟ್ಟಿ ನೋಡಿಕೊಂಡ. ದಪ್ಪದಾದ ಪ್ಲಾಸ್ಟರ್‌ನ ಮೇಲೆ ಬ್ಯಾಂಡೇಜ್ ಸುತ್ತಲಾಗಿದೆ. ತಲೆ ಇನ್ನೂ ದಿಮ್ಮಾಗಿದ್ದು ತಲೆಗೂ ದಪ್ಪವಾದ ಬ್ಯಾಂಡೇಜು ಸುತ್ತಲಾಗಿತ್ತು. ಕೆಲವು ಕ್ಷಣಗಳಾದ ಮೇಲೆ ನಿಧಾನವಾಗಿ,

"ನರ್ಸ್.... ನರ್ಸ್" ಎಂದು ಕರೆದ. ನರ್ಸ್ ಹತ್ತಿರ ಬಂದು ನಿಂತುಕೊಂಡಳು.

"ಚಂದ್ರಕಲಾ ಪ್ಲೀಸ್...." ಎಂದ. ನರ್ಸ್ ಏನೂ ಮಾತನಾಡದೇ ಅಲ್ಲಿಂದ ಹೊರಟುಹೋದಳು.

ಈಗ ಚಿರಂಜೀವಿಗೆ ಪ್ರಜ್ಞೆ ಏನೋ ಬಂದಿತ್ತು. ಆದರೆ ಚಂದ್ರಕಲಾಳ ಸಾವಿನ ವಿಷಯ ತಿಳಿಸುವುದು ಹೇಗೆ? ಯಾರು ತಿಳಿಸುವರು ಎನ್ನುವುದೇ ಸಮಸ್ಯೆಯಾಯಿತು. ಕೊನೆಗೆ ಚಂದ್ರಕಲಾಳ ತಂದೆ ಮತ್ತು ಪೇದೆ ರಾಮಯ್ಯನನ್ನು ತಿಳಿಸುವಂತೆ ಹೇಳಲಾಯಿತು. ಮೊದಲಿಗೆ ರಾಮಯ್ಯ, ಚಿರಂಜೀವಿಯ ತಲೆ ಪಕ್ಕದಲ್ಲಿ ಹೋಗಿ ನಿಂತುಕೊಂಡ.

"ರಾಮಯ್ಯ ಚೆನ್ನಾಗಿದ್ದೀಯ?" ಚಿರಂಜೀವಿ ನಿಧಾನವಾಗಿ ಕೇಳಿದ.

"ನಾನು ಚೆನ್ನಾಗಿದ್ದೀನಿ...ಸಾರ್" ಎಂದ ರಾಮಯ್ಯನ ಕಣ್ಣುಗಳಲ್ಲಿ ನೀರು ಉಕ್ಕಿ ಬಂದು ತಲೆ ತಗ್ಗಿಸಿಕೊಂಡ. ಅಷ್ಟರಲ್ಲಿ ಚಂದ್ರಕಲಾಳ ತಂದೆ ಮತ್ತು ತಾಯಿ ಇಬ್ಬರೂ ದುಃಖಿಸುತ್ತಾ ಹತ್ತಿರ ಬಂದರು. ಚಿರಂಜೀವಿಗೆ ಏನೋ ಅನುಮಾನವಾಗಿ,

"ಚಂದ್ರಕಲಾನ ಕರೆಯಿರಿ" ಎಂದ. ಚಂದ್ರಕಲಾಳ ತಾಯಿ ಮೈ ಮರೆತವರಂತೆ ಜೋರಾಗಿ ಅಳಲು ಪ್ರಾರಂಭಿಸಿ ಬಿಟ್ಟರು. ರಾಮಯ್ಯ ತಡೆಯಲಾಗದೆ,

"ರಾತ್ರಿ ನಿಮ್ಮನ್ನು ನೋಡಿದ್ದೆ ಅಮ್ಮಾ ಅವರು ಕುಸಿದು ಬಿದ್ದು ನಮ್ಮನ್ನೆಲ್ಲ ಬಿಟ್ಟು ಹೊರಟೋದ್ರು ಸಾರ್...." ಎಂದಿದ್ದೆ ಜೋರಾಗಿ ಅಳತೊಡಗಿದ. ರಾಮಯ್ಯನ ಮಾತುಗಳನ್ನು ಕೇಳಿದ ಚಿರಂಜೀವಿ ಏನೂ ಮಾತನಾಡದೆ ಹಾಗೆ ಇದ್ದು ಬಿಟ್ಟ. ಅವನಿಗೆ ಈಗ ಅಳುವುದಕ್ಕೆ ಎರಡು ಕಣ್ಣುಗಳು ಸಾಲದೇ ಹೋಗಿ ಪ್ರಪಂಚದಲ್ಲಿ ತನಗಾಗಿ ಏನೂ ಉಳಿದಿಲ್ಲ ಎನ್ನುವಂತಿತ್ತು ಅವನ ಮೌನ.

ಅಷ್ಟರಲ್ಲಿ ಚಂತ್ರಕಲಾಳ ದೇಹವನ್ನು ಸ್ಟ್ರೆಚರ್ ಮೇಲೆ ಹಾಕಿಕೊಂಡು ವಾರ್ಡ್ ಬಾಯಿ ತಳ್ಳಿಕೊಂಡು ಬಂದ. ಎಲ್ಲರೂ ಆ ಕಡೆಗೆ ನೋಡಿದರು. ಚಿರಂಜೀವಿಯ ಹತ್ತಿರ ಸ್ಟ್ರೆಚರ್ ನಿಲ್ಲಿಸಿ ಚಂದ್ರಕಲಾಳ ಮುಖದ ಮೇಲಿದ್ದ ಬಟ್ಟೆಯನ್ನು ರಾಮಯ್ಯ ಸರಿಸಿದ. ಚಿರಂಜೀವಿ ಮುಖವನ್ನು ಹೊರಳಿಸಿ ಅವಳ ಕಡೆಗೆ ನೋಡಿದ. ಚಂದ್ರಕಲಾ ಮಗುವಿನಂತೆ ಚಿರನಿದ್ರೆಯಲ್ಲಿ ಮಲಗಿದ್ದಾಳೆ. ಸುಮಾರು ಹೊತ್ತು ಅವಳ ಮುಖವನ್ನೇ ನೋಡಿದ ಚಿರಂಜೀವಿಯ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ತಲೆದಿಂಬು, ಹಾಸಿಗೆಯ ಮೇಲೆಲ್ಲಾ ಹರಿಯುತ್ತಿತ್ತು. ಇದ್ದಕ್ಕಿದ್ದಹಾಗೆ ಎದ್ದೇಳಲು ಪ್ರಯತ್ನಸಿದ ಚಿರಂಜೀವಿಯನ್ನು ಡಾಕ್ಟರು

"ಪ್ಲೀಸ್.... ಚಿರಂಜೀವಿ ಏಳಬೇಡಿ... ನಿಮ್ಮ ಪ್ರಾಣಕ್ಕೆ ಅಪಾಯವಿದೆ" ಎಂದು ಕೈ ಹಿಡಿದುಕೊಂಡು ವಾರ್ಡ್‌ಬಾಯಿಗೆ ಸನ್ನೆ ಮಾಡಿದರು. ವಾರ್ಡ್‌ಬಾಯಿ ಚಂದ್ರಕಲಾಳ ಮುಖದ ಮೇಲೆ ಬಟ್ಟೆಯನ್ನು ಮುಚ್ಚಿ ಮುಂದಕ್ಕೆ ಸ್ಟ್ರೆಚರ್ ತಳ್ಳಿಕೊಂಡೋದ. ಚಂದ್ರಕಲಾಳ ತಂದೆ ಚಿರಂಜೀವಿಯ ಹತ್ತಿರ ಬಂದು ಕೈ ಹಿಡಿದುಕೊಂಡು,

"ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಪ್ಪ" ಎಂದೇಳಿ ಅವರ ಪತ್ನಿಯನ್ನು ಕರೆದುಕೊಂಡು ಹೊರಗಡೆಗೆ ಬಂದರು. ಅಲ್ಲಿಂದ ಚಂದ್ರಕಲಾಳ ಹೆಣವನ್ನು ವ್ಯಾನಲ್ಹಾಕಿಕೊಂಡು ಹೊರಟರು. ಚಿರಂಜೀವಿಯ ತಲೆ ದಿಮ್ಮನೆ ತಿರುಗಿದಂತಾಗಿ ಕಣ್ಣು ಮುಚ್ಚಿಕೊಂಡ.

* * *

ಯಾರು ಕರೆದರು ಆಸ್ಪತ್ರೆ ಬಿಟ್ಟು ಬರದ ಚಿರಂಜೀವಿ ಇಪ್ಪತ್ತೆರಡು ದಿನಗಳಾದ ಮೇಲೆ ತನ್ನ ಪಿ.ಎಫ್.ನ ಹಣವನ್ನೇ ತರಿಸಿಕೊಂಡು ಆಸ್ಪತ್ರೆಗೆ ಕಟ್ಟಿ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಹೊಂದಿದ. ಆಸ್ಪತ್ರೆಯಿಂದ ಹೊರಗಡೆಗೆ ಬರುತ್ತಿದ್ದಂತೆ ಎದುರಿಗೆ ಚಂದ್ರಕಲಾಳ ತಂದೆ, ತಾಯಿ ಮತ್ತು ತಂಗಿ ಕಾಣಿಸಿಕೊಂಡರು. ಒಳ್ಳೆಯ ಸಮಯಕ್ಕೆ ಬಂದರು ಎಂದುಕೊಂಡ ಚಿರಂಜೀವಿ ಒಂದು ಮರದ ಕೆಳಗೆ ಬಂದು ನಿಂತುಕೊಂಡ. ಸುಮಾರು ಹೊತ್ತು ಆ ಮರದ ಕೆಳಗೆ ಅವರೆಲ್ಲರೂ ಒಟ್ಟಾಗಿ ನಿಂತಿದ್ದರು, ಒಂದೆರಡು ಪದಗಳನ್ನು ಬಿಟ್ಟು ಅವರು ಏನೂ ಮಾತನಾಡಲಿಲ್ಲ. ಆರತಿ, ಮಧ್ಯ ಮಧ್ಯ ಚಿರಂಜೀವಿಯ ಮುಖವನ್ನು ನೋಡಿ ನೋಡಿ ದುಃಖಿಸುತ್ತಿದ್ದಳು.

ಚಿರಂಜೀವಿ ದುಃಖವನ್ನು ತನ್ನ ಹೃದಯದ ತುಂಬಾ ತುಂಬಿಕೊಂಡು ಮಾತುಬರದೇ ಆ ಕಡೆ, ಈ ಕಡೆ ನೋಡುತ್ತಿದ್ದ. ಎಡ ಕೈ ಯನ್ನು ಆಸಿಡ್ ಚೆಲ್ಲಿದ ಕೆನ್ನೆ ಮೇಲಿಂದ ತೆಗೆಯದೆ ಹಾಗೆ ಇಟ್ಟುಕೊಂಡಿದ್ದ. ಅವರ ನಡುವಿನ ಸಂಬಂಧಗಳೆಲ್ಲವನ್ನು ಆ ಕ್ಷಣಗಳು ಅವರಿಂದ ಕಿತ್ತುಕೊಂಡು ಬಿಟ್ಟಿದ್ದವು. ಎಲ್ಲರೂ ಒಂದೆರಡು ದಿನಗಳಲ್ಲಿಯೇ ನಕ್ಷತ್ರಗಳಂತೆ ದೂರದೂರಕ್ಕೆ ಚದುರಿ ಹೋಗಿದ್ದರು.

ಅಂತಿಮವಾಗಿ ಅವರು ಬೇರ್ಪಡುವ ಕ್ಷಣಗಳು ಹತ್ತಿರ ಬರುತ್ತಿದ್ದವು. ಚಿರಂಜೀವಿ ತನ್ನ ಕೈಯಲ್ಲಿದ್ದ ಕೈಬ್ಯಾಗನ್ನು ಆರತಿಯ ಕೈಗೆ ನೀಡುತ್ತಾ....

"ಆರತಿ ಇದನ್ನು ತೆಗೆದುಕೊಳ್ಳಮ್ಮ... ಈ ಬ್ಯಾಗಿನೊಳಗೆ ಏನಿದೆ ಎನ್ನುವುದನ್ನು ಮನೆಗೆ ಹೋದ ಮೇಲೆಯೇ ತೆಗೆದು ನೋಡಬೇಕು.... ದಾರಿಯಲ್ಲೂ ಸಹ ನೋಡಬಾರ್ದು" ಎಂದು ಎಚ್ಚರಿಸಿದ. ಬ್ಯಾಗನ್ನು ಆಗಲೆ ಕೈಗೆ ತೆಗೆದುಕೊಂಡಿದ್ದ ಆರತಿ ತನ್ನ ತಂದೆ, ತಾಯಿಯ ಕಡೆಗೆ ನೋಡಿದಳು. ಅವರು ಯಾವ ರೀತಿಯ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ.

"ಮಾವ ಪ್ಲೀಸ್... ಮನೆಗೆ ಬನ್ನಿ ಮಾವ" ಆರತಿ ಮಗುವಿನಂತೆ ಕರೆದಳು. ಚಿರಂಜೀವಿ ಏನೂ ಹೇಳಲಿಲ್ಲ. ಅವನು ಮಾತನಾಡುವುದನ್ನೇ ಕಳೆದು ಕೊಂಡಿದ್ದಾನೇನೋ ಎನ್ನುವಂತಿತ್ತು ಅವನ ಮುಖ. ಈಗ ಚಂದ್ರಕಲಾಳ ತಾಯಿಯೂ "ಚಿರಂಜೀವಿ ಬಾಪ್ಪ ಮನೆಗೆ ಹೋಗೋಣ" ಎಂದರು. ಚಿರಂಜೀವಿ "ನೀವೋಗಿ ನಾನು ಆಫೀಸಿಗೆ ಹೋಗಬೇಕಿದೆ" ಎಂದ. ಆರತಿ, ಚಿರಂಜೀವಿಯ ಹತ್ತಿರಕ್ಕೆ ಬಂದು ಕೈಹಿಡಿದುಕೊಂಡು ಮತ್ತೊಮ್ಮೆ ಕರೆದಳು.

ಚಿರಂಜೀವಿ ಕೊನೆಯದಾಗಿ ನಿಮ್ಮ ಬಾಂಧವ್ಯ ತೀರಿತು ಎನ್ನುವಂತೆ ಆರತಿಯ ಹಣೆಗೆ ಬಗ್ಗಿ ಒಂದು ಮುತ್ತು ನೀಡಿದ. ಅವನ ಕಣ್ಣುಗಳಿಂದ ಎರಡು ಹನಿಗಳು ಕೆನ್ನೆಯ ಮೇಲೆ ಉರುಳಿ ನೆಲಕ್ಕೆ ಬಿದ್ದವು.

ಚಿರಂಜೀವಿ ಅಲ್ಲಿಂದ ರಸ್ತೆಗೆ ಕುಂಟುತ್ತಾ ನಡೆದು ಹೋಗಿ ಒಂದು ಆಟೋ ನಿಲ್ಲಿಸಿದ. ಆಟೋ ನಿಂತಿದ್ದೇ ಕುಳಿತುಕೊಂಡು ಹೊರಟುಬಿಟ್ಟ. ಮೂವರು ಅವನ ಕಡೆಗೆ ನೋಡುತ್ತಾ ನಿಂತು ಬಿಟ್ಟರು. ಆರತಿಯ ಕಣ್ಣುಗಳಿಂದ ಉಕ್ಕಿ ಬಂದ ಕಣ್ಣೀರು ಅವಳ ಕೆನ್ನೆಗಳ ಮೇಲೆ ಹಾಯ್ದು ಕೈಯಲ್ಲಿದ್ದ ಬ್ಯಾಗಿನ ಮೇಲೆ ಎರಡು ತೊಟ್ಟುಗಳು ಬಿದ್ದವು. ಆರತಿ ಕೆನ್ನೆ ಸವರಿಕೊಂಡು ಕೈಯಲ್ಲಿದ್ದ ಬ್ಯಾಗಿನ ಜಿಪ್ಪು ತೆರೆದು ಕುತೂಹಲದಿಂದ ನೋಡಿದಳು. ನೂರು ರೂಪಾಯಿಗಳ ನಾಲ್ಕಾರು ಕಟ್ಟುಗಳು.

* * *

ಚಿರಂಜೀವಿ ನೇರವಾಗಿ ಕಛೇರಿಗೆ ಹೋಗಿ ತನ್ನ ಟೇಬಲಿನ ಮೇಲೆ ಕುಳಿತುಕೊಂಡ. ಚಿರಂಜೀವಿಯನ್ನು ನೋಡಿದ ರಾಮಯ್ಯ ಹಿಂದೆಯೇ ಹೋಗಿ "ನಮಸ್ಕಾರ ಸಾರ್" ಎಂದ. ಚಿರಂಜೀವಿ ಜೇಬಿನಲ್ಲಿದ್ದ ಮನೆ ಕೀ ತೆಗೆದು, "ರಾಮಯ್ಯ ಈ ಕೀ ತೆಗೆದುಕೊಂಡೋಗಿ ಈಗಲೇ ಒಂದು ಲಾರಿ ಮಾಡಿಕೊಡು ಮನೆಯಲ್ಲಿರುವ ಎಲ್ಲಾ ಸಾಮಾನುಗಳನ್ನು ಚಂದ್ರಕಲಾಳ ಮನೆಗೆ

ಸಾಗಿಸಿ ಸಾಯಂಕಾಲ ಐದು ಗಂಟೆಯೊಳಗೆ ಇಲ್ಲಿಗೆ ಬರಬೇಕು" ಎಂದೇಳಿ ಅವನ ಕೈಗೆ ಐದುನೂರು ರೂಪಾಯಿಗಳನ್ನು ಕೊಟ್ಟು ಕಳುಹಿಸಿದ.

ಇಲಾಖೆಯ ಹಲವು ಅಧಿಕಾರಿಗಳು ಚಿರಂಜೀವಿಯನ್ನು ಭೇಟಿ ಮಾಡಿ ಮಾತನಾಡಿಸಿದರು. ಸಾಯಂಕಾಲ ನಾಲ್ಕೂವರೆ ಗಂಟೆಗೆಲ್ಲ ರಾಮಯ್ಯ ಬಂದು ಎದುರಿಗೆ ನಿಂತುಕೊಂಡ.

"ರಾಮಯ್ಯ ತೆಗೊ" ಎಂದಿದ್ದೆ ಒಂದು ದಪ್ಪನೆ ಕವರನ್ನು ಅವನ ಕೈಗೆ ನೀಡಿ,

"ಇದನ್ನು ಮನೆಗೆ ಹೋದ ಮೇಲೆಯೇ ಬಿಚ್ಚಿ ನೋಡಬೇಕು" ಎಂದು ಎಚ್ಚರಿಸಿದ. ರಾಮಯ್ಯ ಅಲ್ಲಿಂದ ಹೊರಟುಹೋದ.

ಚಿರಂಜೀವಿ ಈಗ ಒಂದು ಕವರ್ ಹಿಡಿದುಕೊಂಡು ಕಮೀಷನರ್ ಕೋಣೆಯ ಒಳಗೆ ಹೋದ. ಚಿರಂಜೀವಿ ಒಳಗೆ ಹೋಗಿದ್ದೆ ಕಮೀಷನರ್,

"ಹಲೋ ಚಿರಂಜೀವಿ ಹೇಗಿದ್ದೀಯ? ಕುಳಿತುಕೊ" ಎಂದು ಕುರ್ಚಿ ತೋರಿಸಿದರು. ಚಿರಂಜೀವಿ ಕುಳಿತುಕೊಳ್ಳದೆ ಒಂದು ಕೈಯನ್ನು ಕೆನ್ನೆಯ ಮೇಲಿಟ್ಟುಕೊಂಡು ಇನ್ನೊಂದು ಕೈಯಲ್ಲಿದ್ದ ಕವರನ್ನು ಕಮೀಷನರ್ ಕೈಗೆ ನೀಡಿದ.

ಕಮಿಷನರೇ "ಇದೇನು?" ಎಂದಿದ್ದೆ.

"ನನ್ನ ರಾಜೀನಾಮೆ ಸರ್" ಎಂದ.

"ಏನು ರಾಜೀನಾಮೆ....?"

ಚಿರಂಜೀವಿ ದುಡುಕಬೇಡ ನಿನ್ನಂಥ ಅಧಿಕಾರಿಗಳು ನಮ್ಮ ಇಲಾಖೆಗೆ ಬೇಕಾಗಿದ್ದಾರೆ. ಇಲಾಖೆಗೆ ಅಲ್ಲ ದೇಶಕ್ಕೆ ಬೇಕಾಗಿದ್ದಾರೆ...... ಇನ್ನೊಂದು ಸಲ ಯೋಚಿಸು?" ಎಂದರು.

"ನಾನೇಕೆ ಇಲಾಖೆಗೆ ಬೇಕು ಸಾರ್? ಈ ಚಿರಂಜೀವಿಯ ಕೆನ್ನೆ ನೋಡಿ? ಮುರಿದಿರುವ ಕಾಲು ನೋಡಿ.... ನಾನು ಈ ಇಲಾಖೆಗೆ ಲಾಯಕ್ಕಿಲ್ಲ, ನನ್ನನ್ನು ಗೂಂಡಾಗಳು ಆಟ್ಯಾಕ್ ಮಾಡಿದ ಮೇಲೆ ರಾಮಯ್ಯ ಎಲ್ಲಾ ವಿವರಗಳನ್ನು ನೀಡಿದ ಮೇಲೂ ನೀವು ಆ ಸಮಾಜಘಾತಕರನ್ನು ಯಾಕೆ ಹಿಡಿಯಲಿಲ್ಲ? ಕನಕಪುರದ ರಸ್ತೆಯಲ್ಲಿರುವ ಸೆಕೆಂಡ್ಸ್ ಕಾರ್ಖಾನೆಯನ್ನು ಯಾಕೆ ರೈಡ್ ಮಾಡಲಿಲ್ಲ? ಕಳ್ಳಭಟ್ಟಿ ದುರಂತದಲ್ಲಿ ನಾನು ಕಷ್ಟಪಟ್ಟು ಫುಟ್‌ಅಪ್ ಮಾಡಿದ

ಫೈಲನ್ನು ಗೃಹ ಮಂತ್ರಿಗಳಿಗೆ ಆ ಪೋಲೀಸ್ ಕಮೀಷನರ್ ನೀಡಿದ್ರೆ? ನೀವು ಈಗ ಸಮಾಜಘಾತಕರಿಗೆ ಸಹಾಯ ಮಾಡ್ತಾ ಇದ್ದೀರಿ..... ಈ ಸಮಾಜದಲ್ಲಿ ಎಲ್ರಿಗೂ ಬದುಕುವುದು ಗೊತ್ತಿದೆ. ನನಗೆ ಮಾತ್ರ ಗೊತ್ತಿಲ್ಲ. ನನಗೂ ಬೇರೆಯವರಿಗೂ ಇರುವ ವ್ಯತ್ಯಾಸ ಅಷ್ಟೇ.....

ನನಗಾಗಿ ತುಡಿಯುತ್ತಿದ್ದ ಒಂದೇ ಒಂದು ಜೀವವಿತ್ತು. ಅದೂ ಹೋಯಿತು..... ಈ ಊರಿನಲ್ಲಿ, ಈ ಇಲಾಖೆಯಲ್ಲಿ ನನಗೇನು ಬೇಕಿದೆ? ಏನೂ ಬೇಕಿಲ್ಲ. ಕಾಲು ಮುರಿದೋಗಿರುವವರನ್ನು ಕೆನ್ನೆ ಸುಟ್ಟೋಗಿರುವವರನ್ನು.... ಒಳ್ಳೆ ಕೆಲಸ ಮಾಡೋರನ್ನು ಯಾರು ಇಟ್ಟುಕೊಳ್ತಾರೆ? ಬರ್ತೀನಿ ಸರ್... ಗುಡ್ ಬೈ ಎಂದ ಚಿರಂಜೀವಿ ಅಲ್ಲಿ ನಿಲ್ಲದೆ ಹೊರಕ್ಕೆ ಬಂದು ಬಿಟ್ಟ. ಕಮೀಷನರ್ ಬಿಟ್ಟ ಬಾಯಿ ಬಿಟ್ಟಂಗೆ ಕುಳಿತಿದ್ದರು.

ಚಿರಂಜೀವಿಯ ಮಾತುಗಳು ಕಮೀಷನರ್ ಅವರ ಮನವನ್ನು ಕಲಕಿ ಬಿಟ್ಟವು. ಕಮೀಷನರ್ ಅವರ ಕಣ್ಣುಗಳಲ್ಲಿ ನೀರು ಉಕ್ಕತೊಡಗಿತು. ಅವರು ಕೂಡ ಎಷ್ಟೋ ಹೊತ್ತು ಕುರ್ಚಿಯಲ್ಲಿ ಹಾಗೆ ಕುಳಿತುಕೊಂಡಿದ್ದರು.

ರಾಮಯ್ಯ ಮನೆಗೆ ಹೋಗಿ ಕವರನ್ನು ಬಿಚ್ಚಿ ನೋಡಿದ. ನೂರು ರೂಪಾಯಿಗಳ ಒಂದು ಕಟ್ಟು, ಹತ್ತು ಸಾವಿರ. ಅದರಲ್ಲಿ ಒಂದು ಚೀಟಿಯಿದ್ದು ಅದರಲ್ಲಿ ಹೀಗೆ ಬರೆದಿತ್ತು.

"ಇದು ನಿನ್ನ ಪುಟ್ಟ ಮಗಳ ಮದುವೆಗೆ ನನ್ನ ಕಿರು ಕಾಣಿಕೆ. ಇದನ್ನು ನೀನು ಸ್ವೀಕರಿಸುತ್ತೀ ಎಂದೆ ನಂಬಿರುತ್ತೇನೆ" - ಚಿರಂಜೀವಿ. ರಾಮಯ್ಯ ಚೀಟಿಯನ್ನು ನೋಡಿ ಕಣ್ಣಾರಾಕಿಕೊಂಡ. ಮರುದಿನ ರಾಮಯ್ಯನಿಗೆ, ಚಿರಂಜೀವಿ ರಾಜೀನಾಮೆ ನೀಡಿರುವ ವಿಷಯ ತಿಳಿದು ಇನ್ನಷ್ಟು ದುಃಖಪಟ್ಟ.

೯

ಚಿರಂಜೀವಿ ಇಪ್ಪತ್ತು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಾಗ ಅವನ ಕೈಯಲ್ಲಿ ಒಂದೇ ಒಂದು ಪೈಸೆಯೂ ಇರಲಿಲ್ಲ. ನಾಗಭೂಷಣಂ ಎಂಬ ಪುಣ್ಯಾತ್ಮ ಬೆಂಗಳೂರಿಗೆ ಕರೆದುಕೊಂಡು ಬಂದು ಹಾಸ್ಟೆಲಿಗೆ ಸೇರಿಸಿ ಹೋಗಿದ್ದರು. ಹೋಗುವಾಗ ಒಂದು ಜೊತೆ ಬಟ್ಟೆಯನ್ನು ಕೊಡಿಸಿದ್ದರು.

ಚಿರಂಜೀವಿ ಈಗ ಬೆಂಗಳೂರಿನಿಂದ ಚಿತ್ತೂರಿಗೆ ಹೋಗುವ ಒಂದು ಬಸ್ಸಿನಲ್ಲಿ ಕುಳಿತಿದ್ದಾನೆ. ಒಂದು ಶರ್ಟು, ಒಂದು ಪ್ಯಾಂಟನ್ನು ಮಾತ್ರ ಧರಿಸಿದ್ದಾನೆ. ಜೇಬಿನಲ್ಲಿ ಅವನು ತಲುಪಬೇಕಾದ ಸ್ಥಳಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ಮಾತ್ರ ಇಟ್ಟುಕೊಂಡಿದ್ದಾನೆ.

ಆಗ, ಇಪ್ಪತ್ತು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಾಗ ಎಲ್ಲವನ್ನು ಬೆರಗು ಕಣ್ಣುಗಳಿಂದ ನೋಡುತ್ತಾ ಬಂದಿದ್ದ. ಬೆಟ್ಟದಷ್ಟು ಭವಿಷ್ಯವನ್ನು ಪುಟ್ಟ ಕಣ್ಣುಗಳಲ್ಲಿ ಹೊತ್ತು ತಂದಿದ್ದ. ತನ್ನ ಭವಿಷ್ಯಕ್ಕಾಗಿ ತಂದೆ ತಾಯಿಯನ್ನೇ ತೊರೆದು ಬಂದಿದ್ದ. ಈಗ ಅವನ ಬೆಟ್ಟದಷ್ಟು ಭವಿಷ್ಯದ ಆಸೆ ಕರಗಿ ಹೋಗಿ ಮಣ್ಣುಪಾಲಾಗಿದೆ. ತೊರೆದು ಬಂದವರನ್ನು, ಹುಟ್ಟಿದ ನೆಲವನ್ನು ಮತ್ತೊಮ್ಮೆ ಸೇರಿಕೊಳ್ಳಲು ಹಿಂದಕ್ಕೆ ಹೋಗುತ್ತಿದ್ದಾನೆ.

ಅವನ ಮೈ ಮನಗಳೆಲ್ಲವೂ ಛಿದ್ರಗೊಂಡಿದೆ. ಈ ಭವ್ಯ ನಾಗರಿಕ ಪ್ರಪಂಚ ಅವನಿಗೆ ನೀಡಿದ ಬಳುವಳಿಗಳೆಂದರೆ ಒಂದು ಕಾಲು ಊನಗೊಂಡಿದ್ದು , ಮುಖ ಗುರುತು ಹಿಡಿಯಲಾರದಷ್ಟು ಕುರೂಪಗೊಂಡಿದೆ. ಒಂದು ಕಾಲದಲ್ಲಿ ಅವನ ಮನ ಯಾವಾಗಲೂ ಕಳೆದುಕೊಂಡ ತಂದೆ ತಾಯಿಗಾಗಿ ತುಡಿಯುತ್ತಿತ್ತು. ಈಗ ಆ ಸ್ಥಳದಲ್ಲಿ ತನ್ನ ಪ್ರೀತಿಯ ಪತ್ನಿಯೂ ಸೇರಿಕೊಂಡಿದ್ದಾಳೆ.

ಕಿಟಿಕಿಯ ಪಕ್ಕದಲ್ಲಿ ಕುಳಿತಿರುವ ಚಿರಂಜೀವಿ ತನ್ನ ಕೆನ್ನೆಯ ಮೇಲೆ ಒಂದು ಕೈ ಇಟ್ಟುಕೊಂಡು ಹೊರಗಡೆಗೆ ನೋಡುತ್ತಿದ್ದಾನೆ. ಬೆಟ್ಟ, ಗುಡ್ಡ, ಮರ, ಗಿಡ, ಹೊಲ ಗದ್ದೆ ಎಲ್ಲವೂ ಹಾದು ಹೋಗುತ್ತಿವೆ. ಮನುಷ್ಯರಿಗಿಂತ ಇವು ಎಷ್ಟೋ ವಾಸಿಯಲ್ಲವೇ? ತಮ್ಮ ಪಾಡಿಗೆ ತಾವಿದ್ದು ಮನುಷ್ಯರಿಗೆ ಕೇಳಿದ್ದನ್ನು ಕೊಟ್ಟು ತಾವು ಏನೂ ಬೇಡದೆ ಸಂತೋಷದಿಂದ ಇವೆ. ಬುದ್ಧಿ ಇರುವ ಮನುಷ್ಯ ಯಾಕೆ ಹೀಗಾದ? ಚಿರಂಜೀವಿ ಪ್ರಶ್ನಿಸಿಕೊಂಡ.

ಬಸ್ಸು ಚಿತ್ತೂರಿನ ಬಸ್ಸು ನಿಲ್ದಾಣ ತಲುಪಿತ್ತು. ಚಿರಂಜೀವಿ ಬಸ್ಸಿಳಿದು ಸುತ್ತಲೂ ಒಮ್ಮೆ ನೋಡಿದ. ಅವನಿಗೆ ಎಲ್ಲಾದರೂ ಸ್ವಲ್ಪಹೊತ್ತು ಕುಳಿತುಕೊಳ್ಳೋಣ ಎನಿಸಿ ಒಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡ. ಎಷ್ಟು ಹೊತ್ತು ಹಾಗೆ ಕುಳಿತುಕೊಂಡಿದ್ದನೋ ಏನೋ...? ನಾಗಭೂಷಣಂ, ಚಿರಂಜೀವಿಯನ್ನು ಮೊದಲು ನೋಡಿದಾಗಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿ ಹಾಸ್ಟೆಲಿನಲ್ಲಿ ಸೇರಿಸಿದ್ದು, ಹಾಸ್ಟೆಲಿನಲ್ಲಿ ಓದಿದ್ದು, ಪೋಲೀಸ್

ಅಧಿಕಾರಿಯಾಗಿದ್ದು, ಚಂದ್ರಕಲಾಳನ್ನು ಪ್ರೀತಿಸಿ ಮದವೆಯಾಗಿದ್ದು, ರಾಜೀನಾಮೆ ಮಾಡಿದ್ದು.... ಹೀಗೆ ಎಲ್ಲಾ ದೃಶ್ಯಗಳು ಅವನ ಕಣ್ಣುಗಳ ಮುಂದೆ ಹಾದು ಹೋದವು.

ಏನೋ ಜ್ಞಾಪಕ ಬಂದವನಂತೆ ಎದ್ದುನಿಂತ ಚಿರಂಜೀವಿ ನಿಲ್ದಾಣವನ್ನು ಒಂದು ಸುತ್ತಾಕಿ ಯಾವುದೊ ಬಸ್ಸಿನಲ್ಲಿ ಕುಳಿತುಕೊಂಡ. ಬಸ್ಸು ಮತ್ತೆ ಪೂರ್ವದ ದಿಕ್ಕಿಗೆ ಚಲಿಸಿತು. ಸೂರ್ಯನು ಪಶ್ಚಿಮದ ಕಡೆಗೆ ಚಲಿಸುತ್ತಿದ್ದಂತೆ, ಕತ್ತಲು ಆ ಪ್ರದೇಶವನ್ನು ಆವರಿಸಿಕೊಳ್ಳುತ್ತಿದೆ. ಜನರೆಲ್ಲ ತಮ್ಮ ತಮ್ಮ ಹಳ್ಳಿಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಜನರಿದ್ದಾರೆ. ಬಸ್ಸು ಆ ರಾತ್ರಿಗೆ ಉಳಿದುಕೊಳ್ಳಲು ತನ್ನ ಹಾಸಿಗೆಯನ್ನು ಹಾಸಿಕೊಳ್ಳುವಂತೆ ನಿಧಾನವಾಗಿ ಒಂದು ಸ್ಥಳವನ್ನು ಹುಡುಕಿಕೊಂಡು ನಿಂತುಕೊಂಡಿತು. ಬಸ್ಸಿನಲ್ಲಿ ಕೊನೆಯದಾಗಿ ಉಳಿದುಕೊಂಡಿದ್ದ ಚಿರಂಜೀವಿಯನ್ನು ನೋಡಿದ ಕಂಡಕ್ಟರು,

"ಇದೇ ಕೊನೆ ನಿಲ್ದಾಣ" ಎಂದ.

"ಈ ರಾತ್ರಿ ಬಸ್ಸು ಇಲ್ಲೆ ಉಳಿದುಕೊಳ್ಳುತ್ತದೆಯೇ?" ಚಿರಂಜೀವಿ ಕೇಳಿದ.

ಕಂಡಕ್ಟರು "ಹೌದೆಂದ".

ಚಿರಂಜೀವಿ ಕೆಳಕ್ಕೆ ಇಳಿದು ಸುತ್ತಲೂ ನೋಡಿದ. ಅದೊಂದು ಸಣ್ಣ ಊರು. ಒಂದೆರಡು ದಟ್ಟ ಹೊಟೇಲುಗಳು, ಹೊಟೇಲುಗಳ ಮುಂದೆ ಮಿಣ ಮಿಣ ಎಂದು ಉರಿಯುತ್ತಿರುವ ವಿದ್ಯುತ್ ದೀಪಗಳು. ಆ ವಿದ್ಯುತ್ ದೀಪಗಳು ಅಷ್ಟರಲ್ಲಿಯೇ ಒಂದೆರಡು ಸಲ ಆರಿ ಹೋಗಿ ಮತ್ತೆ ಉರಿಯುತ್ತಿದ್ದವು. ಚಿರಂಜೀವಿ ಕತ್ತಲಲ್ಲಿ ಸ್ವಲ್ಪ ದೂರ ನಡೆದು ಹೋಗಿ ಒಂದಕ್ಕೆ ಕುಳಿತುಕೊಂಡು ಮತ್ತೆ ಹಿಂದಕ್ಕೆ ಬಂದು, ಒಂದು ದಟ್ಟಿ ಹೊಟೇಲಿನ ಮುಂದೆ ಕುಳಿತುಕೊಂಡ. ಆ ಹೊಟೇಲುಗಳನ್ನು ರಾತ್ರಿ ಮುಚ್ಚುವ ಸೂಚನೆಗಳೆ ಕಾಣುತ್ತಿಲ್ಲ. ಏಕೆಂದರೆ ಆ ಹೊಟೇಲುಗಳಿಗೆ ಬಾಗಿಲುಗಳೇ ಇರಲಿಲ್ಲ. ಚಿರಂಜೀವಿ ಮೈ ಮರೆತವನಂತೆ ಒಂದು ಕಡೆ ಕುಳಿತುಕೊಂಡ.

ಆ ಹೊಟೇಲು ಅಂದಿನ ಕೆಲಸಗಳನ್ನು ಮುಗಿಸಿ ನಿಶ್ಯಬ್ಧವಾಯಿತು. ಒಬ್ಬ ಗೋಣಿ ಚೀಲದಂತಹ ಬಟ್ಟೆಯ ಜೊತೆಗೆ ಚಿರಂಜೀವಿಯ ಹತ್ತಿರಕ್ಕೆ ಬಂದು ಕುಳಿತುಕೊಂಡ. ಒಂದೆರಡು ಕ್ಷಣಗಳಾದ ಮೇಲೆ -

"ಈ ಊರಿಗೆ ಹೊಸಬನೆ....?" ಪ್ರಶ್ನಿಸಿದ.

ಚಿರಂಜೀವಿ ಅವನನ್ನೊಮ್ಮೆ ನೋಡಿ ತಲೆಯಾಡಿಸಿದ.

"ಹೊಸಬನಾದರೂ ನೀನು ಈ ಸುತ್ತಮುತ್ತಲ ಕಡೆಯವನೆ ಇರಬೇಕು" ಎಂದು. ಚಿರಂಜೀವಿ ಸುಮ್ಮನೆ ಇದ್ದ.

"ಏನಾದರೂ ತಿನ್ನುತ್ತೀಯ.....? ಪಪ್ಪು ಅನ್ನ ಇದೆ" ಚಿರಂಜೀವಿ ಒಂದೆರಡು ಕ್ಷಣ ಸುಮ್ಮನಿದ್ದು ಅನಂತರ ಅವನ ಕಡೆಗೆ ನೋಡಿದ. ಕುಳಿತಿದ್ದವನು ಎದ್ದು ಹೋಗಿ ಒಂದು ತಟ್ಟೆಯಲ್ಲಿ ಅನ್ನ, ಪಪ್ಪು ಮತ್ತು ಸ್ವಲ್ಪ ಸಾಂಬಾರು ಸುರಿದುಕೊಂಡು ಬಂದು ಚಿರಂಜೀವಿಗೆ ಕೊಟ್ಟ. ಚಿರಂಜೀವಿ ತಟ್ಟೆ ತೆಗೆದುಕೊಳ್ಳುತ್ತಾ ಅವನನ್ನು ದಿಟ್ಟಿಸಿ ನೋಡಿದ.

"ಪರವಾಗಿಲ್ಲ ತೆಗೆದುಕೊಳ್ಳಿ" ಎಂದ ಚಿರಂಜೀವಿ ಜೇಬಿನಲ್ಲಿ ಹುಡುಕಾಡಿ ಒಂದು ನೋಟು ತೆಗೆದುಕೊಡಲೋದ. ಹೋಟಲಿನವನು "ಪರವಾಗಿಲ್ಲ ಇಟ್ಟುಕೊಳ್ಳಿ" ಎಂದ. ಚಿರಂಜೀವಿ ಅವನ ಕೈ ಹಿಡಿದು ನೋಟನ್ನು ಕೈಯಲ್ಲಿಟ್ಟ. ಹೋಟಲಿನವನು ಒಳಕ್ಕೆ ಹೋಗಿ ಮತ್ತೆ ಚಿಲ್ಲರೆ ತಂದು ಕೊಡಲೋದ. ಚಿರಂಜೀವಿ ನಿರಾಕರಿಸಿದ. ಚಿರಂಜೀವಿ ಅನ್ನವನ್ನು ಪಪ್ಪು ಮತ್ತು ಸಾಂಬಾರಿನಲ್ಲಿ ಕಲಸಿಕೊಂಡು ತಿನ್ನತೊಡಗಿದ.

ಅವನ ಮುಖದ ಮೇಲೆ ಗಡ್ಡ ಬೆಳೆದಿದ್ದು ಅವನು ಧರಿಸಿದ್ದ ಬಟ್ಟೆಗಳು ಆಗಲೆ ಕೊಳಕಾಗಿದ್ದವು. ಕೇವಲ ಎರಡು ದಿನಗಳ ಹಿಂದೆ ದೊಡ್ಡ ದೊಡ್ಡ ಅಧಿಕಾರಿಗಳೆ ಕೈಕಟ್ಟಿ ಅವನಿಂದ ದೂರ ನಿಲ್ಲುತ್ತಿದ್ದರು. ಈಗ ಅವನು ಬೀದಿಯಲ್ಲಿ ಕುಳಿತಿರುವ ಒಬ್ಬ ಅನಾದಿಯಂತೆ ತೋರುತ್ತಿದ್ದ. ತಿಂದ ತಟ್ಟೆಯನ್ನು ಪಕ್ಕದಲ್ಲಿಟ್ಟು, ನೀರು ಕುಡಿದು ಗೋಡೆಗೆ ಒರಗಿಕೊಂಡ.

ಆ ಊರು ನಿಧಾನವಾಗಿ ನಿದ್ದೆಯ ಒಳಕ್ಕೆ ಜಾರಿಕೊಂಡಿತು. ಚಿರಂಜೀವಿಯ ತಂದೆ, ತಾಯಿ ಇಡೀ ರಾತ್ರಿ ಅವನ ತಲೆಯ ಪಕ್ಕದಲ್ಲಿ ಕುಳಿತುಕೊಂಡು, ಅವನ ಕೆನ್ನೆ, ತಲೆಯನ್ನು ಸವರುತ್ತಾ ಜೋಗುಳ ಹಾಡಿದರೆ, ಚಂದ್ರಕಲಾ ಕಾಲಿನ ಹತ್ತಿರ ಕುಳಿತುಕೊಂಡು ಅಳುತ್ತಿದ್ದಾಳೆ. ಚಿರಂಜೀವಿ ದಿಗ್ಗನೆ ಎದ್ದು ಕುಳಿತ. ಚುಮುಚುಮು ಕತ್ತಲು ಹೋಗಿ ಬೆಳಕು ಮೂಡುತ್ತಿದೆ. ಗಾಳಿ ತಣ್ಣಗೆ ಬೀಸುತ್ತಿದ್ದು ಗಿಡಗಳಲ್ಲಿ ಕುಳಿತಿರುವ ಹಕ್ಕಿಗಳು ತಮ್ಮ ತಮ್ಮಲ್ಲೇ ಚಿಲಿಚಿಲಿ ಪ್ರಾರಂಭಿಸಿವೆ.

ಎದ್ದುನಿಂತ ಚಿರಂಜೀವಿ ಪೂರ್ವ ದಿಕ್ಕಿಗೆ ಕಾಲು ದಾರಿಯನ್ನಿಡಿದು ನಡೆಯತೊಡಗಿದ. ನೆನ್ನೆಯಿಂದ ಬಸ್ಸು ಪ್ರಯಾಣ ಮಾಡಿದ್ದರೂ, ಬೆಳಗಿನ

ಚೇತೋಹಾರಿ ವಾತಾವರಣ ಅವನನ್ನು ನಡೆಸುವಂತೆ ಮಾಡಿತ್ತು. ಕಾಲು ಪೂರ್ಣವಾಗಿ ಇನ್ನೂ ವಾಸಿಯಾಗಿರಲಿಲ್ಲ. ಒಳಗೆ ಎಲ್ಲೋ ನೋವು ಇನ್ನೂ ಹಾಗೇ ಇದೆ.

ಅವನು ಹುಟ್ಟಿ ಬೆಳೆದ ಮಣ್ಣು, ತಂದೆ ತಾಯಿಯ ಜೊತೆಗೆ ಓಡಾಡಿದ ಪ್ರದೇಶ ಹತ್ತಿರವಾದಂತೆ ಮನಸ್ಸು ಭಾವೋದ್ರೇಕವಾಗಿ ಕಣ್ಣುಗಳು ಮಂಜಾದವು. ಅಲ್ಲಲ್ಲಿ ನಿಂತು ಸುತ್ತಲು ನೋಡಿದ; ಮತ್ತೆ ಮುಂದಕ್ಕೆ ಸಾಗಿದ. ಈಗ ಅವನು ಹುಟ್ಟಿ ಬೆಳೆದ, ಓಡಾಡಿದ ಊರಿನ ಮಧ್ಯ ನಿಂತುಕೊಂಡಿದ್ದ. ಅಲ್ಲಿ ಅವನ ತಂದೆ ರಾಮಣ್ಣನಾಗಲಿ, ತಾಯಿ ಸೀತಮ್ಮನಾಗಲಿ, ಅವನು ಕೆಳಗೆ ಕುಳಿತು ಓದುತ್ತಿದ್ದ ಮರವಾಗಲಿ, ಅವನ ಗೆಳೆಯರಾಗಲಿ ಯಾರೂ ಇರಲಿಲ್ಲ. ರಾಮಾಪುರ ಅಲ್ಲಿತ್ತು ಎನ್ನುವ ಸೂಚನೆಗಳೇ ಕಾಣಿಸುತ್ತಿಲ್ಲ. ಒಂದು ಸಣ್ಣ ಗಿಡದ ಕೆಳಗೆ ಕುಸಿದು ಕುಳಿತ. ಅವನ ಕಣ್ಣುಗಳ ಮುಂದೆ ಹತ್ತಾರು ವರ್ಷಗಳ ಬದುಕಿನ ಚಿತ್ರಣಗಳು ತೇಲಿಹೋದವು. ಅವನಿಗೆ ಗೊತ್ತಿಲ್ಲದೆ ಅದೆಷ್ಟೋ ಕಣ್ಣೀರು ಹನಿಗಳು ಕೆನ್ನೆಯ ಮೇಲಿಂದ ಹರಿದು ಬಂದು ನೆಲಕ್ಕೆ ಬಿದ್ದಿದ್ದವು.

ಎದ್ದು ನಿಂತ ಚಿರಂಜೀವಿ ಅಲ್ಲಿಂದ ಮತ್ತೆ ಪೂರ್ವದಿಕ್ಕಿಗೆ ಚಲಿಸಿದ. ಸಮುದ್ರ ದೂರದಿಂದ ಪ್ರಶಾಂತವಾಗಿ ಕಾಣಿಸಿದರೂ ಹತ್ತಿರ ಹತ್ತಿರ ಹೋದಂತೆ ತನ್ನ ಒಡಲ ಉರಿಯನ್ನು ಭೋರ್ಗರೆಯುವ ಅಲೆಗಳ ಮೂಲಕ ನಿರಂತರವಾಗಿ ಕಡಲ ದಂಡೆಗೆ ಬಂದು ಬಂದು ಅಪ್ಪಳಿಸುತ್ತಿತ್ತು. ಚಿರಂಜೀವಿ ಮರುಳು ದಂಡೆಯ ಮೇಲೆ ಕುಳಿತು ಸಮುದ್ರದ ಕಡೆಗೆ ನೋಡತೊಡಗಿದ. ಬೀಸುವ ಗಾಳಿಯ ಜೊತೆಗೆ ಕಡಲ ಹಕ್ಕಿಗಳನ್ನು ಬಿಟ್ಟರೆ ಅಲ್ಲಿ ಬೇರೆ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ.

ಕಡಲ ಕಡೆಯಿಂದ ಯಾರೋ ಮಾತನಾಡುವುದನ್ನು ಕೇಳಿಸಿಕೊಂಡ ಚಿರಂಜೀವಿ ಆ ಕಡೆಗೆ ನೋಡಿದ. ಮೀನಿಡಿಯುವ ನಾವೆ ಒಂದನ್ನು ಕಡಲ ದಂಡೆಗೆ ಇಬ್ಬರು ಮೀನುಗಾರರು ತಳ್ಳಿಕೊಂಡು ಬರುತ್ತಿದ್ದರು. ನಾವೆಯನ್ನು ದಡಕ್ಕೆ ತಳ್ಳಿ, ಮೀನುಗಳನ್ನು ಬಲೆಯಲ್ಲಿ ತುಂಬಿಕೊಂಡು ಚಿರಂಜೀವಿಯ ಕಡೆಗೆ ನಡೆದುಬಂದರು. ಚಿರಂಜೀವಿ ಒಂಟಿಯಾಗಿ ಕುಳಿತಿರುವುದನ್ನು ನೋಡಿದ ಮೀನುಗಾರರು -

"ಯಾರಪ್ಪಾ ನೀನು...? ಯಾವ ಊರು....? ಇಲ್ಯಾಕೆ ಒಂಟಿಯಾಗಿ ಕುಳಿತಿದ್ದೀಯ?" ಕೇಳಿದರು. ಚಿರಂಜೀವಿ ಅವರ ಕಡೆಗೆ ನೋಡಿದರೂ ಏನೂ

ಮಾತನಾಡಲಿಲ್ಲ. ಮೀನುಗಾರರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಅವನ ಕೆದರಿರುವ ಕೂದಲು, ದಣಿದಿರುವ ಮುಖ, ಸುಟ್ಟೋಗಿರುವ ಕೆನ್ನೆಯನ್ನು ನೋಡಿದ ಅವರಿಗೆ ಕಡಲಲ್ಲಿ ಬಿದ್ದು ಸಾಯಲು ಬಂದಿರಬಹುದೆ.....? ಎನ್ನುವ ಗುಮಾನಿ ಎದ್ದಿತು. ಸ್ವಲ್ಪ ದೂರ ನಡೆದುಹೋದ ಅವರು ಮತ್ತೆ ಹಿಂದಕ್ಕೆ ತಿರುಗಿಕೊಂಡು ಬಂದು -

"ಒಬ್ಬರೆ ಇಲ್ಯಾಕಿದ್ದೀರಿ...? ಬನ್ನಿ ನಮ್ಮ ಜೊತೆ ಎಂದು ಚಿರಂಜೀವಿಯನ್ನು ಕರೆದುಕೊಂಡು ನಡೆದರು.

ಒಬ್ಬ ಹಿಂದೆ, ಇನ್ನೊಬ್ಬ ಮುಂದೆ, ಚಿರಂಜೀವಿ ಮಧ್ಯ ನಡೆಯುತ್ತಾ ಹೋಗುತ್ತಿದ್ದಂತೆ ಮುಂದಿದ್ದವನು ಹೇಳಿದ.

"ನೋಡಿ ಇಲ್ಲಿ ರಾಮಾಪುರ ಎಂಬ ಹಳ್ಳಿಯಿತ್ತು". ಚಂಡಮಾರುತ ಬಂದು ಇಡೀ ಹಳ್ಳಿಯೇ ನಾಶವಾಯಿತು. ಉಳಿದು ಕೊಂಡ ಒಬ್ಬಿಬ್ಬರು ಅಲ್ಲಿ ಇಲ್ಲಿ ಚದುರಿ ಹೋದರು" ಎಂದ. ಈಗ ಚಿರಂಜೀವಿಯ ಕಿವಿ ನೆಟ್ಟಗಾಗಿ -

"ನಿಮ್ಮೂರು ಯಾವೂರು....? ಕೇಳಿದ. ದೇಮಲಾಪುರ ಇಲ್ಲಿಗೆ ಒಂದೂವರೆ ಕಿಲೋಮೀಟರ್ ದೂರವಿದೆ. ಅದೇ ಚಂಡಮಾರುತದಲ್ಲಿ ನಮ್ಮೂರಿನ ಅರ್ಧಜನ ಸತ್ತುಹೋದರು. ಇನ್ನರ್ಧ ಜನ ಹೇಗೋ ಉಳಿದುಕೊಂಡರು. ಅಬ್ಬಬ್ಬ ಆ ಚಂಡಮಾರುತವನ್ನು ನೆನೆದುಕೊಂಡರೆ ಈಗಲೂ ಮೈ ನಡುಗುತ್ತದೆ..." ಎಂದ.

"ರಾಮಾಪುರದ ಜನರ್‍ಯಾರೂ ಉಳಿಯಲಿಲ್ಲವೆ....?" ಚಿರಂಜಿವಿ ಪ್ರಶ್ನಿಸಿದ.

"ಹೆಚ್ಚು ಕಡಿಮೆ ಇಡೀ ಹಳ್ಳಿಯೇ ನಾಶವಾಯಿತು. ಹೊಸದಾಗಿ ಸ್ಥಾಪನೆಯಾದ ಕೆಲವು ನಿರಾಶ್ರಿತರ ಕ್ಯಾಂಪುಗಳಲ್ಲಿ ಒಂದಿಷ್ಟು ಜನ ಉಳಿದುಕೊಂಡಿರಬಹುದು. ರಾಮಾಪುರವಿದ್ದ ಸ್ಥಳ ಪೂರ್ಣವಾಗಿ ನಾಶವಾಯಿತು. ನೆಲವೆಲ್ಲ ಕೊಚ್ಚಿ ಹೋಗಿ ಬರಡು ಭೂಮಿ ಮಾತ್ರ ಉಳಿಯಿತು. ನಮ್ಮ ಹಳ್ಳಿಯಲ್ಲಿ ಕೆಲವರಿದ್ದಾರೆ" ಎಂದ.

ಚಿರಂಜೀವಿ ಮನಸ್ಸಿನಲ್ಲಿ ತನ್ನ ತಂದೆ ತಾಯಿಯ ಮುಖಗಳು ಕಾಣಿಸಿಕೊಂಡವು. ಈಗ ಹೇಗಿರಬಹುದು....? ತಂದೆಯ ವಯಸ್ಸು ಐವತ್ತೈದರ ಗಡಿಯಲ್ಲ, ತಾಯಿ ಐವತ್ತರ ಗಡಿಯಲ್ಲಿ ಇರಬೇಕು....? ಮಣ್ಣಿನಲ್ಲಿ ದುಡಿದು ದುಡಿದು ಸಣ್ಣಗಾಗಿರಬೇಕು....? ಅವರಿಗೆ ಇದ್ದ ಆಸ್ತಿಯೆಂದರೆ ಅವರ ಕೈಗಳು

ಮಾತ್ರ. ಅವರ ಕಣ್ಣಿಗೆ ಕಾಣಿಸದರೆ ಸಾಕು, ಜೀವನವಿಡೀ ಅವರ ಕಣ್ಣುಗಳ ಮುಂದೆಯೇ ಇದ್ದುಬಿಡಬೇಕು..... ಹೀಗೆ ಏನೇನೋ ನೆನೆದುಕೊಂಡ ಅವನ ಮನಸ್ಸಿನಲ್ಲಿ ನೋವು ಕಾಣಿಸಿಕೊಂಡಿತು.

ಈಗ ಅವರೆಲ್ಲರ ದೇಮಲಾಪುರ ತಲುಪಿದ್ದರು. ಚಿರಂಜೀವಿ ಯಾವುದೋ ಒಂದು ಗುಡಿಸಿಲು ಮುಂದೆ ಅನಾಥವಾಗಿ ಕುಳಿತಿದ್ದಾನೆ. ದೇಮಲಾಪುರ ಈ ದೇಶದ ಇತರ ನತದೃಷ್ಟ ಹಳ್ಳಿಗಳಂತೆ ಬೆಳಗಿನ ಕೆಲಸಗಳಲ್ಲಿ ತೊಡಗಿಕೊಂಡಿದೆ. ಸೋಗೆ ಮುಚ್ಚಿದ ಗುಡಿಸಿಲುಗಳು, ಗುಡಿಸಿಲುಗಳ ಮುಂದೆ ಕಟ್ಟಾಕಿರುವ ದನಕರುಗಳು, ಸುತ್ತಲು ಸಿಕ್ಕಿದ್ದನ್ನು ಹೆಕ್ಕಿ ತಿನ್ನುತ್ತಿರುವ ಕೋಳಿಗಳು, ಕೆಲವು ಮಕ್ಕಳು ಮಣ್ಣಿನ ಜೊತೆಗೆ ಆಡಿಕೊಳ್ಳುತ್ತಿದ್ದರೆ, ಇನ್ನೂ ಕೆಲವು ಮಕ್ಕಳು ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿದ್ದಾರೆ. ಹೆಣ್ಣು ಮಕ್ಕಳು ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಯಾವುದೋ ಗುಡಿಸಲು ಒಳಗೆ ಮಗು ಅಳುತ್ತಿರುವ ಸದ್ದು ಕೇಳಿ ಬರುತ್ತಿದೆ. ಓಡಾಡುತ್ತಿದ್ದವರೆಲ್ಲ ಚಿರಂಜೀವಿಯ ಕಡೆಗೆ ನೋಡುತ್ತಾ ಹೋಗುತ್ತಿದ್ದಾರೆ. ಚಿರಂಜೀವಿ ಈಗ ಏನು ಮಾಡಬೇಕು....? ಎನ್ನುವ ಯೋಚನೆಯಲ್ಲಿ ಮುಳುಗಿದ್ದಾನೆ. ಸರಿಯಾಗಿ ಅದೇ ಸಮಯಕ್ಕೆ ಅವನು ಕುಳಿತಿರುವ ಗುಡಿಸಿಲಿನ ಎದುರಿಗೆ ಇನ್ನೊಂದು ಗುಡಿಸಿಲು ಬಾಗಿಲಲ್ಲಿ ವಯಸ್ಸಾದ ಇಬ್ಬರು ದಂಪತಿಗಳು ಕಾಣಿಸಿಕೊಂಡರು....?

ಅವನ ತಲೆಯಲ್ಲಿ ಎಲ್ಲೋ ಏನೋ ಕುಟ್ಟಿದಂತಾಗಿ ಆ ಕಡೆಗೆ ನೋಡುತ್ತಲೇ ಇದ್ದುಬಿಟ್ಟ. ಚಂಡಮಾರುತದಲ್ಲಿ ಕಳೆದೋದ ಅವನ ತಂದೆ ತಾಯಿ ಅಲ್ಲಿ ನಿಂತಿದ್ದಾರೆ. ಚಿರಂಜೀವಿ ಗರಬಡಿದಂತವನಾಗಿ ಯಾವುದೋ ಸಮ್ಮೋಹನಕ್ಕೆ ಒಳಗಾದವನಂತೆ ಎದ್ದು ಆ ಕಡೆಗೆ ನಿಧಾನವಾಗಿ ಕುಂಟುತ್ತಾ ನೆಡದುಹೋದ. ರಾಮಣ್ಣ ಮತ್ತು ಸೀತಮ್ಮ ಮಾತಾಡಿಕೊಳ್ಳುತ್ತಾ ಚಿರಂಜೀವಿ ಕಡೆಗೆ ನೋಡಿದರು. ಚಿರಂಜೀವಿ ನೇರವಾಗಿ ಬಂದು ಅವರ ಮುಂದೆ ನಿಂತು ಕೊಂಡ.

ರಾಮಣ್ಣ ಮತ್ತು ಸೀತಮ್ಮ, ಚಿರಂಜೀವಿಯನ್ನು ಮಿಕಮಿಕನೆ ನೋಡಿದರು. ಬೆಳೆದಿರುವ ಗಡ್ಡ, ಕೆದರಿರುವ ತಲೆಕೂದಲು, ಮಾಸಿರುವ ಬಟ್ಟೆಗಳಿಂದ ಅವನ ರೂಪವನ್ನು ಅವನೇ ಕನ್ನಡಿಯಲ್ಲಿ ನೋಡಿಕೊಂಡರು ಗುರುತು ಸಿಗದಷ್ಟು ಬದಲಾಗಿ ಹೋಗಿತ್ತು. ತನ್ನ ಕೆನ್ನೆಯನ್ನು ಒಂದು ಕೈಯಲ್ಲಿ ಮುಚ್ಚಿಕೊಂಡ.

"ಯಾರಪ್ಪ ನೀನು....?" ರಾಮಣ್ಣ ಚಿರಂಜೀವಿಯನ್ನು ಕೇಳಿದ. ಚಿರಂಜೀವಿಗೆ ಈಗ ಏನು ಹೇಳಬೇಕೋ ಅರ್ಥವಾಗದೆ ತಲೆ ತಗ್ಗಿಸಿಕೊಂಡ. ಅವನ ಕಣ್ಣುಗಳು ದುಃಖದ ಕಣ್ಣೀರಿನಲ್ಲಿ ತುಂಬಿಕೊಳ್ಳುತ್ತಿದ್ದವು. ಅವನ ತಾಯಿ ಸೀತಮ್ಮನು ಕೂಡ "ಅಯ್ಯೋ ಪಾಪ" ಎನ್ನುವಂತೆ ಕಣ್ಣುಗಳ ತುಂಬಾ ಕರುಣೆ ತುಂಬಿಕೊಂಡು ಚಿರಂಜೀವಿಯ ಮುಖವನ್ನೇ ನೋಡಿದಳು.

ಅವನ ತಂದೆ ತಾಯಿ, ಅವನನ್ನು ಗುರುತಿಡಿಯಲಾರದೇ ಹೋಗಿದ್ದು ಅವನ ಮನಸ್ಸಿಗೆ ಹೆಚ್ಚು ಆಘಾತವಾಯಿತು. ಅವನ ಬದುಕಿನಲ್ಲಿ ಇಷ್ಟು ದಿನಗಳು ಅನುಭವಿಸಿದ ದುಃಖಕ್ಕಿಂತ ಹೆಚ್ಚು ದುಃಖ ಈಗ ಅವನ ಕಣ್ಣುಗಳಲ್ಲಿ ಕಾಣಿಸಿಕೊಂಡಿತು. ಅಲ್ಲೇ ಗುಡಿಸಲು ಮುಂದೆ ಕುಸಿದು ಕುಳಿತ.

ಒಬ್ಬ ಮನುಷ್ಯನ ಭವಿಷ್ಯದ ಎಲ್ಲಾ ತಿರುವುಗಳು ಅವನ ಹುಟ್ಟಿದಾಗಲೇ ತೀರ್ಮಾನವಾಗಿಬಿಟ್ಟಿರುತ್ತೋ ಏನೋ ಎಂದುಕೊಂಡ ಚಿರಂಜೀವಿ, ನಾನೇ ನಿಮ್ಮ ಮಗ ಚಿರಂಜೀವಿ ಎಂದು ಹೇಳದೇ ಇರುವುದೇ ವಾಸಿಯೆಂದು ಮನಸ್ಸಿನಲ್ಲೇ ತೀರ್ಮಾನಿಸಿಕೊಂಡ. ಅವನ ಜೀವನದಲ್ಲಿ ನಡೆದ ಘಟನೆಗಳೆಲ್ಲವೂ ಇದುವರೆಗೂ ಅವನ ವಿರುದ್ಧವಾಗಿಯೇ ನಡೆದಿದೆ.

ಯಾವಾಗಲೋ ಒಂದೆರಡು ಕ್ಷಣಗಳು ಜೀವನದಲ್ಲಿ ಖುಷಿಯನ್ನು ಅನುಭವಿಸಿದ್ದರೂ ಅದು ಕೇವಲ ತಾತ್ಕಾಲಿಕ, ಕ್ಷಣಿಕ. ಚಿರಂಜೀವಿ ತನ್ನ ಜೀವನದಲ್ಲಿ ಕಷ್ಟ ಉಂಡದ್ದೇ ಹೆಚ್ಚು. ಚಿರಂಜೀವಿಯ ದುಃಖಭರಿತ ಮುಖವನ್ನು ನೋಡಿದ ರಾಮಣ್ಣ ಸ್ವಲ್ಪ ಬೆರಗಾದ. ಚಿರಂಜೀವಿಯ ಪಕ್ಕದಲ್ಲಿ ಕುಳಿತುಕೊಂಡು-

"ಯಾರಪ್ಪಾ ನೀನು....? ಈ ಹಳ್ಳಿಕೊಂಪೆಗೆ ಏಕೆ ಬಂದೆ....? ನಿಮ್ಮದು ಯಾವೂರು....?" ಸಮಾಧಾನಪಡಿಸುತ್ತಾ ಕೇಳಿದ. ಅವನ ತಾಯಿ ಸೀತಮ್ಮ ಒಂದು ಗ್ಲಾಸು ನೀರನ್ನು ತಂದುಕೊಟ್ಟು, ಚಿರಂಜೀವಿಯ ಮುಖವನ್ನೇ ದಿಟ್ಟಿಸಿದಳು. ಚಿರಂಜೀವಿ ಅವಳ ನೋಟವನ್ನು ಎದುರಿಸಲಾರದೇ ಪಕ್ಕಕ್ಕೆ ಮುಖ ತಿರುಗಿಸಿಕೊಂಡ.

ಚಿರಂಜೀವಿ, ಏನೂ ಮಾತನಾಡದೆ ಇರುವುದನ್ನು ಗಮನಿಸಿದ ರಾಮಣ್ಣ ಸ್ವಲ್ಪ ಹೊತ್ತು ತಾನೂ ಏನೂ ಮಾತನಾಡದೆ ಕುಳಿತುಕೊಂಡ. ಸ್ವಲ್ಪ ಹೊತ್ತಿನ ನಂತರ ಸೀತಮ್ಮ ಗುಡಿಸಿಲು ಒಳಗೆ ಅಡಿಗೆ ಮಾಡುವ ಕೆಲಸದಲ್ಲಿ

ತಲ್ಲೀನಳಾದಳು. ರಾಮಣ್ಣ ಎದ್ದು ಒಳಗೆ ಹೋಗಿ ಮತ್ತೆ ಹೊರಕ್ಕೆ ಬಂದು ಚಿರಂಜೀವಿಯ ಪಕ್ಕದಲ್ಲಿ ಕುಳಿತುಕೊಂಡ. ಈಗ ಅವರ ಕೈಯಲ್ಲಿ ಒಂದು ಫೋಟೋ ಇದ್ದು, ಅದನ್ನು ಚಿರಂಜೀವಿಗೆ ತೋರಿಸುತ್ತ "ಇದೋ ಈ ಚಿತ್ರ ನೋಡು...! ನನ್ನ ಒಬ್ಬನೇ ಮಗ ಚಿರಂಜೀವಿಯದು..... ಎಲ್ಲೋ ದೂರದಲ್ಲಿ ಓದಲು ಹೋದವನು ಮಧ್ಯೆ ಒಂದೆರಡು ಸಲ ಬಂದನಂತರ ಮತ್ತೆ ಬರಲೇ ಇಲ್ಲ..... ಭಯಾನಕ ಚಂಡ ಮಾರುತ ನಮ್ಮ ಮಗುವನ್ನು ನಮ್ಮಿಂದ ಬೇರ್ಪಡಿಸಿಬಿಟ್ಟಿತು. ಎಲ್ಲಿದ್ದಾನೋ.....? ಏನೂ ಮಾಡುತ್ತಿದ್ದಾನೋ....? ಈಗ ನಿನ್ನಷ್ಟು ದೊಡ್ಡವನಾಗಿರಬೇಕು.... ಕಣ್ಣುಗಳಲ್ಲಿ ಪ್ರಾಣವಿಟ್ಟುಕೊಂಡು ಕಾಯುತ್ತಿದ್ದೇವೆ. ನಮ್ಮ ಮಗುವನ್ನು ಒಮ್ಮೆ ಕಣ್ಣುಗಳಲ್ಲಿ ನೋಡಿಬಿಟ್ಟರೆ ಸಾಕು. ಹಾಯಾಗಿ ಕಣ್ಣು ಮುಚ್ಚಿಕೊಳ್ಳುತ್ತೇವೆ. ರಾಮಾಪುರವಿದ್ದ ಸ್ಥಳದಲ್ಲಿ ಅದೆಷ್ಟು ದಿನಗಳು ನಾವು ಕಾದು ಕುಳಿತಿದ್ದೆವೊ ನಮ್ಮ ಮಗನಿಗಾಗಿ" ರಾಮಣ್ಣ ಕಣ್ಣುಗಳಲ್ಲಿ ನೀರಾಕಿಕೊಂಡು ಆಕಾಶದ ಕಡೆಗೊಮ್ಮೆ ನೋಡಿದ.

ಸೀತಮ್ಮ ಒಳಗಡೆಯಿಂದಲೆ ಸದ್ದು ಮಾಡಿ ಕರೆದಳು. ರಾಮಣ್ಣ ಕಣ್ಣು ಒರೆಸಿಕೊಂಡು ಫೋಟೋ ಎತ್ತಿಕೊಂಡು ಒಳಕ್ಕೆ ಎದ್ದುಹೋದ. ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆಯಲಾಗದೆ ಚಿರಂಜೀವಿ ಕಣ್ಣೀರನ್ನು ಎಷ್ಟೇ ಒರೆಸಿಕೊಂಡರೂ ಮತ್ತೆ ಮತ್ತೆ ಹನಿಯುತ್ತಿತ್ತು.

ನಾನೇ ಚಿರಂಜೀವಿಯೆಂದು ಹೇಳಿಬಿಡಲೆ ಎನ್ನುವ ಹಂಬಲ ಉಕ್ಕಿಬಂದರೂ ನನ್ನ ಕಥೆ ಕೇಳಿ ಇನ್ನೆಷ್ಟು ದುಃಖಪಡುವರೋ ಏನೋ ಎನ್ನುವ ಭಯದಿಂದ ಕೆನ್ನೆಗಳನ್ನು ಸವರಿಕೊಳ್ಳುತ್ತಾ ತನ್ನ ಊನವಾದ ಕಾಲಿನ ಕಡೆಗೆ ನೋಡಿಕೊಳ್ಳುತ್ತಾ ಸುಮ್ಮನಾದ.

ಹೊರಗಡೆಗೆ ಬಂದ ರಾಮಣ್ಣ "ಅನ್ನ ಪಪ್ಪಿದೆ ತಿನ್ನುತ್ತೀಯೇನು...?" ಚಿರಂಜೀವಿಯನ್ನು ಕೇಳಿದ. ಚಿರಂಜೀವಿ ಸುಮ್ಮನೆ ಇದ್ದ. ರಾಮಣ್ಣ ಮತ್ತೆ ಕೇಳಲೋ ಬೇಡವೋ ಎನ್ನುವ ಗೊಂದಲದಲ್ಲಿ ಸಿಕ್ಕಿಕೊಂಡ. ರಾಮಣ್ಣ ಚಿರಂಜೀವಿಗೆ ತನ್ನೆಲ್ಲ ಕಥೆಯನ್ನು ಹೇಳಿ ಮುಗಿಸಿದ್ದರೂ ಚಿರಂಜೀವಿ ಮಾತ್ರ ಬಾಯಿ ತೆಗೆಯಲೇ ಇಲ್ಲ. ತನ್ನ ವಯಸ್ಸಾದ ತಂದೆ, ತಾಯಿಯ ಕಷ್ಟವನ್ನು ತಿನ್ನುವುದಕ್ಕೆ ಅವನ ಮನಸ್ಸು ಒಪ್ಪದೆ ತೊಳಲಾಡುತ್ತಿತ್ತು. ತನ್ನ ತಂದೆ ತಾಯಿ ಸಾಯುವವರೆಗೆ ಅವರ ಎದುರೇ ಇದ್ದು ಅವರ ಸೇವೆ ಮಾಡಬೇಕು ಎನ್ನುವುದಾಗಿ ಯೋಚಿಸುತ್ತಿದ್ದ.

ಸೀತಮ್ಮನ ಕೈಯಿಂದ ತಟ್ಟೆಯನ್ನು ತೆಗೆದುಕೊಂಡ ಚಿರಂಜೀವಿ ಅನ್ನದಲ್ಲಿ ಪಪ್ಪನ್ನು ಕಲಸಿಕೊಂಡು ತಿನ್ನುತ್ತಿದಂತೆ ಕೆನ್ನೆಯ ಮೇಲಿಂದ ಕಣ್ಣೀರ ಹನಿಗಳು ಜಾರಿ ಜಾರಿ ನೆಲಕ್ಕೆ ಬೀಳುತ್ತಿದ್ದವು. ರಾಮಣ್ಣ ಮತ್ತು ಸೀತಮ್ಮ ಈ ಯುವಕನು ಬಂದಾಗಿನಿಂದ ಮಾತು ಮಾತಿಗೂ ಕಣ್ಣೀರಾಕಿಕೊಳ್ಳುವುದನ್ನು ಗಮನಿಸುತ್ತ ನಿಂತಲ್ಲೇ ಕುಸಿದು ಹೋಗುತ್ತಿದ್ದರು. ಇಷ್ಟಕ್ಕೂ ಏನು ಹೇಳದರೂ ಚಿರಂಜೀವಯ ಬಾಯಿಂದ ಯಾವ ಉತ್ತರವೂ ಬರದೇ ಇರುವುದನ್ನು ಗಮನಿಸಿದ ಅವರು ಸುಮ್ಮನಾದರು. ಬೆಳಗು ಮೂಡುವುದರೊಳಗೆ ಹಳ್ಳಿಯಲ್ಲೆಲ್ಲ ಚಿರಂಜೀವಿಯದೇ ಮಾತು. ಯಾರೋ ಯುವಕ ರಾಮಣ್ಣನ ಮನೆಗೆ ಬಂದಿದ್ದಾನಂತೆ. ಕಳೆದು ಹೋದ ಅವರ ಮಗನಂತೆಯೇ ಇದ್ದಾನಂತೆ.... ಕಳೆದು ಹೋದ ಮಗನ ರೂಪದಲ್ಲಿ ಆ ಯುವಕ ಅವರ ಮನೆಗೆ ಬಂದಿದ್ದಾನಂತೆ. ಇನ್ನು ಮೇಲೆ ಅವರ ಮನೆಯಲ್ಲೇ ಇರುತ್ತಾನಂತೆ.... ಸಮುದ್ರ ದಡದಲ್ಲಿ ಕುಳಿತಿದ್ದ ಅವನನ್ನು ನಮ್ಮೂರಿನ ಮೀನುಗಾರರು ಕರೆದುಕೊಂಡು ಬಂದರಂತೆ..... ಇತ್ಯಾದಿ.

ಕೆಲವರಂತು ಅವನನ್ನು ನೋಡಲು ರಾಮಣ್ಣನ ಗುಡಿಸಿಲಿಗೆ ಧಾವಿಸಿ ಬಂದರು. ಸಣ್ಣ ಪುಟ್ಟ ಮಕ್ಕಳು ದೂರದಲ್ಲಿ ನಿಂತುಕೊಂಡು ಅವನನ್ನು ಪರೀಕ್ಷಿಸುವಂತೆ ನೋಡಿದರೆ, ಕೆಲವು ಹೆಂಗಸರು, ಗಂಡಸರು ಚಿರಂಜೀವಿಯ ಹತ್ತಿರಕ್ಕೆ ಬಂದು ಮಾತನಾಡಿಸಿ ಚಿರಂಜೀವಿಯನ್ನು ನೋಡತೊಡಗಿದರು.

೧೦

ದಿನಗಳು ಉರುಳಿದಂತೆ ಚಿರಂಜೀವಿ ಆ ಹಳ್ಳಿಯ ಜನರಲ್ಲಿ ಒಬ್ಬನಾಗಿ ಪರಿವರ್ತನೆಗೊಳ್ಳುತ್ತಿದ್ದ. ಸಾಯಂಕಾಲ ಎರಡು ಗಂಟೆಗಳು ಕಾಲ ಹಳ್ಳಿಯ ಮಕ್ಕಳನ್ನು ಕೂರಿಸಿಕೊಂಡು ಓದಿಸಲು ಪ್ರಾರಂಭಿಸಿದ. ಕೆಲವು ದಿನಗಳಾದ ಮೇಲೆ ಹಳ್ಳಿಯ ವಯಸ್ಕರಿಗೂ ರಾತ್ರಿ ಹೊತ್ತು ಅಕ್ಷರ ಕಲಿಸುತ್ತಾ ಅಕ್ಷರ ಜ್ಞಾನದಿಂದ ಜನಸಾಮಾನ್ಯರ ನಡುವೆ ಏನೆಲ್ಲ ಮಾರ್ಪಾಡುಗಳು ಉಂಟಾಗುತ್ತವೆ ಎನ್ನುವ ಅರಿವನ್ನು ವಿವರಿಸಿದ.

ಹಲವು ದಿನಗಳ ಪ್ರಯತ್ನದ ನಂತರ ಪ್ರತಿ ಕುಟುಂಬದಿಂದಲೂ ಕಡ್ಡಾಯವಾಗಿ ದಿನಕ್ಕೆ ಒಂದು ರೂಪಾಯಿಯಂತೆ ಸಂಗ್ರಹಿಸಿ ಅದರಲ್ಲಿ ಅರ್ಧ

ಭಾಗವನ್ನು ಹತ್ತಿರದ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಇನ್ನರ್ಧ ಹಣವನ್ನು ಊರಿನ ಅಭಿವೃದ್ಧಿಗೆ ತೊಡಗಿಸುವಲ್ಲಿ ಸಫಲನಾದ. ನೋಡು ನೋಡುತ್ತಿದ್ದಂತೆಯೇ ಆ ಹಳ್ಳಿಯಲ್ಲಿ ಸರಕಾರದ ಯಾವ ಸಹಾಯವು ಇಲ್ಲದೆ ಒಂದು ಶಾಲೆಯ ಕಟ್ಟಡ ನಿರ್ಮಾಣವಾಯಿತು. ಹಳ್ಳಿಗರ ಹಣವನ್ನು ಸಹ ಆ ಕಟ್ಟಡಕ್ಕೆ ಉಪಯೋಗಿಸಿಕೊಳ್ಳಲಿಲ್ಲ. ಹಳ್ಳಿಯ ಜನರು ತಮ್ಮ ದೈನಂದಿನ ಕೆಲಸಗಳ ಜೊತೆಗೆ ಒಂದೆರಡು ಗಂಟೆಗಳ ಕಾಲ ಆ ಕಟ್ಟಡದ ಕೆಲಸದಲ್ಲಿ ತೊಡಗಿಕೊಂಡಿದ್ದರು.

ಆ ಹಳ್ಳಿಯಲ್ಲಿ ಎಳೆ ಹುಡುಗರ ಒಂದು ಗುಂಪು ತಯಾರಾಗಿ ಊರಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿತ್ತು. ನೀರಿನ ಕೊಳಾಯಿ ಮತ್ತು ಬಾವಿಗಳ ಪಕ್ಕದಲ್ಲಿ ದನಕರುಗಳನ್ನು ತೊಳೆಯುವುದಾಗಲಿ, ಬಟ್ಟೆ ಒಗೆಯುವುದನ್ನಾಗಲಿ ಪೂರ್ಣವಾಗಿ ತ್ಯಜಿಸಲಾಗಿತ್ತು. ಮನೆಗಳ ಮುಂದಿದ್ದ ಬಚ್ಚಲುಗಳು ಪೂರ್ಣವಾಗಿ ಮಾಯವಾಗಿ ಮನೆಗಳ ಹಿಂದೆ, ಮುಂದೆ ಹೂಗಿಡಗಳು ಮತ್ತು ತರಕಾರಿ ತೋಟಗಳು ಕಾಣಿಸಿಕೊಂಡವು. ಆ ಹಳ್ಳಿಯ ಮಕ್ಕಳು ಪಕ್ಕದ ಹೋಬಳಿಯಲ್ಲಿದ್ದ ಹೈಸ್ಕೂಲುಗಳಿಗೆ ಓದಲು ಹೋಗಿ ಬರುತ್ತಿದ್ದರು.

ಹೆಣ್ಣು ಮಕ್ಕಳಂತು ತಮ್ಮ ಕುಡುಕ ಗಂಡಸರು ನೀಡುತ್ತಿದ್ದ ಹಿಂಸೆಗಳಿಂದ ಪೂರ್ಣವಾಗಿ ಮುಕ್ತಿ ಪಡೆದು ಹೊಸ ಜೀವನ ಪಡೆದವರಂತೆ ಉಲ್ಲಾಸಗೊಂಡಿದ್ದರು. ಎಷ್ಟೋ ಕುಡುಕರು ಕುಡಿಯುವುದನ್ನು ಪೂರ್ಣವಾಗಿ ತ್ಯಜಿಸಿ ತಮ್ಮ ಪತ್ನಿ ಮಕ್ಕಳ ಜೊತೆಗೆ ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದರು. ಇಷ್ಟೆಲ್ಲಾ ಪ್ರಗತಿ ಕೇವಲ ಕೆಲವೇ ವರ್ಷಗಳಲ್ಲಿ ಕನಸಿನಲ್ಲಿ ನಡೆದಂತೆ ನಡೆದು ಹೋಗಿತ್ತು.

ದೇಮಲಾಪುರದ ವಿಷಯ ಸುತ್ತಲು ಹಳ್ಳಿಗಳಿಗೆ ಹಬ್ಬಿ, ಹಳ್ಳಿಗರು ಚಿರಂಜೀವಿಯನ್ನು ತಮ್ಮ ಹಳ್ಳಿಗಳಿಗೆ ಆಹ್ವಾನಿಸಿ ಸಲಹೆಗಳನ್ನು ಪಡೆಯತೊಡಗಿದರು. ಇಷ್ಟೆಲ್ಲಾ ನಡೆದರು ಚಿರಂಜೀವಿಯ ಹೆಸರಾಗಲಿ, ಅವನ ಮೂಲವಾಗಲಿ ಯಾರಿಗೂ ತಿಳಿಯಲಿಲ್ಲ. ಎಷ್ಟೋ ಜನರು ಚಿರಂಜೀವಿಯ ಬಗ್ಗೆ ತಿಳಿದುಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಅವನು ಮಾತ್ರ ಬಾಯಿ ತೆಗೆದಿರಲಿಲ್ಲ. ಅವನ ನಿಜವಾದ ಹೆಸರನ್ನು ಸಹ ಅವರು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ.

ಜನರು ಚಿರಂಜೀವಿಯನ್ನು ನಮ್ಮ ಪಾಲಿನ "ದೇವರು ಬಾಬು" ಎಂದೇ ಕರೆಯುತ್ತಿದ್ದರು. ಬಾಬುವನ ಕಥೆಗಳು ಆ ಪ್ರದೇಶವೆಲ್ಲಾ ಹರಡಿ ಹೋಬಳಿ, ತಾಲೂಕು, ಜಿಲ್ಲೆಯ ಗಡಿಯನ್ನು ದಾಟಿತ್ತು. ಆ ಪ್ರದೇಶದ ಭೂ ಮಾಲೀಕರು, ರಾಜ್ಯ ಸರಕಾರದ ಅಧಿಕಾರಿಗಳು ಬಾಬುವಿನ ಕಥೆಗಳನ್ನು ಕೇಳಿ ನಿಬ್ಬೆರಗಾಗಿದ್ದರು. ಒಟ್ಟಿನಲ್ಲಿ ಭೂ ಮಾಲೀಕರಿಗೆ ಮತ್ತು ಅಧಿಕಾರಿಗಳಿಗೆ ಸ್ಥಳೀಯ ಜನರಿಂದ ಮತ್ತು ಬಾಬುವಿನಿಂದ ಯಾವ ರೀತಿಯ ತೊಂದರೆಯೂ ಇಲ್ಲದ ಕಾರಣ ಬಾಬುವಿನ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ.

ಚಿರಂಜೀವಿ ಅಲಿಯಾಸ್ ಬಾಬು ಆ ಪ್ರದೇಶಕ್ಕೆ ಕಾಲಿಟ್ಟು ಹತ್ತು ವರ್ಷಗಳೇ ಕಳೆದುಹೋಗಿದ್ದವು. ಈ ಹತ್ತು ವರ್ಷಗಳಲ್ಲಿ, ಸುತ್ತಲಿನ ಹಳ್ಳಿಗಳಲ್ಲಿ ಎಷ್ಟೋ ಗ್ರಾಮೀಣ ಅಭಿವೃದ್ಧಿಯ ಸಹಕಾರಿ ಬ್ಯಾಂಕುಗಳು ತಲೆ ಎತ್ತಿದ್ದವು.

ಹಳ್ಳಿಯ ಜನರು ತಾವು ಸಂಗ್ರಹಿಸಿದ್ದ ಠೇವಣಿಯ ಮುಖಾಂತರವೆ ಹಣದ ಸಾಲ ಪಡೆದು ತಮ್ಮ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳುತ್ತಿದ್ದರು. ಹಳ್ಳಿ ಹಳ್ಳಿಯಲ್ಲೂ, ಆಯಾ ಹಳ್ಳಿಯ ಜನರೆ ಎಲ್ಲಾ ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು.

ಚಿರಂಜೀವಿ, ಬ್ಯಾಂಕಿನಲ್ಲಿ ಸಾಲ ಪಡೆದು ರಾಮಣ್ಣ ಮತ್ತು ಸೀತಮ್ಮನ ಹೆಸರಿನಲ್ಲಿ ಕೊಳವೆ ಬಾವಿ ಕೊರೆದು ಒಂದು ತೋಟವನ್ನು ಮಾಡಿದ. ತೋಟದಲ್ಲಿ ತಾನೇ ಖುದ್ದಾಗಿ ನಿಂತು ದುಡಿಯತೊಡಗಿದ. ಸುತ್ತಮುತ್ತಲಿನ ಹಳ್ಳಿಗರು ಯಾವುದೇ ಸಹಾಯ ಮಾಡಲು ಸಿದ್ಧರಿದ್ದರು, ಚಿರಂಜೀವಿ ಯಾರ ಸಹಾಯವನ್ನು ಪಡೆದುಕೊಳ್ಳುತ್ತಿರಲಿಲ್ಲ. ಅವನು ಎಲ್ಲಿ ಹೋದರೂ, ಎಲ್ಲೇ ಇದ್ದರೂ ಅವನಿಗೆ ಸಮಯಕ್ಕೆ ಸರಿಯಾಗಿ ಯಾರೋ ಊಟ ಹಾಕಿ ಉಪಚರಿಸುತ್ತಿದ್ದರು. ಯಾವುದೇ ಬಸ್ಸಿಗೋದರೂ ಯಾರೂ ಚಾರ್ಜ್ ತೆಗೆದುಕೊಳ್ಳುತ್ತಿರಲಿಲ್ಲ.

ಈ ಪ್ರದೇಶದಲ್ಲಿ ನಾಲ್ಕಾರು ಸಲ ತಾಲೂಕು, ಜಿಲ್ಲಾ ಪಂಚಾಯಿತಿ, ವಿಧಾನ ಸಭಾ ಮತ್ತು ಲೋಕಸಭಾ ಚುನಾವಣೆಗಳು ನಡೆದು ಹಲವು ಶಾಸಕರು ಗೆದ್ದು ಹೋಗಿದ್ದರು. ಗೆದ್ದು ಹೋದವರು ಮತ್ತೆ ಮರುಚುನಾವಣೆಗಳಾದಾಗ ಮಾತ್ರ ಜನರ ಮುಂದೆ ಪ್ರತ್ಯಕ್ಷಗೊಳ್ಳುತ್ತಿದ್ದರು. ಇದನ್ನು ಗಮನಿಸಿದ್ದ ಸಾರ್ವಜನಿಕರು ಅನೇಕ ಸಲ "ಬಾಬು"ವನ್ನು ಚುನಾವಣೆಗೆ ನಿಲ್ಲಬೇಕೆಂದು ಎಷ್ಟೇ ಒತ್ತಾಯ ಮಾಡಿದ್ದರು ಸಫಲವಾಗಿರಲಿಲ್ಲ.

ಈಗ ಮತ್ತೊಮ್ಮೆ ವಿಧಾನಸಭಾ ಚುನಾವಣೆಗಳು ಹತ್ತಿರ ಬಂದಿದ್ದು ಆ ಪ್ರದೇಶದಿಂದ ಎರಡು ಸಲ ಗೆದ್ದು ಹೋಗಿದ್ದ ರಾಮರೆಡ್ಡಿ ಮತ್ತೊಮ್ಮೆ ಚುನಾವಣೆಗೆ ನಿಲ್ಲಲು ತಯಾರು ನಡೆಸಿದ್ದ. ರಾಮರೆಡ್ಡಿ ರಾಜಕೀಯ, ಸೇರಿದಾಗ ಸಾರ್ವಜನಿಕರ ಕುಂದುಕೊರತೆಗಳನ್ನು ರಕ್ಷಿಸುವ ಭರವಸೆಯ ಒಬ್ಬ ಬಡ ಕುಟುಂಬದ ಅಪ್ಪಟ ವಿದ್ಯಾರ್ಥಿಯಾಗಿದ್ದ. ನಯವಿನಯಗಳ ಸಮ್ಮಿಲನದ ಮೂರ್ತಿಯಾಗಿದ್ದ ರಾಮರೆಡ್ಡಿ ಹೈದ್ರಾಬಾದ್ ಸೇರಿದ ಮೇಲೆ ಅದೇನು ಮೋಡಿಯಲ್ಲಿ ಸಿಲುಕಿಕೊಂಡನೋ ಏನೋ ಕಣ್ಣುಗಳು ನೆಲಕ್ಕೆ ನೆಟ್ಟಲೇ ಇಲ್ಲ. ಅವನು ಹುಟ್ಟಿ ಬೆಳೆದ ಮಣ್ಣು ಅವನಿಗೆ ಅಸಹ್ಯವಾಗಿ ಕಂಡಿತು. ಕೆಲವೇ ವರ್ಷಗಳಲ್ಲಿ ಎರಡು ಬಂಗಲೆಗಳು ಹೈದ್ರಾಬಾದ್‌ನ ಪ್ರತಿಷ್ಠಿತ ಬಡಾವಣೆಗಳಲ್ಲಿ ಎದ್ದು ನಿಂತಿದ್ದವು. ರಾಮರೆಡ್ಡಿ, ಏರ್ ಕಂಡೀಶನ್ ಕಾರುಗಳಿಂದ ಕೆಳಕ್ಕೆ ಹೆಜ್ಜೆ ಇಡುವುದೇ ಅಪರೂಪವಾಯಿತು.

ಇದು ಸಾಕಾಗದೆ ಹೈದ್ರಾಬಾದ್‌ನ ಒಂದು ಪ್ರತಿಷ್ಠಿತ ಹೋಟಲಿನಲ್ಲಿ ಒಂದು ಹೆಣ್ಣನ್ನು ಬಲಾತ್ಕಾರರ ಮಾಡಲು ಹೋಗಿ ಸಿಕ್ಕಿಬಿದ್ದಿದ್ದ. ಆ ವಿಷಯ ಇಡೀ ರಾಜ್ಯಕ್ಕೆ ತಿಳಿದುಹೋಗಿ, ಆ ಹೆಣ್ಣು ಅನಂತರದ ದಿನಗಳಲ್ಲಿ ಕೊಲೆಯಾಗಿ ಹೋಗಿದ್ದಳು. ಆ ಕೊಲೆ ಇವನೆ ನಡೆಸಿರುವುದೆಂದು ಎಲ್ಲರಿಗೂ ತಿಳಿದಿದ್ದರೂ ನ್ಯಾಯಾಲಯದಲ್ಲಿ ಸಾಕ್ಷಿಯಿಲ್ಲದೆ ಖುಲಾಸೆಯಾಗಿದ್ದ. ಇವೆಲ್ಲ ರಾಮರೆಡ್ಡಿಯ ಅವತಾರಗಳಲ್ಲಿ ಕೆಲವು ಸ್ಯಾಂಪಲುಗಳು ಮಾತ್ರ. ರಾಜ್ಯದ ಮುಖ್ಯ ನ್ಯಾಯಾಲಯದ ನ್ಯಾಯ ಮೂರ್ತಿಯೇ ರಾಮರೆಡ್ಡಿಯಿಂದ ಲಂಚ ಪಡೆದಿರುವುದಾಗಿ ಊಹೆಗಳು ಹುಟ್ಟಿಕೊಂಡಿದ್ದವು.

ಇಂತಹ ಹಿನ್ನೆಲ್ಲೆ ಇರುವ ರಾಮರೆಡ್ಡಿ ಮತ್ತೆ ಪಕ್ಷದ ಟಿಕೆಟ್ ಪಡೆಯುವ ಎಲ್ಲಾ ಅರ್ಹತೆಗಳನ್ನು ಪಡೆದಿದ್ದ. ಪಕ್ಷಕ್ಕೆ ಹಣ ಸಂಗ್ರಹಿಸಿಕೊಟ್ಟು, ಚುನಾವಣೆಯಲ್ಲಿ ಗೆಲ್ಲುವ ಕುದುರೆಯಾದರೆ ಸಾಕು, ಯಾವ ಪಕ್ಷವಾದರೂ ಸರಿ ಟಿಕೆಟ್ ನೀಡುತ್ತದೆ. ಅವನು ಯಾವ ರೀತಿ ಗೆಲ್ಲುತ್ತಾನೆ.....? ಎಷ್ಟು ಜನ ಓಟು ನೀಡುತ್ತಾರೆ....? ಎನ್ನುವುದು ಮುಖ್ಯವಲ್ಲ. ಅವನು ಗೂಂಡಾ ಆಗಿರಲಿ, ಮಾಫಿಯಾ ನಾಯಕನಾಗಿರಲಿ, ಕೊಲೆ ಪಾತಕನಾಗಿರಲಿ, ಕಾಮಪಿಶಾಚಿಯಾಗಿರಲಿ ಲೆಕ್ಕಕ್ಕೆ ಬರುವುದಿಲ್ಲ. ಪ್ರಸ್ತುತ ಈ ಅರ್ಹತೆಗಳೆಲ್ಲ ದೇಶವನ್ನು ಆಳುವ ನಾಯಕರಿಗೆ ಬೇಕಾಗಿರುವ ಅರ್ಹತೆಗಳಾಗಿ ಬಿಟ್ಟಿವೆ.

ರಾಮರೆಡ್ಡಿಯ ಹಿಂಸೆಗಳಿಂದ ತತ್ತರಿಸಿಹೋಗಿರುವ ಜನರು ತಮ್ಮ ಮಧ್ಯದಿಂದಲೆ ಒಬ್ಬ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಬಹಳ ದಿನಗಳಿಂದಲೂ ಯೋಚಿಸುತ್ತಿದ್ದರು.

ಬಾಬು, ರಾಮಣ್ಣ ಮತ್ತು ಸೀತಮ್ಮನನ್ನು ಅಪ್ಪ, ಅಮ್ಮ ಎಂದೇ ಕರೆಯುತ್ತಿದ್ದ. ಬಾಬು ಆಲಿಯಾಸ್ ಚಿರಂಜೀವಿ, ರಾಮಣ್ಣ ಮತ್ತು ಸೀತಮ್ಮನ ಮಗನೇ ಆಗಿದ್ದರು, ಅವನೇ ತಮ್ಮ ಮಗನೆಂದು ಅವರು ಗುರುತಿಸಲಾರದ ನತದೃಷ್ಟ ತಂದೆ-ತಾಯಿಗಳಾಗಿದ್ದರು. ತಾವು ಹತ್ತಾರು ವರ್ಷಗಳಿಂದ ಯಾರಿಗಾಗಿ, ಹಂಬಲಿಸಿ ಜೀವಿಸುತ್ತಿದ್ದರೋ ಅವನೇ ಅವರ ಕಣ್ಣುಗಳ ಮುಂದಿದ್ದರು, ಅವರು ಅವನನ್ನು ತಮ್ಮ ಮಗನೆಂದು ತಬ್ಬಿಕೊಳ್ಳಲಿಲ್ಲ. ಆದರೂ ರಕ್ತ ಸಂಬಂಧವೆನ್ನುವುದು ಅವರನ್ನು ಅಂತರಂಗದ ಮೂಲಕ ಹೆಣೆದುಕೊಂಡಿತ್ತು. ಎಷ್ಟೋ ಸಲ ಇವನೇ ನಮ್ಮ ಮಗ ಇರಬೇಕು.......? ಎಂದು ಅವರು ಮಾತನಾಡಿಕೊಂಡಿದ್ದರು..... ನಮ್ಮ ಮಗ ಚಿರಂಜೀವಿಯೇ ಈ ರೂಪದಲ್ಲಿ ನಮಗೆ ಕಾಣಿಸಿಕೊಂಡಿದ್ದಾನೆ ಎಂದುಕೊಳ್ಳುತ್ತಿದ್ದರು. ಚಿರಂಜೀವಿ ತನ್ನ ತಂದೆ ತಾಯಿಯನ್ನು ನೋಡುತ್ತಾ ಅವರ ಕಣ್ಣುಗಳ ಮುಂದೆ ಕುಳಿತುಬಿಡುತ್ತಿದ್ದ.

ಚಿರಂಜೀವಿ ಅವರನ್ನು ಅಪ್ಪ, ಅಮ್ಮ ಎಂದು ಕರೆಯುತ್ತಿದ್ದರು, ನಾನೇ ನಿಮ್ಮ ಮಗನೆಂದು ಹೇಳಲಾರದೇ ಬಾಯಿಯನ್ನು ಕಟ್ಟಿಕೊಂಡುಬಿಟ್ಟಿದ್ದ. ಇಷ್ಟು ವರ್ಷಗಳು ಕಳೆದ ಮೇಲೂ ನಾನೇ ನಿಮ್ಮ ಮಗ ಎಂದು ಹೇಳಲು ಯಾಕಾದರೂ ಅವನಿಂದ ಆಗಲಿಲ್ಲವೋ ಅವನಿಗೆ ಹೊಳೆಯುತ್ತಿಲ್ಲ. ಅದನ್ನು ತಿಳಿಸುವ ಕಾಲ ಯಾವಾಗ ಬರುತ್ತದೋ ಏನೋ.....? ತಾನೇ ಪ್ರಶ್ನಿಸಿಕೊಳ್ಳುತ್ತಿದ್ದ.

ದಿನವಿಡೀ ಎಲ್ಲೇ ಹೋದರೂ... ಏನೇ ಕೆಲಸ ಮಾಡಿದರು ರಾತ್ರಿಯಾಗಿದ್ದೆ ದೇಮಲಾಪುರಕ್ಕೆ ಬಂದುಬಿಡುತ್ತಿದ್ದ. ಬಾಬು ಎಲ್ಲಿರುತ್ತಾನೋ ಅಲ್ಲಿ ಜನರ ಗುಂಪೆ ನೆರೆದಿರುತ್ತಿತ್ತು. ಬಾಬು ರಾತ್ರಿ ಮನೆಗೆ ಹಿಂದಿರುಗುದಿದ್ದರೆ ರಾಮಣ್ಣ ಮತ್ತು ಸೀತಮ್ಮ ಊಟವೆ ಮಾಡುತ್ತಿರಲಿಲ್ಲ. ಒಂದೆರಡು ಸಲ ಬಾಬು ಹಿಂದಿರುಗಿ ಬರದ ಕಾರಣ ರಾಮಣ್ಣ ಮತ್ತು ಸೀತಮ್ಮ ಹೊರಗಡೆಯೇ ಕುಳಿತುಕೊಂಡು ಇದ್ದುಬಿಟ್ಟಿದ್ದರು. ಇದನ್ನು ಗಮನಿಸಿ ಬಾಬು ಎಲ್ಲೇ ಹೋದರು ರಾತ್ರಿ ಮನೆಗೆ ಹಿಂದಿರುಗಿ ಬರುತ್ತಿದ್ದ.

ರಾಮಣ್ಣ ಮತ್ತು ಸೀತಮ್ಮ ಮೊದಮೊದಲು ತಮ್ಮ ಮಗ ಚಿರಂಜೀವಿ ಬಂದೇ ಬರುತ್ತಾನೆಂದು ಮತ್ತು ಅವನನ್ನು ಸಾಯುವುದಕ್ಕಿಂತ ಮುಂಚೆ ಒಮ್ಮೆ

ಕಣ್ಣುಗಳ ತುಂಬಾ ನೋಡಿಬಿಡಬೇಕೆಂದು ಬಾಬುವಿನ ಹತ್ತಿರ ಹೇಳಿಕೊಳ್ಳುತ್ತಿದ್ದರು. ದಿನಗಳು ಉರುಳಿದಂತೆ ರಾಮಣ್ಣ ಮತ್ತು ಸೀತಮ್ಮ ತಮ್ಮ ಮಗನನ್ನು ನೋಡುವ ಆಕಾಂಕ್ಷೆಯನ್ನು ಸ್ವಲ್ಪ ಸ್ವಲ್ಪವಾಗಿ ಕಳೆದುಕೊಳ್ಳುತ್ತಿದ್ದರು.

ಒಂದು ದಿನ ರಾಮರೆಡ್ಡಿ ಆ ಪ್ರದೇಶದ ಜನರಲ್ಲಿ ಓಟು ಯಾಚಿಸಲು ಹೈದ್ರಾಬಾದ್‌ನಿಂದ ಬಂದಿಳಿದ. ದೇಮಲಾಪುರಕ್ಕೆ ಹತ್ತು ಕಿಲೋ ಮೀಟರುಗಳ ದೂರದಲ್ಲಿರುವ ಹೋಬಳಿ ಕೇಂದ್ರವಾದ ಸಕಟಾಪುರದ ವಿಶ್ರಾಂತಿ ಗೃಹದಲ್ಲಿ ಠಿಕಾಣಿ ಹೂಡಿದ. ಮನುಷ್ಯನ ಕೈಯಲ್ಲಿ ಅಧಿಕಾರವಿದ್ದರೆ ಏನೆಲ್ಲಾ ಗೌರವ, ಸುಖ ಬೋಗಗಳು ದೊರಕುತ್ತವೆ ಎನ್ನುವುದನ್ನು ಅನುಭವಿಸಿದ್ದ ರಾಮರೆಡ್ಡಿ ಚುನಾವಣೆಯಲ್ಲಿ ತಾನು ಮತ್ತೆ ಗೆಲ್ಲುತ್ತೇನೆಯೆ..." ಎನ್ನುವ ಸಮೀಕ್ಷೆ ನಡೆಸತೊಡಗಿದ. ಅವನು ಚುನಾವಣೆಗೆ ನಿಲ್ಲುವ ಪ್ರದೇಶದ ಎಲ್ಲಾ ಹಳ್ಳಿಗಳ ಮುಖ್ಯಸ್ಥರನ್ನು ಕರೆಸಿ ಈ ಸಲ ಓಟು ಯಾವ ಕಡೆ ವಾಲುತ್ತದೆ ಎನ್ನುವ ವಿಚಾರದ ಜೊತೆಗೆ ಬಂದವರೆಲ್ಲರಿಗೂ ಒಂದಲ್ಲಾ ಒಂದು ಆಮಿಷದ ಮಾತುಗಳನ್ನು ಹೇಳಿ ಎಲ್ಲರನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸಿದ್ದ.

ರಾತ್ರಿ ಬಂದವರಿಗೆ, ಗಂಡು ತುಂಡು, ಬೆಳಗ್ಗೆ ಬಂದವರಿಗೆ ಬಾಯಿ ತುಂಬಾ ಆಶ್ವಾಸನೆಯ ಜೊತೆಗೆ ಎರಡೂ ಕೈಗಳನ್ನು ಜೋಡಿಸಿ ಸಾಷ್ಟಾಂಗ ನಮಸ್ಕಾರಗಳನ್ನು ಹಾಕತೊಡಗಿದ. ಈಗ ಎಲ್ಲರ ಬಾಯಲ್ಲೂ ದೇಮಲಾಪುರದ ಬಾಬುವಿನ ಹೆಸರೇ ಕೇಳಿ ಬರುತ್ತಿದ್ದು, ಏನಾದರೂ ಮಾಡಿ ಬಾಬು, ರಾಮರೆಡ್ಡಿಯ ಜೊತೆಗೆ ಕೈ ಜೋಡಿಸಿದರೆ ಮತ್ತೆ ಚುನಾವಣೆಯಲ್ಲಿ ಗೆಲ್ಲುವುದು ನಿಶ್ಚಿತವೆಂದು ಎಲ್ಲರು ಹೇಳಿದರು.

ಕತ್ತೆ ಕಾಲಿಡಿಯಲು ಹೇಸದ ರಾಜಕೀಯದಲ್ಲಿ ಈಗಾಗಲೇ ಪಳಗಿರುವ ರಾಮರೆಡ್ಡಿ ಬಾಬುವಿನ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಒಂದು ದಿನ ಕಾರಿನಲ್ಲಿ ಅವನ ಮನೆಗೆ ಬಂದ. ಬಾಬುವಿನ ಮುಖವನ್ನು ನೋಡಿದ್ದೆ ಸ್ವಲ್ಪ ಸೆಳೆತಗೊಂಡವನಂತಾಗಿ ರಾಮರೆಡ್ಡಿ ಇವನ್ಯಾರೋ ನಕ್ಸಲ್‌ವಾದಿಯೇ ಇರಬೇಕು ಎಂದುಕೊಂಡ.

ಇಲ್ಲವಾದರೆ ಈ ಊರಿಗೆ ಅದು ಒಬ್ಬ ಅನಾಥನಾಗಿ ಬಂದು ಇಷ್ಟೆಲ್ಲಾ ಚಾಕಚಕ್ಯತೆಯಿಂದ ಇಷ್ಟೊಂದು ಪ್ರಖ್ಯಾತಿಯನ್ನು ಪಡೆಯಲು ಅದೇಗೆ ಸಾಧ್ಯ?

ಆ ಪ್ರದೇಶದ ಜನರೆಲ್ಲ ಬಾಬುವೆಂದರೆ ಎಲ್ಲಿಲ್ಲದ ಗೌರವವನ್ನು ಬೆಳೆಸಿಕೊಂಡಿದ್ದರು. ಎಷ್ಟೇ ಆದರೂ ಬಾಬು ಒಬ್ಬ ಅನಾಥ. ಅವನ್ಯಾರು...? ಎಲ್ಲಿಂದ ಬಂದ...? ಏಕೆ ಬಂದ...? ಎನ್ನುವುದು ಇದುವರೆಗೂ ಯಾರೂ ತಿಳಿದುಕೊಳ್ಳಲಾಗಲಿಲ್ಲ. ಅದನ್ನೆಲ್ಲ ಕೆಣಕುವ ಧೈರ್ಯವನ್ನು ರಾಮರೆಡ್ಡಿಯೂ ತೋರಿಸಲಿಲ್ಲ. ಈ ಪ್ರಶ್ನೆಗಳನ್ನೆಲ್ಲ ತನ್ನ ಮನಸ್ಸಿನಲ್ಲೇ ಇಟ್ಟುಕೊಂಡು ಗೆಳೆತನದ ಕೈಚಾಚಿ ಬಾಬುವನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಒಳಗೊಳಗೆ ಉಪಾಯ ಹೂಡಿದ.

ಬಾಬು, ರಾಮರೆಡ್ಡಿಯ ಎಲ್ಲಾ ಮಾತುಗಳನ್ನು ಕೇಳಿಸಿಕೊಂಡ ಮೇಲೆ -

"ರೆಡ್ಡಿಯವರೆ ನಮಗಿರುವುದು ಒಂದೇ ಓಟು ನೀವು ನನ್ನನ್ನು ನೋಡಲು ಇಷ್ಟು ದೂರ ಬಂದಿದ್ದರಿಂದ ನನ್ನ ಓಟು. ನಿಮಗೆ ಹಾಕುತ್ತೇನೆ..." ಆದರೆ ಬೇರೆಯವರ ಓಟುಗಳನ್ನು ಹಾಕುವಂತೆ ಹೇಳಲು ನಾನ್ಯಾರು ಹೇಳಿ....? ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವಿದೆ. ಅವರ ಓಟುಗಳನ್ನು ಯಾರಿಗೆ ಹಾಕಬೇಕೆಂದು ಅವರೆ ತೀರ್ಮಾನಿಸಲಿ? ಎಂದ.

"ನೀವು ನಮ್ಮ ಪಕ್ಕ ಸೇರಿಕೊಳ್ಳಿ.... ಆಗ ಬೇಕಾದಷ್ಟು ಕೆಲಸಗಳನ್ನು ನೀವೇ ಮಾಡಬಹುದು. ಸರಕಾರವು ನಿಮ್ಮ ಸಹಾಯಕ್ಕೆ ನಿಲ್ಲುತ್ತದೆ." ರಾಮರೆಡ್ಡಿ ಹೇಳಿದ.

"ಜನರ ಸೇವೆ ಮಾಡಲು ಯಾವ ಪಕ್ಷವನ್ನು ಸೇರಬೇಕಾಗಿಲ್ಲ. ಯಾವ ರಾಜಕೀಯ ಪಕ್ಷಗಳನ್ನು ಸೇರದೆ ಜನ ಸೇವೆಯನ್ನು ಮಾಡಬಹುದು."

ಬಾಬು ಹೇಳಿದ, ಅದನ್ನು ಬಾಬು ಈಗಾಗಲೇ ನಿರೂಪಿಸಿದ್ದಾನೆ ಎನ್ನುವುದು ಆ ಪ್ರದೇಶಕ್ಕೆಲ್ಲ ತಿಳಿದು ಹೋಗಿದೆ. ರಾಮರೆಡ್ಡಿಗೆ ಈಗ ಏನು ಹೇಳಬೇಕೋ ಅರ್ಥವಾಗದೆ ಒಂದೆರಡು ಕ್ಷಣ ಯೋಚಿಸಿದ. ಸುತ್ತಲ್ಲಿದ್ದ ಜನ ಇಬ್ಬರನ್ನು ನೋಡುತ್ತಿದ್ದರು. "ನೋಡಿ ಚಿರಂಜೀವಿ.... ನೀವು ನಮಗೆ ಸಹಾಯ ಮಾಡಿದರೆ ನಾವು ನಿಮಗೆ ಸಹಾಯ ಮಾಡ್ತೇವೆ" ರಾಮರೆಡ್ಡಿ ಹೇಳಿದ. ಬಾಬು ಮುಗುಳು ನಕ್ಕ. ನಿರಾಶೆಗೊಂಡು ಎದ್ದು ನಿಂತ ರಾಮರೆಡ್ಡಿ -

"ಚೆನ್ನಾಗಿ ಯೋಚಿಸಿ ತೀರ್ಮಾನ ತೆಗೆದುಕೊಳ್ಳಿ.... ನಿಮಗಾಗಿ ನನ್ನ ಬಾಗಿಲು ಯಾವಾಗಲು ತೆರೆದೆ ಇರುತ್ತದೆ. ಇನ್ನು ನಾನು ಬರುತ್ತೇನೆ" ಎಂದೇಳಿ ಬಂದಿದ್ದವರ ಜೊತೆಗೆ ಕಾರಿನಲ್ಲಿ ಕುಳಿತು ಹೊರಟು ಹೋದ. ಈ ಬಾಬು

ನನಗೆ ಸಹಾಯ ಮಾಡದೆ ಹೋದರೆ ಹೋಗಲಿ ಸುಮ್ಮನೆ ತಟಸ್ಥನಾಗಿದ್ದರೆ ಸಾಕು. ಬೇರೆ ಯಾರಿಗಾದರು ಸಹಾಯ ಮಾಡಿದರೆ ನನ್ನ ಗತಿ ಮುಗಿದೆ ಹೋಗುತ್ತದೆ ಎನ್ನುವ ಯೋಚನೆ ಬಂದಿತು. ಹಿಂದೆಯೇ ಚಿರಂಜೀವಿ ಯಾರಿಗೂ ಸಹಾಯ ಮಾಡುವುದಿಲ್ಲ ಎನ್ನುವ ಧೈರ್ಯವು ಮೂಡಿತು.

* * *

ಸಕಟಾಪುರದ ವಿಶ್ರಾಂತಿ ಗೃಹದಲ್ಲಿದ್ದ ರಾಮರೆಡ್ಡಿಯ ಹತ್ತಿರಕ್ಕೆ ಮಧ್ಯ ವಯಸ್ಸಿನ ನಾಗರಿಕರೊಬ್ಬರು ತನ್ನ ಮಗಳನ್ನು ಕರೆದುಕೊಂಡು ಬಂದರು. ಆ ಹೆಣ್ಣಿಗೆ ರಾಜ್ಯ ಸರಕಾರದ ಇಲಾಖೆಯಲ್ಲಿ ಸಂದರ್ಶನ ಪತ್ರ ಬಂದಿದ್ದು ಆ ಉದ್ಯೋಗವನ್ನು ಹೇಗಾದರೂ ಮಾಡಿ ತನ್ನ ಮಗಳಿಗೆ ಕೊಡಿಸುವಂತೆ ರಾಮರೆಡ್ಡಿಯಲ್ಲಿ ವಿನಂತಿಸಿಕೊಂಡರು. ಸುಂದರವಾಗಿದ್ದ ಹೆಣ್ಣನ್ನು ನೋಡಿದ ರಾಮರೆಡ್ಡಿಯ ಬಾಯಲ್ಲಿ ನೀರೂರಿ-

"ಏನಮ್ಮ ನಿನ್ನ ಹೆಸರು...?" ಕೇಳಿದ.

"ಲಕ್ಷ್ಮಿ "ಹುಡುಗಿ ಹೇಳಿದಳು. ಕೆಲಸದ ಬಗ್ಗೆ ವಿವರವಾಗಿ ಮಾತನಾಡಲು ಸಾಯಂಕಾಲ ಮತ್ತೆ ಬರುವಂತೆ ತಿಳಿಸಿದ.

ಸಾಯಂಕಾಲ ಅವರು ಮತ್ತೆ ಹಾಜರಾದರು. ಹುಡುಗಿ ನೋಡಲು ಚನ್ನಾಗಿದ್ದಾಳೆ. ಆಗಲೆ ಬಂದು ಪೆಗ್ಗು ಏರಿಸಿಕೊಂಡಿದ್ದ ರಾಮರೆಡ್ಡಿ ಮಾದಕ ಕಣ್ಣುಗಳಲ್ಲಿ ಅವಳ ಕಡೆಗೆ ನೋಡಿದ. ಹುಡುಗಿಯ ತಂದೆ ತನ್ನ ಮಗಳಿಗೆ ಹೇಗಾದರೂ ಮಾಡಿ ಕೆಲಸ ಕೊಡಿಸುವಂತೆ ಮತ್ತೆ ಮತ್ತೆ ವಿನಂತಿಸಿಕೊಳ್ಳುತ್ತಿದ್ದ.

"ಕೆಲಸವೇನೋ ಕೊಡಿಸಬಹುದು...? ಆದರೆ ನಿಮ್ಮ ಮಗಳು ಹೈದ್ರಾಬಾದಿಗೆ ಬರಬೇಕಾಗುತ್ತಲ್ಲ" ಎಂದು ಕೊಕ್ಕೆಯಾಕಿದ. ಅನಂತರ ಸ್ವಲ್ಪ ಹೊತ್ತು ಯೋಚಿಸಿ "ನಾನು ನೇರವಾಗಿ ಇಲಾಖಾ ಅಧಿಕಾರಿಗಳ ಹತ್ತಿರಕ್ಕೆ ಕರೆದುಕೊಂಡೋಗಿ ಕೆಲಸ ಕೊಡಿಸುತ್ತೇನೆ. ನಾನು ಹೋಗುವ ದಿನ ನಿಮ್ಮ ಮಗಳನ್ನು ನನ್ನ ಜೊತೆಗೆ ಕಳಿಸಿಕೊಡಿ" ಎಂದ. ಹುಡುಗಿಯ ತಂದೆ ಸ್ವಲ್ಪ ಗಾಬರಿಯಾಗಿ ಜೊತೆಯಲ್ಲಿ ನಾನು ಬರುತ್ತೇನೆ ಎಂದ.

"ನೀನ್ಯಾಕೆ ಹಣ ಖರ್ಚು ಮಾಡಿಕೊಂಡು ಬರ್ತೀಯ...? ಒಬ್ಬಳೇ ಬಂದರೆ ಕಾರಿನಲ್ಲಿ ಕರೆದುಕೊಂಡೋಗಿ ಹಿಂದಕ್ಕೆ ಕಳಿಸಿಬಿಡ್ತೀನಿ" ಎಂದ.

ಹಗಲು ರಾತ್ರಿ ಯೋಚಿಸಿದ ಹುಡುಗಿಯ ತಂದೆ ತನ್ನ ಮಗಳನ್ನು ಅಂತಿಮವಾಗಿ ಒಂದು ದಿನ ರಾಮರೆಡ್ಡಿಯ ಜೊತೆಗೆ ಹೈದ್ರಾಬಾದಿಗೆ ಕಳುಹಿಸಿಕೊಟ್ಟ.

೧೧

ಲಕ್ಷ್ಮಿ ಸರಕಾರದ ಕೆಲಸ ದೊರಕುತ್ತದೆಂದು ಧೈರ್ಯ ಮಾಡಿ ರಾಮರೆಡ್ಡಿಯ ಜೊತೆಗೆ ಒಂಟಿಯಾಗಿ ಹೊರಟಳು. ಕಾರಿನಲ್ಲಿ ರಾಮರೆಡ್ಡಿಯ ಜೊತೆಗೆ ಯಾರೂ ಇರಲಿಲ್ಲ, ಚಾಲಕನನ್ನು ಬಿಟ್ಟರೆ. ಕಾರು ವೇಗವಾಗಿ ಚಲಿಸಿ ಹೈದ್ರಾಬಾದಿನ ಒಂದು ಬಂಗಲೆಯ ಮುಂದೆ ನಿಂತುಕೊಂಡಿತು.

ಕಾರಿನಲ್ಲಿ ಯಾವ ರೀತಿಯ ಸಾಹಸಗಳನ್ನು ತೋರಿಸದ ರಾಮರೆಡ್ಡಿ ಹುಡುಗಿಯನ್ನು ಒಂದು ಬಂಗಲೆಯಲ್ಲಿ ಕೂಡಾಕಿದ. ಅಲ್ಲಿ ಎಲ್ಲಾ ವ್ಯವಸ್ಥೆಗಳು ಇದ್ದವು. ಆದರೆ ಅದು ರಾಮರೆಡ್ಡಿಯ ಕುಟುಂಬವಿರುವ ಮನೆಯಂತೂ ಅಲ್ಲ ಎನ್ನವುದು ಕೆಲವೇ ನಿಮಿಷಗಳಲ್ಲಿ ಲಕ್ಷ್ಮಿಗೆ ತಿಳಿದುಹೋಯಿತು. ಮನೆಯಲ್ಲಿ ಒಂದು ಹೆಂಗಸು ಮತ್ತು ಒಬ್ಬ ಸೇವಕನಿದ್ದ. ಹುಡುಗಿಗೆ ಯಾವ ಕುಂದುಕೊರತೆ ಇಲ್ಲದಂತೆ ನೋಡಿಕೊಳ್ಳುವಂತೆ ಹೇಳಿ ಮತ್ತೆ ಬರುವುದಾಗಿ ರಾಮರೆಡ್ಡಿ ಹೊರಟುಹೋದ.

ಆ ಮನೆಯಲ್ಲಿದ್ದ ಹೆಂಗಸನ್ನು ಲಕ್ಷ್ಮಿ ಸಂಶಯ ತಡೆದುಕೊಳ್ಳಲಾಗದೆ

"ನೀವು ಶಾಸಕರಿಗೆ ಏನಾಗಬೇಕು...?" ಕೇಳಿದಳು.

"ನಾನು ಅವರ ಸಂಬಂಧಿ" ಹೆಂಗಸು ಹೇಳಿದಳು.

"ನಿಮ್ಮೆಸರು....?" ಲಕ್ಷ್ಮಿ ಕೇಳಿದಳು.

"ಸ್ನೇಹಲತಾ" ಹೆಂಗಸು ಉತ್ತರಿಸಿದಳು.

"ಶಾಸಕರಿಗೆ ಮದುವೆಯಾಗಿಲ್ಲವೆ....?" ಲಕ್ಷ್ಮಿ ಮತ್ತೆ ಕೇಳಿದಳು.

"ಆಗಿದೆ, ಅವರು ಬೇರೆ ಮನೆಯಲ್ಲಿದ್ದಾರೆ".... ಎಂದಳು. ಲಕ್ಷ್ಮಿ ಕೇಳಿದ ಇನ್ನಷ್ಟು ಪ್ರಶ್ನೆಗಳಿಗೆ ಸರಿಯಾದ ಉತ್ತರ ದೊರಕದೆ ಸುಮ್ಮನಾದಳು.

ಸ್ನೇಹಲತಾ ನಾನು ಶಾಸಕರ ಸಂಬಂಧಿ ಎಂದು ಹೇಳಿದ್ದರಿಂದ ಸ್ನೇಹಲತಾ ಮತ್ತು ರಾಮರೆಡ್ಡಿಯ ಮುಖಗಳಲ್ಲಿನ ಹೋಲಿಕೆಯನ್ನು ಮನಸ್ಸಿನಲ್ಲೆ ತಾಳೆಯಾಕಿ ನೋಡಿದಳು.

ರಾತ್ರಿ ಒಂಬತ್ತು ಗಂಟೆಗೆ ರಾಮರೆಡ್ಡಿ ಬಂದ. ಬಂದವನೆ ಲಕ್ಷ್ಮಿಯನ್ನು ಕರೆದು "ನಾಳೆ ಹತ್ತು ಗಂಟೆಗೆ ಬರುತ್ತೇನೆ... ಅಷ್ಟರಲ್ಲಿ ನೀನು ತಯಾರಾಗಿರುವುದು. ಸಂದರ್ಶನ ನಾಳಿದ್ದು ಇರುವುದರಿಂದ ನಾಳೇನೆ ಸಂದರ್ಶನ ಸಮಿತಿಯಲ್ಲಿರುವವರನ್ನು ಸಂಧಿಸಿ ಕೆಲಸ ಮಾಡಿಕೊಡುವಂತೆ ಹೇಳುತ್ತೇನೆ" ಎಂದ. ಲಕ್ಷ್ಮಿ ಸ್ವಲ್ಪ ದೂರದಲ್ಲಿ ನಿಂತುಕೊಂಡೆ ಇದ್ದಳು. ರಾಮರೆಡ್ಡಿ ಲಕ್ಷ್ಮಿಯನ್ನು ಹತ್ತಿರದಲ್ಲಿ ಕುಳಿತುಕೊಳ್ಳುವಂತೆ ತಿಳಿಸಿದ. ಲಕ್ಷ್ಮಿ ಕುಳಿತುಕೊಳ್ಳಲಿಲ್ಲ.

"ನೋಡು ಲಕ್ಷ್ಮಿ, ನಾನೂ ಒಬ್ಬ ಮನುಷ್ಯ. ಹಸಿವು, ದಾಹ, ಆಯಾಸ, ಕೋಪ, ತಾಪ ಎಲ್ಲಾ ಇರುತ್ತದೆ. ಅಧಿಕಾರ, ಗೌರವ ಇದೆ ಅಷ್ಟೇ. ಜನರು ನನ್ನ ಜತೆ ಕುಳಿತುಕೊಳ್ಳಬಾರದು, ಮಾತನಾಡಬಾರದು ಅಂತ ಇದೆಯೇ....?" ಬಾ ಕುಳಿತುಕೊ... ಎಂದ.

ಈ ರೀತಿಯ ಮಾತುಗಳನ್ನು ಕೇಳಿದ ಲಕ್ಷ್ಮಿ ಸ್ವಲ್ಪ ಕಂಗಾಲಾದಂತೆ ಸುತ್ತಲು ನೋಡಿದಳು. ಆ ಮನೆಯಲ್ಲಿದ್ದ ಹೆಂಗಸು ಪಕ್ಕದಲ್ಲಿ ಕುಳಿತುಕೊಂಡಿದ್ದರಿಂದ ಲಕ್ಷ್ಮಿಗೆ ಸ್ವಲ್ಪ ಧೈರ್ಯ ಬಂದಿತು. ಸ್ವಲ್ಪ ಹತ್ತಿರಕ್ಕೆ ಬಂದು ಕುಳಿತುಕೊಂಡಳು.

"ನೋಡು ಲಕ್ಷ್ಮಿ, ನೀನೇನು ಯೋಚನೆ ಮಾಡಬೇಡ ನಿನ್ನ ಕೆಲಸ ಆಯಿತು ಅಂದುಕೊ.... ನನ್ನ ಮಾತು ಯಾರೂ ಮೀರೂವುದಿಲ್ಲ ಹೈದರಾಬಾದಿನಲ್ಲಿ...." ರಾಮರೆಡ್ಡಿ ಹೀಗೆ ಹೇಳುತ್ತಿರುವಂತೆ ಮನೆ ಆಳು ಪಕ್ಕದಲ್ಲಿದ್ದ ಮೇಜಿನ ಮೇಲೆ ರಾತ್ರಿಯ ಊಟವನ್ನು ಅಣಿ ಮಾಡುತ್ತಿದ್ದ. ಸ್ನೇಹಲತಾ ಕೆನ್ನೆಯ ಮೇಲೆ ಕೈಯಿಟ್ಟುಕೊಂಡು ರಾಮರೆಡ್ಡಿ ಮತ್ತು ಲಕ್ಷ್ಮಿಯನ್ನು ನೋಡುತ್ತಿದ್ದಳು.

ಎದ್ದು ನಿಂತ ರಾಮರೆಡ್ಡಿ ಹಾಲಿನಿಂದ ಕೊಠಡಿಯ ಒಳಕ್ಕೆ ಹೋದ. ಹೋದವನು ಅರ್ಧ ಗಂಟೆಯಾದರು ಕೊಠಡಿಯಿಂದ ಹೊರಕ್ಕೆ ಬರಲಿಲ್ಲ. ಸ್ನೇಹಲತಾ ಕೂಡ ರಾಮರೆಡ್ಡಿ ಹಿಂದೆ ಕೊಠಡಿ ಸೇರಿಕೊಂಡಿದ್ದಳು. ಇದರ ನಡುವೆ ಆಳು ನಾಲ್ಕಾರು ಸಲ ಕೊಠಡಿ ಒಳಕ್ಕೆ ಹೋಗಿ ಬಂದಿದ್ದ ಲಕ್ಷ್ಮಿ ಇದನ್ನೆಲ್ಲ ಗಮನಿಸುತ್ತಲೆ ಇದ್ದು ಅವಳಿಗೆ ಸಣ್ಣದಾಗಿ ನಡುಕ ಶುರುವಾಗಿತ್ತು.

ಸುಮಾರು ಸಮಯವಾದ ಮೇಲೆ ರಾಮರೆಡ್ಡಿ ಮತ್ತು ಸ್ನೇಹಲತಾ ಕೊಠಡಿಯಿಂದ ಹೊರಕ್ಕೆ ಬಂದರು. ಪ್ರಸ್ತುತ, ಅವರ ನಡೆ ನುಡಿಯಲ್ಲಿ ಅಷ್ಟೇನು ವ್ಯಾತ್ಯಾಸ ಕಾಣದಿದ್ದರು ಅವರ ನಡುವಿನ ಸಂಬಂಧ ಯಾವ ರೀತಿಯದ್ದು ಎನ್ನುವ ಗುಮಾನಿಯಲ್ಲಿ ಲಕ್ಷ್ಮಿ ಸಿಲುಕಿಕೊಂಡಳು.

ರಾಮರೆಡ್ಡಿ, ಲಕ್ಷ್ಮಿಯನ್ನು ಊಟ ಮಾಡಲು ಡೈನಿಂಗ್ ಟೇಬಲ್ ಮುಂದೆ ಕುಳಿತು ಕೊಳ್ಳಲು ಆಹ್ವಾನಿಸಿದಾಗ ಲಕ್ಷ್ಮಿ, ಹಿಂದೆ ಮುಂದೆ ನೋಡುತ್ತಾ ಬೇರೆ ದಾರಿ ಕಾಣದೆ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದಂತೆ.

"ಈ ಕಾಲದ ಹೆಣ್ಣು ಇಷ್ಟು ಸಂಕೋಚ ಪಟ್ಟುಕೊಂಡರೆ ಹೇಗೆ.....? ಹೈದರಾಬಾದ್ ಹೆಣ್ಣುಗಳನ್ನು ನೀನು ಇನ್ನು ನೋಡಿಲ್ಲ.... ಒಂದು ಆರು ತಿಂಗಳು ಕಾಲ ಹೈದರಾಬಾದಿನಲ್ಲಿದ್ದರೆ ಸಾಕು ಎಲ್ಲವೂ ಸರಿಹೋಗುತ್ತದೆ" ಎಂದ ರಾಮರೆಡ್ಡಿ, ಕುಲುಕುಲು ನಕ್ಕ. ಸ್ನೇಹಲತಾ, ಲಕ್ಷ್ಮಿಯ ಕಡೆಗೆ ವಿಚಿತ್ರವಾಗಿ ನೋಡಿದಳು. ಲಕ್ಷ್ಮಿ ಕುರ್ಚಿಯಲ್ಲಿ ಮುದುರಿ ಕುಳಿತುಕೊಂಡಳು. ಅವಳಿಗೆ ಎಲ್ಲವೂ ಹೊಸದಾಗಿ, ವಿಚಿತ್ರವಾಗಿ ತೋರುತ್ತಿತ್ತು. ಜೊತೆಗೆ ಯಾವುದೋ ಹೊಸ ರೀತಿಯ ಘಾಟು ವಾಸನೆ ಬರತೊಡಗಿತು. ಇಬ್ಬರೂ ಚನ್ನಾಗಿ ಕುಡಿದಿರಬೇಕು ಎಂದುಕೊಂಡಳು ಲಕ್ಷ್ಮಿ.

ಆಳು, ಮೂವರಿಗೂ ತಟ್ಟೆಗಳನ್ನು ಹಾಕಿ ಊಟ ಬಡಿಸತೊಡಗಿದ. ಅವನು ಬಡಿಸಿದ ಯಾವ ಭಕ್ಷ್ಯದ ಹೆಸರು ಗೊತ್ತಿಲ್ಲದ ಲಕ್ಷ್ಮಿಗೆ ಮಾಂಸ, ರೊಟ್ಟಿ, ಅನ್ನ ಫಲ್ಯಗಳು ಎನ್ನುವುದು ಮಾತ್ರ ಗೊತ್ತಾಯಿತು. ಇದೆಲ್ಲವನ್ನು ಇವರು ದಿನಾಗಲು ತಿನ್ನುತ್ತಾರೆಯೇ.....? ಎಂದು ಆಶ್ಚರ್ಯಪಟ್ಟುಕೊಂಡಳು. ಈ ರೀತಿಯ ಭಕ್ಷ್ಯಗಳನ್ನು ಅವಳು ಎಂದೂ ನೋಡಿಲ್ಲ. ತಿಂದಿರಲೂ ಇಲ್ಲ. ತನ್ನ ಹಳ್ಳಿಯಲ್ಲಿ ತಿನ್ನುವ ಗಂಜಿ ಅನ್ನ ಮತ್ತು ಗೊಜ್ಜಿನ ಜ್ಞಾಪಕ ಬಂದಿತು. ತನ್ನ ಕುಟುಂಬದವರು ಎಂದಾದರು ಒಂದು ದಿನ ಇಂತಹ ಊಟ ಮಾಡಲು ಸಾಧ್ಯವೆ....? ಎಂದುಕೊಂಡಳು.

"ಲಕ್ಷ್ಮಿ ಹೇಗಿದೆ ಊಟ.....? ನಿನ್ನನ್ನು ಕೆಲಸಕ್ಕೆ ಸೇರಿಸುತ್ತೇವೆ. ನಿನಗೆ ಏನು ಬೇಕೋ ಎಲ್ಲವನ್ನೂ ಮಾಡುತ್ತೇನೆ.... ಅದೇಕೋ ನಿನ್ನನ್ನು ನೋಡದ ತಕ್ಷಣವೆ ನಿನಗೇನಾದರೂ ಮಾಡಬೇಕು ಅನ್ನಿಸಿತು. ಈ ಹಳ್ಳಿ ಕೊಂಪೆಗಳಲ್ಲಿ ನಿನ್ನಂತ ಸುಂದರವಾದ ಬುದ್ಧಿಶಾಲಿ ಹೆಣ್ಣು ಮಕ್ಕಳು ಇರಬಾರದು"..... ಹೀಗೆ ರಾಮರೆಡ್ಡಿ ಏನೇನೋ ಬಡಬಡಿಸುತ್ತಿದ್ದಂತೆ ಲಕ್ಷ್ಮಿ ಗಾಬರಿಗೊಂಡಳು. ಒಂಟಿಯಾಗಿ ಇವನ ಜೊತೆಗೆ ಬರಬಾರದಿತ್ತು ಎಂದುಕೊಂಡಳು. ಬಡತನ ಎಲ್ಲಾ ರೀತಿಯ ದುಃಖಗಳಿಗೂ ದಾರಿಯಾಗುತ್ತದೆ ಎನ್ನುವ ವಿಚಾರ ಅವಳಿಗೆ ಸ್ವಲ್ಪ ಸ್ವಲ್ಪವಾಗಿ ಮನವರಿಕೆಯಾಗುತ್ತಿತ್ತು.

ಈಗ ರಾಮರೆಡ್ಡಿ ಸ್ವಲ್ಪ ಸುಧಾರಿಕೊಂಡವನಂತೆ ಮಾತನಾಡುತ್ತಿದ್ದ. ಅನಂತರ ಇದ್ದಕ್ಕಿದ್ದ ಹಾಗೆ -

"ನಾಳೆ ಬೆಳಗ್ಗೆ ಹತ್ತು ಗಂಟೆಗೆಲ್ಲ ತಯಾರಾಗಿರುವುದು" ಎಂದಿದ್ದೆ ಎದ್ದು ಹೊರಕ್ಕೆ ಹೊರಟುಹೋದ. ರಾಮರೆಡ್ಡಿ ಹೊರಕ್ಕೆ ಹೋಗಿದ್ದ ಲಕ್ಷ್ಮಿಗೆ ಒಂದು ಮಂಚವನ್ನು ತೋರಿಸಿ ಮಲಗಿಕೊಳ್ಳುವಂತೆ ತಿಳಿಸಿದ ಸ್ನೇಹಲತಾ ತಾನು ಇನ್ನೊಂದು ಕೋಣೆ ಸೇರಿಕೊಂಡಳು.

ಕೆಲಸದ ಆಳು ಊಟ ಮಾಡಿ, ಮೇಜು ಕುರ್ಚಿಗಳನ್ನು ಸರಿಮಾಡಿ ಮನೆಯಿಂದ ಹೊರಕ್ಕೆ ಹೊರಟುಹೋದ.

ಒಂಟಿಯಾಗಿ ಮಂಚದ ಮೇಲೆ ಮಲಗಿಕೊಂಡ ಲಕ್ಷ್ಮಿ ಡವಡವ ಒಡೆದುಕೊಳ್ಳುತ್ತಿರುವ ತನ್ನ ಎದೆಯ ಮೇಲೆ ಕೈಗಳನ್ನು ಇಟ್ಟುಕೊಂಡು ಕಣ್ಣು ಮುಚ್ಚಿ ನಿದ್ದೆ ಮಾಡಲು ಪ್ರಯತ್ನಿದಳು. ನಿದ್ದೆ ಮಾಡಲು ಎಷ್ಟೇ ಪ್ರಯತ್ನಿಸಿದರೂ ನಿದ್ದೆ ಮಾತ್ರ ಅವಳ ಹತ್ತಿರಕ್ಕೆ ಸುಳಿಯಲಿಲ್ಲ. ಮನೆಯ ಹೊರಗಿನ ಸದ್ದು ಅವಳನ್ನು ಬೆಚ್ಚಿ ಬೀಳಿಸುತ್ತಿತ್ತು.

ಈ ರಾಮರೆಡ್ಡಿ ಮತ್ತೆ ತಿರುಗಿ ಬಂದರೆ...? ಬಂದು ಬಲತ್ಕಾರ ಮಾಡಿದರೆ.....? ಈ ಸ್ನೇಹಲತಾ ನಿಜವಾಗಿಯೂ ಯಾರಿರಬಹುದು....? ರಾಮರೆಡ್ಡಿಯ ಸಂಬಂಧಿಯೇ....? ಅಥವಾ ಅವನ ಕಾಮಕ್ಕೆ, ಐಶ್ವರ್ಯಕ್ಕೆ ಬಲಿಯಾದ ನನ್ನಂತಹ ಒಂದು ಹೆಣ್ಣೇ....? ನಾಳೆ ಹೇಗಾದರೂ ಮಾಡಿ ಈ ನರಕದಿಂದ ಪಾರಾಗಿಬಿಟ್ಟರೆ ಸಾಕೆಂದು ಕಣ್ಣು ಮುಚ್ಚಿ ಮಲಗಿದಳು.

ನಿದ್ದೆಯಲ್ಲಿ ಯಾರೋ ಬಾಗಿಲು ಬಡಿದ ಸದ್ದಾಯಿತು. ಕತ್ತಲಿನ ಜೊತೆಗೆ ಉರುಳಾಡಿದ ಲಕ್ಷ್ಮಿ ದಢೀರನೆ ಮಂಚದ ಒಂದು ಮೂಲೆಯಲ್ಲಿ ಎದ್ದು ಕುಳಿತಳು. ಬಾಗಿಲು ಬಡಿಯುತ್ತಿರುವ ಸದ್ದು ಮತ್ತೆ ಮತ್ತೆ ಕೇಳುತ್ತಿದೆ. ಸ್ವಲ್ಪ ಸಮಯದ ನಂತರ ಬಾಗಿಲು ತೆಗೆದ ಸದ್ದು ಕೇಳಿಸಿತು.

ಈಗ ಲಕ್ಷ್ಮಿಯ ಕೋಣೆಯ ಒಳಗೆ ಗುಸು ಗುಸು ಮಾತು ಕೇಳಿಬರುತ್ತಿದ್ದು ವಿದ್ಯುತ್ ದೀಪ ಉರಿಯುತ್ತಿತ್ತು. ಬಿಳಿ ಪಂಚೆ ಮತ್ತು ಶರ್ಟ್‌ನ್ನು ಧರಿಸಿರುವ ರಾಮರೆಡ್ಡಿ ಲಕ್ಷ್ಮಿಯ ಪಕ್ಕಕ್ಕೆ ಬಂದು ಕುಳಿತುಕೊಂಡ. ಲಕ್ಷ್ಮಿ ಬೆದರಿದ ಹುಲ್ಲೆಯಂತೆ ಕಣ್ಣುಗಳ ತುಂಬಾ ಭಯವನ್ನು ತುಂಬಿಕೊಂಡು ಹಿಂದಕ್ಕೆ ಸರಿದಳು. ಕಣ್ಣುಗಳ ತುಂಬಾ ಕಾಮದ ಹೊಳೆಯನ್ನೇ ಹರಿಸುತ್ತಿರುವ ರಾಮರೆಡ್ಡಿ -

"ಲಕ್ಷ್ಮಿ ನಿನ್ನಷ್ಟು ಸುಂದರವಾದ ಹೆಣ್ಣು ನನ್ನಂತಹ ಐಶ್ವರ್ಯವಂತರ ಪತ್ನಿಯಾಗಿರಬೇಕು. ನಿನ್ನಂತಹ ಸುಂದರ ಹೆಣ್ಣುಗಳು ಕಷ್ಟ ಪಡಬಾರದು. ನನ್ನಿಂದ ನೋಡಲು ಆಗುವುದಿಲ್ಲ. ನಿನ್ನನ್ನು ಮದುವೆ ಮಾಡಿಕೊಂಡು ರಾಣಿಯಂತೆ ನೋಡಿಕೊಳ್ಳುತ್ತೇನೆ. ನಿನಗೆ ಎಷ್ಟು ಹಣ ಬೇಕೋ ಹೇಳು. ನಿನ್ನ ತಂದೆಗೆ ಬೇಕಾದಷ್ಟು ಹಣವನ್ನು ನೀನೇ ಕಳಿಸು" ಎಂದಿದ್ದೆ ಕೈಗಳನ್ನು ಚಾಚುತ್ತ ಲಕ್ಷ್ಮಿಯನ್ನು ತಬ್ಬಿಕೊಳ್ಳಲು ಮುಂದಕ್ಕೆ ಬಂದ.

ಲಕ್ಷ್ಮಿ, "ಇಲ್ಲ ನನ್ನನ್ನು ಬಿಟ್ಟುಬಿಡಿ.... ನಾನು ಅಂತಹ ಹೆಣ್ಣಲ್ಲ. ದಯವಿಟ್ಟು ನನ್ನನ್ನು ಏನೂ ಮಾಡಬೇಡಿ. ನಿಮ್ಮ ದಮ್ಮಯ್ಯ" ಎನ್ನುತ್ತಾ ಮೈತುಂಬಾ ಸೆರಗು ಮುಚ್ಚಿಕೊಂಡು ಬೇಡಿಕೊಂಡಳು. ರಾಮರೆಡ್ಡಿ ಇನ್ನಷ್ಟು ಆವೇಶದಿಂದ ಅವಳನ್ನು ತನ್ನ ಕೈಗಳ ಮಧ್ಯ ಸಲುಗಿಸಿಬಿಡಲು ಆತುರಗೊಂಡ. ನೀರವ ರಾತ್ರಿ, ಯಾವುದೋ ಪ್ರದೇಶ, ತನ್ನವರು ಯಾರೂ ಇಲ್ಲದ ಮನೆ. ಇನ್ನಷ್ಟು ಹತ್ತಿರಕ್ಕೆ ಬಂದ ರಾಮರೆಡ್ಡಿ ಲಕ್ಷ್ಮಿಯನ್ನು ತನ್ನ ಗಟ್ಟಿಯಾದ ಕೈಗಳಲ್ಲಿ ಹಿಡಿದುಕೊಂಡು ಎಳೆದಾಡಿದ. ಲಕ್ಷ್ಮಿ ಒಮ್ಮೆಲೆ ಜೋರಾಗಿ ಕಿರುಚಿಕೊಂಡಳು.

ಕಣ್ಣು ಬಿಟ್ಟು ಸುತ್ತಲೂ ನೋಡುತ್ತಾಳೆ.... ಯಾರೂ ಇಲ್ಲ. ಕಿಟಕಿಯಲ್ಲಿ ಅರೆ ಬೆಳಕು ಮೂಡಿದೆ. ಭಯಂಕರವಾದ ಕನಸು, ಮೈಯಲ್ಲಾ ಬೆವರಿದೆ. ಅಬ್ಬ, ಇಷ್ಟೊತ್ತು ಅನುಭವಿಸಿದ್ದು ಹಿಂಸೆ ನಿಜವಾದುದಲ್ಲ, ಕನಸು ಎಂದು ತಿಳಿದ ಮೇಲೆ ಸ್ವಲ್ಪ ನೀರು ಕುಡಿದು ಸುಧಾರಿಸಿಕೊಂಡಳು. ಲಕ್ಷ್ಮಿಗೆ ಈ ನರಕದಿಂದ ಹೊರಗೆ ಬಿದ್ದರೆ ಸಾಕೆನಿಸಿಬಿಟ್ಟಿತು. ಈ ದಿನ ರಾಮರೆಡ್ಡಿ ಬಂದ ಮೇಲೆ ಅವರ ಜೊತೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಿ ಬಂದು ಅನಂತರ ನೇರವಾಗಿ ಬಸ್ಸಿಡಿದು ತನ್ನ ಊರಿಗೆ ತಲುಪಿಬಿಡಬೇಕೆಂದುಕೊಂಡಳು. ಕೆಲಸದ ಆಳು ಸ್ನಾನ ಮಾಡಲು ನೀರಿಟ್ಟಿರುವುದಾಗಿ ತಿಳಿಸಿದ.

ಲಕ್ಷ್ಮೀ, ಸ್ನಾನದ ಕೊಠಡಿ ತಲುಪಿ ಸುತ್ತಲು ನೋಡಿದಳು. ಇಂತಹ ಒಂದು ಸ್ನಾನದ ಕೊಠಡಿಯನ್ನು ಅವಳು ತನ್ನ ಜೀವಮಾನದಲ್ಲಿಯೇ ನೋಡಿರಲಿಲ್ಲ. ಅಲ್ಲಿ ಏನೇನಿತ್ತೋ ಅವಳಿಗೆ ಒಂದೂ ಅರ್ಥವಾಗಲಿಲ್ಲ. ಒಂದು ಬಕೆಟ್‌ನಲ್ಲಿ ಮಾತ್ರ ಬಿಸಿ ನೀರಿದ್ದು ಅದಕ್ಕೆ ಇನ್ನಷ್ಟು ತಣ್ಣೀರನ್ನು ಬೆರಸಿ ಬಟ್ಟೆಗಳನ್ನು ಬಿಚ್ಚಿ ಹ್ಯಾಂಗರ್‌ಗೆ ತಗಲಾಕಿದಳು. ಲಕ್ಷ್ಮಿಗೆ ಮೊದಲ ಬಾರಿಗೆ ತನ್ನ ಇಡಿ ದೇಹವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವ ಅವಕಾಶ ಒದಗಿ ಬಂದಿತ್ತು. ಆದರೆ

ಲಂಗಾ ಬಿಚ್ಚಲು ಅವಳಿಂದ ಸಾಧ್ಯವಾಗಲಿಲ್ಲ. ಎದೆಗಳನ್ನು ಮಾತ್ರ ಕನ್ನಡಿಯಲ್ಲಿ ನೋಡಿಕೊಂಡಳು. ಸೊಗಸಾದ ಬಣ್ಣ, ಮುದ್ದು ಮುಖ, ಅವಳ ಮುಖ ಅವಳಿಗೆ ಬಹಳ ಅಂದವಾಗಿರುವಂತೆ ತೋರಿತು. ಈ ರಾಮರೆಡ್ಡಿ ಎಷ್ಟು ಹೆಣ್ಣುಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೋ ಏನೋ....? ನಾನು ಅವನ ಪತ್ನಿಯಾಗಿದ್ದರೆ ಹೇಗಿತ್ತು...? ಎನ್ನುವ ಯೋಚನೆ ಅರೆಕ್ಷಣ ಅವಳ ಮಿದುಳಿನಲ್ಲಿ ಮಿಂಚಿ ಮಾಯವಾಯಿತು. ಛೀಕಾಯಾಕಾದರು ಬೆಳಗ್ಗೆ ಇಂತಹ ಯೋಚನೆಗಳು ಬರುತ್ತಿವೆ....? ಎಂದುಕೊಂಡಳು. ಅನಂತರ ಬರುತ್ತಿದ್ದ ಯೋಚನೆಗಳನ್ನು ಅದಿಮಿಡುವಂತೆ ನೀರು ತೆಗೆದುಕೊಂಡು ತಲೆ ಮೇಲೆ ಸುರಿದುಕೊಂಡಳು.

ಸಮಯ ಹತ್ತು ಗಂಟೆಯಾಯಿತು. ರಾಮರೆಡ್ಡಿ ಇನ್ನೂ ಬಂದಿರಲಿಲ್ಲ. ಮನೆಯಲ್ಲಿದ್ದ ಸ್ನೇಹಲತಾ ನಿಧಾನವಾಗಿ ಸ್ನಾನ ಮಾಡಿ ಸುಮಾರು ಒಂದೂವರೆ ಗಂಟೆ ಸಮಯ ಗನ್ನಡಿ ಮುಂದೆ ನಿಂತುಕೊಂಡು ಶೃಂಗಾರ ಮಾಡಿಕೊಂಡಿದ್ದಳು. ಶೃಂಗಾರ ಮುಗಿದ ನಂತರ ದಿನ ಪತ್ರಿಕೆ ಒಂದನ್ನು ತೆಗೆದುಕೊಂಡು ಸೋಪಾದಲ್ಲಿ ಕುಳಿತುಕೊಂಡಳು.

ಮೇಜಿನ ಮೇಲೇ ಉಪಹಾರ ತಯಾರಾಗಿ ಕಾಯುತ್ತಿದೆ. ಲಕ್ಷ್ಮಿಯನ್ನು, ಸ್ನೇಹಲತಾ -

"ನೀನು ಬೇಕಾದರೆ ಉಪಾಹಾರ ತೆಗೆದುಕೋ ನಾನು ಆ ಮೇಲೆ ತಿನ್ನುತ್ತೇನೆ" ಎಂದು ಒಮ್ಮೆ ಹೇಳಿ ಸುಮ್ಮನಾಗಿದ್ದಳು. ಲಕ್ಷ್ಮಿ"ನೀವೂ ಬನ್ನಿ" ಎಂದು ಕರೆದಿದ್ದಳು. ಆದರೆ ಇಬ್ಬರೂ ತೆಗೆದುಕೊಳ್ಳದೆ ಹಾಗಿ ಕುಳಿತಿದ್ದರು.

ರಾಮರೆಡ್ಡಿ ಸುಮಾರು ಹತ್ತೂವರೆ ಗಂಟೆಗೆ ಬಾಗಿಲಿನಲ್ಲಿ ಕಾಣಿಸಿಕೊಂಡ. ಕೆಲಸದ ಆಳು ರಾಮರೆಡ್ಡಿಯನ್ನು ನೇರವಾಗಿ ಉಪಹಾರವಿದ್ದ ಮೇಜಿಗೆ ಆಹ್ವಾನಿಸಿದ ಮೇಲೆ ಲಕ್ಷ್ಮಿಯನ್ನು ಕರೆದ. ರಾಮರೆಡ್ಡಿ ಲಕ್ಷ್ಮಿಯನ್ನು ಕರೆದ. ರಾಮರೆಡ್ಡಿ ಲಕ್ಷ್ಮಿಯ ಅಸಲಿ ಸೋಗಸನ್ನು ನೋಡಿ ಸ್ವಲ್ಪ ಸೆಳೆತಗೊಂಡವನಂತೆ ಅವಳ ಮುಖವನ್ನೇ ನೋಡುತ್ತಾ ಇದ್ದುಬಿಟ್ಟ. ಲಕ್ಷ್ಮೀ, ಯಾವ ಕೃತಕ ಶೃಂಗಾರವು ಲೇಪಿಸಿಕೊಳ್ಳದೆ ಇದ್ದರು ಸೊಗಸಾಗಿ ಕಾಣುತ್ತಿದ್ದಳು. ಅವಳ ಮುಖವನ್ನೇ ನೋಡುತ್ತಾ-

"ಲಕ್ಷ್ಮಿ ಹೇಗಿದ್ದೀಯ...?" ನಿನಗೇನು ತೊಂದರೆಯಾಗಲಿಲ್ಲ ತಾನೇ....? ಇದು ನಿನ್ನ ಮನೆ ನೀನೇನು ನಾಚಿಕೆ ಪಟ್ಟುಕೊಳ್ಳಬೇಡ.....?

ಲಕ್ಷ್ಮಿಯನ್ನು ಮೆಚ್ಚಿಸಲು ಹೀಗೆ ಏನೇನೊ ಹೇಳತೊಡಗಿದ.

ರಾಮರೆಡ್ಡಿಯ ಎದುರಿಗೆ ಕುಳಿತಿದ್ದ ಸ್ನೇಹಲತಾಳ ಮುಖ ತುಸು ಗುಂಟಕ್ಕಿ ಕೊಂಡಂತಾಗಿದ್ದನ್ನು ಗಮನಿಸಿದ ರಾಮರೆಡ್ಡಿ ಕೆಲವು ಕ್ಷಣಗಳು ಸುಮ್ಮನಾದ. ಮೇಜಿನ ಮುಂದೆ ಕುಳಿತಿದ್ದ ರಾಮರೆಡ್ಡಿ ಉಪಾಹಾರವನ್ನು ಹೆಸರಿಗೆ ಮಾತ್ರ ತಿನ್ನುತ್ತಿದ್ದ. ಎಲ್ಲರೂ ಉಪಾಹಾರ ಮುಗಿಸಿ ಮೇಜಿನ ಮುಂದಿನಿಂದ ಎದ್ದರು.

ಈಗ ರಾಮರೆಡ್ಡಿಯ ಕಾರು ಲಕ್ಷ್ಮಿಯನ್ನು ಹೊತ್ತುಕೊಂಡು ಯಾವುದೋ ಅರಿಯದ ರಸ್ತೆಗಳಲ್ಲಿ ಚಲಿಸುತ್ತಿತ್ತು. ಚಾಲಕ ಒಂದು ದೊಡ್ಡ ಕಟ್ಟಡದ ಮುಂದೆ ಕಾರು ನಿಲ್ಲಿಸಿದ. ಚಾಲಕನಿಗೆ ಏನೋ ಹೇಳಿದ ರಾಮರೆಡ್ಡಿ ಲಕ್ಷ್ಮಿಯನ್ನು ಒಂದು ಬಹುಮಡಿಯ ಕಟ್ಟಡದ ಒಳಕ್ಕೆ ಕರೆದೊಯ್ದ. ಅಲ್ಲಿದ್ದ ಲಿಫ್ಟಿನಲ್ಲಿ ಯಾವುದೋ ಅಂತಸ್ತಿಗೆ ಕರೆದುಕೊಂಡೋದ. ಲಕ್ಷ್ಮಿಗೆ ಎಲ್ಲವೂ ಹೊಸ ಲೋಕದಂತಿತ್ತು.

ಈಗ ಇಬ್ಬರೂ ಒಂದು ಹವಾ ನಿಯಂತ್ರಣ ಕೊಠಡಿಯಲ್ಲಿ ಕುಳಿತಿದ್ದಾರೆ. ರಾಮರೆಡ್ಡಿ ಇಲ್ಲಿಗೆ ತನ್ನನ್ನು ಏಕೆ ಕರೆದುಕೊಂಡು ಬಂದ ಎನ್ನುವ ವಿಚಾರ ಇನ್ನೂ ಅವಳಿಗೆ ಹೊಳೆಯಲಿಲ್ಲ. ಲಕ್ಷ್ಮಿ ಅವನನ್ನು ಕೇಳಲು ಎಷ್ಟೇ ಧೈರ್ಯ ತಂದುಕೊಂಡರು ಕೇಳಲಾಗಲಿಲ್ಲ. ಇದರ ನಡುವೆ ರಾಮರೆಡ್ಡಿಯೇ ನಾಲ್ಕಾರು ಸಲ -

"ಲಕ್ಷ್ಮೀ ನೀನೇನೂ ಗಾಬರಿಯಾಗಬೇಡ" ಎಂದು ಧೈರ್ಯ ಹೇಳುತ್ತಾ ಎರಡು ಮೂರು ಸಲ ಅವಳ ಕೈಗಳಿಗೆ ಮತ್ತು ದೇಹಕ್ಕೆ ತನ್ನ ಕೈಗಳನ್ನು ದೇಹವನ್ನು ಸೋಕಿಸಿದ್ದಾನೆ. ಸಾಲದ್ದಕ್ಕೆ ಈಗ ಮೈಯಿಗೆ ಮೈಯಿ ಒತ್ತಿಸಿಕೊಂಡು ಕುಳಿತಿದ್ದಾನೆ. ಲಕ್ಷ್ಮಿಗೆ ಇಲ್ಲಿಂದ ಎದ್ದು ಓಡಬಿಡಬೇಕು. ಇಲ್ಲ, ಜೋರಾಗಿ ಕೂಗಿಕೊಳ್ಳಬೇಕು ಎನ್ನುವ ಆಲೋಚನೆ ಬರುತ್ತಿದೆ. ಜೊತೆಗೆ ಮೊದಲ ಬಾರಿಗೆ ಒಂದು ಹೊಸ ಲೋಕದಲ್ಲಿ ವಿಹರಿಸುತ್ತಿರುವ ಅನುಭವವೂ ಆಗುತ್ತಿದೆ.

ವೇಟರ್ ಬಂದಿದ್ದ ಮೆನು ಕಾರ್ಡ್ ಕೈಗೆ ಕೊಟ್ಟು ಪಕ್ಕದಲ್ಲಿ ನಿಂತ. ಎರಡು ಸ್ಪೆಷಲ್ ಜ್ಯೂಸ್‌ಗಳನ್ನು ತರುವಂತೆ ರಾಮರೆಡ್ಡಿ ಹೇಳಿದ. ವೇಟರ್ ಹೊರಟುಹೋದ. ಇಬ್ಬರು ಮಾತ್ರ ಕುಳಿತುಕೊಳ್ಳುವಂತಿದ್ದ ಕ್ಯಾಬಿನ್ ಅದು. ಈಗ ರಾಮರೆಡ್ಡಿ ಏನೋ ನಿರ್ಧಾರ ತೆಗೆದುಕೊಂಡವನಂತೆ ಲಕ್ಷ್ಮಿಯ ಕೈ ಮೇಲೆ

ತನ್ನ ಬಲಗೈಯನ್ನಿಟ್ಟ. ಲಕ್ಷ್ಮಿ ಸರಕ್ಕನೆ ಹಿಂದಕ್ಕೆ ತೆಗೆದುಕೊಂಡಳು. ಸಣ್ಣದಾಗಿ ನಕ್ಕ ರಾಮರೆಡ್ಡಿ.

"ಲಕ್ಷ್ಮಿ ನಾನೇನು ಮಾಡುವುದಿಲ್ಲ.... ನೀನೇನೂ ಗಾಬರಿಯಾಗಬೇಡ. ನೀನು ಬಹಳ ಸುಂದರವಾಗಿದ್ದೀಯ... ನಿನ್ನ ಸೌಂದರ್ಯವನ್ನು ನೋಡುತ್ತಾ ಸುಮ್ಮನೆ ಕುಳಿತುಕೊಳ್ಳಲು ನನ್ನಿಂದ ಆಗಲಿಲ್ಲ. ನೀನು ಒಪ್ಪಿದರೆ ನಾನು, ನಿನ್ನನ್ನು ಮದುವೆಯಾಗ್ತೀನಿ. ಹೂವುಗಳಲ್ಲಿಟ್ಟು ಕಾಪಾಡ್ತೀನಿ. ನಾನು ತಮಾಷೆ ಮಾಡ್ತಿಲ್ಲ. ಪ್ಲೀಸ್.... ಲಕ್ಷ್ಮಿ..... ಲಕ್ಷ್ಮಿ" ಎಂದು ಅಂಗಲಾಚಿದ.

ಲಕ್ಷ್ಮೀಗೆ ಏನು ಹೇಳಲು ತೋಚಲಿಲ್ಲ. ಶಾಕ್ ಹೊಡೆಸಿಕೊಂಡವಳಂತೆ ಹಾಗೆ ಇದ್ದುಬಿಟ್ಟಳು. ಅವಳಿಗೂ, ಅವನಿಗೂ ಕನಿಷ್ಠ ಇಪ್ಪತ್ತು ವರ್ಷಗಳ ಅಂತರವಾದರೂ ಇತ್ತು. ಲಕ್ಷ್ಮಿ ಕೆಲವು ಕ್ಷಣಗಳಾದ ಮೇಲ ಸಾವರಿಸಿಕೊಂಡು "ದಯವಿಟ್ಟು ನನ್ನನ್ನು ಬಿಟ್ಟುಬಿಡಿ. ನನಗೆ ಕೆಲಸವೂ ಬೇಡ... ಏನೂ ಬೇಡ ನನ್ನನ್ನು ನಮ್ಮ ಊರಿಗೆ ಕಳಿಸಿಬಿಡಿ" ಎಂದಿದ್ದೆ ಎದ್ದು ನಿಂತಳು.

ರಾಮರೆಡ್ಡಿ ಈಗ ಶಾಕ್ ಹೊಡೆಸಿಕೊಂಡವನಂತೆ.

"ಲಕ್ಷ್ಮಿ ನನ್ನನ್ನು ಕ್ಷಮಿಸು... ನಿನಗೆ ಇಷ್ಟವಿಲ್ಲದಿದ್ದರೆ ಬೇಡ ನಿನ್ನನ್ನು ಹೇಗೆ ಕರೆದುಕೊಂಡು ಬಂದೆನೊ ಹಾಗೆ ಕಳಿಸಿಕೊಡ್ತೀನಿ... ಕೆಲಸಾನೂ ಕೊಡಿಸ್ತೀನಿ...." ಎಂದೇಳಿ, ಸಭ್ಯನಾಗಿಬಿಟ್ಟ.

ಲಕ್ಷ್ಮಿ ಬಲೆಯಲ್ಲಿ ಸಿಕ್ಕಿಕೊಂಡ ಮೊಲದಂತೆ ಮತ್ತೆ ಮುದುರಿಕೊಂಡಳು. ರಾಮರೆಡ್ಡಿ, ಲಕ್ಷ್ಮಿಯನ್ನು ಕರೆದುಕೊಂಡು ಹೊರಕ್ಕೆ ಬಂದ. ಕಾರು ಮತ್ತೆ ಚಲಿಸುತ್ತಾ ಹೋಗಿ ಯಾವುದೋ ಒಂದು ಕಛೇರಿಯ ಮುಂದೆ ನಿಂತುಕೊಂಡಿತು. ರಾಮರೆಡ್ಡಿ ಲಕ್ಷ್ಮಿಯನ್ನು ಒಳಕ್ಕೆ ಕರೆದುಕೊಂಡೋದ. ಕೋಣೆಯ ಒಳಗೆ ಒಂದು ದೊಡ್ಡ ಮೇಜಿನ ಮುಂದ ರಾಮರೆಡ್ಡಿಯ ಕಣ್ಣುಗಳನ್ನೇ ಹೊಂದಿದ್ದ ಒಬ್ಬ ಅಧಿಕಾರಿ ಕುಳಿತಿದ್ದ. ರಾಮರೆಡ್ಡಿ ಒಳಗೆ ಹೋಗಿದ್ದೆ ಎದ್ದು ನಿಂತ ಅಧಿಕಾರಿ ಕೈಕುಲಿಕಿ ಮುಗುಳು ನಗುತ್ತಾ ಬಂದ ವಿಷಯವನ್ನು ಕೇಳಿದ.

"ಈ ಹುಡುಗಿ ನನ್ನ ಕಾನ್ಸಿಟಯನ್ಸಿಗೆ ಸೇರಿದ ಹುಡುಗಿ, ಇವಳಿಗೆ ಈ ಕೆಲಸವನ್ನು ತಾವು ಕೊಡಿಸಬೇಕು" ಎಂದು ಸಂದರ್ಶನದ ಪತ್ರವನ್ನು ತೋರಿಸಿದ. ಲಕ್ಷ್ಮಿ ಕೈ ಜೋಡಿಸಿ ನಮಸ್ತೆ" ಎಂದಳು. ಅಧಿಕಾರಿ ಸಂದರ್ಶನ ಪತ್ರವನ್ನು ನೋಡಿ.

"ಆಯಿತು ಮಾಡಿಕೊಡೋಣ... ನೀವೇಳಿದ ಮೇಲೆ ಇನ್ನೇನಿದೆ.....?" ಎಂದ. ಲಕ್ಷ್ಮಿಗೆ ಒಳಗೊಳಗೆ ಖುಷಿಯಾಗಿ ಆನಂದ, ಅವಳ ಕಣ್ಣುಗಳ ಮೂಲಕ ಹೊರ ಹೊಮ್ಮುತ್ತಿತ್ತು.

ಮತ್ತೆ ಹೊರಕ್ಕೆ ಬಂದ ರಾಮರೆಡ್ಡಿ, ಲಕ್ಷ್ಮಿಯನ್ನು ಸಂದರ್ಶನ ನಡೆಯುವ ಸ್ಥಳಕ್ಕೆ ಕರೆದೊಯ್ದ. ಸಂದರ್ಶನ ಮುಗಿಯುವುದರೊಳಗೆ ಕಾರು ಮತ್ತೆ ಬರತ್ತದೆಂದು ಲಕ್ಷ್ಮಿಗೆ ತಿಳಿಸಿದ ರಾಮರೆಡ್ಡಿ ಚಾಲಕನನ್ನು ಕರೆದುಕೊಂಡು ಹೊರಕ್ಕೆ ನಡೆದ. ಕಾರು ನೇರವಾಗಿ ರಾಮರೆಡ್ಡಿಯ ಸ್ವಂತ ಮನೆ ಮುಂದೆ ನಿಂತುಕೊಂಡಿತು. ರಾಮರೆಡ್ಡಿ, ಲಕ್ಷ್ಮಿಯ ಸಂದರ್ಶನ ಮುಗಿದ ಮೇಲೆ ಅವಳನ್ನು ಮತ್ತೆ ಕರೆದುಕೊಂಡು ಬಂದು ಲಕ್ಷ್ಮಿ ಉಳಿದುಕೊಂಡಿದ್ದ ಮನೆಯಲ್ಲಿ ಬಿಡುವಂತೆ ತಿಳಿಸಿದ. ಕಾರು ಮತ್ತೆ ಲಕ್ಷ್ಮಿ ಇದ್ದ ಸ್ಥಳದಲ್ಲಿ ಬಂದು ನಿಂತುಕೊಂಡಿತು.

೧೨

ರಾತ್ರಿ ಒಂಬತ್ತು ಗಂಟೆ. ಲಕ್ಷ್ಮಿ, ಎರಡನೇ ರಾತ್ರಿಯನ್ನು ಆ ಮನೆಯಲ್ಲಿ ಕಳೆಯುತ್ತಿದ್ದಾಳೆ. ಮಧ್ಯಾಹ್ನ ಸಂದರ್ಶನ ಮುಗಿಸಿ ಬಂದಿದ್ದ ಲಕ್ಷ್ಮಿ ತನಗೆ ಖಂಡಿತವಾಗಿ ಕೆಲಸ ದೊರಕುತ್ತದೆ ಎಂಬ ಖುಷಿಯಲ್ಲಿ ತೇಲಿ ಹೋಗುತ್ತಿದ್ದಾಳೆ. ಆ ಖುಷಿಯನ್ನು ತನ್ನ ತಂದೆ, ತಾಯಿ, ಸ್ನೇಹಿತರು ಮತ್ತು ಊರಿನವರ ಜೊತೆಗೆ ಹಂಚಿಕೊಳ್ಳಲು ತುದಿಕಾಲಲ್ಲಿ ನಿಂತಿದ್ದಾಳೆ. ಈ ರಾತ್ರಿಯನ್ನು ಹೇಗಾದರೂ ಕಳೆದು, ನಾಳೆ ಊರು ಸೇರಿಕೊಂಡರೆ ಸಾಕೆಂದುಕೊಂಡು ಸಮಯವನ್ನು ಶಪಿಸುತ್ತಿದ್ದಾಳೆ.

ಸರಿಯಾಗಿ ಅದೇ ಸಮಯಕ್ಕೆ ಬಾಗಿಲಿನ ಗಂಟೆ ಮೊಳಗಿತು. ಓಡಿ ಬಂದ ಸೇವಕ ಬಾಗಿಲು ತೆಗೆದ. ರಾಮರೆಡ್ಡಿ ಒಳಗೆ ಬಂದು ಸೋಫಾದಲ್ಲಿ ಕುಳಿತುಕೊಂಡು "ಸ್ನೇಹಲತಾ" ಎಂದು ಕರೆದು ಸುತ್ತಲು ಒಮ್ಮೆ ಕಣ್ಣಾಯಿಸಿದ. ರಾಮರೆಡ್ಡಿಯ ಹತ್ತಿರಕ್ಕೆ ಸ್ನೇಹಲತಾ ವೈಯ್ಯಾರವಾಗಿ ನಡೆದು ಬಂದು ಅವನ ಮುಂದೆ ಕುಳಿತುಗೊಂಡಳು. ಲಕ್ಷ್ಮಿ ಇನ್ನೊಂದು ಕೊಠಡಿಯಿಂದ ಎಲ್ಲವನ್ನು ಗಮನಿಸುತ್ತಿದ್ದಾಳೆ. ಎದುರಿಗೆ ಕುಳಿತುಕೊಂಡ ಸ್ನೇಹಲತಾ, ರಾಮರೆಡಿಯನ್ನೇ ತಿನಿಯುವಂತೆ ನೋಡುತ್ತಿದ್ದಾಳೆ. ಇವಳು ನಿಜವಾಗಿಯೂ ರಾಮರೆಡ್ಡಿಯ

ಸಂಬಂಧಿಯೇ.....? ಅಥವಾ ಆಸೆಗಳನ್ನು ಪೂರೈಸಲು ಕಾದು ಕುಳಿತಿರುವ ಹೆಣ್ಣು ಬೊಂಬೆಯೇ....? ರಾಮರೆಡ್ಡಿ ಮತ್ತು ಇವಳ ನಡುವೆ ಯಾವ ರೀತಿಯ ಸಂಬಂಧ ಇರಬಹುದು? ಯಾರು, ಯಾರು ಬೀಸಿದ ಬಲೆಯಲ್ಲಿ ಸಿಕ್ಕಿಕೊಂಡಿರಬಹುದು....? ಎನ್ನುವ ಊಹೆಗಳ ಬಲೆಯಲ್ಲಿ ಸಿಕ್ಕಿಕೊಂಡ ಲಕ್ಷ್ಮಿ ಅವರಿಬ್ಬರ ಚಲನವಲನಗಳನ್ನು ಗಮನಿಸುತ್ತಿದ್ದಾಳೆ.

ಕೆಲಸದ ಆಳು ಮೇಜಿನ ಮೇಲೆ ರಾತ್ರಿಯ ಊಟಕ್ಕೆ ಅಣಿ ಮಾಡುತ್ತಿದ್ದಾನೆ. ಲಕ್ಷ್ಮಿ ಕೊಠಡಿಯ ಒಳಗಿಂದ ಎರಡು, ಮೂರು ಸಲ ಹೊರಕ್ಕೆ ಇಣಕ್ಕಿದ್ದನ್ನು ರಾಮರೆಡ್ಡಿ ನೋಡಿದ್ದಾನೆ. ಲಕ್ಷ್ಮಿ ಏನೂ ತೋಚದೆ ಹೊರಕ್ಕೆ ಬಂದಿದ್ದೆ.

"ಏನು ಲಕ್ಷ್ಮಿ ಸಂದರ್ಶನ ಹೇಗಿತ್ತು....?" ರಾಮರೆಡ್ಡಿ ಕೇಳಿದ.

"ಚೆನ್ನಾಗಿತ್ತು ಆದರೆ ನನ್ನನ್ನು ಅವರೇನು ಕೇಳಲಿಲ್ಲವಲ್ಲ...." ಎಂದಳು. ಜೋರಾಗಿ ನಕ್ಕ ರಾಮರೆಡ್ಡಿ. "ಕೇಳಲು ಅಲ್ಲೇನಿದೆ.....? ಎಲ್ಲವನ್ನು ಮೊದಲೆ ಮಾತನಾಡಿ ಆಗಿದೆಯಲ್ಲ. ನಿನಗೆ ಕೆಲಸವಂತು ಗ್ಯಾರಂಟಿ. ಇನ್ನೂ ನೀನು ಆರಾಮಾಗಿ ಊರಿಗೆ ಹೋಗಬಹುದು. ಅಪಾಯಿಂಟ್ ಮೆಂಟ್ ಹಿಂದೆಯೇ ಬರುತ್ತದೆ. ಹ್ಞಾ...ಇನ್ನೊಂದು ವಿಷಯ ನಿನಗೇನು ಅಭ್ಯಂತರ ಇಲ್ಲದಿದ್ದರೆ ಅಪಾಯಿಂಟ್ ಮೆಂಟ್ ದೊರಕುವವರೆಗೆ ಇಲ್ಲಿಯೇ ಇದ್ದುಬಿಡು. ಸ್ವಲ್ಪ ತಡವಾದರೆ ಬೇರೆ ಯಾವುದಾದರೂ ಕೆಲಸವನ್ನು ತಾತ್ಕಾಲಿಕವಾಗಿ ಕೊಡಿಸುತ್ತೇನೆ"" ಎಂದ.

ರಾಮರೆಡ್ಡಿ, ಮಧ್ಯಾಹ್ನ ಏನೂ ನಡೆದೆಯಿಲ್ಲ ಎನ್ನುವಷ್ಟು ಸರಳವಾಗಿ ಮಾತನಾಡುತ್ತಿದ್ದ. ಲಕ್ಷ್ಮಿ, ರಾಮರೆಡ್ಡಿಯ ಮಾತುಗಳನ್ನು ಕಡೆಗಣಿಸಲಾಗದೆ ಅವನ ಎದುರಿಗಿದ್ದ ಸೋಫಾದಲ್ಲಿ ಕುಳಿತುಕೊಂಡಳು. ಮೇಜಿನ ಮೇಲೆ ಎಲ್ಲವೂ ಅಣಿಯಾಗಿದೆ. ಸ್ನೇಹಲತಾ ಕೆಲಸದ ಆಳನ್ನು "ನೀನು ಮನೆಗೋಗು- ನಾವು ನಿಧಾನವಾಗಿ ಊಟ ಮಾಡುತ್ತೇವೆ" ಎಂದಳು. ಅವನು ಒಂದು ಕ್ಯಾರಿಯರ್ ತೆಗೆದುಕೊಂಡು ಹೊರಟು ಹೋದ. ರಾಮರೆಡ್ಡಿಯ ಮನೆಯಲ್ಲಿದ್ದ ಸ್ನೇಹಲತಾ ಅವನ ಸಂಬಂಧಿಯಲ್ಲ ಎನ್ನುವುದು ಲಕ್ಷ್ಮಿಗೆ ದೃಢವಾಯಿತು. ಕೆಲಸದ ಆಳು ನೆನ್ನೆಯ ರಾತ್ರಿಯಂತೆ ಮನೆಯಿಂದ ಹೊರಕ್ಕೆ ಹೋಗಿದ್ದು ಲಕ್ಷ್ಮಿಗೆ ಯಾವ ಸಂದೇಹವನ್ನು ಮೂಡಿಸದೇ ಹೋದರು, ರಾಮರೆಡ್ಡಿ ರಾತ್ರಿಗೆ ಇದೆ ಮನೆಯಲ್ಲೇ ಉಳಿದುಕೊಳ್ಳುವನೋ ಏನೋ ಎನ್ನುವ ಸಂದೇಹದಲ್ಲಿ ಸಿಲುಕಿಕೊಂಡಳು.

ಅಷ್ಟರಲ್ಲಿ ಸ್ನೇಹಲತಾ ಮೂರು ಗ್ಲಾಸುಗಳನ್ನು ಮೇಜಿನ ಮೇಲಿಟ್ಟು ಯಾವುದೋ ವಿಚಿತ್ರ ಆಕಾರದ ಬಾಟಲಿ ತೆಗೆದುಕೊಂಡು ಮೂರು ಗ್ಲಾಸುಗಳಿಗೂ ಸ್ವಲ್ಪ ಸ್ವಲ್ಪವಾಗಿ ಸುರಿದಳು. ಅನಂತರ ಸೋಡಾ ಸುರಿದು, ಒಂದು ಗ್ಲಾಸನ್ನು ರಾಮರೆಡ್ಡಿಯ ಕೈಗೆ ನೀಡಿ, ಇನ್ನೊಂದನ್ನು ತನ್ನ ಕೈಯಲ್ಲಿಡಿದುಕೊಂಡು ಮತ್ತೊಂದನ್ನು ಲಕ್ಷ್ಮಿಯ ಕೈಗೆ ನೀಡಲೋದಳು.

ಹೌಹಾರಿದ ಲಕ್ಷ್ಮೀ "ಇಲ್ಲ ನಾನು ಕುಡಿಯುವುದಿಲ್ಲ" ಎಂದು ಚೀರಿಕೊಂಡಳು.

"ಲಕ್ಷ್ಮಿ ಇದು ಬರಿ ನೀರು, ಅದರಲ್ಲಿ ಏನೂ ಇಲ್ಲ. ನಿನಗೋಸ್ಕರವೆ... ನಿನಗೆ ಕೆಲಸ ಸಿಕ್ಕಿದ್ದಕ್ಕಾಗಿ ನಾವು ಪಾರ್ಟಿ ಮಾಡ್ತಿರುವುದು. ನೀನೊಂದು ಗುಟುಕು ಕುಡಿಯಲೇ ಬೇಕು..... ಇದರಲ್ಲಿ ಏನೋ ಇಲ್ಲ.... ಏನೂ ಆಗುವುದಿಲ್ಲ" ರಾಮರೆಡ್ಡಿ ಹೇಳಿದ. ಎರಡು ದಿನಗಳಿಂದಲೂ ಮಾತನಾಡುವುದೇ ಗೊತ್ತಿಲ್ಲದಂತೆ ಕುಳಿತಿದ್ದ ಸ್ನೇಹಲತಾ ಇದ್ದಿಕ್ಕಿದ್ದಾಗೆ ಲವಲವಿಕೆಯಿಂದ ತೊನೆಯುತ್ತಾ ರಾಮರೆಡ್ಡಿಯ ಮುಂದೆ ಬಳುಕುತ್ತಾ, ಮಾತು ಮಾತಿಗೂ ನಗುತ್ತಾ ಸುತ್ತುತ್ತಿದ್ದಳು. ಮದು ಮತ್ತು ಮಾನಿನಿ ಗಂಡಸಿನ ಎರಡು ದೌರ್ಬಲ್ಯಗಳು. ಲಕ್ಷ್ಮಿ ಬೇಡವೆಂದು ಎಷ್ಟೇ ಕೊಸರಾಡಿದರು ಸ್ನೇಹಲತಾ, ಲಕ್ಷ್ಮಿಯ ಎರಡು ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರೆ ರಾಮರೆಡ್ಡಿ ನಗುತ್ತಾಲಕ್ಷ್ಮಿ ಬಾಯಿಗೆ ಸುರಿಯತೊಡಗಿದ. ಮೊದಲ ಬಾರಿಗೆ ಕಪಿಘಾಟಿನ ವಿಸ್ಕಿ ಲಕ್ಷ್ಮಿಯ ಗಂಟಲಿಗೆ ಇಳಿದು ಕರಕರನೆ ಎದೆಯ ಆಳಕ್ಕೆ ಹೊಕ್ಕಿತ್ತು.

ಲಕ್ಷ್ಮಿಗೆ ಏನು ಮಾಡಬೇಕೊ ಒಂದೂ ಅರ್ಥವಾಗದೆ ಕಿರುಚುವುದೇ ಅವಳ ಕಟ್ಟ ಕಡೆಯ ಬಂಡಾಯವಾಗಿತ್ತು. ರಾತ್ರಿ ಹತ್ತು ಗಂಟೆ, ದೊಡ್ಡ ಮನೆ, ಅವಳು ಕಿರಿಚಿದರೆ ಯಾರು ತಾನೇ ಓಡಿ ಬಂದು ಅವಳನ್ನು ಬಿಡುಗಡೆ ಮಾಡುವರು? ಲಕ್ಷ್ಮಿ ಒಳಗೊಳಗೆ ಕಿರುಚುತ್ತಾ ಸಣ್ಣದಾಗಿ ಅಳುತ್ತಿದ್ದಳು. ಅನಂತರ ಇನ್ನೊಂದು ಮತ್ತೊಂದು ಪೆಗ್ಗುಗಳು ಲಕ್ಷ್ಮಿಯ ಒಡಲು ಸೇರಿದ್ದೆ ಅವಳು ಈಗ ಲಕ್ಷ್ಮಿಯಾಗಿರಲಿಲ್ಲ. ಏನೋ ಖುಷಿ. ಏನೋ ಉಲ್ಲಾಸ. ಸ್ವರ್ಗದಲ್ಲಿ ತೇಲಿಹೋಗುತ್ತಿರುವ ಅನುಭವ. ಈಗ ಸ್ನೇಹಲತಾ ಮಗುವಿಗೆ ಹಾಲು ಕುಡಿಸಿದಂತೆ ಲಕ್ಷ್ಮಿಗೆ ವಿಸ್ಕಿಯನ್ನು ಕುಡಿಸುತ್ತಿದ್ದಳು. ಲಕ್ಷ್ಮಿ ಮಧ್ಯ ಮಧ್ಯ ಯಾವ ಯಾವ ಭಕ್ಷ್ಯಗಳನ್ನು ತಿಂದಳೊ....? ಏನೆಲ್ಲ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಳೊ....? ಅವಳಿಗೆ ಯಾವ ಅರಿವು ಇರಲಿಲ್ಲ.

ರಾಮರೆಡ್ಡಿ, ಲಕ್ಷ್ಮಿಯ ಒಂದೊಂದೆ ಉಡುಪನ್ನು ತೆಗೆದು ದೂರ ಬಿಸಾಕಿ ತಯಾರಾದ. ಸ್ನೇಹಲತಾ ಸಿಗರೇಟ್ ಹೊತ್ತಿಸಿಕೊಂಡು ನಿಧಾನವಾಗಿ ವಿಸ್ಕಿಯನ್ನು ಹೀರುತ್ತಾ ಸೋಫಾದ ಮೇಲೆ ಕುಳಿತುಕೊಂಡು ನೋಡುತ್ತಿದ್ದಳು. ರಾಮರೆಡ್ಡಿ, ಲಕ್ಷ್ಮಿಯ ಯವ್ವನವನ್ನು ಮೊದಲ ಬಾರಿಗೆ ಪೂರ್ಣವಾಗಿ ಸೂರೆಗೊಂಡು ಅಟ್ಟಹಾಸಗೈದ. ಅನಂತರ ಎಷ್ಟೋ ಹೊತ್ತಾದ ಮೇಲೆ ಸ್ನೇಹಲತಾಳ ಪಕ್ಕಕ್ಕೆ ಬಂದು ಕುಳಿತುಕೊಂಡ.

* * *

ಲಕ್ಷ್ಮಿ ನಿಧಾನವಾಗಿ ಕಣ್ಣುಗಳನ್ನು ಬಿಡಿಸಿ ಸುತ್ತಲು ನೋಡುತ್ತಾಳೆ. ಅವಳ ದೇಹ ಮಂಚದ ಮೇಲಿದೆ. ಅವಳು ಕಟ್ಟಿಕೊಂಡಿದ್ದ ಸೀರೆ ಅಸ್ತವ್ಯಸ್ತಗೊಂಡಿದ್ದರು, ನಡುವನ್ನು ಸುತ್ತಿಕೊಂಡಿದೆ. ಎದೆಗಳ ಕಡೆಗೆ ನೋಡಿಕೊಳ್ಳುತ್ತಾಳೆ. ಬ್ರಾ, ಕುಪ್ಪಸ ತೊಟ್ಟ ಹಾಗೆ ಇದೆ. ರಾತ್ರಿ ರಾಮರೆಡ್ಡಿ ಮತ್ತು ಸ್ನೇಹಲತಾ ಲಕ್ಷ್ಮಿಯನ್ನು ಹಿಡಿದುಕೊಂಡು ಬಲವಂತವಾಗಿ ಕುಡುಸಿದ್ದು... ಯಾವುದೊ ವಸ್ತು ಗಂಟಲಿನಲ್ಲಿ ಕರಕರನೆ ಇಳಿದುಹೋಗಿದ್ದು... ಜ್ಞಾಪಕವಿದೆ. ಆದರೆ ಅನಂತರ ನಡೆದ ಘಟನೆಗಳು ಮಾತ್ರ ಹಳೆ ಸಿನಿಮಾ ನೋಡಿದ ಅರೆಕೊರೆ ತುಣುಕು ಚಿತ್ರಣಗಳಂತೆ ಕಣ್ಣುಗಳ ಮುಂದೆ ಹಾದು ಹೋಗುತ್ತೇನೆ.

ಇಷ್ಟಕ್ಕೂ ರಾಮರೆಡ್ಡಿ ಏನು ಮಾಡಿರಬಹುದು....?ನಿಜವಾಗಿಯೂ ತನ್ನ ಶೀಲವನ್ನು ಕೆಡಿಸಿರಬಹುದೆ....? ತನ್ನ ದೇಹವನ್ನೆಲ್ಲ ಒಮ್ಮೆ ಮುಟ್ಟಿ ನೋಡಿಕೊಂಡಳು. ಮೈಯೆಲ್ಲಾ ನೋವಿನಿಂದ ನರಳುವಂತಹ ಅನುಭವ. ಒಳಗೊಳಗೆ ಚೀರಿಕೊಂಡಳು. ತನಗೆ ಅರಿವಿಲ್ಲದೆ ಕಣ್ಣೀರು ಹನಿಗೊಂಡಿತು. ಸುಮಾರು ಹೊತ್ತು ಅಳತೊಡಗಿದಳು. ಊರಿಗೆ ಹೋಗುವುದಕ್ಕೆ ಬದಲಾಗಿ ಎಲ್ಲಾದರೂ ಹೋಗಿ ಸಾಯುವುದೇ ವಾಸಿಯೆಂದುಕೊಂಡಳು. ಅವಳ ತಾಯಿ, ತಂದೆ, ತಂಗಿ ತಮ್ಮ ಎಲ್ಲರೂ ಜ್ಞಾಪಕಕ್ಕೆ ಬಂದು ಇನ್ನಷ್ಟು ದುಃಖಿಗೊಂಡು ಜೋರಾಗಿ ಅಳತೊಡಗಿದಳು.

ಲಕ್ಷ್ಮಿ. ಕೊನೆಗೆ ಊರಿಗೆ ಹೋಗುವುದಾಗಿ ನಿಶ್ಚಯಿಸಿಕೊಂಡು ಎದ್ದು ಮುಖ ತೊಳೆದುಕೊಂಡು ಯಾರಿಗೂ ಹೇಳದೆ ಮನೆಯಿಂದ ಹೊರಕ್ಕೆ ಬಂದುಬಿಟ್ಟಳು.

ಕೆಲಸದ ಆಳು ಅಡಿಗೆ ಮನೆಯಲ್ಲಿ ಏನೋ ಮಾಡುತ್ತಿದ್ದು, ಸ್ನೇಹಲತಾ ಮಂಚದ ಮೇಲೆ ಇನ್ನೂ ಮಲಗಿಯೇ ಇದ್ದಳು. ರಾಮರೆಡ್ಡಿ ಮನೆಯಲ್ಲಿ ಇರಲಿಲ್ಲ. ಲಕ್ಷ್ಮಿ ನೇರವಾಗಿ ಬಸ್ಸು ನಿಲ್ದಾಣಕ್ಕೆ ಹೋಗಿ ಅಲ್ಲಿಂದ ತನ್ನ ಊರಿನ ಕಡೆಗೆ ಹೋಗುವ ಬಸ್ಸಿನಲ್ಲಿ ಕುಳಿತುಕೊಂಡು ಬಿಟ್ಟಳು.

ಬಸ್ಸು ಅವಳನ್ನು ಊರು ತಲುಪಿಸಿತ್ತು. ಅವಳ ತಂದೆ, ತಾಯಿ ಅವಳನ್ನು ನೋಡಿದ್ದೆ ಹೃದಯ ಹೊಡೆದು ಹೋದವರಂತೆ ನೋಡುತ್ತಾ ಇದ್ದುಬಿಟ್ಟರು. ಸಾವರಿಸಿಕೊಂಡ ಲಕ್ಷ್ಮಿ ತನ್ನ ದುಃಖವನ್ನು ಮರೆಮಾಚಿಕೊಂಡು ಪ್ರಯಾಣ ಮಾಡಿ ಸುಸ್ತಾಗಿದೆ ಎಂದೇಳಿ, ತನಗೆ ಹತ್ತಿರದಲ್ಲೇ ಕೆಲಸ ದೊರಕುವುದಾಗಿ ತಿಳಿಸಿದಳು. ಅವಳ ತಾಯಿ, ತಂದೆ ದೂರದ ದೇಶಕ್ಕೆ ಹೋಗಿ ಬಂದಿದ್ದರಿಂದ ಅವಳ ಮುಖ ಬಾಡಿ ಹೋದಂತಾಗಿದೆ ಎಂದು ತಮಗೆ ತಾವೆ ಹೇಳಿಕೊಂಡು ಸಮಾಧಾನಪಟ್ಟರು.

ಎರಡು ತಿಂಗಳುಗಳಾದ ಮೇಲೆ ಲಕ್ಷ್ಮಿಯ ಹೆಸರಿಗೆ ಟಪಾಲಿನಲ್ಲಿ ಒಂದು ಪತ್ರ ಬಂದಿತು. ಅವಳು ಸಂದರ್ಶನಕ್ಕೆ ಹೋಗಿ ಬಂದ ಕೆಲಸ ಅವಳಿಗೆ ದೊರಕಿತ್ತು. ಕೆಲಸ ದೊರಕಿದ್ದರಿಂದ ಅವಳಿಗೆ ಖುಷಿಯಾಗುವ ಬದಲಿಗೆ ದುಃಖವಾಗಿತ್ತು. ಲಕ್ಷ್ಮಿ, ಹೈದರಾಬಾದಿಗೆ ಹೋಗಿ ಬಂದಾಗಿನಿಂದ ಅವಳ ದುಃಖ ಒಳಗೊಳಗೆ ಹೆಚ್ಚುತ್ತಾ ಹೋಗಿ ಅದು ಅವಳ ಹೊಟ್ಟೆಯಲ್ಲಿ ಗರ್ಭ ಕಟ್ಟಿಕೊಳ್ಳುತ್ತಿತ್ತು. ಅವಳ ಎರಡು ತಿಂಗಳುಗಳ ಸಂದೇಹ ಹೊಟ್ಟೆಯ ಒಳಕ್ಕೆ ಏನೂ ಸೇರದೆ ಹೋಗಿ ವಾಂತಿ ಮಾಡಿಕೊಳ್ಳುವಂತಾಗಿತ್ತು. ಇದೆಲ್ಲದರ ಕಾರಣದಿಂದ ಲಕ್ಷ್ಮಿ ತನಗೆ ಕೆಲಸ ದೊರಕಿರುವ ವಿಷಯವನ್ನು ಯಾರಿಗೂ ಹೇಳದೆ ತನ್ನ ಮನಸ್ಸಿನಲ್ಲೇ ಇಟ್ಟುಕೊಂಡಳು. ಕೆಲಸ ದೊರಕಿರುವ ಸಂತೋಷವನ್ನು ತನ್ನ ಪ್ರೀತಿಯ ತಂದೆ, ತಾಯಿಗೂ ಹೇಳಲಾರದಂತಹ ಪರಿಸ್ಥಿತಿ ಅವಳಿಗೆ ಒದಗಿತ್ತು.

ಇಡಿ ಪ್ರಪಂಚದಲ್ಲಿ ತಾನೆ ನತದೃಷ್ಟ ಹೆಣ್ಣು ಎನ್ನುವ ಅವಮಾನ, ದುಃಖ, ಕೋಪ ಎಲ್ಲವೂ ಒಟ್ಟುಗೂಡಿ ಎಲ್ಲಾ ರೀತಿಯಲ್ಲಿ ಅವಳು ಬಲಹೀನಗೊಂಡಿದ್ದಳು. ಬಸರಿಯಾಗುವುದಕ್ಕಿಂತ ಮುಂಚೆ ಜೀವಮಾನದಲ್ಲಿ ಅದೊಂದು ಕೆಟ್ಟ ಘಳಿಗೆ, ಮರೆತು ಬಿಡೋಣವೆಂದು ಧೈರ್ಯ ತಂದುಕೊಂಡಿದ್ದಳು. ಆದರೆ ತಾನು ಗರ್ಭ ಧರಿಸಿದ್ದೇನೆ ಎಂದು ತಿಳಿದ ಮೇಲೆ ಬದುಕುವ ಆಸೆಯನ್ನೇ ಪೂರ್ಣವಾಗಿ ತೊರೆದುಬಿಟ್ಟಳು.

ಈಗ ಏನು ಮಾಡಬೇಕು....? ಎನ್ನುವುದೇ ಅವಳಿಗೆ ತೋಚದಾಯಿತು. ಹಾಗೆ ಇದ್ದರೆ ಹೊಟ್ಟೆ ಕಾಣಿಸಿಕೊಳ್ಳುತ್ತದೆ ರಾಮರೆಡ್ಡಿಯೇ ನನ್ನ ಗಂಡ ಎನ್ನುವುದಾಗಲಿ ಅಥವಾ ಅವನನ್ನು ಹೇಗಾದರೂ ಒಪ್ಪಿಸಿ ಮದುವೆ ಮಾಡಿಕೊಳ್ಳುತ್ತೇನೆ ಎನ್ನುವುದು ದೂರದ ಮಾತು. ಮಗುವನ್ನು ಹೆತ್ತು, ಹೊತ್ತು ಸಾಕುವುದು ಇನ್ನೂ ದೂರದ ಮಾತು. ಉಳಿದಿರುವ ಮಾರ್ಗವಾದರು ಯಾವುದು...? ತಾನೇನೋ ಸಾಯಲು ಸಿದ್ಧವಾಗಿದ್ದಾಳೆ. ಆದರೆ ಈ ರಾಮರೆಡ್ಡಿಯನ್ನು ಏನಾದರೂ ಮಾಡಿ ಸಾಯಿಸಿ, ತಾನು ಸತ್ತರೆ ಕೆಲವು ಹೆಣ್ಣುಗಳನ್ನಾದರೂ ಇವನಿಂದ ಪಾರುಮಾಡಿದಂತಾಗುತ್ತದೆ ಎನ್ನುವ ಯೋಚನೆ ಅವಳಿಗೆ ಹೊಳೆಯಿತು. ಆದರೆ ಅದು ಸಾಧ್ಯವೆ....? ಅಥವಾ ಯಾರ ಕೈಯಿಂದಾದರು ಅವನನ್ನು ಸಾಯಿಸಲು ಸಾಧ್ಯವೆ....? ಯೋಚಿಸಿದಳು.

ಬಡವರಿಂದ ಏನು ಮಾಡಲೂ ಸಾಧ್ಯವಿಲ್ಲ. "ಬಡವನ ಕೋಪ ದವಡೆಗೆ ಮೂಲ" ಎನ್ನುವುದು ಸರಿಯಾದ ನಾಣ್ಣುಡಿ ಎಂದು ಅವಳಿಗೆ ಯಾವಾಗಲೋ ತಿಳಿದಿತ್ತು. ಹಗಲು ರಾತ್ರಿ ಒಂದೇ ಸಮನೆ ಯೋಚಿಸಿದಳು. ಯಾವ ರೀತಿ ಸತ್ತರೆ ತನ್ನಿಂದ, ತನ್ನ ಕುಟುಂಬಕ್ಕೆ ಯಾವ ರೀತಿಯ ಕಳಂಕವೂ ಬರುವುದಿಲ್ಲ ಎನ್ನುವುದೇ ಅವಳ ಯೋಚನೆಯಾಗಿತ್ತು. ಸಾಯುವುದಕ್ಕೆ ಮುನ್ನ ರಾಮರೆಡ್ಡಿಯ ವಿರುದ್ಧ ತಾನು ಏನಾದರೂ ಮಾಡಬಹುದೆ....? ಅವಳಿಗೆ ಕೊನೆಯದಾಗಿ ಒಂದು ಆಲೋಚನೆ ಬಂದು ಅದೆ ಸರಿಯೆಂದು ಒಂದು ಪತ್ರವನ್ನು ಬರೆದು ಟಪಾಲಿನಲ್ಲಿ ಹಾಕಿ ಬರಲು ಪಕ್ಕದ ಹಳ್ಳಿಗೆ ಹೊರಟಳು.

ಟಪಾಲು ಪೆಟ್ಟಿಗಿಯ ಹತ್ತಿರ ಹೋಗುತ್ತಿದ್ದಂತೆ ಅವಳ ಮೈಯಲ್ಲಿ ನಡುಕ ಹುಟ್ಟಿ ಕಾಲುಗಳು ಮುಂದಕ್ಕೆ ಹೋಗುವುದೇ ಕಷ್ಟವಾಯಿತು. ಸುತ್ತಲು ಒಮ್ಮೆ ನೋಡಿದಳು. ಅವಳ ಕಡೆಗೆ ಯಾರೂ ಗಮನ ಕೊಟ್ಟಂತೆ ತೋರಲಿಲ್ಲ. ತನ್ನ ಕೈಯಲ್ಲಿದ್ದ ಪತ್ರವನ್ನು ಟಪಾಲು ಪೆಟ್ಟಿಗೆಗೆ ಹಾಕಿದಳು. ಹಾಕಿದ ಮೇಲೆ ನಾಳೆಯ ಒಳಗೆ ಹೇಗಾದರು ಮಾಡ ಸಾಯಬೇಕು. ಹಾಗೆ ಸಾಯದೆ ಇದ್ದರೆ ಎಲ್ಲರಿಗೂ ಗೊತ್ತಾಗಿ ಬಿಡುವ ಸಂಭವ ಉಂಟು. ಹೇಗೊ ಅಂತೂ ಧೈರ್ಯ ಮಾಡಿ ಪತ್ರವನ್ನು ಟಪಾಲು ಪೆಟ್ಟಿಗೆಯ ಬಾಯಿಗೆ ಹಾಕಿದ ಮೇಲ ಹಿಂದಕ್ಕೆ ತಿರುಗಿಕೊಂಡಳು.

ಅವಳು ಹಿಂದಕ್ಕೆ ತಿರುಗಿಕೊಂಡ ತಕ್ಷಣವೇ ಅಂಚೆ ಪೇದೆ ಚೀಲದ ಸಮೇತ ಬಂದು, ಟಪಾಲು ಪಿಟ್ಟಿಗೆಗೆ ಹಾಕಿದ್ದ ಬೀಗವನ್ನು ತೆಗೆದು ಒಳಗಿದ್ದ ಪತ್ರಗಳನ್ನು

ಚೀಲದಲ್ಲಿ ಹಾಕಿಕೊಂಡು ಕಛೇರಿಯ ಒಳಕ್ಕೆ ಹೋದ. ಲಕ್ಷ್ಮಿ ಅಲ್ಲಿ ನಿಲ್ಲಲಾರದೆ ತನ್ನ ಊರಿನ ಕಡೆಗೆ ನಡೆದುಕೊಂಡು ಹೊರಟಳು.

ದಾರಿಯಲ್ಲಿ ಹೇಗೆ ಸಾಯಬೇಕು.....? ಎನ್ನುವುದೇ ಯೋಚಿಸುತ್ತಾ ಹೆಜ್ಜೆಯಾಕುತ್ತಿದ್ದಾಳೆ. ವಿಷ ಕುಡಿದರೆ... ನೇಣು ಹಾಕಿಕೊಂಡರೆ... ಬಾವಿಯಲ್ಲಿ ಬಿದ್ದರೆ ಪೋಲೀಸಿನವರು ಬಂದೇ ಬರುತ್ತಾರೆ. ಪೋಸ್ಟ್ ಮಾರ್ಟಂ ಹಾಗೆ ಆಗುತ್ತದೆ. ಗರ್ಭವಾಗಿರುವ ವಿಷಯ ಎಲ್ಲರಿಗೂ ತಿಳಿಯುತ್ತದೆ. ಕುಟುಂಬದ ಮಾನ, ಮರ್ಯಾದೆ ಬೀದಿಪಾಲಾಗುತ್ತದೆ. ಈಗ ಏನು ಮಾಡುವುದು....? ಪತ್ರವನ್ನು ಪೋಸ್ಟ್ ಮಾಡಿಯಾಗಿದೆ. ಈಗ ಸಾಯಲೇಬೇಕು. ಆದರೆ ಹೇಗೆ....? ಲಕ್ಷ್ಮಿ ಅಂತಿಮವಾಗಿ ಈ ರಾತ್ರಿ ಏನಾದರೂ ಮಾಡಿ ಸಾಯಲೇಬೇಕೆಂದು ನಿಶ್ಚಯಿಸಿಕೊಂಡು ತನ್ನ ಊರಿನ ಕಡೆಗೆ ಬಿರಬಿರನೆ ಹೆಜ್ಜಿಯಾಕಿದಳು.

ಅದೆ ಸಮಯಕ್ಕೆ ಅಂಚೆ ಕಛೇರಿಯಲ್ಲಿ ಯಾವುದೋ ಕೆಲಸಕ್ಕಾಗಿ ಬಂದಿದ್ದ ಬಾಬುನನ್ನು ನೋಡಿದ ಅಂಚೆ ಪೇದೆ.

"ಸಾರ್ ನಿಮ್ಗೆ ಎರಡು ಪತ್ರಗಳು ಬಂದಿವೆ" ಎಂದ. ಬಾಬು ಎರಡು ಪತ್ರಗಳನ್ನು ಅಂಚೆ ಪೇದೆಯಿಂದ ಪಡೆದುಕೊಂಡ. ಒಂದು ಪತ್ರದ ಹಿಂಬದಿಯಲ್ಲಿ ವಿಳಾಸ ಬರೆದಿರಲಿಲ್ಲ. ಪತ್ರದ ಮುಂಭಾಗದಲ್ಲಿ ವಿಳಾಸ ಮಾತ್ರ ಬರೆದಿದ್ದು, ಬಾಬು ಪತ್ರವನ್ನು ಒಡೆದು ಓದತೊಡಗಿದ. ಪತ್ರದ ಮೊದಲ ವಾಕ್ಯವೆ ಅವನನ್ನು ಕುತೂಹಲವಾಗಿಸಿತು.

"ಅಣ್ಣನಿಗೆ ಸಮಾನರಾದ ಶ್ರೀ ಬಾಬು ಅವರಿಗೆ ನಮಸ್ಕಾರಗಳು.

ಈ ಪತ್ರವನ್ನು ನೀವು ಯಾರಿಗೂ ತೋರಿಸದೆ ಒಬ್ಬರೆ ಓದಿಕೊಳ್ಳುವುದು. ಓದಿದ ನಂತರವೂ ಈ ವಿಷಯವನ್ನು ದಯವಿಟ್ಟು ಯಾರಿಗೂ ತಿಳಿಸಬಾರದೆಂದು ವಿನಂತಿಸಿಕೊಳ್ಳುತ್ತೇನೆ. ನಿಮ್ಮಿಂದ ಸಾಧ್ಯವಾದರೆ ರಾಮರೆಡ್ಡಿಯ ವಿರುದ್ಧ ಸೇಡು ತೀರಿಸಿಕೊಳ್ಳುವುದು. ಇಲ್ಲದಿದ್ದರೆ ಈ ಪತ್ರ ನನಗೆ ಬರಲೇ ಇಲ್ಲವೆಂದು ಅರಿದು ಹಾಕುವುದು. ನೀವು ಈ ಪ್ರದೇಶದ ಜನರಿಗೆ ಮಾಡಿರುವ ಸಹಾಯವನ್ನು ಕಣ್ಣುಗಳ ತುಂಬಾ ನೋಡಿದ್ದೇನೆ. ನಿಮ್ಮಂತ ನಿಷ್ಕಳಂಕ ಮನಸುಳ್ಳವರು, ಸ್ವಂತಕ್ಕೆ ಏನೂ ಬಯಸದವರು ಮಾತ್ರ ಬಡವರ, ಶೋಷಿತರ, ಅಮಾಯಕರ ಕಣ್ಣೀರು ಒರೆಸಲು ಸಾಧ್ಯ. ದೇಶದ್ರೋಹಿಗಳನ್ನು, ಸಮಾಜಘಾತಕರನ್ನು ನಿಗ್ರಹಿಸುವ ಕಾರ್ಯವನ್ನು ನಿಮ್ಮಂತಹವರು ಕೈಗೊಳ್ಳಬೇಕು.

ಅಣ್ಣಾ ನಾನೊಬ್ಬಳು ನತದೃಷ್ಟೆ. ಸಾಯಲು ತೀರ್ಮಾನಿಸಿಕೊಂಡೆ ಈ ಪತ್ರವನ್ನು ನಿಮಗೆ ಬರೆದಿದ್ದೇನೆ. ಈ ಪತ್ರ ನಿಮಗೆ ತಲುಪುವುದಕ್ಕೆ ಮುಂಚೆ ನಾನು ಯಾವುದೋ ಒಂದು ರೀತಿಯಲ್ಲಿ ಸತ್ತೋಗಿರುತ್ತೇನೆ. ಯಾವತ್ತಾದರೂ ಒಂದು ದಿನ ಎಲ್ಲರೂ ಸಾಯಲೇಬೇಕು... ಆದರೆ ಕೆಲವರು ಮುಂದೆ, ಕೆಲವರು ಹಿಂದೆ, ನನ್ನಂತಹ ಕೆಲವರು ಮಧ್ಯದಲ್ಲಿಯೆ.

ರಾಮರೆಡ್ಡಿಯ ಜೊತೆಗೆ ಹೈದರಾಬಾದಿಗೆ ಹೋಗಿದ್ದೆ. ಅವನು, ನನಗೆ ಕೆಲಸ ಕೊಡಿಸುವುದಾಗಿ ಕರೆದೊಯ್ದು ನನ್ನನ್ನು ಬಲತ್ಕಾರ ಮಾಡಿ ಗರ್ಭ ಧರಿಸುವಂತೆ ಮಾಡಿದ. ಈಗ ನನ್ನ ಹೊಟ್ಟೆಯಲ್ಲಿ ಮಗು ಬೆಳೆಯುತ್ತಿದೆ. ರಾಮರೆಡ್ಡಿ ತನ್ನ ಮಾತಿನಂತೆ ಉದ್ಯೋಗವನ್ನೇನೊ ಕೊಡಿಸಿದ್ದಾನೆ. ಆದರೆ ನಾನು ಈ ಸಮಾಜದಲ್ಲಿ ಹೇಗೆ ಬದುಕಲಿ? ನಿಮ್ಮಿಂದ ಸಾಧ್ಯವಾದರೆ ಅವನ ವಿರುದ್ಧ ಸೇಡು ತೀರಿಸಿಕೊಂಡು ಅವನನ್ನು ಬೀದಿಪಾಲು ಮಾಡಿ, ಆಗ ನನ್ನ ಆತ್ಮಕ್ಕೆ ಶಾಂತಿ ದೊರಕಬಹುದು.

-ಇಂತಿ ನಿಮ್ಮ ತಂಗಿ

ಲಕ್ಷ್ಮಿ

ಬಾಬು ಒಂದೆರಡು ಕ್ಷಣ ತಬ್ಬಿಬ್ಬಾಗಿ ಪತ್ರದಲ್ಲಿ ಬರೆದಿರುವ ದಿನಾಂಕವನ್ನು ಮತ್ತು ಅಂಚೆ ಕಛೇರಿಯಲ್ಲಿ ಒತ್ತಿರುವ ಮುದ್ರೆಯಲ್ಲಿನ ತಾರೀಖನ್ನು ನೋಡಿದ. ಎರಡು ಒಂದೇ ದಿನವಾದ್ದರಿಂದ ಪತ್ರವನ್ನು ಈ ದಿನವೆ ಟಪಾಲಿಗೆ ಹಾಕಿರುವುದಾಗಿ ಲಕ್ಷ್ಮಿಯ ವಿಳಾಸ ಹುಡುಕಿಕೊಂಡು ಹೊರಟ.

ಬಾಬು, ನೇರವಾಗಿ ಲಕ್ಷ್ಮಿಯ ಮನೆ ತಲುಪಿ -

"ಲಕ್ಷ್ಮಿ ನೀನು ತಾನೇ".....? ಕೇಳಿದ. ಬಾಬು ಅವರನ್ನು ನೇರವಾಗಿ ತನ್ನ ಮನೆ ಬಾಗಿಲಲ್ಲೆ ನೋಡಿದ ಲಕ್ಷ್ಮಿ ಅವಕ್ಕಾಗಿ ಬಿಟ್ಟಳು. ಲಕ್ಷ್ಮಿಯ ತಂದೆ, ತಾಯಿಯೂ ಬಾಬು ತಮ್ಮ ಮನೆಗೆ ಬಂದಿದ್ದನ್ನು ನೋಡಿ ಏನೂ ತೋಚದೆ ದಿಗ್ಭ್ರಮೆಗೊಂಡು ದಿಗ್ಮೂಢರಾಗಿಬಿಟ್ಟರು.

"ಲಕ್ಷ್ಮಿ ನಿಮಗೆ ಕೆಲಸ ಸಿಕ್ಕಿದೆಯಂತಲ್ಲ ಎಲ್ಲಿ ಪತ್ರ ತೋರಿಸು" ಎಂದ. ಲಕ್ಷ್ಮಿಯ ತಂದೆ, ತಾಯಿ

"ಏನಮ್ಮ ಲಕ್ಷ್ಮಿ ನಮಗೆ ಹೇಳಲೇ ಇಲ್ಲವಲ್ಲ" ಎಂದರು ಆಶ್ಚರ್ಯದಿಂದ.

ಲಕ್ಷ್ಮಿಗೆ ಈಗ ಏನು ಮಾಡಬೇಕೊ ಒಂದೂ ಅರ್ಥವಾಗದೆ ಪತ್ರವನ್ನು ಬಾಬು ಕೈಗೆ ತಂದುಕೊಟ್ಟಳು. ಪತ್ರವನ್ನು ನೋಡಿದ ಬಾಬು -

"ನೋಡಮ್ಮ ಲಕ್ಷ್ಮಿ ಸರಕಾರದಲ್ಲಿ ಕೆಲಸ ದೊರಕುವುದೇ ಅಪರೂಪ. ಮೊದಲು ನೀನೋಗಿ ಕೆಲಸಕ್ಕೆ ಸೇರಿಕೊ ನಿನಗೇನಾದರೂ ಸಹಾಯ ಬೇಕಾದರೆ ನಾನು ಹೈದರಾಬಾದಿಗೆ ಹೋಗುತ್ತಿದ್ದೀನಿ. ಬಾಡಿಗೆ ಮನೆ, ಏನೇ ವ್ಯವಸ್ಥೆ ಬೇಕಾದರೂ ಮಾಡಿಕೊಡುತ್ತೇನೆ" ಎಂದ.

ಲಕ್ಷ್ಮಿ ತಂದೆಗೆ ಬಾಬು ಚನ್ನಾಗಿ ಗೊತ್ತಿದ್ದ. "ಬಾಬು ತಾವು ನಮ್ಮ ಮನೆಗೆ ಬಂದಿದ್ದು ನಮ್ಮ ಭಾಗ್ಯವೆ ಸರಿ. ತಾವು ಬಡವರ ಮನೆಯಲ್ಲಿ ಗಂಜಿ ಕುಡಿದೆ ಹೋಗಬೇಕೆಂದು" ಪಟ್ಟು ಹಿಡಿದರು.

ಲಕ್ಷ್ಮಿಯ ತಂದೆ ಮನೆಯಲ್ಲೇ ಸಾಕಿದ್ದ ಕೋಳಿಯನ್ನು ಹಿಡಿದುಕೊಳ್ಳಲು ಹೊರಟರೆ, ಲಕ್ಷ್ಮಿಯ ತಾಯಿ ಕೋಳಿ ಸಾರಿಗೆ ಮಸಾಲೆ ಅರಿಯಲು ಅಣಿ ಮಾಡಿಕೊಳ್ಳುತ್ತಿದ್ದಳು.

ಬಾಬು, ಲಕ್ಷ್ಮಿಯನ್ನು ಹತ್ತಿರ ಕೂರಿಸಿಕೊಂಡು

"ನೋಡಮ್ಮ ಲಕ್ಷ್ಮಿ ಯಾವುದೋ ವಿಷಘಳಿಗೆಯಲ್ಲಿ ಏನೋ ನಡೆದುಬಿಟ್ಟಿತು. ಅದರಿಂದ ಹೇಡಿಗಳಂತೆ ಪ್ರಾಣ ಕಳೆದುಕೊಳ್ಳುವುದು ಓದಿದವರ ಲಕ್ಷಣವಲ್ಲ. ಹುಟ್ಟಿದ ಮೇಲೆ ಏನಾದರೂ ಸಾಧಿಸಬೇಕು. ಸಾಯುವುದು ಇದ್ದೆ ಇದೆ. ಕಷ್ಟ ಬಂದವರೆಲ್ಲ ಸತ್ತೋಗ್ತಾರೆಯೆ...? ನೀನು ಮೊದಲು ಕೆಲಸಕ್ಕೆ ಸೇರಿಕೊಳ್ಳಬೇಕು. ಇನ್ನು ಮಗುವನ್ನು ಉಳಿಸಿಕೊಳ್ಳುವುದು, ಅಬಾರ್ಷನ್ ಮಾಡಿಕೊಳ್ಳುವುದು ಹೈದರಾಬಾದಿಗೆ ಹೋದ ಮೇಲೆ ತೀರ್ಮಾನಿಸುವಿಯಂತೆ. ಈ ವಿಷಯ ನಿನಗೆ ಬಿಟ್ಟಿದ್ದು. ಒಮ್ಮೆ ಹೈದರಾಬಾದಿಗೆ ತಲುಪಿದ ಮೇಲೆ ಈ ವಿಷಯವನ್ನು ಮುಂದಿನ ದಿನಗಳೆ ತೀರ್ಮಾನಿಸುತ್ತವೆ. ಆದರೆ ನೀನು ಮಾತ್ರ ಯಾವ ಘಳಿಗೆಯಲ್ಲೂ ಸಾವಿನ ಬಗ್ಗೆ ಯೋಚಿಸಬೇಡ. ಸಾವಿನ ಗಂಡಾಂತರ ತಪ್ಪಿಹೋಯಿತು. ನೀನು ನನ್ನ ತಂಗಿ ಇದ್ದಂತೆ. ನಾನು ಹೇಳಿದಂತೆ ಮಾಡಬೇಕು. ಅಷ್ಟೇ"..... ಎಂದ.

ಲಕ್ಷ್ಮಿಗೆ, ಬಾಬುವಿನ ಮಾತುಗಳು ದಿಕ್ಕಿಲ್ಲದ ಮರುಭೂಮಿಯಲ್ಲಿ ನೀರಿನ ಬುಗ್ಗೆಗಳು ತಣ್ಣಗೆ ಚಿಮ್ಮುತ್ತಿರುವಂತೆ ಸ್ವಾಂತನ ನೀಡಿದವು. ಲಕ್ಷ್ಮಿ ಎಲ್ಲವನ್ನು ಮರೆತು ಹೊಸದಾಗಿ ತನ್ನ ಭವಿಷ್ಯದ ಬಗ್ಗೆ ಯೋಚಿಸತೊಡಗಿದಳು.

ಬಾಬು ಒಂದು ಹೆಣ್ಣನ್ನು ಸಾವಿನ ಗಂಡಾಂತರದಿಂದ ಪಾರು ಮಾಡಿದ್ದ. ಹಳೆಯ ಚಿರಂಜೀವಿಗೆ ತನ್ನ ಪ್ರೀತಿಯ ಪತ್ನಿ ಚಂದ್ರಕಲಾಳ ಜ್ಞಾಪಕ ಬಂದು

ಒಂದೆರಡು ಹನಿಗಳು ಕೆನ್ನೆಯ ಮೇಲಿಂದ ಕೆಳಕ್ಕೆ ಉದುರಿದವು. ಲಕ್ಷ್ಮಿ "ಅಣ್ಣಾ" ಎಂದು ಎಚ್ಚರಿಸಿದಳು. ಚಿರಂಜೀವಿ ಜೀವನದಲ್ಲಿ ಎಲ್ಲವನ್ನು ಕಳೆದುಕೊಂಡಿರುವ ಒಬ್ಬ ಜೀವಂತ ಮನುಷ್ಯ. ಅವನು, ಮನುಷ್ಯರ ನಡುವಿನ ಅನ್ಯೋನ್ಯ ಸಂಬಂಧಗಳಿಗೆ ಸ್ಪಂದಿಸಲು ಯಾವಾಗಲೂ ತುಡಿಯುತ್ತಿರುತ್ತಾನೆ.

ಅಕ್ಕ ತಂಗಿಯರು, ಅಣ್ಣ ತಮ್ಮಂದಿರು, ತಂದೆ ತಾಯಿ ಮತ್ತು ಮಕ್ಕಳು, ಪ್ರೀತಿಯ ಪತಿ ಪತ್ನಿಯರನ್ನು ನೋಡಿದಾಗೆಲ್ಲ ಅವನ ಮನ ಉಲ್ಲಾಸದಿಂದ ತುಂಬಿ ಹಾರಾಡಿಬಿಡುತ್ತದೆ. ಭಾವಕನಾಗಿ ಬಿಡುತ್ತಾನೆ. ಸ್ವಲ್ಪ ಹೊತ್ತು ಎಲ್ಲವನ್ನೂ ಮರೆತು ಕಣ್ಣುಗಳಲ್ಲಿ ಎಲ್ಲವನೂ ತುಂಬಿಕೊಂಡು ಬಿಡುತ್ತಾನೆ.

ಆ ದಿನ ಲಕ್ಷ್ಮಿ ಬಡಿಸಿದ ಊಟ ಮಾಡಿ ತನ್ನ ಊರಿನ ಕಡೆಗೆ ಹೆಜ್ಜೆಯಾಕಿದ. ನಾಲ್ಕಾರು ದಿನಗಳಾದ ಮೇಲೆ ಮತ್ತೆ ಬಂದ ಚಿರಂಜೀವಿ, ಲಕ್ಷ್ಮಿಯನ್ನು ಹೈದರಾಬಾದಿಗೆ ಕರೆದುಕೊಂಡು ಹೋಗಿ ಅವಳನ್ನು ಕೆಲಸಕ್ಕೆ ಸೇರಿಸಿ ಒಂದು ಸಣ್ಣ ಮನೆ ಮಾಡಿಟ್ಟು, ಎಲ್ಲಾ ಸೌಕರ್ಯಗಳನ್ನು ಮಾಡಿಕೊಟ್ಟು ತನ್ನ ಊರಿಗೆ ಹಿಂದಿರುಗಿ ಬಂದಿದ್ದ.

ಲಕ್ಷ್ಮಿ ಮಗುವನ್ನು ಪಡೆದುಕೊಳ್ಳಬೇಕೆ...? ಅಬಾರ್ಷನ್ ಮಾಡಿಸಿಕೊಳ್ಳಬೇಕೆ...? ಎನ್ನುವ ಗೊಂದಲದಲ್ಲಿ ಬಿದ್ದು ಸುಮಾರು ದಿನಗಳು ಚಡಪಡಿಸಿದಳು. ಈ ನಡುವೆ ಅವಳ ಹೊಟ್ಟೆಯಲ್ಲಿ ಮಗು ಇನ್ನಷ್ಟು ಬೆಳೆದಿತ್ತು. ಬಾಬು ಇದರ ಬಗ್ಗೆ ಲಕ್ಷ್ಮಿಯನ್ನೆ ಸ್ವಂತ ತೀರ್ಮಾನ ತೆಗೆದುಕೊಳ್ಳುವಂತೆ ಹೇಳಿದ್ದ. ಲಕ್ಷ್ಮಿ ಅಂತಿಮವಾಗಿ ಮಗುವನ್ನು ಪಡೆಯಲು ತೀರ್ಮಾನಿಸಿದಳು.

* * *

ರಾಮರೆಡ್ಡಿ, ನಿರೀಕ್ಷಿದ್ದಂತೆ ಮತ್ತೆ ಎಂ.ಎಲ್.ಎ.ಗೆ ನಿಲ್ಲಲು ಒಂದು ರಾಷ್ಟ್ರೀಯ ಪಕ್ಷದಿಂದ ಸೀಟು ದೊರಕಿಸಿಕೊಂಡಿದ್ದ. ಬಾಬು ಈ ನಡುವೆ ಒಂದು ಮಹತ್ವದ ತೀರ್ಮಾನವನ್ನು ಕೈಗೊಂಡಿದ್ದ. ರಾಮರೆಡ್ಡಿಯನ್ನು ಸೋಲಿಸುವುದಕ್ಕಾಗಿ ಚುನಾವಣೆಯಲ್ಲಿ ನಿಲ್ಲಲು ತೀರ್ಮಾನ ತೆಗೆದುಕೊಂಡಿದ್ದ.

ಬಾಬು ಇದ್ದಕ್ಕಿದ್ದಾಗೆ ಹತ್ತಾರು ವರ್ಷಗಳ ನಂತರ, ಎಷ್ಟೋ ಜನರು ಚುನಾವಣೆಗೆ ನಿಲ್ಲುವಂತೆ ಕಾಡಿ ಬೇಡಿದಾಗ ನಿಲ್ಲುವುದಿಲ್ಲ ಎಂದಿದ್ದವನು ಈಗ ನಿಲ್ಲಲು ತಾನೇ ಮುಂದೆ ಬಂದಿದ್ದ. ಆ ಪ್ರದೇಶದ ಜನರೆಲ್ಲ ಚಕಿತಗೊಂಡವರಂತೆ ಬಾಬುವಿನ ಸಹಾಯಕ್ಕೆ ಓಡಿ ಬಂದರು.

ಐವತ್ತು ವರ್ಷಗಳಷ್ಟು ದೀರ್ಘಕಾಲ ದೇಶವನ್ನು ಆಳಿರುವ ಯಾವ ಪಕ್ಷದ ರಾಜಕಾರಣಿಗಳ ಸಂಪರ್ಕವನ್ನು ಬೆಳೆಸಿಕೊಳ್ಳದ ಬಾಬು ತನ್ನ ವರ್ಚಸ್ಸಿನ ಮೇಲೆಯೇ ನಿಂತುಕೊಂಡ. ಹತ್ತಾರು ವರ್ಷಗಳು ಕಾಲ ಆ ಪ್ರದೇಶದ ಜನರ ಜೊತೆಗೆ ತನ್ನ ನೋವು, ನಲಿವು, ಕಷ್ಟ ಸುಖಗಳನ್ನು ಅಂಚಿಕೊಂಡಿರುವ ಬಾಬು ಆ ಪ್ರದೇಶವನ್ನು ಸಮಸ್ತ ಗ್ರಾಮೀಣಾಭಿವೃದ್ಧಿಯ ಹೊಸ್ತಿಲಿಗೆ ತಂದು ನಿಲ್ಲಿಸಿದ್ದ. ಎಷ್ಟೋ ಕುಟುಂಬಗಳು ಅವನ ಯೋಜನೆಗಳ ಕೆಳಗೆ ಪ್ರಯೋಜನ ಪಡೆದಿದ್ದವು.

ಬಾಬು, ಚುನಾವಣೆಗೆ ನಿಲ್ಲುತ್ತೇನೆ ಎಂದಿದ್ದೆ ಸಾಕಾಯಿತು. ಎಲ್ಲಾ ಕೆಲಸಗಳನ್ನು ಆ ಪ್ರದೇಶದ ಜನರೆ ವಹಿಸಿಕೊಂಡುಬಿಟ್ಟರು. ಬಾಬು ಯಾವುದೇ ಊರಿಗೆ ಹೋದರು, ಆ ಊರಿನ ಜನರನ್ನು ಕುರಿತು ಮೊದಲು ಹೀಗೆ ಹೇಳಿ ಬಿಡುತ್ತಿದ್ದ.

"ನಾನು ಇದುವರೆಗೆ ನಿಮಗೆ ಏನಾದರೂ ಸಹಾಯ ಮಾಡಿದ್ದೇನೆ ಎನಿಸಿದ್ದರೆ ಸಂತೋಷ. ಬಹುಶಃ ಚುನಾವಣೆಯಲ್ಲಿ ನೀವು ನನ್ನನ್ನು ಗೆಲ್ಲಿಸಿದ ಮೇಲೆ ನನ್ನಿಂದ ನಿಮಗೆ ಸಹಾಯ ಮಾಡಲು ಸಾಧ್ಯವಾಗುತ್ತದೋ ಇಲ್ಲವೊ ಗೊತ್ತಿಲ್ಲ. ನಾನು ನಿಮಗೆ ಸಹಾಯ ಮಾಡುತ್ತೇನೆ ಎಂದು ಓಟು ಹಾಕಬೇಡಿ. ನಿಮ್ಮ ಕೈಯಿಂದ ಒಂದೇ ಒಂದು ಪೈಸೆಯನ್ನು ನೀವು ಕಳೆದುಕೊಳ್ಳಬೇಡಿ. ನಾನು ನಿಮ್ಮ ಊರಿಗೆ ಬಂದಾಗ ಕಷ್ಟ ಸುಖಗಳನ್ನು ಎಂದಿನಂತೆ ಮತ್ತೆ ಮತ್ತೆ ಅಂಚಿಕೊಳ್ಳೋಣ. ಚುನಾವಣೆಯ ಪ್ರಚಾರಕ್ಕಾಗಿ ಚಪ್ಪರಗಳನ್ನು ಹಾಕಬೇಡಿ. ಹೂವಿನ ಹಾರಗಳನ್ನಾಗಲಿ, ಗೋಡೆ ಬರಹಗಳನ್ನಾಗಲಿ ಕರಪತ್ರಗಳನ್ನಾಗಲಿ ಯಾವುದಕ್ಕೂ ಖರ್ಚು ಮಾಡಬೇಡಿ. ನನ್ನ ಓಟಿನ ಜಿಹ್ನೆಯನ್ನು ಮಾತ್ರ ಜ್ಞಾಪಕ ಇಟ್ಟುಕೊಳ್ಳಿ" ಎನ್ನುತ್ತಿದ್ದ.

ಬಾಬು ಚುನಾವಣೆಗೆ ನಿಂತಿದ್ದೆ ತಡ. ಆ ಪ್ರದೇಶವೆಲ್ಲ ಅಲ್ಲೋಲ ಕಲ್ಲೋಲವಾಯಿತು. ಎಲ್ಲರ ಬಾಯಲ್ಲೂ ಬಾಬುವಿನ ಮಾತೆ. ಹೇಗಾದರೂ ಮಾಡಿ ಬಾಬುವನ್ನು ಚುನಾವಣೆಯಲ್ಲಿ ಗೆಲ್ಲಿಸಬೇಕೆಂದು ಹಳ್ಳಿ ಹಳ್ಳಿಗಳೇ ತಯಾರಿ ಮಾಡಿಕೊಳ್ಳತೊಡಗಿದವು.

ಈ ವಿಷಯವನ್ನು ತಿಳಿದ ರಾಜಕಾರಣಿಗಳು ಕೆಲವರು ಬೆರಗಾದರೆ, ರಾಮರೆಡ್ಡಿ ಮಾತ್ರ ಬೆವರಿಳಿಸಿಕೊಂಡವನಂತೆ ಕಂಗಲಾಗಿಬಿಟ್ಟ. ಇಷ್ಟು ದಿನಗಳು ರಾಜಕೀಯಕ್ಕೆ ಬರದ ಬಾಬು ಈಗೇಕೆ ಬಂದ ಎನ್ನುವುದೇ ದೊಡ್ಡ ಪ್ರಶ್ನೆಯಾಗಿ

ಅವನನ್ನು ಕಾಡಿತು. ಚುನಾವಣೆಯ ದಿನಗಳು ಹತ್ತಿರ ಬಂದಂತೆ ರಾಮರೆಡ್ಡಿಯ ಹಣೆಬರಹ ಬದಲಾದಂತೆ ತೋರಿ ಬಾಬುನನ್ನು ಏನಾದರೂ ಮಾಡಿ ಚುನಾವಣೆಯಿಂದ ಹಿಂದಕ್ಕೆ ಸರಿಸಲು ಯೋಚಿಸತೊಡಗಿದ.

ಬಾಬು ಯಾರ ಮಾತುಗಳಿಗೂ ಒಳಗಾಗುವವನಲ್ಲ ಎನ್ನುವುದನ್ನು ಮೊದಲೆ ಅರಿತಿದ್ದ ರಾಮರೆಡ್ಡಿ ತನ್ನ ಬಂಟರ ಮೂಲಕ ಹಲವು ರೀತಿಯ ಆಮಿಷಗಳನ್ನು ತೋರಿಸಿ ಪ್ರಯತ್ನಿಸಿದರು ಸಫಲವಾಗಲಿಲ್ಲ.

ದಿನಗಳು ಉರುಳಿದಂತೆ ರಾಜಕಾರಣಿಗಳ ಓಡಾಟ, ಪ್ರಲಾಪ ಹಳ್ಳಿ ಹಳ್ಳಿಗೂ ಹಬ್ಬಿತು. ಬಂದವರೆಲ್ಲ ಈ ಬಾಬು ತಮ್ಮ ಎದುರಿಗೆ ನಿಂತಿದ್ದರೆ ಡೆಪಾಸಿಟ್ಟೆ ಬರುತ್ತಿರಲಿಲ್ಲ. ನಾವು ಗೆದ್ದುಕೊಂಡೆವು. ಈ ರಾಮರೆಡ್ಡಿ ಹಣೆಬರಹ ಹೀಗಾಯಿತಲ್ಲ ಎನ್ನುತ್ತಾ ಪಶ್ಚಾತ್ತಾಪ ಪಡುತ್ತಿದ್ದರು. ಈ ಬಾಬು ಎಂಬ ಹುಳ ನನ್ನ ಕ್ಷೇತ್ರಕ್ಕೆ ವಕ್ರಿಸಿಕೊಂಡಿತಲ್ಲ ಎನ್ನುತ್ತಾ ರಾಮರೆಡ್ಡಿ ಎಲ್ಲರ ಎದುರಿಗೂ ಗೋಳಾಡತೊಡಗಿದ. ಅದುದ್ದಾಗಲಿ ಇವನನ್ನು ಅಂತಿಮವಾಗಿ ಏನಾದರೂ ಮಾಡಬೇಕಲ್ಲ ಎಂದು ಯೋಚಿಸತೊಡಗಿದ.

* * *

ದೇಮಲಾಪುರಕ್ಕೆ ಐದು ಕಿಲೋಮೀಟರುಗಳ ದೂರದ ಹೋಬಳಿ ಕೇಂದ್ರ ಸಕಟಾಪುರದಲ್ಲಿ ಒಂದು ಪೋಲೀಸ್ ಠಾಣೆ ಇದೆ. ಆ ಠಾಣೆಯಲ್ಲಿ ಐದಾರು ಪೋಲೀಸರಿದ್ದು ರುದ್ರಯ್ಯ ಎಂಬ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಕೂಡ ಇದ್ದಾನೆ. ರುದ್ರಯ್ಯ ಆ ಕೇಂದ್ರದಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಆಗಿ ಕೆಲಸಕ್ಕೆ ಸೇರಿಕೊಂಡವನು ಅನಂತರ ಹೆಡ್ ಕಾನ್‌ಸ್ಟೇಬಲ್ ಆಗಿ, ಸಬ್ ಇಸ್ಸ್‌ಪೆಕ್ಟರ್ ಆಗಿ ಈಗ ಸರ್ಕಲ್ ಇನ್ಸ್‌ಪೆಕ್ಟರ್‌ರಾಗಿ ಕಾರ್ಯ ನಿರ್ವಹಿಸುತ್ತಿದ್ದಾನೆ.

ರುದ್ರಯ್ಯ ಎಂದಿನಂತೆ ಕೆಲಸ ಮುಗಿಸಿಕೊಂಡು ಸಾಯಂಕಾಲ ಹತ್ತಿರದಲ್ಲೆ ಇರುವ ತನ್ನ ಪೋಲೀಸ್ ಕ್ವಾರ್ಟರ್ಸ್ ಸೇರಿಕೊಂಡ. ರಾತ್ರಿ ಒಂಬತ್ತು ಗಂಟೆಯಾಗಿದ್ದೆ ಎಂದಿನಂತೆ ಎಣ್ಣೆಹೊಡೆದು, ಕರಿದ ಮಾಂಸ ತುಂಡುಗಳನ್ನು ಕಡಿದು ಆರಾಮಾಗಿ ಮಂಚದ ಮೇಲೆ ಪವಡಿಸಿದ್ದ. ರುದ್ರಯ್ಯನ ಹೆಂಡತಿ, ಮಕ್ಕಳಿಗೆ ಊಟ ಬಡಿಸಿ ಮಿಕ್ಕ ಸಣ್ಣ ಪುಟ್ಟ ಕೆಲಸಗಳನ್ನು ಮುಗಿಸಿ ರುದ್ರಯ್ಯನಿರುವ ಕೋಣೆ ತಲುಪಿದಳು. ರುದ್ರಯ್ಯ ಆಗಲೆ ಗಾಢ ನಿದ್ರೆಯಲ್ಲಿ

ದೊಡ್ಡದಾಗಿ ಗೊರಕೆ ಹೊಡೆಯುತ್ತಿದ್ದ. ರುದ್ರಯ್ಯನ ಹೆಂಡತಿ ತಲೆದಿಂಬು ಮತ್ತು ಬಟ್ಟೆಗಳನ್ನು ತೆಗೆದುಕೊಂಡು ಹಾಲಿಗೆ ಬಂದು ಮಲಗಿಕೊಂಡಳು. ಅಲ್ಲಿಗೂ ಅವನ ಕರಾಟೆ ಗೊರಕೆ ಕೇಳಿಸುತ್ತಿತ್ತು.

ಇಲ್ಲಿ ಪೋಲೀಸ್ ಠಾಣೆಯಲ್ಲಿ ಮೂವರು ಪೋಲೀಸ್ ಪೇದೆಗಳು ಮೂರೆಲೆ ಇಸ್ಪೀಟು ಆಟದಲ್ಲಿ ತೊಡಗಿದ್ದರೆ, ಒಬ್ಬ ಪೇದೆ ಹೊರಗೆ ನಿಂತು ಕಾವಲು ಕಾಯುತ್ತಿದ್ದಾನೆ. ರಾತ್ರಿಯಾಗುತ್ತಾ ಹೋಗುತ್ತಿದ್ದಂತೆ ಶಖೆ ಕಡಿಮೆಯಾಗಿ ಗಾಳಿ ತಂಪೇರುತ್ತಿದೆ.

ಹೊರಗೆ ನಿಂತಿರುವ ಪೇದೆ ತನ್ನ ಡ್ಯೂಟಿ ಮುಗುಯುತ್ತಿದ್ದಂತೆ ಒಳಗೆ ಬಂದು ತನ್ನ ಟಿಪಿನ್ ಕ್ಯಾರಿಯರ್ ಸಮೇತ ಮನೆಯ ಕಡೆಗೆ ಹೊರಟುಬಿಟ್ಟ.

ಹೊರಡುವುದಕ್ಕೆ ಮುಂಚೆ ಒಳಗಿರುವವರನ್ನು ಹೊರಗೆ ಬಂದು ನಿಲ್ಲುವಂತೆ ಎಚ್ಚರಿಸಿಹೋದ. ಎಲೆಯಾಟದಲ್ಲಿ ತಲ್ಲೀನರಾಗಿದ್ದ ಪೇದೆಗಳು ಅವನು ಹೊರಟಿದ್ದೆ ಬಾಗಿಲು ಮುಚ್ಚಿ ಎಲೆಗಳನ್ನೆ ಕಣ್ಣುಗಳು ತುಂಬಾ ತುಂಬಿಕೊಂಡರು.

ಆಡುತ್ತಿದ್ದವರಲ್ಲಿ ಒಬ್ಬ ಪೇದೆ -

"ಯಾರಾದರೂ ಒಬ್ಬರು ಹೊರಗಡೆ ನಿಂತ್ಕೊಳ್ಳರೊ ಆ ರುದ್ರಯ್ಯ ಬಂದು ಗಿಂದು ಬಿಟ್ಟಾನು" ಎಂದ.

"ಅವನು ಎಲ್ಲಿ ಬರ್ತಾನೆ ಈ ಹೊತ್ಗೆ ಸ್ವರ್ಗದಲ್ಲಿ ತೇಲಾಡ್ತಿರ್ತಾನೆ. ಬಂದಿದ್ದರೆ ಹನ್ನೆರಡು ಗಂಟೆ ಒಳಗೆ ತೂರಾಡಿಕೊಂಡು ಬರಬೇಕಾಗಿತ್ತು. ಈಗ ಒಂದೂವರೆ ಗಂಟೆ" ಎಂದ ಇನ್ನೊಬ್ಬ ಪೇದೆ. ಅವನು ಹೇಳುತ್ತಿದ್ದಂತೆ ವಿದ್ಯುತ್ ದೀಪಗಳು ಆರಿಹೋಗಿ ಒಮ್ಮೆಲೆ ಕತ್ತಲಾಯಿತು. ಕತ್ತಲಾಗಿದ್ದೆ ಪೋಲೀಸ್ ಠಾಣೆಯ ಮೇಲೆ ಏನೋ ಬಿದ್ದ ಸದ್ದಾಯಿತು. ಪೇದೆಗಳು ಏನಾಗುತ್ತಿದೆ ಎಂದುಕೊಳ್ಳುವಷ್ಟರಲ್ಲಿ ಪೋಲೀಸ್ ಠಾಣೆಯ ಯಾವುದೋ ಒಂದು ಭಾಗ ಛಿದ್ರವಾಗಿ ಹೋಯಿತು. ಛಿದ್ರವಾದ ಗೋಡೆಗಳ ಜೊತೆಗೆ ಪೇದೆಗಳ ದೇಹಗಳು ಹಾರಾಡಿಬಿಟ್ಟವು.

ಒಬ್ಬ ಪೇದೆಯ ದೇಹ ರಾಶಿಬಿದ್ದ ಗೋಡೆಯ ಕಲ್ಲುಗಳಲ್ಲಿ ತೂರಿಕೊಂಡಿತು. ಇನ್ನೊಬ್ಬ ಪೇದೆ ಕತ್ತಲಲ್ಲಿಯೇ ತನ್ನ ಕೈಕಾಲು ಮುಖವನ್ನು ಮುಟ್ಟಿ ನೋಡಿಕೊಂಡರೆ, ಮೂರನೆ ಪೇದೆ ಬಾಗಿಲಿರುವ ಕಡೆಗೆ ಕಪ್ಪೆಯಂತೆ ತೆವಳುತ್ತಾ ಸಾಗಿದ. ಹತ್ತಿರದ ಮನೆಗಳಲ್ಲಿ ನಿದ್ದೆ ಮಾಡುತ್ತಿದ್ದ ಜನರು

ಜೋರಾಗಿ ಕೇಳಿಸಿದ ಶಬ್ದದಿಂದ ಎಚ್ಚೆತ್ತುಕೊಂಡು ಒಬ್ಬೊಬ್ಬರಾಗಿ ಹೊರಗೆ ಬಂದು ನೋಡುತ್ತಾರೆ. ಅಮಾಸೆ ಕತ್ತಲು, ಪೋಲೀಸ್ ಠಾಣೆಯ ಕಡೆಯಿಂದ ಚೀರಾಡುವ ಸದ್ದು ಕೇಳಿ ಬರುತ್ತಿದೆ.

ಲ್ಯಾಂಟೀನ್ ಹಿಡಿದುಕೊಂಡು ಹೊರಗೆ ಬಂದ ವ್ಯಕ್ತಿಯ ಜೊತೆಗೆ ಇನ್ನಷ್ಟು ಜನರು ಜೊತೆಗೂಡಿ ಪೋಲೀಸ್ ಠಾಣೆಯ ಕಡೆಗೆ ನಡೆದು ಬಂದರು. ಠಾಣೆಯ ಒಳಗೆ ಸದ್ದು ಕೇಳಿ ಬರುತ್ತಿದ್ದು, ಒಳಗೆ ಹೋಗಲು ಧೈರ್ಯ ಬರದೆ ಸ್ವಲ್ಪ ಹೊತ್ತು ಅಲ್ಲೇ ನಿಂತು ಮಾತನಾಡಿಕೊಂಡರು.

ಅಷ್ಟರಲ್ಲಿ ಒಬ್ಬ ಪೇದೆ ಠಾಣೆಯ ಬಾಗಿಲಿಂದ ಹೊರಕ್ಕೆ ಬಂದು ಜೋರಾಗಿ ಸಹಾಯಕ್ಕೆ ಕೂಗಿಕೊಂಡ. ಲ್ಯಾಂಟೀನ್ ಹಿಡಿದವರು ಧೈರ್ಯ ತಂದುಕೊಂಡು ಹತ್ತಿರಕ್ಕೆ ಹೋಗಿ ನೋಡುತ್ತಾರೆ. ಪೋಲೀಸ್ ಠಾಣೆಯ ಒಂದು ಭಾಗ ಪೂರ್ಣವಾಗಿ ಕುಸಿದು ಬಿದ್ದಿದೆ. ಹೊರಗೆ ಬಂದಿದ್ದ ಪೋಲೀಸ್ ಪೇದೆಯ ಜೊತೆಗೆ ಮತ್ತೆ ಒಳಕ್ಕೆ ಹೋದ ಜನರು ಒಳಗೆ, ಸಿಕ್ಕಿಕೊಂಡಿದ್ದ ಇಬ್ಬರು ಪೋಲೀಸ್ ಪೇದೆಗಳನ್ನು ಹೊರಕ್ಕೆ ತಂದು ನೀರು ಕುಡಿಸಿದರು. ಒಬ್ಬ ಪೇದೆಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಇನ್ನೊಬ್ಬ ಪೇದೆ ಪೂರ್ಣವಾಗಿ ಗಾಯಗೊಂಡಿದ್ದು ದೇಹವೆಲ್ಲ ರಕ್ತಸಿಕ್ತವಾಗಿದೆ.

ವಿಷಯ ತಿಳಿದ ರುದ್ರಯ್ಯ ಮನೆಯಿಂದ ಓಡಿ ಬಂದು ನೋಡುತ್ತಾನೆ. ನಿಶೆಯಲ್ಲಿದ್ದ ರುದ್ರಯ್ಯನಿಗೆ ಕತ್ತಲಲ್ಲಿ ಏನೂ ಗೊತ್ತಾಗದೆ -

"ಮೊದಲು ವಿದ್ಯುತ್ ದೀಪ ಹಚ್ಚಿರೋ ನನ್ನ ಮಕ್ಕಳ ಆ ಕರಂಟ್‌ನವರು ಎಲ್ಲಿ ಸತ್ತೋದ್ರೋ ನೋಡ್ರೋ...." ಎಂದು ಅಬ್ಬರಿಸಿದ. ಡ್ಯೂಟಿ ಮುಗಿಸಿ ಮನೆಗೆ ಹೋಗಿದ್ದ ಪೋಲೀಸ್ ಪೇದೆ ಓಡಿ ಬಂದಿದ್ದ, ಅವನನ್ನು ಅಲ್ಲೇ ಇರುವಂತೆ ತಿಳಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಗಾಯಗೊಂಡಿದ್ದ ಮೂವರು ಪೇದೆಗಳನ್ನು ಜೀಪಿನಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಸಾಗಿಸಿದ. ಆ ಕೋಣೆಯಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ವರ್ಗವಾಗಿದ್ದು ಅವನ ಸ್ಥಳಕ್ಕೆ ಇನ್ನೂ ಯಾರೂ ಬಂದಿರಲಿಲ್ಲ. ಸದ್ಯಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ರುದ್ರಯ್ಯನೆ ಎಲ್ಲವನ್ನು ನೋಡಿಕೊಳ್ಳುತ್ತಿದ್ದ.

ಪ್ರಥಮ ಚಿಕಿತ್ಸೆ ಪಡೆದ ಇಬ್ಬರು ಪೇದೆಗಳು ಬೆಳಗ್ಗೆ ಪೋಲೀಸ್ ಠಾಣೆಗೆ ಹಿಂದಿರುಗಿದರೆ, ಒಬ್ಬ ಪೇದೆ ಖಾಯಂ ಆಗಿ ಹಾಸಿಗೆ ಹಿಡಿದ. ಅಂತೂ ಎಲ್ಲರೂ

ಜೀವದಿಂದ ಪಾರಾಗಿದ್ದರು. ಆದರೆ ಈ ಕೃತ್ಯವನ್ನು ಎಸಗಿದವರು ಯಾರು....? ಎಸ್.ಪಿ. ಅವರು ಜಿಲ್ಲಾ ಕೇಂದ್ರದಲ್ಲಿಯೆ ಕುಳಿತು ಮಾಹಿತಿಯನ್ನು ಪಡೆದುಕೊಂಡಿದ್ದರು. ರುದ್ರಯ್ಯ ಪೋಲೀಸ್ ಪೇದೆಗಳಿಗೆ ಮಾಹಿತಿಯನ್ನು ಸಂಗ್ರಹಿಸುವಂತೆ ಆಜ್ಞೆ ಮಾಡಿ ತಾನೂ ತನಿಖೆಯನ್ನು ಆರಂಭಿಸಿದ.

* * *

ಒಂದು ದಿನ ಚಿರಂಜೀವಿ ಚಿತ್ತೂರಿಗೆ ಹೋಗುವ ಸಂದರ್ಭ ಒದಗಿ ಬಂದಿತು. ಚಿತ್ತೂರಿನ ಬಸ್ಸು ನಿಲ್ದಾಣಕ್ಕೆ ಬಂದಾಗ ತಾನು ಚಿಕ್ಕವನಿದ್ದಾಗ ಬಸ್ಸು ನಿಲ್ದಾಣದಲ್ಲಿ, ಬೀದಿಗಳಲ್ಲಿ ಅಲೆದ ಪ್ರಸಂಗ ಜ್ಞಾಪಕಕ್ಕೆ ಬಂದಿತು. ಸ್ವಲ್ಪ ಹೊತ್ತು ಬಸ್ಸು ನಿಲ್ದಾಣದ ಒಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡು ಸಮಯ ಕಳೆದ. ಎಲ್ಲಿ ನೋಡಿದರು ಗಿಜಗಿಜ ಜನರು, ಒಂದೇ ಗದ್ದಲ. ದೂಳೆಬ್ಬಿಸುತ್ತಾ ಚಲಿಸುತ್ತಿರುವ ಲಾರಿ, ಬಸ್ಸು, ಕಾರು ಆಟೋ ಮತ್ತು ಸೈಕಲ್ ರಿಕ್ಷಾಗಳು.

ಎಲ್ಲಾ ಜನರು ತಮ್ಮ ಕಾಲುಗಳು ನಡೆದ ಕಡೆಗೆ ನಡೆಯುತ್ತಿದ್ದಂತೆ ಕಂಡರು ಎಲ್ಲರೂ ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡೆ ಓಡಾಡುತ್ತಿರಬೇಕು ಎನಿಸಿತು. ಚಿಂರಜೀವಿ ತನ್ನ ಹಳೆ ದಿನಗಳನ್ನು ಸ್ಮರಿಸಿಕೊಳ್ಳುತ್ತಾ ಆ ಜನರ ನಡುವೆ ಗದ್ದಲದಲ್ಲಿ ಅದೆಷ್ಟೋ ಹೊತ್ತು ಹಾಗೆ ಮೈಮರೆತು ಕುಳಿತಿದ್ದ. ಅನಂತರ ಅಲ್ಲಿಂದ ಎದ್ದು ನಾಗಭೂಷಣಂ ಕುಟುಂಬ ವಾಸಿಸುತ್ತಿದ್ದ ಬೀದಿಯ ಕಡೆಗೆ ನಡೆಯತೊಡಗಿದ.

ಆ ಬೀದಿ ಎತ್ತರೆತ್ತರದ ಕಾಂಕ್ರೀಟ್ ಕಟ್ಟಡಗಳಿಂದ ಬೆಳೆದು ನಿಂತಿತ್ತು. ನಾಗಭೂಷಣಂ ಅವರ ಕುಟುಂಬ ಇದ್ದ ಮನೆ ಯಾವುದು ಎನ್ನುವುದು ಸರಿಯಾಗಿ ಗುರುತಿಸಲಾರದ ಚಿರಂಜೀವಿ ಅಲ್ಲೆಲ್ಲ ಸುತ್ತಾಡಿದ. ಅಂತೂ ಕೊನೆಗೆ ಅವರು ವಾಸಿಸುತ್ತಿದ್ದ ಮನೆಯನ್ನು ಗುರುತಿಸ ಮನೆಮುಂದೆ ಕುಳಿತುಕೊಂಡು ಮತ್ತೊಮ್ಮೆ ಮೈಮರೆತುಬಿಟ್ಟ. ಅಡ್ಡಾಡುತ್ತಿದ್ದವರೆಲ್ಲ ಚಿರಂಜೀವಿಯನ್ನು ನೋಡುತ್ತಾ ಹೋಗುತ್ತಿರುವುದನ್ನು ಎಷ್ಟೋ ಹೊತ್ತಾದ ಮೇಲೆ ಗಮನಿಸಿದ ಚಿರಂಜೀವಿ ಎದ್ದು ನಿಂತು ಅಲ್ಲಿಂದ ಬಸ್ಸು ನಿಲ್ದಾಣದ ಕಡೆಗೆ ಹಿಂತಿರುಗಿದ.

ಪೋಲೀಸ್ ಠಾಣೆಯ ಮೇಲೆ ನಡೆದದಾಳಿ ಆ ಸುತ್ತಮುತ್ತಲು ಪ್ರದೇಶದಲ್ಲೆಲ್ಲ ಹಬ್ಬಿ ಜನರು ಭೀತಿಗೊಂಡರು. ಸುತ್ತಮುತ್ತಲು ಹಳ್ಳಿಗಳಲ್ಲಿ

ಯಾರಾದರೂ ಹೊಸಬರು ಬಂದು ಸೇರಿಕೊಂಡಿದ್ದಾರೆಯೇ ಎನ್ನುವುದನ್ನು ಕಂಡಿಡಿಯಲು ಪೋಲೀಸರು ಹಳ್ಳಿ ಹಳ್ಳಿಗಳಲ್ಲೂ, ಮನೆ ಮನೆಗಳಲ್ಲೂ ಹುಡುಕತೊಡಗಿದರು. ಆದರೆ ಆ ಪ್ರದೇಶದಲ್ಲಿ ಯಾರೂ ಹೊಸ ವ್ಯಕ್ತಿಗಳು ಕಾಣಿಸಲಿಲ್ಲ. ಯಾರ ಮನೆಗಳಲ್ಲೂ ಕಾನೂನಿಗೆ ವಿರುದ್ಧವಾದ ಯಾವುದೇ ಆಯುಧಗಳಾಲಿ ದೊರಕಲಿಲ್ಲ. ಹಾಗಾದರೆ ಈ ವಿಧ್ವಂಶ ಕೃತ್ಯವನ್ನು ನಡೆಸಿದವರ್‍ಯಾರು....? ಈ ಪ್ರಶ್ನೆಗಳು ಪೋಲೀಸರ ಮುಂದೆ ಸವಾಲಾಗಿ ನಿಂತವು. ಜನರೂ ಕೂಡ ಪ್ರಶ್ನಿಸತೊಡಗಿದರು.

ಬಾಬು ಮತ್ತು ರಾಮರೆಡ್ಡಿಯ ನಡುವೆ ಚುನಾವಣೆ ಪ್ರಚಾರಗಳು ಇನ್ನಷ್ಟ ಕಾವೇರಿ ಹಳ್ಳಿ ಹಳ್ಳಿಗಳಿಗೂ ಹಬ್ಬಿದವು. ರಾಮರೆಡ್ಡಿಗೆ, ಚಿರಂಜೀವಿ ದೊಡ್ಡ ತಲೆನೋವಾಗಿ ಪರಿಣಮಿಸಿ ತಾನು ಗೆಲ್ಲುವುದು ಅಸಾಧ್ಯ ಎನ್ನುವುದು ತಿಳಿದು ಹೋಯಿತು. ಚಿರಂಜೀವಿಯ ವಿರುದ್ಧ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯವೆಂದು ತಿಳಿದ ರಾಮರೆಡ್ಡಿ ಚಿರಂಜೀವಿ ತನ್ನ ದಾರಿಗೆ ಅಡ್ಡವಿರುವುದನ್ನು ತೀಕ್ಷ್ಣವಾಗಿ ಯೋಚಿಸತೊಡಗಿದ.

* * *

ಹೊಸದಾಗಿ ಬಂದಿರುವ ಅಸಿಸ್ಟೆಂಟ್ ಕಮೀಷನರ್ ಆ ಪ್ರದೇಶಕ್ಕೆ ಭೇಟಿ ಕೊಡುವುದಾಗಿ ತಿಳಿದು ಬಂದಿತ್ತು. ಬರಲಿರುವ ಚುನಾವಣೆಯ ಬಗ್ಗೆ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ ಕಮೀಷನರ್ ಆ ಪ್ರದೇಶದಲ್ಲೆಲ್ಲಾ ಸಂಚಾರ ಮಾಡುತ್ತಿದ್ದರು. ಚುನಾವಣೆಗೆ ನಿಂತಿರುವ ಅಭ್ಯರ್ಥಿಗಳು, ಪೋಲೀಸರು ಮತ್ತು ಸರಕಾರಿ ಅಧಿಕಾರಿಗಳ ಜೊತೆಗೆ ಮೀಟಿಂಗ್‌ಗಳನ್ನು ಏರ್ಪಡಿಸಲಾಗಿತ್ತು.

ಬಾಬು ತನ್ನ ಆಪ್ತರ ಜೊತೆಗೆ ಕಮೀಷನರ್‌ನ್ನು ಭೇಟಿಯಾಗಲು ದೇಮಲಾಪುರದಿಂದ ಹೋಬಳಿ ಕೇಂದ್ರವಾದ ಸಕಟಾಪುರಕ್ಕೆ ಹೋಗಬೇಕಾಯಿತು. ಕಮೀಷನರ್ ಇರುವ ಅತಿಥಿ ಗೃಹಕ್ಕೆ ತಾನು ಬಂದಿರುವ ವಿಷಯವನ್ನು ಹೊರಗಿದ್ದ ನೌಕರನ ಮುಖಾಂತರ ತಿಳಿಸಿದ. ನೌಕರ ಒಳಗೆ ಹೋಗಿ ಚುನಾವಣೆಗೆ ನಿಂತಿರುವ ಬಾಬು ತಮ್ಮನ್ನು ಭೇಟಿಮಾಡಲು ಬಂದಿರುವುದಾಗಿ ತಿಳಿಸಿದ.

ಕಮೀಷನರ್ ಅವರು ಬಾಬುವನ್ನು ಒಳಕ್ಕೆ ಕರೆತರುವಂತೆ ತಿಳಿಸಿದರು. ಬಾಬು ಒಳಗೆ ಹೋಗಿದ್ದೆ ಕಮೀಷನರ್ ಬರ ಮಾಡಿಕೊಳ್ಳಲು ಎದ್ದು ನಿಂತವರು ಮಾತುಬರದೆ ಹಾಗೆ ನಿಂತು ಬಿಟ್ಟರು.

ಕಮೀಷನರ್‌ಗೆ ಮೂವತ್ತೈದು ವರ್ಷಗಳ ಹಿಂದಿನ ಚಿರಂಜೀವಿಯ ಮುಖದಲ್ಲಿನ ಹೊಳೆಯುವ ಕಣ್ಣುಗಳು ಕಾಣಿಸುತ್ತಿದ್ದವು. ಚಿರಂಜೀವಿಗೆ ಒಂದೇ ನೋಟಕ್ಕೆ ನಾಗಭೂಷಣಂ ಅವರೆ ಕಮೀಷನರ್ ಎಂದು ತಿಳಿದು ಹೋಯಿತು. ಆದರೆ ಅಂದಿನ ನಾಗಭೂಷಣಂ, ಇಂದಿನ ಕಮೀಷನರ್ ಆಗಿ ನನ್ನನ್ನು ಗುರುತಿಸಬಲ್ಲರೆ ಎನ್ನುವ ಸಂದೇಹ ಇನ್ನೂ ಚಿರಂಜೀವಿಯ ಕಣ್ಣುಗಳಲ್ಲಿ ಉಳಿದುಕೊಂಡಿತ್ತು. ಚಿರಂಜೀವಿ ತನ್ನ ಕೆನ್ನೆಯ ಮೇಲೆ ಒಂದು ಕೈಯನ್ನು ಇಟ್ಟುಕೊಂಡು ಅವರ ಮುಖವನ್ನೇ ನೋಡಿದ.

ಕಮೀಷನರ್, ನೌಕರನ ಕಡೆಗೆ ನೋಡಿದ್ದೆ ನೌಕರ ಹೊರಗೆ ನಡೆದ.

"ನೀನು ಚಿಂರಜೀವಿಯಲ್ಲವೆ?" ಕಮಿಷನರ್ ಪ್ರಶ್ನಿಸಿದರು. ಚಿರಂಜೀವಿ ಈಗ ನಿಜವಾಗಿಯೂ ತಬ್ಬಿಬ್ಬಾಗಿ ತನಗೆ ಗೊತ್ತಿಲ್ಲದೆಯೇ ಅವರ ಹತ್ತಿರಕ್ಕೆ ನಡೆದು ಕಾಲಿಗೆ ಎರಗಿದ. ಭುಜಗಳನ್ನಿಡಿದು ಮೇಲಕ್ಕೆ ಎತ್ತಿದ ನಾಗಭೂಷಣಂ, ಚಿರಂಜೀವಿಯನ್ನು ತಬ್ಬಿಕೊಳ್ಳುತ್ತಾ ಅವನ ಕೆನ್ನೆಯನ್ನು ಸವರಿ,

"ಇದೆಲ್ಲಾ ಏನಪ್ಪ ಚಿರಂಜೀವಿ?" ಪ್ರಶ್ನಿಸಿದರು. ಚಿರಂಜೀವಿಗೆ ನಿಜವಾಗಿಯೂ ಆಶ್ಚರ್ಯ ಹುಟ್ಟಿಸಿದ ವಿಷಯವೆಂದರೆ ತನ್ನನ್ನು ಸೃಷ್ಟಿಸಿದ ತಂದೆ, ತಾಯಿಯೆ ಹತ್ತಾರು ವರ್ಷಗಳಿಂದ ಗುರುತಿಸಲಾಗದೆ ಇದ್ದು, ನಾಗಭೂಷಣಂ ಅವರು ಕೇವಲ ಒಂದೇ ನೋಟಕ್ಕೆ ಹೇಗೆ ಗುರುತಿಡಿದರು ಎನ್ನುವುದು.

ಚಿರಂಜೀವಿಯ ಕಣ್ಣುಗಳು ಮೂವತ್ತೈದು ವರ್ಷಗಳ ಕಷ್ಟಗಳನ್ನು ಮೆಲುಕು ಹಾಕಿದಂತೆ ಕಣ್ಣೀರಿನಿಂದ ತುಂಬಿಕೊಂಡವು. ಚಿರಂಜೀವಿ ಕೈಹಿಡಿದು ಕುರ್ಚಿ ಮೇಲೆ ಕೂರಿಸಿದ ನಾಗಭೂಷಣಂ ತನ್ನ ಕುರ್ಚಿಯಲ್ಲಿ ಕುಳಿತು ಹಿಂದಕ್ಕೆ ಒರಗಿಕೊಂಡರು.

ಸಮಯದ ಪರವೆಯನ್ನು ಮರೆತು ಎಷ್ಟೋ ಹೊತ್ತಿನಿಂದ ಅವರಿಬ್ಬರು ಮಾತನಾಡುತ್ತಲೇ ಇದ್ದರು. ಅಂದಿನ ಎಲ್ಲಾ ಕಾರ್ಯಕ್ರಮಗಳನ್ನು ರದ್ದು ಮಾಡಿದ ಕಮೀಷನರ್ ಚಿರಂಜೀವಿಯ ಎಲ್ಲಾ ವಿಷಯಗಳನ್ನು ಕೇಳಿ ಕಣ್ಣೀರಾಕಿಕೊಂಡರು.

"ಚಿರಂಜೀವಿ... ನಿನ್ನಂತ ಇನ್ನೊಬ್ಬ ನತದೃಷ್ಟ ವ್ಯಕ್ತಿಯನ್ನು ನನ್ನ ಜೀವನದಲ್ಲಿ ಎಂದೂ ನೋಡಲಿಲ್ಲಪ್ಪ" ನಾಗಭೂಷಣಂ ಬಹಳ ನೊಂದುಕೊಂಡು ಹೇಳಿದರು. ಚಿರಂಜೀವಿಯ ಕಣ್ಣುಗಳು ಕೆಂಪಗಾಗಿ ಸಾಯಂಕಾಲದ ಆಕಾಶದಂತೆ ಈಗ ತಣ್ಣಗಾಗುತ್ತಿದ್ದವು. ಚಿರಂಜೀವಿ ತನ್ನ ಆಶ್ಚರ್ಯವನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು -

"ಅಲ್ಲ ಸರ್! ನನ್ನ ತಂದೆ ತಾಯಿಯೆ ನನ್ನನ್ನು ಗುರುತಿಸದೆ ಹೋದರು ನೀವು ನನ್ನನ್ನು ಒಂದೇ ನೋಟಕ್ಕೆ ಗುರುತುಹಿಡಿದರಲ್ಲ" ಚಿರಂಜೀವಿ ಪ್ರಶ್ನಿಸಿದ

"ಏನೋ ಚಿರಂಜೀವಿ ಚಿಕ್ಕಂದಿನಲ್ಲಿ ನೋಡಿದ ನಿನ್ನ ಕಣ್ಣುಗಳಲ್ಲಿನ ಹೊಳಪು ಈಗಲೂ ನನಗೆ ಕಾಣುತ್ತಿದೆ" ನಾಗಭೂಷಣಂ ಹೇಳಿದರು.

ಒಬ್ಬ ಗುರು ಮತ್ತು ಶಿಷ್ಯ, ವಿದ್ಯಾರ್ಥಿ ಮತ್ತು ಅಧ್ಯಾಪಕನ ನಡುವಿನ ಸಂಬಂಧವೆಂದರೆ ಇದೆ ಇರಬೇಕು.

ಚಿರಂಜೀವಿ ಇಷ್ಟು ವರ್ಷಗಳು ತನ್ನಲ್ಲಿ ತುಂಬಿಕೊಂಡಿದ್ದ ದುಃಖವನ್ನೆಲ್ಲ ನಾಗಭೂಷಣಂ ಅವರಿಗೆ ವರ್ಗಾಯಿಸಿ ತುಸು ಹಗುರನಾದ. ಅವನ ಮನಸ್ಸು ಮೊದಲ ಬಾರಿಗೆ ತಿಳಿಯಾದಂತೆ, ಕೊಳದ ನೀರಿನ ಮೇಲೆ ಈಜುತ್ತಿರುವ ಹಂಸದಂತೆ ತೇಲಾಡತ್ತಿತ್ತು.

ನಾಗಭೂಷಣಂ ಚಿರಂಜೀವಿಯನ್ನು "ನಾಳೆ ಮನೆಗೋಗುವಾಗ ನೀನು ನನ್ನ ಜೊತೆಗೆ ಬರಬೇಕು" ಹೇಳಿದರು.

"ಇರಲಿ ಸರ್" ನನಗೆ ನಿಮ್ಮನ್ನು ಬಿಟ್ಟರೆ ಬೇರೆ ಯಾರಿದ್ದಾರೆ ಯಾವಾಗಲಾದರೂ ಬರುತ್ತೇನೆ" ಜಿರಂಜೀವಿ ಹೇಳಿದ.

"ಚಿರಂಜೀವಿ ನೀನು ನಿಜವಾಗಿಯೂ ಸಮಾಜಕ್ಕೆ ಮಾಡಬೇಕಾಗಿರುವ ಕೆಲಸಗಳು ಇನ್ನೂ ಎಷ್ಟೋ ಇವೆ. ನೀನೂ ಈ ಪ್ರದೇಶದಲ್ಲಿ ಮಾಡಿರುವ ಸಮಾಜ ಸೇವೆಯ ಬಗ್ಗೆ ಯಾವಾಗಲಿಂದಲೋ ಗೊತ್ತಿದೆ. ಆದರೆ ಇದುವರೆಗೂ ಅದು ಬಾಬು ಎಂಬ ಹೆಸರಿನಲ್ಲಿ ತಿಳಿದಿತ್ತು. ಬಾಬೂನೇ ಚಿರಂಜೀವಿ ಎನ್ನುವುದು ಈಗ ತಾನೆ ತಿಳಿಯಿತು. ನಿನ್ನ ಎದುರಿಗೆ ನಿಂತಿರುವ ರಾಮರೆಡ್ಡಿಯ ಹಿನ್ನೆಲೆ ಅಷ್ಟು ಒಳ್ಳೆಯದಲ್ಲ, ಯಾವುದಕ್ಕೂ ಸ್ವಲ್ಪ ಎಚ್ಚರದಿಂದ ಓಡಾಡುವುದು" ನಾಗಭೂಷಣಂ ಎಚ್ಚರಿಸಿದರು.

ಚಿರಂಜೀವಿ ತನ್ನ ಎಲ್ಲಾ ವಿಷಯಗಳ ಜೊತೆಗೆ ಚುನಾವಣೆಗೆ ಸ್ಪರ್ಧಿಸುವ ಕಾರಣವನ್ನು ತಿಳಿಸಿದ. ಲಕ್ಷ್ಮಿಯ ಬಗ್ಗೆ, ರಾಮರೆಡ್ಡಿಯ ಬಗ್ಗೆ ಲಕ್ಷ್ಮಿ

ಚಿರಂಜೀವಿಗೆ ಬರೆದ ಪತ್ರದ ಬಗ್ಗೆ, ರಾಮರೆಡ್ಡಿ ಲಕ್ಷ್ಮಿಗೆ ಬಗೆದ ದ್ರೋಹದ ಬಗ್ಗೆಯೂ ತಿಳಿಸಿದ. ಅನಂತರ ಲಕ್ಷ್ಮಿ ಒಬ್ಬ ಯುವಕನನ್ನು ಮದುವೆಯಾಗುವ ವಿಷಯವನ್ನು ತಿಳಿಸಿದ. ಲಕ್ಷ್ಮಿ ತಾನು ಮದುವೆಯಾಗುವ ವಿಷಯದ ಬಗ್ಗೆ ಹಿಂದಿನ ದಿನವೇ ಚಿರಂಜೀವಿಗೆ ಪತ್ರ ಬರೆದು ತಿಳಿಸಿದ್ದಳು.

"ನೀನು ಚುನಾವಣೆಗೆ ನಿಂತಿದ್ದು ತಪ್ಪೇನೂ ಅಲ್ಲ. ರಾಜಕಾರಣದಿಂದ ಜನರಿಗೆ ಒಳಿತಾಗಬೇಕು. ಈ ಕೊಳಕು ರಾಜಕಾರಣಿಗಳ ನಡುವೆ ನಿನ್ನಂತ ಬುದ್ಧಿವಂತ ಯುವಕರು, ಸಮಾಜಕ್ಕೆ ನಿಷ್ಕಳಂಕ ಸೇವೆ ಸಲ್ಲಿಸಬಹುದು. ಹಿಂದೆಂದಿಗಿಂತ ಇಂದು ಬಹಳ ಅಗತ್ಯವಿದೆ" ನಾಗಭೂಷಣ ಹೇಳುತ್ತಾ ಹೋಗುತ್ತಿದ್ದಂತೆ ಚಿರಂಜೀವಿ ಮೈಮರೆತು ಬಿಟ್ಟಿದ್ದ.

ಅಂತಿಮವಾಗಿ ಇಬ್ಬರೂ ರಾತ್ರಿಯ ಊಟವನ್ನು ಒಟ್ಟಿಗೆ ಮುಗಿಸಿದರು. ಚಿರಂಜೀವಿ, ನಾಗಭೂಷಣಂ ಅವರಿಂದ ಬೀಳ್ಕೊಂಡು ಮತ್ತೆ ಭೇಟಿಯಾಗುವುದಾಗಿ ಹೊರಟು ಹೋದ. ಚಿರಂಜೀವಿ ಹೊರಟು ಹೋದ ನಂತರವು ಎಷ್ಟೋ ಹೊತ್ತು ಚಿರಂಜೀವಿಯ ಬಗ್ಗೆಯೇ ನಾಗಭೂಷಣಂ ಯೋಚಿಸುತ್ತಿದ್ದರು.

ನಾಗಭೂಷಣಂ ಅವರಿಗೆ ಒಂದು ವಿಷಯ ಮಾತ್ರ ಅರ್ಥವಾಗಲಿಲ್ಲ. ಚಿರಂಜೀವಿಯ ತಂದೆ ತಾಯಿ ಚಿರಂಜೀವಿಯನ್ನು ಯಾಕಾದರೂ ಗುರುತಿಸಲಿಲ್ಲ ಎನ್ನುವುದು? ಇನ್ನು ಚಿರಂಜೀವಿ ಹೊರಕ್ಕೆ ಹೋಗುವಾಗ -

"ನಾನು ಈ ಪ್ರದೇಶದಲ್ಲಿ ಬಾಬು ಆಗಿಯೇ ಇದ್ದು ಬಿಡುತ್ತೇನೆ... ನಾನು ಚಿರಂಜೀವಿ ಎನ್ನುವುದನ್ನು ನನ್ನ ತಂದೆ ತಾಯಿಯೆ ಗುರುತಿಸದಿರುವಾಗ ಈ ಪ್ರದೇಶದ ಜನರಿಗೂ ಅದರ ಅಗತ್ಯವಿಲ್ಲ. ಈ ವಿಷಯ ನಮ್ಮಿಬ್ಬರ ಮಧ್ಯೆಯೇ ಇದ್ದು ಬಿಡಲಿ ಸರ್" ಎಂದಿದ್ದ.

* * *

ಬಾಬು ಬೆಳಗ್ಗೆ ಎದ್ದಿದ್ದೆ ಸ್ನಾನ ಮಾಡಿ ತನ್ನ ತಾಯಿ ಸೀತಮ್ಮ ಮಾಡಿದ್ದ ಉಪಹಾರವನ್ನು ಮುಗಿಸಿ ದಿನವು ಒಂದು ಹಳ್ಳಿ ಭೇಟಿ ನೀಡುವಂತೆ ಅಂದೂ ಕೂಡ ತಯಾರಾದ. ಮನೆಯ ಹೊರಗೆ ಬಂದಿದ್ದೆ ಮಕ್ಕಿಯಲ್ಲಿ ಇಬ್ಬರು ಪೋಲೀಸರು ಸರ್ಕಲ್ ಇನ್ಸ್‌ಪೆಕ್ಟರ್ ರುದ್ರಯ್ಯನವರು ತಮ್ಮನ್ನು ಪೋಲೀಸ್ ಠಾಣೆಗೆ ಕರೆ ತರುವಂತೆ ತಿಳಿಸಿದ್ದಾರೆ" ಎಂದರು.

"ವಿಷಯ ಏನು? ಬಾಬು ಕೇಳಿದ.

"ನಮ್ಗೇನೂ ಗೊತ್ತಿಲ್ಲ ಸರ್. ಅವರತ್ತಿರ ಸ್ವಲ್ಪ ಮಾತಾಡೊ ವಿಷಯ ಇದೆ ಕರೆತನ್ನಿ ಅಂದ್ರು" ಎಂದರು.

ಯಾವುದಾದರೂ ಚುನಾವಣೆಯ ವಿಷಯವೊ ಅಥವಾ ಇನ್ನೇನಾದರೂ ವಿಷಯ ಇರಬೇಕು ಎಂದುಕೊಂಡ ಬಾಬು -

"ಆಯಿತು. ಪಕ್ಕದ ಹಳ್ಳಿಗೆ ಬೆಳಿಗ್ಗೆಯೇ ಬರುವುದಾಗಿ ತಿಳಿಸಿದ್ದೀನಿ..... ಅವರೆಲ್ಲ ಕಾಯ್ತಿರ್ತಾರೆ. ಅಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಅಲ್ಲಿಂದ ಹಾಗೇ ಠಾಣೆಗೆ ಬರ್ತೀನಿ. ಸದ್ಯಕ್ಕೆ ನೀವ್ಹೋಗಿ " ಎಂದೇಳಿದ ಬಾಬು ಅವರನ್ನು ಹಿಂದಕ್ಕೆ ಕಳಿಸಿ, ತನ್ನ ಕೆಲಸಕ್ಕೆ ಹೊರಟ. ಬಾಬು ಪೋಲೀಸ್ ಠಾಣೆಗೆ ಹೋಗುವುದು ಹೊಸ ವಿಷಯವಲ್ಲದ ಕಾರಣ ಬಾಬು ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಬಾಬು ಯಾವುದೇ ಹಳ್ಳಿಗೆ ಹೋದರೂ ಅವನನ್ನು ಬೇಗ ಬಿಡುತ್ತಿರಲಿಲ್ಲ. ಬಾಬು ಹಳ್ಳಿಯಲ್ಲಿ ತನ್ನ ಕಾರ್ಯಕ್ರಮವನ್ನು ಮುಗಿಸುವುದರೊಳಗೆ ಐದು ಗಂಟೆಯಾಗಿತ್ತು. ಅಲ್ಲಿಂದ ಹಾಗೆ ನೇರವಾಗಿ ಸರ್ಕಲ್ ಇನ್ಸ್‌ಪೆಕ್ಟರ್ ರುದ್ರಯ್ಯನಿರುವ ಪೋಲೀಸ್ ಠಾಣೆಗೆ ಹೊರಟು ಬಂದ. ಬಾಬು ಎಲ್ಲಿಗೆ ಹೋದರೂ ಐದಾರು ಜನರು ಯಾವಾಗಲೂ ಅವನ ಜೊತೆಯಲ್ಲೇ ಇರುತ್ತಿದ್ದರು. ಕೆಲಸವಿಲ್ಲದೆ ಅವನ ಸುತ್ತಲೂ ಬರುವುದನ್ನು ಇಷ್ಟಪಡುತ್ತಿರಲಿಲ್ಲ. ಹಾಗಾಗಿ ಕೆಲಸ ಮುಗಿದ ಮೇಲೆ ಅವರೆಲ್ಲರೂ, ಅವರಿವರ ಕೆಲಸಗಳಿಗೆ ಹೊರಟು ಬಿಡುತ್ತಿದ್ದರು.

ಬಾಬುಗಾಗಿ ದಿನವೆಲ್ಲ ಕಾದು ಕುಳಿತ ಹದ್ದಿನಂತೆ ಕಂಡ ರುದ್ರಯ್ಯ

"ಬನ್ನಿ ಸಾಹೇಬರೆ ಬನ್ನಿ" ಎಂದು ಕುರ್ಚಿ ಹಾಕಿ ಕೂರಿಸಿದ. ಇಬ್ಬರು ಪೋಲೀಸರು ಬಾಬು ಪಕ್ಕಕ್ಕೆ ಬಂದು ನಿಂತುಕೊಂಡರು. ಬಾಬು ತನ್ನ ಜೊತೆಯಲ್ಲಿದ್ದವರನ್ನೆಲ್ಲ ಆಗಲೇ ಕಳುಹಿಸಿಕೊಟ್ಟು ಒಬ್ಬನೇ ಪೋಲೀಸ್ ಠಾಣೆಗೆ ಬಂದಿದ್ದ. ರುದ್ರಯ್ಯ ಬಾಬುವಿನ ಕಡೆಗೆ ಒಂದು ವಿಚಿತ್ರ ಪೋಲೀಸ್ ನೋಟ ಬೀರಿದ. ಪೋಲೀಸ್ ಅಧಿಕಾರಿಯಾಗಿ ಕೆಲಸ ಮಾಡಿರುವ ಬಾಬು ಏನೋ ಎಡವಟ್ಟು ನಡೆಯಲಿದೆ ಎಂದುಕೊಳ್ಳುವಷ್ಟರಲ್ಲಿ -

"ಬಾಬು... ನಿಮ್ಮ ಅಸಲಿ ಹೆಸರ್ರೇನಿ" ರುದ್ರಯ್ಯ ಪ್ರಶ್ನಿಸಿದ. ಒಂದು ಕ್ಷಣ ತಬ್ಬಿಬ್ಬಾದ ಬಾಬು -

"ರೀ ರುದ್ರಯ್ಯ ಏನ್ರೀ ಅದಕ್ಕೆ ಅರ್ಥ? ಪ್ರಶ್ನಿಸಿದ.

"ರೀ ಸಾಹೇಬ್ರ ನೀವು ಯಾರು? ಎಲ್ಲಿಂದ ಬಂದ್ರಿ. ನಿಮ್ಮ ಮೂಲ ಏನು, ಎಲ್ಲಾ ನಮ್ಗೆ ಗೊತ್ತಾಯಿತ್ರಿ.... ನೀವು ಎಷ್ಟು ದಿನಾಂತ ಜನರ್ನ ಮೋಸ ಮಾಡೋಕಾಗ್ತದೆ...? ಜನರ್ನ ಮೋಸ ಮಾಡಬಹುದು. ಪೋಲೀಸರನ್ನು ಮಾಡೋಕಾಗ್ತದ, ಹೋಗಲಿ ನಿಮ್ಮ ಬಾಯ್ನಾಗೇನೆ ಒಂದು ಸಲ ಹೇಳಿ ಕೇಳಿಸಿಕೊಳ್ತೀನಿ" ರುದ್ರಯ್ಯ ಹಾಸ್ಯ ಮಾಡುತ್ತಾ ಹೇಳಿದ.

ಕೆಲವು ಕ್ಷಣಗಳು ವಿಚಲಿತಗೊಂಡ ಬಾಬು ತನ್ನ ಬಾಯಿಂದಲೆ ತಿಳಿದುಕೊಳ್ಳಲು ಪ್ಲಾನ್ ಮಾಡಿರುವ ರುದ್ರಯ್ಯನ ಬಗ್ಗೆ ಬಾಬು ಸರಿಯಾಗಿ ಊಹಿಸಿಕೊಂಡರು. ಮತ್ತೆ ಏನೋ ಎಡವಟ್ಟು ನಡೆಯಲಿದೆ ಎನ್ನುವುದನ್ನು ಮಾತ್ರ ಕರೆ ಎಂದುಕೊಂಡ.

"ನೋಡು ರುದ್ರಯ್ಯ, ನೀನು ಏನು ಹೇಳಬೇಕೆಂತಿದ್ದೀಯೋ ಅದನ್ನು ನೇರವಾಗಿ ಹೇಳು, ಸುತ್ತಿ ಬಳಸಿ ಹೇಳೋ ಅವಶ್ಯಕತೆಯಿಲ್ಲ" ಬಾಬು ಸ್ವಲ್ಪ ಸ್ವರವೇರಿಸಿ ಮಾತನಾಡದ.

"ವ್ಹ ಬಾಬು! ನಮಗೇ ಪ್ರಶ್ನಿಸ್ತಾ ಇದ್ದೀಯಾ...? ಏನೂ ಗೊತ್ತಿಲ್ಲದವನಂತೆ ಒಂದು ವಾರದ ಹಿಂದೆ ರಾತ್ರಿ ನಮ್ಮ ಠಾಣೆ ಮೇಲೆ ಬಾಂಬಾಕಿದ್ದು ಯಾರು?" ಎಂದಿದ್ದೆ ಪಿತ್ತ ನೆತ್ತಿಗೇರಿಸಿಕೊಂಡ ಬಾಬು.

"ಮಿಸ್ಟರ್ ರುದ್ರಯ್ಯ ನೀನು ಏನು ಮಾತಾಡ್ತಿದ್ದೀಯಾ? ಯಾರ ಹತ್ತಿರ ಮಾತನಾಡ್ತಿದ್ದೀಯ? ಗೊತ್ತೆ? ಕೂಗಿದ.

"ನೀನು ಎಂ.ಎಲ್.ಗೆ. ನಿಂತಿಬಿಟ್ರೆ, ಎಂ.ಎಲ್ಯೇ ಆಗಿಬಿಟ್ಟೆ ಅಂದುಕೊಂಡಿದ್ದೀಯೇನು? ಈ ರುದ್ರಯ್ಯನಿಗೆ ಯಾರ್ಯಾರು ಏನು ಅನ್ನುವುದು ಎಲ್ಲಾ ಗೊತ್ತು. ನಕ್ಸಲೈಟ್ಸ್‌ಗೂ ನಿನ್ಗೂ ಸಂಬಂಧ ಇದೆ ಅಂತಲೂ ಗೊತ್ತು" ರುದ್ರಯ್ಯ ಹೇಳಿದ್ದೇ ತಡ. ಬಾಬು ರುದ್ರಯ್ಯನ ಶರ್ಟಿನ ಪಟ್ಟಿ ಹಿಡಿದುಕೊಂಡು ಮುಖಕ್ಕೆ ಬಲವಾಗಿ ಎದ್ವಾ ತದ್ವಾ ಬಾರಿಸಿಬಿಟ್ಟ. ಕೆಲವೇ ಕ್ಷಣಗಳಲ್ಲಿ ನಡೆದುಹೋದ ಈ ಅನಾಹುತದಿಂದ ಪಕ್ಕದಲ್ಲಿದ್ದ ಪೋಲೀಸರು ನಿಬ್ಬೆರಗಾಗಿಬಿಟ್ಟರು.

ರುದ್ರಯ್ಯ "ಏನೋ ನನ್ಮಕ್ಕಳ, ನೋಡ್ತಾ ನಿಂತುಬಿಟ್ರಿ. ಹಿಡಕೊಂಡು ಹಾಕ್ರೋ ಒಳಕ್ಕೆ ಈ ನಕ್ಸಲೈಟ್ ನನ್ನ ಮಗ್ನ ಎಂದಿದ್ದೇ ಪೋಲೀಸರು ಬಾಬು

ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ಲಾಟಿ ತೆಗೆದುಕೊಂಡ ರುದ್ರಯ್ಯ ಬಾಬುವಿನ ಮೇಲೆ ಹುಲಿಯಂತೆ ಎರಗಿಬಿಟ್ಟ. ಪೋಲೀಸರಿಗೆ ಇದೇನಾಗುತ್ತಿದೆ ಎನ್ನುವುದೇ ಅರ್ಥವಾಗಲಿಲ್ಲ.

ಬಾಬು ನಿಜವಾಗಿಯೂ ನಕ್ಸಲೈಟ್ಸ್ ಗುಂಪಿಗೆ ಸೇರಿದವನೆ? ಅಥವಾ ರಾಮರೆಡ್ಡಿಯ ಪ್ರಭಾವದಿಂದ ರುದ್ರಯ್ಯ ಹೀಗೆ ಮಾಡುತ್ತಿದ್ದಾನೆಯೇ ಎಂದುಕೊಳ್ಳುತ್ತಾ ಈ ಘಟನೆಯನ್ನು ಎಲ್ಲಿಂದ ಎಲ್ಲಿಗೋ ಲಿಂಕ್ ಮಾಡಿಕೊಂಡು ಆಲೋಚನೆಗೆ ಒಳಗಾದರು. ಬಾಬು ಕೂಡ ಅದನ್ನೆ ಊಹಿಸಿಕೊಂಡಿದ್ದ.

ಬಾಬು ಒಂದು ಘಳಿಗೆ ದುಡುಕಿದ್ದರಿಂದ ದೊಡ್ಡ ಅನಾಹುತವೇ ನಡೆದುಹೋಗಿತ್ತು. ತನ್ನ ಮೇಲೆ ದಾಳಿ ಮಾಡಿದ್ದನ್ನೆ ನೆಪ ಮಾಡಿಕೊಂಡ ರುದ್ರಯ್ಯ ಬಾಬುವನ್ನು ಏರೋಪ್ಲೇನ್ ಹತ್ತಿಸಿ ಮನಸ್ಸಿಗೆ ಬಂದಂತೆ ಬೆಲ್ಟು, ಲಾಟಿಗಳಲ್ಲಿ ಚಚ್ಚಿ ರಾತ್ರಿಯೆಲ್ಲಾ ಚಿತ್ರಹಿಂಸೆಗೆ ಒಳಪಡಿಸಿಬಿಟ್ಟ. ಉಳಿದ ಪೋಲೀಸರು ಬಾಬು ನಿರ್ದೋಷಿ ಎಂದು ತಿಳಿದಿದ್ದರೂ ಏನೂ ಮಾಡಲಾಗಲಿಲ್ಲ. ಬಾಬುವಿನ ಸಮಾಜ ಸೇವೆಯನ್ನು ಕಣ್ಣುಗಳ ತುಂಬಾ ನೋಡಿದ್ದ ಪೋಲೀಸರು ಒಳಗೊಳಗೆ ನೊಂದು ಕಣ್ಣೀರು ಹಾಕಿಕೊಂಡರು.

ಬೆಳಗು ಮೂಡುವುದನ್ನೇ ಕಾಯುತ್ತಿದ್ದ ಪೋಲೀಸರು ರಾತ್ರಿ ನಡೆದ ಈ ಘೋರವನ್ನು ಸುತ್ತಲ ಜನರಿಗೆ ಹಬ್ಬಿಸಿಬಿಟ್ಟರು.

ಜನರಿಂದ, ಜನರಿಗೆ, ಹಳ್ಳಿಯಿಂದ ಹಳ್ಳಿಗೆ, ಪ್ರದೇಶದಿಂದ ಪ್ರದೇಶಕ್ಕೆ ವಿಷಯ ಹಬ್ಬಿ, ನೂರಾರು ಜನರು ಬೆಳಿಗ್ಗೆಯೇ ಪೋಲೀಸ್ ಠಾಣೆಯ ಮುಂದೆ ಜಮಾ ಆಗತೊಡಗಿದರು. ಒಳಗೊಳಗೆ ಬೆವರಲು ಪ್ರಾರಂಭಗೊಂಡ ರುದ್ರಯ್ಯ ಬಾಬುವನ್ನು ಜೀಪಿನಲ್ಲಿ ಹಾಕಿಕೊಂಡು ಹೋಗಿ ಸರಕಾರಿ ಆಸ್ಪತ್ರೆಯಲ್ಲಿ ಸೇರಿಸಿ ಜೀಪನ್ನು ಅಲ್ಲೇ ಬಿಟ್ಟು ಎಲ್ಲಿಗೋ ಓಡಿಹೋದ.

ವಿಷಯ ತಿಳಿದ ರಾಮಣ್ಣ ಮತ್ತು ಸೀತಮ್ಮ ಎದ್ದು ಬಿದ್ದು ಸರಕಾರಿ ಆಸ್ಪತ್ರೆಗೆ ಓಡಿ ಬರುವಷ್ಟರಲ್ಲಿ ಸಾವಿರಾರು ಜನ ಆಸ್ಪತ್ರೆಯ ಮುಂದೆ ಜಮಾ ಆಗಿದ್ದರು. ಡಾಕ್ಟರು ತಮ್ಮ ಕೈಯಲ್ಲಾದ ಚಿಕಿತ್ಸೆಯನ್ನು ನೀಡಿ -

"ಸಾವು ಬದುಕಿನ ನಡುವೆ ಹೋರಾಟ ನಡೆದಿದೆ. ಸದ್ಯಕ್ಕೆ ಏನೂ ಹೇಳಲು ಸಾಧ್ಯವಿಲ್ಲ. ಬಾಬು ಕೋಮಾದಲ್ಲಿದ್ದಾರೆ" ಎಂದುಬಿಟ್ಟರು. ವಿಷಯ ತಿಳಿದ

ಉನ್ನತ ಅಧಿಕಾರಿಗಳು, ಜಿಲ್ಲಾ ಕೇಂದ್ರದಿಂದ ಓಡಿ ಬಂದರೆ ಎಲ್ಲಾ ಪಕ್ಷಗಳ ರಾಜಕಾರಣಿಗಳು ಧಾವಿಸಿಬಂದು ಒಬ್ಬೊಬ್ಬರು ಒಂದೊಂದು ಹೇಳಿಕೆ ನೀಡಿದರು.

"ಈಗಾಗಬಾರದಿತ್ತು, ಬಾಬು ಈ ಪ್ರದೇಶದ ಬಡವರ ಭಾಗ್ಯ, ಬಡವರ ನಾಯಕ, ಸಮಾಜಕ್ಕೆ ತಮ್ಮ ಸರ್ವಸ್ವವನ್ನೇ ನೀಡಿದವರು" ಎನ್ನುತ್ತಾ ಅಂತಿಮವಾಗಿ "ಬಾಬು ಮೂಲವಾಗಿ ನಮ್ಮ ಪಕ್ಷದವರು. ಹಾಗಾಗಿ ನೀವೆಲ್ಲರೂ ನಿಮ್ಮ ಅಮೂಲ್ಯ ಓಟನ್ನು ನಮ್ಮ ಪಕ್ಷಕ್ಕೆ ನೀಡಬೇಕೆಂದು" ವಿನಂತಿಸಿಕೊಂಡರು.

ಬಾಬುವಿನ ಈ ಸ್ಥಿತಿಗೆ ಕಾರಣವಾದ ಪೋಲೀಸ್ ಠಾಣೆಯ ಮುಂದೆ ಸಾವಿರಾರು ಜನರು ಜಮಾ ಆಗುತ್ತಿರುವುದನ್ನು ಗಮನಿಸಿದ ಪೋಲೀಸ್ ಅಧಿಕಾರಿಗಳು ಎಲ್ಲಾ ಕಡೆಗಳಿಂದಲೂ ಪೋಲೀಸರನ್ನು ಕರೆಸಿಕೊಳ್ಳುತ್ತಿದ್ದರು.

ಸಕಟಾಪುರದಿಂದ ಓಡಿಹೋದ ರುದ್ರಯ್ಯ ರಾಮರೆಡ್ಡಿಯನ್ನು ಸಂಧಿಸಿ ಬಾಬು ಮತ್ತು ತನ್ನ ನಡುವೆ ನಡೆದ ವಿಚಾರವನ್ನೆಲ್ಲ ತಿಳಿಸಿದ. ಕೋಪಗೊಂಡಂತೆ ನಟಿಸಿದ ರಾಮರೆಡ್ಡಿ ರುದ್ರಯ್ಯನನ್ನು "ಇಲ್ಲಿಗ್ಯಾಕೆ ಬಂದೆ, ನೇರವಾಗಿ ಪೋಲೀಸ್ ಠಾಣೆಗೆ ಹೋಗಿ ಸರಂಡರ್ ಆಗಿಬಿಡು" ಎಂದಿದ್ದ. ರುದ್ರಯ್ಯನಿಗೆ ಏನೂ ಅರ್ಥವಾಗದೆ,

"ಅಲ್ಲಾ ರೆಡ್ಡಿಯವರೆ, ಬಾಬು ನಕ್ಸಲೈಟ್ ಗೆ ಸೇರಿದವನು. ಹಾಗೆ, ಹೀಗೆ ಎಂದು ತನ್ನ ತಲೆ ಕೆಡಿಸಿ ಒಳ್ಳೆಯವನನ್ನು ಹೀಗೆ ಹೊಡೆಯುವಂತೆ ಮಾಡಿ, ಈಗ ಪೋಲೀಸ್ ಠಾಣೆಯಲ್ಲಿ ಸರಂಡರ್ ಆಗಿಬಿಡು ಅಂತಿದ್ದೀರಲ್ಲ" ಎಂದು ಕಿಡಿಕಾರಿದ.

"ರುದ್ರಯ್ಯ ನಿನಗೆ ತಲೆಗಿಲೆ ಕೆಟ್ಟಿದೆಯಾ ಏನು? ನೀನು ಯಾರ್ಯೋ, ಏನೋ ನನ್ಗೆ ಗೊತ್ತಿಲ್ಲ. ಇಲ್ಲೇ ಇದ್ರೆ ಪೋಲೀಸ್ ಠಾಣೆಗೆ ನಾನೇ ಫೋನ್ ಮಾಡುತ್ತೇನೆ"..... ರಾಮರೆಡ್ಡಿ, ರುದ್ರಯ್ಯನನ್ನು ಹೆದರಿಸಿದ. ರುದ್ರಯ್ಯಿಗೆ ತಲೆ ಗಿರ್ರನೆ ತಿರುಗಿದಂತಾಗಿ ಬೇರೆ ದಾರಿ ಕಾಣದೆ ರಾಮರೆಡ್ಡಿಯನ್ನು ಬಾಯಿಗೆ ಬಂದಂತೆ ಬೈಯ್ಯುತ್ತಾ ಹೊರಟುಹೋದ. ಇತ್ತ ರಾಮರೆಡ್ಡಿ ಪೋಲೀಸರ ಬೆಂಗಾವಲಿನಲ್ಲಿ ಸಕಟಾಪುರದ ಆಸ್ಪತ್ರೆಗೆ ಭೇಟಿ ನೀಡಿ ಕಣ್ಣೀರಾಕಿಕೊಂಡು ಬಾಬು ಮಾಡಿದ ಸಮಾಜ ಸೇವೆಯನ್ನು ಕೊಂಡಾಡುವುದರ ಜೊತೆಗೆ ಬಾಬುವಿನ ಈ ಸ್ಥಿತಿಗೆ ಕಾರಣರಾದವರಿಗೆ ತಕ್ಕ ಶಿಕ್ಷೆಯನ್ನು ನೀಡಬೇಕೆಂದು ಉಗ್ರವಾದ ಹೇಳಿಕೆ ನೀಡಿದ. ಒಳಗೊಳಗೆ, ಚಿರಂಜೀವಿ ಸತ್ತೋದರೆ ಈ ಪ್ರದೇಶದಲ್ಲಿ ತನಗೆ ಸಾಟಿಯೇ ಇಲ್ಲವೆಂದು ಖುಷಿಗೊಳ್ಳುತ್ತಿದ್ದ.

ಅಂತಿಮವಾಗಿ ವಿಷಯ ತಿಳಿದ ಅಸಿಸ್ಟೆಂಟ್ ಕಮೀಷನರ್ ನಾಗಭೂಷಣಂ ಹೃದಯವನ್ನು ಹಿಡಿದುಕೊಂಡು ಓಡಿ ಬಂದಿದ್ದರು. ಚಿರಂಜೀವಿ ಆಸ್ಪತ್ರೆಯ ಒಂದು ಹಾಸಿಗೆ ಮೇಲೆ ಅನಾಥನಾಗಿ ಬಿದ್ದಿದ್ದ. ಹಾಸಿಗೆಯ ಹತ್ತಿರಕ್ಕೆ ನಡೆದು ಬಂದು ಚಿರಂಜೀವಿಯ ಹಣೆಯನ್ನು ಮುಟ್ಟಿ ನೋಡಿ,

"ಚಿರಂಜೀವಿ" ಎಂದರು. ಅವನ ಕಣ್ಣುಗಳ ಒಳಕ್ಕೆ ಇಣುಕಿ ನೋಡಿದರು. ನಾಗಭೂಷಣಂ, ಚಿರಂಜೀವಿಯ ಕಣ್ಣುಗಳ ಮುಂದೆ ನಿಂತುಕೊಂಡಿದ್ದರು ಚಿರಂಜೀವಿಯ ಕಣ್ಣುಗಳ ಆಳದಲ್ಲಿ ನಾಗಭೂಷಣಂ ಮೂಡಲಿಲ್ಲ.

ನಾಗಭೂಷಣಂ ಸುಮಾರು ಹೊತ್ತು ಚಿರಂಜೀವಿಯ ಮುಂದೆ ಹಾಗೆ ನಿಂತುಕೊಂಡು ಎಷ್ಟೋ ಹೊತ್ತು ಅವನ ಹಾಸಿಗೆಯ ಒಂದು ಮೂಲೆಯಲ್ಲಿ ಕುಳಿತುಕೊಂಡಿದ್ದರು. ಕಣ್ಣೀರು ಅವರಿಗೆ ಗೊತ್ತಿಲ್ಲದೆಯೇ ಧಾರಾಕಾರವಾಗಿ ಹರಿದು ಹೋಗುತ್ತಿತ್ತು.

ಬೆಳಗ್ಗೆಯಿಂದಲೂ ಅಳುತ್ತಾ ಕುಳಿತಿದ್ದ ಸೀತಮ್ಮ, ರಾಮಣ್ಣ ಬಾಬುವಿನ ಹಾಸಿಗೆಯ ಮೂಲೆಯಲ್ಲಿ ಕುಳಿತು ಕಣ್ಣೀರಾಕುತ್ತಿರುವ ವ್ಯಕ್ತಿಯನ್ನು ಎಷ್ಟೋ ಹೊತ್ತಾದ ಮೇಲೆ ನಾಗಭೂಷಣಂ ಅಧಿಕಾರಿ ಎಂದು ಗುರುತಿಸುವಲ್ಲಿ ಸಫಲವಾಗಿದ್ದರು. ಅದೇ ಸಮಯಕ್ಕೆ ಸೀತಮ್ಮ ಮತ್ತು ರಾಮಣ್ಣನನ್ನು ಗಮನಿಸಿದ ನಾಗಭೂಷಣಂ ಇಬ್ಬರನ್ನು ಹತ್ತಿರಕ್ಕೆ ಬರುವಂತೆ ಕೈ ಸನ್ನೆ ಮಾಡಿದರು.

ಇಬ್ಬರು ಎದ್ದು ನಾಗಭೂಷಣಂ ಹತ್ತಿರಕ್ಕೆ ಬರುತ್ತಿದ್ದಂತೆ ನಾಗಭೂಷಣಂ

"ಸೀತಮ್ಮ, ರಾಮಣ್ಣ.... ಇವನನ್ನು ಯಾರೂ ಅಂತ ತಿಳಿದುಕೊಂಡಿದ್ದೀರ? ಇವನು ನಿಮ್ಮ ಮಗ ಚಿರಂಜೀವಿನಮ್ಮ... ಚಿರಂಜೀವಿ" ಎಂದರು. ಮತ್ತೆ

"ನಿಮಗೆ ಗೊತ್ತೆ? ನಾಗಭೂಷಣಂ ಕೇಳಿದರು. ಯಾವುದೋ ಲೋಕದಿಂದ ಬಂದವರಂತೆ ಎಷ್ಟೋ ಹೋತ್ತು ಹಾಗೆ ಇದ್ದ ಗಂಡ, ಹೆಂಡತಿ -

"ಸ್ವಾಮಿ ನಮ್ಮ ಮಗೂನ ಹೇಗಾದರೂ ಮಾಡಿ ಬದುಕಿಸಿ ಕೊಡಿ ಸ್ವಾಮಿ" ಎಂದು ಅಂಗಲಾಚುತ್ತಾ ಬೇಡಿಕೊಂಡರು. ಮತ್ತೆ ನಾಗಭೂಷಣಂ ಅವರು -

"ಬಾಬು, ನಿಮ್ಮ ಮಗ ಚಿರಂಜೀವಿ ಅಂತ ಗೊತ್ತೇನಮ್ಮ" ಕೇಳಿದರು.

"ಮೊದಲು ಒಂದು ವಾರ ಗೊತ್ತಾಗಲಿಲ್ಲ ಸ್ವಾಮಿ.... ಆಮೇಲೆ ಇವನೆ ನಮ್ಮ ಮಗ ಅನ್ನೋದು ಗೊತ್ತಾಯಿತು. ಆದರೆ ನಾವು ಕೇಳಲಿಲ್ಲ..... ನಮ್ಮ ಮಗನ ಕಾಲು, ಮುಖ ನೋಡಿ ನಮಗೆ ಕೇಳಲು ಮನಸ್ಸು ಬರಲಿಲ್ಲ.

ಆ ವಯಸ್ಸಿಗೆ ಅದೇನೇನು ತೊಂದರೆಗಳನ್ನು ಅನುಭವಿಸಿದ್ದಾನೋ ಏನೋ ಅದನ್ನೆಲ್ಲ ಅವನ ಬಾಯಲ್ಲಿ ಕೇಳಲು ನಮ್ಮಿಂದ ಆಗುತ್ತದೋ ಇಲ್ಲವೋ ಎಂದು ಕೇಳಲಿಲ್ಲ. ಅವನೂ ಹೇಳಲಿಲ್ಲ. ಅವನೆ ನಮ್ಮ ಮಗನೆಂದು ಗೊತ್ತು... ಅವನಿಗೂ ನಾವ್ಯಾರೆಂದು ಗೊತ್ತಿದೆ. ಆದರೆ ಅವನೂ ಕೇಳಲಿಲ್ಲ... ನಾವು ಕೇಳಲಿಲ್ಲ ಎಂದು ದುಃಖಿಸಿ ದುಃಖಿಸಿ ಅಳತೊಡಗಿದರು.

"ಚಿರಂಜೀವಿ ಮುಖ ಮತ್ತು ಕಾಲು ಏಕೆ ಹಾಗಾಯಿತು?" ಸುತ್ತಲಿದ್ದವರಲ್ಲಿ ಒಬ್ಬರು ಪ್ರಶ್ನಿಸಿದರು.

"ಅದೊಂದು ದೊಡ್ಡ ಕಥೆ" ಎಂದ ನಾಗಭೂಷಣಂ ಚಿರಂಜೀವಿಯ ಕಥೆಯನ್ನು ತಾವು ಚಿರಂಜೀವಿಯನ್ನು ಮೊದಲಿಗೆ ನೋಡಿದಾಗಿಂದ ಹೇಳತೊಡಗಿದರು..... ಎರಡು ಗಂಟೆಗಳ ಕಾಲ ಕಥೆಯನ್ನು ಕೇಳಿದ ಜನರೆಲ್ಲ ಕಣ್ಣೀರಾಕಿಕೊಳ್ಳುತ್ತಾ ಮಧ್ಯೆ ಮಧ್ಯೆ ಜೋರಾಗಿ ಅಳುತ್ತಿದ್ದರು. ನಾಗಭೂಷಣಂ ಹೇಳುತ್ತಿದ್ದ ಕಥೆ ಏನೋ ಮುಗಿದು ಹೋಯಿತು. ಆದರೆ ಚಿರಂಜೀವಿಯ ನಿಜಾದ ಕಥೆ ನಮ್ಮ ನಡುವೆ ಈಗ ತಾನೆ ಪ್ರಾರಂಭಗೊಂಡಿದೆ.

ಉಪಸಂಹಾರ

ಚಿರಂಜೀವಿಯ ಪಾತ್ರವನ್ನು ಈ ಕಾದಂಬರಿಯಲ್ಲಿ ಇಲ್ಲಿಗೆ ತಾತ್ಕಾಲಿಕವಾಗಿ ಲೇಖಕ ಅಂತ್ಯಗೊಳಿಸಿದ್ದರು. ಚಿರಂಜೀವಿಯ ಪಾತ್ರವನ್ನು ಓದುಗರ ಮಧ್ಯೆ ಚರ್ಚೆಗೊಳಪಡಿಸುವುದೇ ಈ ಕಾದಂಬರಿಯ ಮೂಲ ಉದ್ದೇಶವಾಗಿದೆ. ಅಂತಿಮವಾಗಿ ಗೆಲುವು ನ್ಯಾಯಕ್ಕೆ ದೊರಕುತ್ತದೆ ಎನ್ನುವುದನ್ನು ಈಗಲೂ ಹೇಳಲಾಗುತ್ತದೆ.

ಊರೂರಿಗೂ ನ್ಯಾಯಾಲಯಗಳಿವೆ, ವಾದಿಸುವುದಕ್ಕೆ ನ್ಯಾಯವಾದಿಗಳು, ತೀರ್ಪು ನೀಡುವುದಕ್ಕೆ ನ್ಯಾಯಮೂರ್ತಿಗಳು ಇದ್ದಾರೆ. ನ್ಯಾಯವನ್ನು ಅನ್ಯಾಯ ಪೂರ್ಣವಾಗಿ ನುಂಗುತ್ತಿದೆಯೇ? ಅನ್ಯಾಯವನ್ನು ನ್ಯಾಯ ಎಂದಿನಂತೆ ಗೆಲ್ಲುತ್ತಿದೆಯೇ ಎನ್ನುವುದು ಈ ಕಾದಂಬರಿ ಓದಿದ ತಾವೇ ತೀರ್ಮಾನಿಸಬೇಕಿದೆ.

ಈ ಕತೆಯನ್ನು ಪೂರ್ಣವಾಗಿ ಓದಿದ ತಮಗೆ ಧನ್ಯವಾದಗಳು. ತಮ್ಮ ತೀರ್ಪನ್ನು ಬರೆದು ತಿಳಿಸಿದಲ್ಲಿ ಇನ್ನೂ ಹೆಚ್ಚಿನ ಆಭಾರಿಯಾಗುವೆ.

ಮೂಡಣ ಮರೆಯಲ್ಲಿ

ಎಂ. ವೆಂಕಟಸ್ವಾಮಿ

ಇಲ್ಲಿ ಬರುವ ಚಿರಂಜೀವಿ
ಪಾತ್ರ ಜೀವನದಲ್ಲಿ ಏನಾದರೂ
ಸಾಧಿಸಲೇಬೇಕು ಎನ್ನುವ ಪ್ರತಿ
ವಿದ್ಯಾರ್ಥಿಯ ಮಹಾದಾಸೆಯಾಗಿದೆ.
ಮನಕಲಕುವಂತಹ ಘಟನೆಗಳು ಮತ್ತು
ಇಂದಿನ ವಾಸ್ತವ ಸಂಗತಿಗಳಿಗೆ ಅತ್ಯಂತ
ಹತ್ತಿರವಾಗುವ ಕಾದಂಬರಿಯಲ್ಲಿ
ನಿಷ್ಠಾವಂತ ಮತ್ತು ಜನಪ್ರಿಯ
ಅಧಿಕಾರಿಯಾದ ಚಿರಂಜೀವಿಯನ್ನು
ಈ ದುಷ್ಟ ಸಮಾಜ ಹೇಗೆ
ನಡೆಸಿಕೊಳ್ಳುತ್ತದೆ ಎನ್ನುವುದನ್ನು
ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಪ್ರಕಾಶಕರು :
ರಾಜೀವ್
ನಂ.4, ಸೆಕ್ರೆಟರಿಯೇಟ್ ಕಾಲೋನಿ,
ವಿಜಯನಗರ, ಬೆಂಗಳೂರು - 560040